ಹುಬ್ಬಳ್ಳಿ
ಬುಧವಾರ, 10 ಜೂನ್ 2026
ಸಂಪುಟ 16, ಸಂಚಿಕೆ 77, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ

ಫಿಫಾ ವಿಶ್ವಕಪ್‌ಗೆ ಅಂಕಣ ಸಿದ್ಧ

ನಕಲಿ ಸಹಿ: ಮಮತಾ ನಿವಾಸದಲ್ಲಿ ಸಿಐಡಿ ಶೋಧ | ೦೨
ಕುವೈತ್ ದೊರೆಗೆ ಬೆಂಬಲ ಸೂಚಿಸಿದ ಮೋದಿ | ೦೨
ಇನ್ನು ಫುಟ್‌ಬಾಲ್ ಕಿಕ್ | ೧೧

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಉತ್ತರಭಾದ್ರ

ದಿನದ ಮಾತು

ಕೆಲವೊಮ್ಮೆ ಬುದ್ಧಿ ಗೆಲುವು ಸಾಧಿಸುತ್ತದೆ. ಕೆಲವು ಬಾರಿ ಗೆಲುವೇ ಬುದ್ಧಿಯಾಗಿ ಬಿಡುತ್ತದೆ.
▲ ಕಣ್ಣದಾಸನ್

ಶ್ರಾದ್ಧದ ಪ್ರಕಾರಗಳು ಮತ್ತು ಅವುಗಳ ಮಹತ್ತ್ವ

ಪದ ಸಂಚಲನ
• ಡಾ. ವಿಶ್ವನಾಥ ಸುಂಕಸಾಳ
• ಪುಟ ೬

ಕಿರುಸುದ್ದಿ

ಇಂದು ಎನ್‌ಡಿಎ ಮಹಾಸಭೆ

• **ಹೊಸದಿಲ್ಲಿ:** ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 12 ವರ್ಷಗಳನ್ನು ಪೂರ್ಣಗೊಳಿಸಿರುವ ಹಿನ್ನೆಲೆ ಹಾಗೂ ದೇಶದ ಅತಿ ದೀರ್ಘಾವಧಿ ನಿರಂತರವಾಗಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿಯಾಗಿ ಮೋದಿ ಹೊಸ ದಾಖಲೆ ನಿರ್ಮಿಸುತ್ತಿರುವ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್‌ಡಿಎ) ಬುಧವಾರ ರಾಜಧಾನಿಯಲ್ಲಿ ಮಹತ್ವದ ಸಭೆ ನಡೆಸಲಿದೆ.

ಗ್ರಾಮೀಣಾಭಿವೃದ್ಧಿಗೆ 1.25 ಲಕ್ಷ ಕೋಟಿ ರೂ.
• ಪುಟ ೨

ಪಂಜಾಬ್: ಉಗ್ರ ಜಾಲದ ಸಹಚರರಿಬ್ಬರ ಬಂಧನ
• ಪುಟ ೨

ವಾಯುಪಡೆ, ಸಿಆರ್‌ಪಿಎಫ್ ನಿಯೋಜನೆ
• ಪುಟ ೨

13ರಿಂದ ಮೋದಿ ಫ್ರಾನ್ಸ್, ಸ್ಲೋವಾಕಿಯಾ ಪ್ರವಾಸ
• ಪುಟ ೨

ಹಾರಂಗಿ ಜಲಾಶಯ ಖಾಲಿ
• ಪುಟ ೫

ಬಿಟ್ ಕಾಯಿನ್: ನಲಪಾಡ್ ವಿರುದ್ಧ ಚಾರ್ಜ್‌ಶೀಟ್
• ಪುಟ ೫

ಜಿ ರಾಮ್ ಜಿ ವೇತನ ಹೆಚ್ಚಿಸಿ: ಈಶ್ವರ್ ಖಂಡ್ರೆ
• ಪುಟ ೫



ಸುವೇಂದು ಸರ್ಕಾರಕ್ಕೆ ಬಹುಪರಾಕ್
• ಪುಟ ೭
ಸುದ್ದಿ ಸಮಗ್ರ

---

12 ವರ್ಷದ ಸಾಧನೆ ಬಿಚ್ಚಿಟ್ಟ ಪ್ರಧಾನಿ ನರೇಂದ್ರ ಮೋದಿ
ಪರಿವರ್ತನೆಯ ದಶಕ

ಹೊಸದಿಲ್ಲಿ: ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ 12 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಕಳೆದ ಒಂದು ದಶಕಕ್ಕೂ ಹೆಚ್ಚು ಅವಧಿಯಲ್ಲಿ ದೇಶದಲ್ಲಿ ಸಂಭವಿಸಿದ ಪರಿವರ್ತನೆಗಳ ಕುರಿತು ಪ್ರಧಾನಿ ಮೋದಿ ಅವರು ಪಟ್ಟಿ ಮಾಡಿದ್ದಾರೆ. ಬಡವರ ಕಲ್ಯಾಣ, ಮೂಲಸೌಕರ್ಯ ಅಭಿವೃದ್ಧಿ, ಡಿಜಿಟಲ್ ಕ್ರಾಂತಿ, ಆರೋಗ್ಯ ಸೇವೆಗಳ ವಿಸ್ತರಣೆ, ಮಹಿಳಾ ಸಬಲೀಕರಣ ಹಾಗೂ ಮಧ್ಯಮ ವರ್ಗಕ್ಕೆ ತೆರಿಗೆ ಸಡಿಲಿಕೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸರ್ಕಾರ ಐತಿಹಾಸಿಕ ಸಾಧನೆಗಳನ್ನು ದಾಖಲಿಸಿದೆ ಎಂದು ಅವರು ಹೇಳಿದರು. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸರಣಿ ಸಂದೇಶಗಳನ್ನು ಪ್ರಧಾನಿ ಪ್ರಕಟಿಸಿದ್ದಾರೆ.
➡ ಪುಟ ೪



ಅಭಿವೃದ್ಧಿ ವೇಗ ಮುಂದುವರಿಕೆ

ದೇಶವನ್ನು 2047ರ ವೇಳೆಗೆ ವಿಕಸಿತ ಭಾರತವನ್ನಾಗಿ ರೂಪಿಸುವ ಗುರಿಯೊಂದಿಗೆ ಸರ್ಕಾರ ಮುಂದಿನ ದಿನಗಳಲ್ಲಿಯೂ ಅಭಿವೃದ್ಧಿಯ ವೇಗ ಮುಂದುವರಿಸಲಿದೆ ಎಂದು ಪ್ರಧಾನಿ ಹೇಳಿದರು. ಜನರ ಆಶೋತ್ತರಗಳಿಗೆ ತಕ್ಕಂತೆ ಸುಧಾರಣೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಮುಂದುವರಿಯಲಿದ್ದು, ಭಾರತವನ್ನು ವಿಶ್ವದ ಮುಂಚೂಣಿ ರಾಷ್ಟ್ರಗಳ ಸಾಲಿನಲ್ಲಿ ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಸಂಕಲ್ಪವಿದೆ ಎಂದು ಅವರು ತಿಳಿಸಿದ್ದಾರೆ.



ರಕ್ಷಣೆಯಲ್ಲಿ ಆತ್ಮನಿರ್ಭರ

ರಕ್ಷಣಾ ಕ್ಷೇತ್ರದಲ್ಲಿಯೂ ಭಾರತ ಆತ್ಮನಿರ್ಭರದತ್ತ ವೇಗವಾಗಿ ಸಾಗುತ್ತಿದೆ ಎಂದು ಪ್ರಧಾನಿ ಹೇಳಿದರು. ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ಅಭಿಯಾನಗಳ ಮೂಲಕ ದೇಶೀಯ ಉತ್ಪಾದನೆಗೆ ಉತ್ತೇಜನ ನೀಡಲಾಗಿದ್ದು, ರಕ್ಷಣಾ ಉತ್ಪನ್ನಗಳ ರಫ್ತು ದಾಖಲೆ ಮಟ್ಟಕ್ಕೆ ಏರಿಕೆಯಾಗಿದೆ ಎಂದರು.

• ವಿಶೇಷ ಪುಟ ೩



ಮೋದಿ ಸರ್ಕಾರದ ಸಾಧನೆಗಳ ದಾಖಲೆ

ಬಡವರ ಕಲ್ಯಾಣದಿಂದ 12.75 ಲಕ್ಷ ತೆರಿಗೆ ವಿನಾಯಿತಿವರೆಗೆ

- **81** ಕೋಟಿಗೂ ಅಧಿಕ ಜನರಿಗೆ ಉಚಿತ ಆಹಾರ ಧಾನ್ಯ ವಿತರಣೆ
- ಜನಧನ್ ಯೋಜನೆಯಲ್ಲಿ ಕೋಟ್ಯಂತರ ಬ್ಯಾಂಕ್ ಖಾತೆಗಳ ತೆರೆಯುವಿಕೆ
- ಆಯುಷ್ಮಾನ್ ಭಾರತ್ ಆರೋಗ್ಯ ಭದ್ರತೆ
- ರಕ್ಷಣಾ ಉತ್ಪನ್ನಗಳ ರಫ್ತು ಹೆಚ್ಚಳ
- ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ ಲಕ್ಷಾಂತರ ಮನೆಗಳ ನಿರ್ಮಾಣ
- ಜಲ್ ಜೀವನ್ ಮಿಷನ್ ಮೂಲಕ ಮನೆಮನೆಗೆ ಕುಡಿಯುವ ನೀರಿನ ಸಂಪರ್ಕ
- UPI ಯುಪಿಐ ಮೂಲಕ ಡಿಜಿಟಲ್ ಪಾವತಿ ಕ್ರಾಂತಿ
- ರಾಷ್ಟ್ರೀಯ ಹೆದ್ದಾರಿಗಳು, ರೈಲು, ವಿಮಾನ ನಿಲ್ದಾಣಗಳ ವಿಸ್ತರಣೆ
- ಆತ್ಮನಿರ್ಭರ ಭಾರತ ಮತ್ತು ಮೇಕ್ ಇನ್ ಇಂಡಿಯಾ ಅಭಿಯಾನ
- 12.75 ಲಕ್ಷ ರೂ. ವರೆಗೆ ಆದಾಯಕ್ಕೆ ಪರಿಣಾಮಕಾರಿ ತೆರಿಗೆ ವಿನಾಯಿತಿ

> **ಕಳೆದ 12 ವರ್ಷಗಳಲ್ಲಿ ದೇಶದ ಜನರ ಜೀವನಮಟ್ಟ ಸುಧಾರಿಸುವ, ಬಡವರನ್ನು ಸಬಲಗೊಳಿಸುವ ಮತ್ತು ಅಭಿವೃದ್ಧಿಯನ್ನು ವೇಗಗೊಳಿಸುವ ಅನೇಕ ಕ್ರಮಗಳನ್ನು ಕೈಗೊಂಡಿದ್ದೇವೆ. ವಿಕಸಿತ ಭಾರತದ ಕನಸನ್ನು ನನಸಾಗಿಸಲು ಇದೇ ಉತ್ಸಾಹದೊಂದಿಗೆ ಮುಂದುವರಿಯುತ್ತೇವೆ.**
> ■ ನರೇಂದ್ರ ಮೋದಿ, ಪ್ರಧಾನಿ

ಭರಪೂರ ಮೂಲಸೌಕರ್ಯ

ಮೂಲಸೌಕರ್ಯ ಕ್ಷೇತ್ರದಲ್ಲಿ ಕಳೆದ 12 ವರ್ಷಗಳಲ್ಲಿ ಅಭೂತಪೂರ್ವ ಅಭಿವೃದ್ಧಿ ಕಂಡುಬಂದಿದೆ ಎಂದು ಪ್ರಧಾನಿ ಉಲ್ಲೇಖಿಸಿದರು.
➡ ಪುಟ ೪

ಬಾಂಬ್ ಸ್ಕ್ವಾಡ್ ಪರಿಶೀಲನೆ | ತೀವ್ರ ತನಿಖೆ
ಬೆಂಗಳೂರಿನಲ್ಲಿ ಭಾರೀ ಸ್ಫೋಟಕ ಸಾಮಗ್ರಿ ಪತ್ತೆ

• **ಬೆಂಗಳೂರು:** ಪ್ರಧಾನಿ ಮೋದಿ ಭೇಟಿ ವೇಳೆ ಪತ್ತೆಯಾದ ಜಿಲೆಟಿನ್ ಕಡ್ಡಿಗಳ ಪ್ರಕರಣ ತನಿಖೆಯಲ್ಲಿರುವಾಗಲೇ, ಬೆಂಗಳೂರು ನಗರ ಹೊರವಲಯದ ಅವಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದೊಡ್ಡ ಪ್ರಮಾಣದ ಜಿಲೆಟಿನ್ ಸ್ಫೋಟಕ ಕಡ್ಡಿಗಳು, ಡಿಟೋನೇಟರ್‌ಗಳು ಪತ್ತೆಯಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಇಷ್ಟು ದೊಡ್ಡ ಪ್ರಮಾಣದ ಸ್ಫೋಟಕಗಳು ಪತ್ತೆ ಆಗಿರುವುದರಿಂದ ಹಲವು ಅನುಮಾನಗಳು ಮೂಡಿವೆ.

ಈ ಹಿಂದೆ ಪ್ರಧಾನಿ ನರೇಂದ್ರ ಮೋದಿ ಹೋಗುವ ದಾರಿಯಲ್ಲೂ ಇದೇ ರೀತಿ ಜಿಲೆಟಿನ್ ಪತ್ತೆಯಾಗಿತ್ತು. ಇದೀಗ ಮತ್ತೆ ರಾಶಿ ರಾಶಿ ಜಿಲೆಟಿನ್ ಕಡ್ಡಿಗಳು ಹಾಗೂ ವೈರ್‌ಗಳು ಪತ್ತೆಯಾಗಿದೆ. ಸದ್ಯ ಜಿಲೆಟಿನ್ ಕಡ್ಡಿಗಳು ಮತ್ತು ವೈರ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಅವಲಹಳ್ಳಿಯ ಕಾಡಅಗ್ರಹಾರ ಬಳಿ ಪತ್ತೆ

ಪ್ರಕರಣ ದಾಖಲು: ಅಪಾರ ಪ್ರಮಾಣದಲ್ಲಿ ಸ್ಫೋಟಕಗಳು ಪತ್ತೆಯಾದ ಹಿನ್ನೆಲೆಯಲ್ಲಿ ಬಾಂಬ್ ಸ್ಕ್ವಾಡ್ ಸ್ಥಳ ಪರಿಶೀಲನೆ ನಡೆಸಿದೆ. ಸ್ಫೋಟಕ ವಸ್ತುಗಳ ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿ, ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಇವು ಕೇವಲ ಕ್ವಾರಿ ಕೆಲಸಕ್ಕಾಗಿ ತರಲಾಗಿದೆ ಎಂಬ ಆರೋಪಿಗಳ ಹೇಳಿಕೆಯಲ್ಲಿ ಪೊಲೀಸರು ಇನ್ನೂ ಸಂಪೂರ್ಣವಾಗಿ ವಿಶ್ವಾಸ ಹೊಂದಿಲ್ಲ, ವಿಧ್ವಂಸಕ ಚಟುವಟಿಕೆ ನಡೆಸಲು ಇದನ್ನು ಸಂಗ್ರಹಿಸಿದ್ದಾರೆಯೇ ಎಂಬ ಅನುಮಾನವೂ ತನಿಖೆಯ ಮಹತ್ವದ ಭಾಗವಾಗಿದೆ. ಈ ಹಿಂದೆ (ಮೇ 10)ಕೂಡ ಪ್ರಧಾನಿ ನರೇಂದ್ರ ಮೋದಿ ಅವರು ಆರ್ಟ್ ಆಫ್ ಲಿವಿಂಗ್‌ನಲ್ಲಿ ನಡೆದ ಕಾರ್ಯಕ್ರಮಕ್ಕೆ ಆಗಮಿಸಿದ್ದಾಗ, ಅವರು ಸಂಚರಿಸಿದ ಮಾರ್ಗದಲ್ಲಿ ಇಂತಹ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ಆದ್ದರಿಂದ, ಈಗ ಪತ್ತೆಯಾದ ಜಿಲೆಟಿನ್‌ಗಳ ಹಿಂದೆ ಯಾರಿದ್ದಾರೆ? ಯಾವ ಉದ್ದೇಶಕ್ಕಾಗಿ ಇವುಗಳನ್ನು ಸಂಗ್ರಹಿಸಲಾಗಿದೆ? ನಿಜವಾಗಿಯೂ ಕ್ವಾರಿ ಕೆಲಸಕ್ಕಷ್ಟೇ ಇದನ್ನು ತರಲಾಗಿದೆಯೇ ಅಥವಾ ಬೇರೆ ದೊಡ್ಡ ಸಂಚು ಇದೆಯೇ ಎಂಬುದನ್ನು ಪೊಲೀಸರು ಆಳವಾಗಿ ಪರಿಶೀಲಿಸುತ್ತಿದ್ದಾರೆ. ಆ ಪ್ರಕರಣದ ತನಿಖೆ ಮುಗಿಯುವ ಮುನ್ನವೇ ಈಗ ಮತ್ತೆ ಅದೇ ಮಾದರಿಯ ಸ್ಫೋಟಕಗಳು ಸಿಕ್ಕಿರುವುದು ಆತಂಕಕ್ಕೆ ಕಾರಣವಾಗಿದೆ.



50 ಡಿಟೊನೇಟರ್, 225 ಜಿಲೆಟಿನ್ ಕಡ್ಡಿ

ಅವಲಹಳ್ಳಿಯ ಕಾಡಅಗ್ರಹಾರ ಬಳಿ ಅನುಮಾನಾಸ್ಪದ ಬಾಕ್ಸ್‌ಗಳು ಇವೆ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಅವಲಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಬಾಕ್ಸ್‌ಗಳನ್ನು ತೆರೆದು ನೋಡಿದಾಗ ಅದರಲ್ಲಿ ಸ್ಫೋಟಕ ವಸ್ತುಗಳಾದ ಜಿಲೆಟಿನ್ ಕಡ್ಡಿಗಳು ಹಾಗೂ ಡಿಟೊನೇಟರ್ ಕಡ್ಡಿಗಳು ಪತ್ತೆಯಾಗಿವೆ. ಸುಮಾರು 225 ಜಿಲೆಟಿನ್ ಕಡ್ಡಿಗಳು ಮತ್ತು 50 ಡಿಟೊನೇಟರ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಸ್ಫೋಟಕ ವಸ್ತುಗಳನ್ನು ವೆಂಕಟರಾಮ ರೆಡ್ಡಿ ಎಂಬಾತ ಹಾಗೂ ಆತನ ಕೆಲಸಗಾರರ ಬಳಿ ಪತ್ತೆಹಚ್ಚಲಾಗಿದೆ. ಪ್ರಾಥಮಿಕ ವಿಚಾರಣೆಯಲ್ಲಿ ಆರೋಪಿಗಳು, ಇವುಗಳನ್ನು ಕಲ್ಲು ಕ್ವಾರಿ ಪ್ರದೇಶದಲ್ಲಿ ಬಂಡೆ ಒಡೆಯಲು ತರಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಇದಕ್ಕೆ ಸಂಬಂಧಿಸಿದ ಯಾವುದೇ ಅಧಿಕೃತ ಪರವಾನಗಿ ಅಥವಾ ದಾಖಲೆಗಳು ಪೊಲೀಸರಿಗೆ ಸಿಕ್ಕಿಲ್ಲ ಎಂದು ತಿಳಿದುಬಂದಿದೆ.

---

30 ಸ್ಥಳೀಯ ಅಮಾಯಕರ ನರಮೇಧ ಖಂಡಿಸಿದ ಭಾರತ
ಹತಾಶ ಪಾಕ್‌ನಿಂದ ಪಿಒಕೆನಲ್ಲಿ ಕ್ರೌರ್ಯ

• **ಹೊಸದಿಲ್ಲಿ:** ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಅಮಾಯಕ ನಾಗರಿಕರು ಮತ್ತು ಪ್ರತಿಭಟನಾಕಾರರ ಮೇಲೆ ಬಹಿರಂಗವಾಗಿ ಗುಂಡಿನ ದಾಳಿ ನಡೆಸಿದ ಪಾಕ್ ಸೇನೆಯ ಕ್ರೌರ್ಯವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಎಂಇಎ) ಮಂಗಳವಾರ ಕಟುವಾಗಿ ಖಂಡಿಸಿದೆ.

ಪಾಕಿಸ್ತಾನ ತನ್ನ ವೈಫಲ್ಯಗಳನ್ನು ಹೊರ ಜಗತ್ತಿನಿಂದ ಮರೆಮಾಚಲು ಮತ್ತು ಮಾನವ ಹಕ್ಕುಗಳ ಘೋರ ಉಲ್ಲಂಘನೆಯಿಂದ ಜಗತ್ತಿನ ಗಮನ ಬೇರೆಡೆ ಸೆಳೆಯಲು ಯತ್ನಿಸುತ್ತಿದೆ. ಇದೇ ಉದ್ದೇಶಕ್ಕೆ ನಿರಂತರ ಒಂದೇ ರೀತಿಯ ನಕಲಿ ಸುದ್ದಿ ಮತ್ತು ವಿಡಿಯೋಗಳನ್ನು ಹರಿಯಬಿಡುತ್ತಿದೆ ಎಂದು ವಿದೇಶಾಂಗ ವಕ್ತಾರ ರಣಧೀರ್ ಜೈಸ್ವಾಲ್ ಖಂಡಿಸಿದ್ದಾರೆ. ಮಾನವ ಹಕ್ಕುಗಳ ಘೋರ ಉಲ್ಲಂಘನೆ ಹಾಗೂ ಪಿಒಕೆನಲ್ಲಿ ಅದರ ಆಡಳಿತ ವೈಫಲ್ಯ ಮರೆಮಾಚಲು ಪಾಕಿಸ್ತಾನ ಹತಾಶ ಪ್ರಯತ್ನಗಳನ್ನು ಮಾಡುವಂತೆ ಗೋಚರಿಸುತ್ತದೆ ಎಂದು ಜೈಸ್ವಾಲ್ ಹೇಳಿದ್ದಾರೆ.
➡ ಪುಟ ೪



ಏನಿದು ಜೆಎಎಸಿ?

ಜಂಟಿ ಆವಾಮಿ ಆ್ಯಕ್ಷನ್ ಸಮಿತಿ (ಜೆಎಎಸಿ), ಪಿಒಕೆನಲ್ಲಿ ಸ್ಥಳೀಯರ ಮೇಲೆ ಪಾಕ್ ಸೇನೆಯ ಹಿಂಸಾಚಾರ, ಪೊಲೀಸ್ ದೌರ್ಜನ್ಯ ವಿರೋಧಿಸಿ 2023ರ ಸೆಪ್ಟೆಂಬರ್‌ನಲ್ಲಿ ಸ್ಥಾಪಿಸಲಾದ ಸ್ಥಳೀಯ ಸಂಘಟನೆಯಾಗಿದೆ. ಈ ಸಂಘಟನೆಯಲ್ಲಿ ವ್ಯಾಪಾರಿಗಳು, ವಕೀಲರು, ಪೂರೈಕೆದಾರರು ಮತ್ತು ಸಾಮಾಜಿಕ ಹೋರಾಟಗಾರರೂ ಇದ್ದಾರೆ.

ಕಾಂಗ್ರೆಸ್‌ಗೆ ಆಘಾತ, ಚು.ಆಯೋಗದ ಎದುರು ಪ್ರತಿಭಟನೆ
ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ

• **ಭೋಪಾಲ್/ಹೊಸದಿಲ್ಲಿ:** ಮಧ್ಯಪ್ರದೇಶದಿಂದ ರಾಜ್ಯ ಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಮೀನಾಕ್ಷಿ ನಟರಾಜನ್ ಅವರ ನಾಮಪತ್ರವನ್ನು ಚುನಾವಣಾಧಿಕಾರಿಗಳು ತಿರಸ್ಕರಿಸಿರುವುದು ಕಾಂಗ್ರೆಸ್‌ಗೆ ಭಾರೀ ಹಿನ್ನಡೆಯಾಗಿ ಪರಿಣಮಿಸಿದೆ. ನಾಮಪತ್ರ ಸಲ್ಲಿಕೆ ವೇಳೆ ಬಾಕಿ ಇರುವ ಒಂದು ಪ್ರಕರಣದ ಮಾಹಿತಿಯನ್ನು ಪ್ರಮಾಣಪತ್ರದಲ್ಲಿ ಬಹಿರಂಗಪಡಿಸದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರಾಜ್ಯಸಭೆ ಚುನಾವಣೆಗೆ ಮುನ್ನ ಬಿಜೆಪಿ ಕುದುರೆ ವ್ಯಾಪಾರದ ಆತಂಕದ ಹಿನ್ನೆಲೆಯಲ್ಲಿ ಕಾಂಗ್ರೆಸ್ ತನ್ನ ಶಾಸಕರನ್ನು ಕರ್ನಾಟಕಕ್ಕೆ ಕಳುಹಿಸಿದ್ದ ವೇಳೆ ಈ ಬೆಳವಣಿಗೆ ನಡೆದಿದೆ. ನಾಮಪತ್ರ ತಿರಸ್ಕಾರವನ್ನು ಕಾಂಗ್ರೆಸ್ ತೀವ್ರವಾಗಿ ವಿರೋಧಿಸಿದ್ದು, ಇದು ಪ್ರಜಾಪ್ರಭುತ್ವದ ಮೇಲೆ ನಡೆದ ದಾಳಿ ಎಂದು ಆರೋಪಿಸಿದೆ. ಪಕ್ಷದ ಹಿರಿಯ ನಾಯಕ ಕೆ.ಸಿ.ವೇಣುಗೋಪಾಲ್ ನೇತೃತ್ವದ ನಿಯೋಗ ಚುನಾವಣಾಧಿಕಾರಿಗಳನ್ನು ಭೇಟಿ ಮಾಡಿ ಆಕ್ಷೇಪ ವ್ಯಕ್ತಪಡಿಸಿತು.
➡ ಪುಟ ೪

ರಾಜ್ಯಸಭೆ ಚುನಾವಣೆಗೂ ಮುನ್ನ ಮಧ್ಯಪ್ರದೇಶದಲ್ಲಿ ರಾಜಕೀಯ ಸಂಚಲನ

ಯಾರು ಮೀನಾಕ್ಷಿ?

- ಮಧ್ಯಪ್ರದೇಶದ ಮಂದಸೌರ್ ಕ್ಷೇತ್ರದ ಮಾಜಿ ಲೋಕಸಭಾ ಸದಸ್ಯೆ
- ಕಾಂಗ್ರೆಸ್‌ನ ಹಿರಿಯ ಸಂಘಟನಾ ನಾಯಕಿ
- ಪ್ರಸ್ತುತ ತೆಲಂಗಾಣ ಕಾಂಗ್ರೆಸ್ ಉಸ್ತುವಾರಿ ಜವಾಬ್ದಾರಿ ನಿರ್ವಹಣೆ
- ರಾಜ್ಯಸಭೆಗೆ ಕಾಂಗ್ರೆಸ್ ಅಧಿಕೃತ ಅಭ್ಯರ್ಥಿಯಾಗಿ ಘೋಷಣೆಗೊಂಡಿದ್ದರು

ಬಿರುಕು ಸೃಷ್ಟಿಗೆ ಕೈ ಹುನ್ನಾರ

• **ಮಂಡ್ಯ:** ದೇವೇಗೌಡರ ಬಗ್ಗೆ ಕಾಂಗ್ರೆಸ್ಸಿಗರಿಗೆ ಈಗ ಅನುಕಂಪ ಬಂದಿದೆ. ಬಿಜೆಪಿ-ಜಾ.ದಳ ಮೈತ್ರಿಯಿಂದ ಭಯ ಶುರುವಾಗಿದೆ. ಈ ಹಿನ್ನೆಲೆಯಲ್ಲಿ ಮೈತ್ರಿಯಲ್ಲಿ ಬಿರುಕು ತರಲು ಕಾಂಗ್ರೆಸ್ ನಾಯಕರು ಪ್ರಯತ್ನಿಸುತ್ತಿದ್ದಾರೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.



ತಾಲೂಕಿನ ತಗ್ಗಹಳ್ಳಿ ಗ್ರಾಮದಲ್ಲಿ ಮಿಚೆಲಿನ್ ಇಂಡಿಯಾ ಪ್ರೈ.ಲಿ.ನ ಸಿಎಸ್‌ಆರ್ ಅನುದಾನ 32.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು. ರಾಜ್ಯಸಭೆಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಅರ್ಜಿಯನ್ನೇ ಹಾಕಿಲ್ಲ, ದೇವೇಗೌಡರದ್ದು ಹೋರಾಟದ ಬದುಕು.
➡ ಪುಟ ೪

ಕಾಂಗ್ರೆಸ್‌ನ ಮೊಸಳೆ ಕಣ್ಣೀರು ಬೇಡ: ಬಿವೈವಿ
• ಪುಟ ೪

ಜೀವನ ಕೌಶಲ ಬೆಳೆಸಲು ಡಿಎಸ್‌ಇಆರ್‌ಟಿ ನಿರ್ಧಾರ
ವಾರಕ್ಕೊಂದು ದಿನ ಮೌಲ್ಯಶಿಕ್ಷಣ

▸ ನಂದಿನಿ ಎನ್.

• **ಬೆಂಗಳೂರು:** ಕೇವಲ ಪಠ್ಯಪುಸ್ತಕ ಜ್ಞಾನವಷ್ಟೇ ಅಲ್ಲದೇ, ಉತ್ತಮ ವ್ಯಕ್ತಿತ್ವ, ನೈತಿಕತೆ, ಸಾಮಾಜಿಕ ಹೊಣೆಗಾರಿಕೆ ಮತ್ತು ಜೀವನ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಉದ್ದೇಶದಿಂದ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ(ಡಿಎಸ್‌ಇಆರ್‌ಟಿ) ಮಹತ್ವದ ನಿರ್ಧಾರ ಕೈಗೊಂಡಿದ್ದು, ಶಾಲೆಗಳಲ್ಲಿ 1-10ನೇ ತರಗತಿಗಳವರೆಗೆ ವಾರಕ್ಕೆ ಒಂದು ದಿನ ಮೌಲ್ಯ ಶಿಕ್ಷಣವನ್ನು ಕಡ್ಡಾಯಗೊಳಿಸಿದೆ. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಮಾನಸಿಕ ಒತ್ತಡ, ಸಾಮಾಜಿಕ ಮಾಧ್ಯಮಗಳ ಪ್ರಭಾವ, ನೈತಿಕ ಮೌಲ್ಯಗಳ ಕುಸಿತ ಹಾಗೂ ಸಮಾಜಮುಖಿ ಚಿಂತನೆ ಕೊರತೆ ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ.

ದಿಗಂತ ವಿಶೇಷ

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಅಂಕಗಳು ಮತ್ತು ಸ್ಪರ್ಧಾತ್ಮಕ ಸಾಧನೆಗಳಿಗೆ ಹೆಚ್ಚಿನ ಮಹತ್ವ ಸಿಗುತ್ತಿದ್ದು, ಜೀವನ ಮೌಲ್ಯಗಳು, ಮಾನವೀಯತೆ, ಸಹಾನುಭೂತಿ, ಶಿಸ್ತು, ಪರಿಸರ ಕಾಳಜಿ ಮತ್ತು ರಾಷ್ಟ್ರಪ್ರಜ್ಞೆ ಮೊದಲಾದ ಅಂಶಗಳು ಹಿನ್ನಡೆ ಅನುಭವಿಸುತ್ತಿವೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಉತ್ತಮ ನಾಗರಿಕರನ್ನಾಗಿ ರೂಪಿಸಲು ಮೌಲ್ಯ ಶಿಕ್ಷಣ ಅಗತ್ಯವಾಗಿದೆ.
➡ ಪುಟ ೪



> **ಮೌಲ್ಯ ಶಿಕ್ಷಣಕ್ಕೆ ಶಾಲಾ ವೇಳಾಪಟ್ಟಿಯಲ್ಲಿ ಪ್ರತಿ ತರಗತಿಗೆ ಒಂದು ಅವಧಿಯನ್ನು ನಿಗದಿಪಡಿಸಲಾಗಿದ್ದು, ವಿದ್ಯಾರ್ಥಿಗಳು ಮೌಲ್ಯಗಳನ್ನು ಅಳವಡಿಸಿಕೊಳ್ಳುತ್ತಿರುವ ಬಗ್ಗೆ ಅವರ ವರ್ತನೆಯಲ್ಲಾಗುತ್ತಿರುವ ಸಕಾರಾತ್ಮಕ ಬದಲಾವಣೆಯ ಬಗ್ಗೆ ನಿರಂತರ ಅನುಪಾಲನೆ ಮಾಡಲಾಗುವುದು.**
> ■ ಅನಿತಾ ವಿ. ನಾಜರೆ, ನಿರ್ದೇಶಕಿ (ಪ್ರಭಾರ), ಡಿಎಸ್‌ಇಆರ್‌ಟಿ

ಭಾರತದಿಂದ 12 ಅಣ್ವಸ್ತ್ರ ನಿಯೋಜನೆ

• **ಹೊಸದಿಲ್ಲಿ:** ಭಾರತ ಇತಿಹಾಸದಲ್ಲೇ ಮೊದಲ ಬಾರಿಗೆ 12 ಅಣ್ವಸ್ತ್ರಗಳನ್ನು ಕಾರ್ಯಾಚರಣೆಗೆ ಸನ್ನದ್ಧ ಸ್ಥಿತಿಯಲ್ಲಿ ನಿಯೋಜಿಸಿದೆ ಎಂದು ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಸಿಪ್ರಿ) ಬಿಡುಗಡೆ ಮಾಡಿದ ವರದಿಯಲ್ಲಿ ತಿಳಿಸಿದೆ. ಅಣ್ವಸ್ತ್ರಗಳು ಮತ್ತು ಅವುಗಳನ್ನು ಉಡಾವಣೆ ಮಾಡುವ ವ್ಯವಸ್ಥೆಗಳನ್ನು ಶಾಂತಿಕಾಲದಲ್ಲಿ ಪ್ರತ್ಯೇಕ ದಾಸ್ತಾನುಗಳಲ್ಲಿ ಇರಿಸುವ ದಶಕಗಳ ಹಳೆ ನೀತಿಯಿಂದ ಭಾರತ ಹಿಂದೆ ಸರಿದಿದೆ ಎಂದು ಈ ಜಾಗತಿಕ ಶಸ್ತ್ರಾಸ್ತ್ರ ನಿಗಾ ಸಂಸ್ಥೆ ಬಹಿರಂಗಪಡಿಸಿದೆ. ಹೊಸದಾಗಿ ನಿಯೋಜಿಸಲಾದ 12 ಅಣ್ವಸ್ತ್ರಗಳನ್ನು ಉಡಾವಣಾ ವ್ಯವಸ್ಥೆಗಳೊಂದಿಗೆ ಜೋಡಿಸಲಾಗಿದೆ ಅಥವಾ ಸಕ್ರಿಯ ಪಡೆಗಳಿರುವ ನೆಲೆಗಳಲ್ಲಿ ಇರಿಸಲಾಗಿದೆ.
➡ ಪುಟ ೪



ಧಾರವಾಡ: ಕಳೆದ ಜೆ.ಇ.ಇ ಅಡ್ವಾನ್ಸ್ ಪರೀಕ್ಷೆಯಲ್ಲಿ ಜನತಾ ಶಿಕ್ಷಣ ಸಮಿತಿಯ ಆರ್.ಎಸ್.ಹುಕ್ಕೇರಿಕರ ಪದವಿಪೂರ್ವ ಕಾಲೇಜಿನ ಜಯೇಶ್ ಅಟ್ಟುತ್ 10879 ರ‍್ಯಾಂಕ್ ಪಡೆದು ಐಐಟಿಗಳಲ್ಲಿ ಪ್ರವೇಶ ಪಡೆಯಲು ಅರ್ಹತೆ ಪಡೆದಿದ್ದಾನೆ. ಜೆ.ಇ.ಇ ಮೇನ್ಸ್ ಪರೀಕ್ಷೆಯಲ್ಲಿ ಶೇ.99.06 ಅಂಕ ಪಡೆದ ವಿದ್ಯಾರ್ಥಿ ಸಾಧನೆಗೆ ಡಾ. ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಪ್ರಾಚಾರ್ಯ ಪ್ರಭಾಕರ ಶಾನಭಾಗ, ಮಹಾವೀರ ಉಪಾಧ್ಯೆ, ಹಾಗೂ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಬಾಕಿ ಉಳಿದ ಕಾರ್ಯ ಶೀಘ್ರ ಪೂರ್ಣಗೊಳಿಸಿ



ಹುಬ್ಬಳ್ಳಿ: ಮುಂದಿನ ಒಂದು ಜಿಲ್ಲೆಯಲ್ಲಿ ಜಾಸ್ತಿ ಮಳೆಯಾಗುವ ಸಂಭವವಿದ್ದು, ಮಹಾನಗರ ಪಾಲಿಕೆ, ಕಂದಾಯ, ಅರಣ್ಯ, ಹೆಸ್ಕಾಂ ಹಾಗೂ ಇನ್ನಿತರ ಇಲಾಖೆ ಅಧಿಕಾರಿಗಳು ಮುಂಜಾಗ್ರತ ಕ್ರಮಗಳ ಕೈಗೊಳ್ಳಬೇಕು ಎಂದು ಶಾಸಕ ಮಹೇಶ ಟೆಂಗಿನಕಾಯಿ ಸೂಚಿಸಿದ್ದಾರೆ.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಈಗಾಗಲೇ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮುಂಗಾರು ಮಳೆ ಮುಂಜಾಗ್ರತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ನಾಲಾ ಸ್ವಚ್ಛತಾ ಕಾರ್ಯ ಈಗಾಗಲೇ ನಡೆದಿದೆ. ತಗ್ಗು ಪ್ರದೇಶಗಳಲ್ಲಿ ಗಮನಹರಿಸಬೇಕಿದೆ. ಕೆಲವು ಗಿಡ-ಮರಗಳ ತೆರವು ಕಾರ್ಯ ಬಾಕಿ ಉಳಿದಿದೆ. ವಿದ್ಯುತ್ ಕಂಬ ತೆರವು ಕಾರ್ಯ ಮಾಡಬೇಕು ಎಂದು ಸೂಚಿಸಿದ್ದಾರೆ.

ಮುನ್ನೆಚ್ಚರಿಕಾ ಕ್ರಮವಾಗಿ ಎಲ್ಲ ಸಿಬ್ಬಂದಿ ತಕ್ಷಣ ಕಾರ್ಯಪ್ರವೃತ್ತರಾಗಿ ಆಗುವ ಹಾನಿಯನ್ನು ಎದುರಿಸಲು ಸನ್ನದ್ಧರಾಗಬೇಕು. ಸಾರ್ವಜನಿಕರ ಆಸ್ತಿ ಪಾಸ್ತಿಗೆ ಹಾನಿಯಾಗದ ರೀತಿಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು. ಮಳೆ ಬರುವ ಸಂದರ್ಭದಲ್ಲಿ ಗಿಡಮರಗಳ ಕೆಳಗೆ ನಿಲ್ಲುವುದು ಮತ್ತು ಯಾವುದೇ ಕಟ್ಟಡದ ಆಶ್ರಯದಲ್ಲಿ ನಿಲ್ಲಬಾರದು. ಸಾರ್ವಜನಿಕರು ಯಾವುದೇ ಸಮಸ್ಯೆಗಳಿದ್ದರು ತಕ್ಷಣ ಮಾಹಿತಿ ನೀಡಲು ಹೆಲ್ಪಲೈನ್ ಆರಂಭಿಸಬೇಕು ಎಂದು ತಿಳಿಸಿದ್ದಾರೆ.



ಹುಬ್ಬಳ್ಳಿ: ನಗರದ ಜೋಳಿನವರ ಓಣಿಯಲ್ಲಿ ಆರಂಭವಾದ ಕರ್ನಾಟಕ ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ನೂತನ ಶಾಖೆಯನ್ನು ಪಾಲಿಕೆ ಸದಸ್ಯ ಶಿವು ಮೆಣಸಿನಕಾಯಿ ಹಾಗೂ ಶಾಖೆ ಅಧ್ಯಕ್ಷ ಜಗದೀಶ ಕಾಳಣ್ಣವರ ಉದ್ಘಾಟಿಸಿದರು. ಸಂಘಟದ ಅಧ್ಯಕ್ಷ ಬಿ.ಎ.ಪಾಟೀಲ, ಡಾ.ಲಿಂಗರಾಜ ಅಂಗಡಿ, ಡಾ.ಸುನಂದಾ ಬೆನ್ನೂರ ಶಶಿಕಾಂತ ಜರತಾರಘರ, ಈರಣ್ಣಾ ಶಿವಳ್ಳಿ, ಲಿಂಗರಾಜ ಚೋಳಿನ ಹಾಗೂ ಓಣಿಯ ಗುರು ಹಿರಿಯರು ಉಪಸ್ಥಿತರಿದ್ದರು.

ಕಿರುಸುದ್ದಿ

ಗಾಂಜಾ ಮಾರಾಟ ಜಾಲ ಪತ್ತೆ ಹಚ್ಚಿ

ಹುಬ್ಬಳ್ಳಿ: ಹು-ಧಾ ಅವಳಿನಗರದಲ್ಲಿ ಗಾಂಜಾ ಹಾವಳಿ ಹೆಚ್ಚಾಗಿದ್ದು ಯುವ ಜನರು ಬಲಿಯಾಗುತ್ತಿದ್ದಾರೆ. ಪೊಲೀಸ್ ಇಲಾಖೆ ಗಾಂಜಾ ಮಾರಾಟವನ್ನು ನಿಯಂತ್ರಿಸುವಲ್ಲಿ ವಿಫಲವಾಗಿದ್ದು, ಪೊಲೀಸ್ ಆಯುಕ್ತ ಎನ್. ಶಶಿಕುಮಾರ ವಿನು ಮಾಡುತ್ತಿದ್ದಾರೆ ಎಂದು ಮಾಜಿ ಹುಡಾ ಅಧ್ಯಕ್ಷ ನಾಗೇಶ ಕಲಬುರ್ಗಿ ಕಿಡಿಕಾರಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ಇತ್ತೀಚೆಗೆ ಗಾಂಜಾ ಪ್ರಕರಣದಲ್ಲಿ ಆದಿತ್ಯ ಮ್ಯಾಗೇರಿ ಪೊಲೀಸರ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅದೇ ರೀತಿ ಎಸ್‌ಎಸ್‌ಕೆ ಸಮಾಜದ ಚಿತ್ರಪಟ ವಿಜಯ ವಾಳವೇಕರ ಅವರ ಮೇಲೆ ಪೊಲೀಸ್ ಹಲ್ಲೆ ನಡೆದಿದ್ದರಿಂದ ಆತನು ಮೃತಪಟ್ಟಿದ್ದಾನೆ. ಇದಕ್ಕೆ ಮುಖ್ಯ ಕಾರಣ ಜಿಲ್ಲೆಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ನಡೆಯುತ್ತಿರುವುದು ಎಂದು ಆರೋಪಿಸಿದ್ದಾರೆ. ಗಾಂಜಾ ಸೇವಿಸುವವರ ವಿರುದ್ಧ ಕ್ರಮ ಕೈಗೊಳ್ಳುವುದರಿಂದ ಅಮಾಯಕ ಯುವಕರು ಬಲಿಯಾಗುತ್ತಿದ್ದಾರೆ. ಪೊಲೀಸರು ಗಾಂಜಾ ಮಾರಾಟಗಾರರನ್ನು ಬಂಧಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು. ಗಾಂಜಾ ಮಾರಾಟ ಜಾಲ ಪತ್ತೆ ಹಚ್ಚಿಸಿ ಬುಡಸಮೇತ ಅದನ್ನು ಕಿತ್ತು ಹಾಕಬೇಕು ಎಂದು ಆಗ್ರಹಿಸಿದರು.

ಕೆ.ಎಂ.ಜಾನಕಿ ಭೇಟಿ



ಧಾರವಾಡ: ನಗರದ ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ಗೆ ಬೆಳಗಾವಿ ಪ್ರಾದೇಶಿಕ ಆಯುಕ್ತೆ ಕೆ.ಎಂ. ಜಾನಕಿ ಭೇಟಿ ನೀಡಿ, ಬೇಂದ್ರ ದರ್ಶನ ಪ್ರದರ್ಶನಾಲಯ, ಆಡಳಿತ ಕಚೇರಿ, ನಿವಾಸ ವೀಕ್ಷಿಸಿದರು. ಕನ್ನಡ-ಸಂಸ್ಕೃತಿ ಇಲಾಖೆಯ ಬೆಳಗಾವಿ ವಿಭಾಗದ ಜಂಟಿ ನಿರ್ದೇಶಕ ಕೆ.ಎಚ್. ಚನ್ನೂರ, ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ, ಟ್ರಸ್ಟ್ ಸದಸ್ಯೆ ಡಾ.ಶರಣಮ್ಮ ಗೋರೆಬಾಳ, ಟ್ರಸ್ಟ್ ವ್ಯವಸ್ಥಾಪಕ ಪ್ರಕಾಶ ಬಾಳಿಕಾಯಿ, ಡಾ.ರೋಹಿಣಿ ಗಂಗಾಧರ ಇದ್ದರು.

ಸಾಹಿತ್ಯ ದಂಪತಿ ಸನ್ಮಾನ



ಧಾರವಾಡ: ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪನೆ ದಿನಾಚರಣೆ ಮತ್ತು ಮಹಾಂತೇಶ ನರೇಗಲ್ಲ ಮತ್ತು ನಾಗರತ್ನ ನರೇಗಲ್ಲ ದತ್ತಿ ಅಂಗವಾಗಿ ಸಾಹಿತ್ಯ ಭವನದಲ್ಲಿ ಗೀತ ಗಾಯನ ಹಾಗೂ ಸಾಹಿತ್ಯ ದಂಪತಿ ಸನ್ಮಾನ ಕಾರ್ಯಕ್ರಮ ಜರುಗಿತು.

ಉದ್ಘಾಟಿಸಿದ ಡಾ.ಎಂ.ಎಂ.ಕಲಬುರ್ಗಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೀರಣ್ಣ ರಾಜೂರ ಮಾತನಾಡಿ, ಕಳೆದ ನೂರು ವರ್ಷಗಳಿಂದ ಕನ್ನಡ ಸಾಹಿತ್ಯ ಪರಿಷತ್ ನಡೆದು ಬಂದ ಹಾದಿಯ ಜೊತೆಗೆ ಸತಿ-ಪತಿಗಳ ಬದುಕು ಹೇಗೆ? ಇರಬೇಕು ಎಂದು ವಿವರಿಸಿದರು. ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಅಧ್ಯಕ್ಷತೆ ವಹಿಸಿದ್ದರು. ಡಾ.ವೀರಣ್ಣ ರಾಜೂರ ಮತ್ತು ಮಂಗಳಾ ರಾಜೂರ ದಂಪತಿಗಳಿಗೆ ಸನ್ಮಾನಿಸಲಾಯಿತು. ವೇದಿಕೆಯಲ್ಲಿ ದತ್ತಿದಾನಿ ಮಹಾಂತೇಶ ನರೇಗಲ್ಲ ಹಾಗೂ ನಾಗರತ್ನ ನರೇಗಲ್ಲ ಇದ್ದರು. ವೀಣಾ ಬಿರಾದಾರ, ಸ್ಮಿತಾ ವಡಗಾವೆ, ವಿಜಯಲಕ್ಷ್ಮಿ ಕಲ್ಯಾಣಶೆಟ್ಟರ್, ಸುಜಾತಾ ಹಡಗಲಿ, ಬಸವರಾಜ ಗೊರವರ, ಸಿ.ಎಂ.ಕೆಂಗಾರ, ಆರ್.ಎಂ.ಕನ್ನೂರ, ಗುರು ತಿಗಡಿ, ಎಚ್.ಎಸ್.ಬಡಿಗೇರ, ಎಸ್.ರೇವಣಸಿದ್ಧಪ್ಪ, ಬಿ.ಜಿ.ಬಾರ್ಕಿ ಅನೇಕರು ಪಾಲ್ಗೊಂಡಿದ್ದರು. ಸ್ನೇಹರಂಗ ಕಲಾಬಳಗ ನಾಡಗೀತೆ, ಎಫ್.ಬಿ.ಕಣವಿ, ಉಮಾಕಾಂತ ಅರ್ಕಸಾಲಿ ಕನ್ನಡ ಗೀತೆ ಹಾಡಿದರು. ಪ್ರಮೀಳಾ ಜಕ್ಕಣ್ಣವರ ನಿರೂಪಿಸಿದರು. ಮೇಘಾ ಹುಕ್ಕೇರಿ ವಂದಿಸಿದರು.

ಸ್ವಚ್ಛತಾ ಕಾರ್ಯಕ್ರಮ



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 39 ಶಾಂತಿ ಕಾಲೋನಿಯ ಉದ್ಯಾನವನದಲ್ಲಿ ಭಾನುವಾರ ಬೆಳಗ್ಗೆ ಹುಬ್ಬಳ್ಳಿ-ಧಾರವಾಡ ಭಾರತೀಯ ಜನತಾ ಪಾರ್ಟಿ ಸೆಂಟ್ರಲ್ ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಮುತ್ತು ಹೆಬ್ಬಳ್ಳಿ ನೇತೃತ್ವದಲ್ಲಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಮಾರ್ಗದರ್ಶನದಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು.

ವಾರ್ಡ್ ನಂಬರ್ 39ರ ಬಿಜೆಪಿ ಮುಖಂಡ ಸಿದ್ದು ಮೊಗಲಿ ಶೆಟ್ಟರ್ ಮಾತನಾಡಿದರು . ಸೆಂಟ್ರಲ್ ಯುವ ಮೋರ್ಚಾ ಅಧ್ಯಕ್ಷ ಮುತ್ತು ಹೆಬ್ಬಳ್ಳಿ ಮುಖಂಡ ಸಿದ್ದು ಮೊಗಲಿಶೆಟ್ಟರ್, ಬಿಜೆಪಿ ಮುಖಂಡ ರವಿ ನಾಯಕ, ವಾರ್ಡ್ ಅಧ್ಯಕ್ಷ ರಘು ಧಾರವಾಡಕರ್, ಮಂಜುನಾಥ್ ಊಟವಾಲೆ, ಪ್ರವೀಣ ಬೆಳಗಲಿ ಶಾಜಿ, ಸಾಯಿ ಕುಮಾರ್ ಚಟಪಲ್ಲಿ ಮಠ , ನವೀನ ಮಡಿವಾಳರ, ವಿನಾಯಕ ಕುದುರಿ, ರಾಜು ಪೂಜಾರ್, ಮಲ್ಲಯ್ಯ ಕುದುರಿ, ಮಂಜು ಭಜಂತ್ರಿ, ಪ್ರಕಾಶ ಪೂಜಾರ್, ಆರೋಗ್ಯ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಯೋಗ ದಿನಕ್ಕೆ ಸಿದ್ಧತೆ ಕೈಗೊಳ್ಳಿ: ಡಿಸಿ



ಧಾರವಾಡ: ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಜೂ.21ರಂದು ಬೆಳಗ್ಗೆ 6.45 ಗಂಟೆಗೆ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಗರದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದಾಗಿ ಜಿಲ್ಲಾಧಿಕಾರಿ ಸ್ನೇಹಲ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಭವನದಲ್ಲಿ ಅಂತಾರಾಷ್ಟ್ರೀಯ ಯೋಗ ದಿನದ ಪೂರ್ವಭಾವಿ ಸಭೆ ನಡೆಸಿದ ಅವರು, ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ನಡೆಸಬೇಕು. ಇದಕ್ಕೆ ಅಧಿಕಾರಿಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಿದರು.

ಯೋಗದ ಸ್ಥಳದಲ್ಲಿ ಆಂಬ್ಯುಲೆನ್ಸ್, ಕುಡಿಯುವ ನೀರು, ಇತರ ಸೌಕರ್ಯಗಳನ್ನು ಒದಗಿಸಬೇಕು. ಮಹಾನಗರ ಪಾಲಿಕೆಯಿಂದ ಸ್ವಚ್ಛತೆ, ನೀರಿನ ವ್ಯವಸ್ಥೆ ಹಾಗೂ ವ್ಯವಸ್ಥಿತವಾಗಿ ಕಾರ್ಯಕ್ರಮ ನಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಹೇಳಿದರು.

ತಮಗೆ ಅನುಕೂಲಕರ ಸಮಯದಲ್ಲಿ ಆನ್‌ಲೈನ್ ಮೂಲಕ ಯೋಗ ತರಬೇತಿ ಪಡೆಯಬಹುದು. ಆನ್‌ಲೈನ್ ವೆಬ್‌ಸೈಟ್ https://moa.habit.yoga?ref=Karnataka ಮೂಲಕ ಯೋಗ ತರಬೇತಿಗೆ ನೋಂದಾಯಿಸಲು ತಿಳಿಸಿದರು. ವೈದ್ಯಾಧಿಕಾರಿ ಡಾ.ಶಶಿಧರ ತಳಕಲ್, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಡಿಸಿಪಿ ರವೀಶ ಸಿ.ಆರ್., ಜಿಲ್ಲಾ ಆಯುಷ್ ಅಧಿಕಾರಿ ಡಾ.ಗಣೇಶ ಕಬಾಡೆ ಸೇರಿದಂತೆ ಇತರರಿದ್ದರು.

> **ಯೋಗ ಕೇವಲ ಒಂದೇ ದಿನಕ್ಕೆ ಸೀಮಿತವಾಗದೆ ನಿತ್ಯ ಯೋಗಾಸ ಮಾಡುವ ಮೂಲಕ ಆರೋಗ್ಯ ಕಾಪಾಡಬೇಕು. ಆರೋಗ್ಯ ರಕ್ಷಣೆಗೆ ಯೋಗ ಅತ್ಯುತ್ತಮ ಸಾಧನವಾಗಿದ್ದು, ದೈನಂದಿನ ಜೀವನದಲ್ಲಿ ಯೋಗ ಅಳವಡಿಸಿಕೊಳ್ಳಬೇಕು.**
> ■ **ಸ್ನೇಹಲ್ ಆರ್., ಜಿಲ್ಲಾಧಿಕಾರಿ**

ಭಾವಿ ಪತ್ರಕರ್ತರಿಗೆ ಸಾಹಿತ್ಯ ಓದು ಅಗತ್ಯ

ಧಾರವಾಡ: ಪತ್ರಿಕೋದ್ಯಮದಲ್ಲಿ ಕಾರ್ಯನಿರ್ವಹಿಸಲು ಆತ್ಮವಿಶ್ವಾಸದ ಜೊತೆಗೆ ಭಾಷಾ ಶುದ್ಧತೆ ಅತ್ಯವಶ್ಯ. ಹೀಗಾಗಿ ಪತ್ರಕರ್ತರಾಗುವವರು ಸಾಹಿತ್ಯ ಓದುವ ಹವ್ಯಾಸ ರೂಢಿಸಿಕೊಳ್ಳುವಂತೆ ಪತ್ರಕರ್ತರ ನರಸಿಂಹಮೂರ್ತಿ ಪ್ಯಾಟಿ ಸಲಹೆ ನೀಡಿದರು.

ನಗರದ ಕರ್ನಾಟಕ ಕಲಾ ಕಾಲೇಜಿನ ವಾಣಿಜ್ಯ ಸಭಾಂಗಣದಲ್ಲಿ ಮಂಗಳವಾರ ನಡೆದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪತ್ರಿಕೋದ್ಯಮ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ದಿನನಿತ್ಯವೂ ಬದಲಾಗುವ ತಂತ್ರಜ್ಞಾನಕ್ಕೆ ಹೊಂದಿಕೊಳ್ಳುವುದು ಅನಿವಾರ್ಯ. ಜೀವನೋಪಾಯಕ್ಕಾಗಿ ಈ ಪತ್ರಿಕೋದ್ಯಮದಾಚೆಗೂ ಅನೇಕ ಉದ್ಯೋಗವಕಾಶಗಳಿವೆ. ಪತ್ರಕರ್ತರಾಗುವ ವಿದ್ಯಾರ್ಥಿಗಳು ವೃತ್ತಿಪರತೆ ಅಳವಡಿಸಿಕೊಳ್ಳಬೇಕು. ವೈಯಕ್ತಿಕ ಖುಷಿಗಳನ್ನು ತ್ಯಾಗ ಮಾಡಲು ಕೂಡ ಸಿದ್ಧರಿರಬೇಕು. ಯಾರಿಗೂ ಭಯಪಡುವ ಅಗತ್ಯವಿಲ್ಲ, ಪ್ರತಿಯೊಬ್ಬ ಪತ್ರಕರ್ತನೂ ಕೂಡ ಒಬ್ಬ ಯೋಧ ಎಂದರು. ಮಾಡುವ ಕಾಯಕದಲ್ಲಿ ಖುಷಿ ಕಾಣಬೇಕು. ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಮಾಡಬೇಕು. ಸಮಾಜದಲ್ಲಿ ನಡೆಯುವ ಅಕ್ರಮ, ಅವ್ಯಹಾರ, ಅನ್ಯಾಯಗಳ ವಿರುದ್ಧ ಮತ್ತು ಸಮಾಜಘಾತಕ ಶಕ್ತಿಗಳ ವಿರುದ್ಧ ಹೋರಾಡಬೇಕು ಎಂದರು.

ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕ ಡಾ.ಪ್ರಭಾಕರ ಕಾಂಬಳೆ ಮಾತನಾಡಿ, ಗುರಿ ಸಾಧಿಸಲು ಜೀವನದಲ್ಲಿ ಶಿಸ್ತು, ಸಂಯಮ, ಶ್ರದ್ಧೆ, ಅರ್ಪಣಾ ಭಾವನೆ ಅಗತ್ಯ. ಪ್ರಾಯೋಗಿಕ ಕಲಿಕೆಗೆ ಕಾಲೇಜಿನಲ್ಲಿ ಸ್ಟುಡಿಯೋ ನಿರ್ಮಿಸಿಕೊಡಲು ಪ್ರಾಚಾರ್ಯರಿಗೆ ಮನವಿ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಕೆಸಿಡಿ ಪ್ರಾಚಾರ್ಯ ಡಾ. ಐ.ಸಿ.ಮುಳಗುಂದ, ಪತ್ರಿಕೋದ್ಯಮ ಜಗತ್ತಿನಲ್ಲಿ ಪ್ರಬಲವಾದ ವೃತ್ತಿ. ಪತ್ರಕರ್ತರಿಗೆ ಕುತೂಹಲ, ಪ್ರಾಮಾಣಿಕತೆ ಹಾಗೂ ಸೂಕ್ಷ್ಮ ವೀಕ್ಷಣೆ ಗುಣವಿರಬೇಕು. ವಿಷಯದ ಮೇಲೆ ಹಿಡಿತ ಸಾಧಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮ ವಿಭಾಗದ ಸಂಯೋಜಕ ಡಾ. ಸಿ.ಬಿ.ಐನಳ್ಳಿ, ಉಪನ್ಯಾಸಕರಾದ ಡಾ.ರವೀಂದ್ರ ಜಲರೆಡ್ಡಿ ಇದ್ದರು. ಪೂಜಾ ರಟ್ಟಿಗೇರಿ ಮತ್ತು ದೇವಪ್ಪ ನಿರೂಪಿಸಿದರು. ಲಕ್ಷ್ಮೀ ಕುಂಬಾರ ಸ್ವಾಗತಿಸಿದರು. ಓಂಕಾರೇಶ್ವರಿ ವಂದಿಸಿದರು. ಪತ್ರಿಕೋದ್ಯಮ ವಿಷಯದಲ್ಲಿ ಹೆಚ್ಚಿನ ಅಂಕಗಳು ಗಳಿಸಿದ ಪ್ರಜ್ವಲ್ ಮತ್ತು ದೀಪಾ (ಪ್ರಥಮ ವರ್ಷ), ಸುಪ್ರೀತ ಬಕೊಳ್ಳಿ ಮತ್ತು ಭಾಗ್ಯಶ್ರೀ (ದ್ವಿತೀಯ ವರ್ಷ) ಮತ್ತು ರಾಘವೇಂದ್ರ ಮತ್ತು ಭೂಮಿಕಾ ರೆಡ್ಡಿ (ಅಂತಿಮ ವರ್ಷ) ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.



ರೋಗ ಲಕ್ಷಣಗಳನ್ನು ಆರಂಭದಲ್ಲೇ ಪತ್ತೆ ಹಚ್ಚಿ

ಹುಬ್ಬಳ್ಳಿ: ಎಲ್ಲ ಬ್ರೈನ್ ಟ್ಯೂಮರ್‌ಗಳು ಅಪಾಯಕಾರಿ ಅಲ್ಲ. ಆದರೆ ಮಿದುಳು ಗಡ್ಡೆ ಬಗ್ಗೆ ಅಸಡ್ಡೆ ಮಾಡದೆ ರೋಗ ಲಕ್ಷಣಗಳನ್ನು ಆರಂಭದಲ್ಲೇ ಪತ್ತೆ ಮಾಡಿ ಸೂಕ್ತ ಚಿಕಿತ್ಸೆ ಪಡೆದಲ್ಲಿ ಸಮಸ್ಯೆಗೆ ಬೇಗನೆ ಪರಿಹಾರ ಕಂಡುಕೊಳ್ಳಬಹುದು ಎಂದು ಖ್ಯಾತ ನರರೋಗ ತಜ್ಞ ಹಾಗೂ ಬಾಲಾಜಿ ಆಸ್ಪತ್ರೆ ಚೇರ್ಮನ್ ಡಾ. ಕ್ರಾಂತಿಕಿರಣ ತಿಳಿಸಿದರು.

ವಿಶ್ವ ಮಿದುಳು ಗಡ್ಡೆ ದಿನ ಅಂಗವಾಗಿ ಬಾಲಾಜಿ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಂಡಿದ್ದ ಜನಜಾಗೃತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೆದುಳಿನ ಗಡ್ಡೆಯ ಮೊದಲ ಮುನ್ಸೂಚನೆ ತಲೆನೋವು. ಆದರೆ ಬಹುತೇಕ ಜನ ಅದನ್ನು ಸಾಮಾನ್ಯ ತಲೆನೋವು ಎಂದು ಕಡೆಗಣಿಸುತ್ತಾರೆ. ನಮ್ಮಲ್ಲಿ ದಾಖಲಾಗುವ ಬಹುತೇಕ ಪ್ರಕರಣಗಳಲ್ಲಿ ಇಂತಹ ಉದಾಹರಣೆಗಳು ಹೆಚ್ಚಿರುತ್ತವೆ. ಮೆದುಳಿನ ರಕ್ತನಾಳಗಳು ಮತ್ತು ನರಗಳ ಮೇಲೆ ಒತ್ತಡ ಬೀಳುವುದರಿಂದ ತಲೆನೋವು ಉಂಟಾಗಲಿದ್ದು, ಬೆಳಗ್ಗೆ ಎದ್ದ ತಕ್ಷಣ ತೀವ್ರ ತಲೆ ನೋವು, ವಾಕರಿಕೆ ಮತ್ತು ವಾಂತಿ, ಮಾತು, ದೃಷ್ಟಿ ಅಥವಾ ಆಲಿಸುವಿಕೆಯಲ್ಲಿ ಅಸ್ಪಷ್ಟತೆ, ಇನ್ನಿತರ ರೋಗ ಲಕ್ಷಣ ಕಂಡು ಬಂದಲ್ಲಿ ಯಾವುದೇ ನಿರ್ಲಕ್ಷ್ಯ ತೋರದೆ ಕೂಡಲೇ ಆಸ್ಪತ್ರೆಗೆ ಕರೆ ತಂದು ಚಿಕಿತ್ಸೆ ಕೊಡಿಸಬೇಕು ಎಂದರು.



ನರರೋಗ ತಜ್ಞರಾದ ಡಾ. ಇತಿ ಸಿಂಗ್ ಪರ್ಮಾರ್, ಡಾ. ನಿಖಿಲ್ ಡಗೆ, ಇತರೆ ವೈದ್ಯರಾದ ಡಾ. ಜಯಮೇಜಯ, ಡಾ. ಅಬ್ರಾರ್, ಡಾ ಆದಿತ್ಯ, ಡಾ. ರೋಹಿತ್, ಹಿರಿಯರಾದ ಎಂ.ಕೆ. ನಾಯ್ಕರ, ಶುಶ್ರೂಷಕರು, ಆಸ್ಪತ್ರೆ ಇನ್ನಿತರ ಸಿಬ್ಬಂದಿ, ಮತ್ತಿತರರಿದ್ದರು.

ಮತದಾರರ ಪಟ್ಟಿ ಪರಿಷ್ಕರಣೆ -2026 ಕಾರ್ಯಾಗಾರ

ನವಲಗುಂದ: ಮುಂಬರುವ ಎಲ್ಲ ಚುನಾವಣೆ ಕುರಿತು ಕಾಂಗ್ರೆಸ್ ಪಕ್ಷದ ಸಂಘಟನೆ ಹಾಗೂ ನವಲಗುಂದ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಬಿ.ಎಲ್.ಎ-1, ಬಿ.ಎಲ್.ಎ-2 ಗಳಿಗೆ ಮತದಾರರ ಪಟ್ಟಿ ಪರಿಷ್ಕರಣೆ -2026 ಕುರಿತು ಕಾರ್ಯಾಗಾರ ಸಭೆ ಯಶಸ್ವಿಯಾಗಿದೆ ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.

ಅವರು ಮಂಗಳವಾರ ನವಲಗುಂದ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಬಿ.ಎಲ್.ಎ-1, ಬಿ.ಎಲ್.ಎ-2 ಗಳಿಗೆ ಮತದಾರರ ಪಟ್ಟಿ ಪರಿಷ್ಕರಣೆ-2026 ಕುರಿತು ಇಂಬ್ರಾಹಿಂಪೂರ ರಸ್ತೆಯ ಭವನದಲ್ಲಿ ನಡೆದ ಕಾರ್ಯಾಗಾರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಸ್ಥಳೀಯ ಸಂಸ್ಥೆಗಳ ಜಿ.ಪಂ, ತಾಪಂ, ಗ್ರಾ.ಪಂ. ಪುರಸಭೆ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನ್ಯಾಯಾಲಯದ ಆದೇಶದ ಪ್ರಕಾರ ಶೀಘ್ರ ಬರಬಹುದೆಂದು ಈಗಾಗಲೇ ಚುನಾವಣಾ ಆಯೋಗ ಹೇಳಿದೆ. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ ಅವರ ನೇತೃತ್ವದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದು ಪಂಚ ಗ್ಯಾರಂಟಿ ಹಾಗೂ ಸಾಕಷ್ಟು ಅಭಿವೃದ್ಧಿ ಮಾಡಿದೆ. ಕಾಂಗ್ರೆಸ್ ಪಕ್ಷ ಮತದಾರರ ಹಕ್ಕು ರಕ್ಷಾ ಅಭಿಯಾನದ ಮೂಲಕ ಪ್ರತಿಯೊಬ್ಬರ ಮತ ಉಳಿಸಿ ಆಂದೋಲನದಲ್ಲಿ ಕಾಂಗ್ರೆಸ್ ನಡೆ ನಿಮ್ಮ ಮತ ರಕ್ಷಣೆ ಕಡೆ ಎಂಬ ಘೋಷಣೆಯೊಂದಿಗೆ ಕಾರ್ಯಪ್ರವೃತ್ತವಾಗಿದೆ ಎಂದರು.

ಕೆಪಿಸಿಸಿ ತರಬೇತಿದಾರ ಮುತ್ತರಾಜ್ ಹಾಗೂ ಸಿ. ಜಿ. ಪಾಟೀಲ ಮಾತನಾಡಿ, ನವಲಗುಂದ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಬಿ.ಎಲ್.ಎ-1, ಬಿ.ಎಲ್.ಎ-2 ಗಳಿಗೆ ಮತದಾರರ ಪಟ್ಟಿ ಪರಿಷ್ಕರಣೆ -2026 ಕುರಿತು ಮನವರಿಕೆಯಾಗುವಂತೆ ತರಬೇತಿ ನೀಡಿದರು.

ವಿಧಾನ ಪರಿಷತ್ ಸದಸ್ಯ ಎಫ್.ಎಚ್. ಜಕ್ಕಪ್ಪನವರ ಮಾತನಾಡಿ, ಧಾರವಾಡ ಜಿಲ್ಲೆಯಲ್ಲಿ ಎಸ್‌ಐಆರ್ ಪ್ರಕ್ರಿಯೆ ಸರಿಯಾಗಿ ನಡೆದಿರುವುದರಿಂದ ಕೆಪಿಸಿಸಿ ವತಿಯಿಂದ ಜಿಲ್ಲಾಧ್ಯಕ್ಷ ಅನೀಲಕುಮಾರ ಪಾಟೀಲ ಅವರಿಗೆ ಅಭಿನಂದಿಸಿರುವುದು ಶ್ಲಾಘನೀಯ. ದೇಶ ಹಾಗೂ ನಮ್ಮ ರಾಜ್ಯವನ್ನು ಈ ಕಂಟಕದಿಂದ ಪಾರು ಮಾಡಬೇಕಾದ ಜವಾಬ್ದಾರಿ ನಮ್ಮ ಮುಂದಿದೆ ಎಂದರು. ಜಿಲ್ಲಾಧ್ಯಕ್ಷ ಅನೀಲಕುಮಾರ ಪಾಟೀಲ ಮಾತನಾಡಿ, ವಿಧಾನಸಭಾ ಕ್ಷೇತ್ರದ ಎಲ್ಲ ಬೂತ್ ಗಳಿಗೆ ಬಿಎಲ್‌ಎ ಗಳನ್ನು ಶಾಸಕರು ಹಾಗೂ ಬಿಎಲ್‌ಎ-1 ಎನ್.ಎಚ್. ಕೋನರಡ್ಡಿ ಅವರು ಅಚ್ಚುಕಟ್ಟಾಗಿ ಮಾಡಿದ್ದಾರೆ ಎಂದರು. ಎಫ್. ಎಸ್. ಜಕ್ಕಪ್ಪನವರ, ಮೋಹನ ಲಿಂಬಿಕಾಯಿ, ಅನೀಲಕುಮಾರ ಪಾಟೀಲ, ವರ್ದಮಾನಗೌಡ ಹಿರೇಗೌಡರ, ಮಂಜುನಾಥ ಮಾಯಣ್ಣವರ, ಶಿವಾನಂದ ಭೂಮಣ್ಣವರ, ವಿಕಾಸ ತದ್ದೇವಾಡಿ, ಅರುಣಕುಮಾರ ಸುಣಗಾರ, ಜೀವನ ಪವಾರ, ಮೋದಿನ ಶಿರೂರ, ಆನಂದ ಹವಳಕೋಡ, ಡಿ.ಕೆ. ಹಳ್ಳದ, ಎಂ.ಎಸ್. ರೋಣದ, ರಾಜಣ್ಣ ಹಳ್ಯಾಳ, ಸುಭಾಸ ದುಬ್ಬದಮಟ್ಟಿ ಸೇರಿದಂತೆ ಅನೇಕರಿದ್ದರು.



ಶಿಕ್ಷಕರಿಗೆ ತಂತ್ರಜ್ಞಾನದ ಅರಿವು, ಬಳಸುವ ವಿಧಾನ ಅಗತ್ಯ: ಬಮ್ಮಕ್ಕನವರ

ಹುಬ್ಬಳ್ಳಿ: ಪ್ರಸ್ತುತವಾಗಿ ಶಿಕ್ಷಕರಿಗೆ ತಂತ್ರಜ್ಞಾನದ ಕುರಿತು ಅರಿವು ಹಾಗೂ ಬಳಸುವ ವಿಧಾನ ಅಗತ್ಯವಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಉಮೇಶ ಬಮ್ಮಕ್ಕನವರ ತಿಳಿಸಿದರು.

ಇಲ್ಲಿಯ ವಿದ್ಯಾನಗರ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯ ಆವರಣದಲ್ಲಿ ನಡೆದ ಕರ್ನಾಟಕ ಪ್ರೌಢ ಶಾಲಾ ವಿಜ್ಞಾನ ಶಿಕ್ಷಕರ ಸಂಘದ ರಾಜ್ಯದ ಪ್ರಥಮ ಕಾರ್ಯಕಾರಿಣಿ ಸಮಾರಂಭ ಚಾಲನೆ ನೀಡಿ ಮಾತನಾಡಿದರು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಇಂದು ಬದಲಾವಣೆಯ ಗಾಳಿ ಬೀಸುತ್ತಿದೆ. ಇಲ್ಲಿ ವಿಜ್ಞಾನ-ತಂತ್ರಜ್ಞಾನಗಳು ಪ್ರತಿಯೊಬ್ಬರ ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿದೆ. ಕೃತಕಬುದ್ಧಿಮತ್ತೆ, ಮಷಿನ್ ಭಾಷೆ, ಜೈವಿಕ ತಂತ್ರಜ್ಞಾನಗಳಲ್ಲಿ ಬಹಳ ವೇಗವಾಗಿ ಆವರಿಸಿದೆ. ಇಂತಹ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳು ಸಾಕಷ್ಟು ವಿಷಯಗಳ ಅರಿತುಕೊಂಡಿರುತ್ತಾರೆ. ಅವರನ್ನು ಕಲಿಕೆಗೆ ಆಕರ್ಷಿಸುವ ನಿಟ್ಟಿನಲ್ಲಿ ತಂತ್ರಜ್ಞಾನದ ಸಮರ್ಪಕ ಅರಿವು ಮತ್ತು ಬಳಕೆ ಆವಶ್ಯಕ ಎಂದರು.

ಅಧ್ಯಕ್ಷತೆ ವಹಿಸಿದ್ದ ರಾಜ್ಯ ಅಧ್ಯಕ್ಷ ಶ್ರೀಧರ ಪಾಟೀಲಕುಲಕರ್ಣಿ ಮಾತನಾಡಿ, ಇದೊಂದು ಸಂಪೂರ್ಣ ವಿಜ್ಞಾನ ಶಿಕ್ಷಣ ಅಭಿವೃದ್ಧಿ ಮತ್ತು ವಿಜ್ಞಾನ ಶಿಕ್ಷಕರನ್ನು ಜ್ಞಾನ ಮತ್ತು ಕೌಶಲಗಳಿಂದ ಸಂಪದ್ಭರಿತಗೊಳಿಸುವ ಸಂಘಟನೆಯಾಗಿದೆ. ವಿದ್ಯಾರ್ಥಿಗಳ ಬೆಳವಣಿಗೆಗೆ ತಕ್ಕಂತೆ ವಿಜ್ಞಾನವನ್ನು ಪರಿಣಾಮಕಾರಿಯಾಗಿ ಬೋಧಿಸುವಲ್ಲಿ, ಪಠ್ಯಕ್ರಮ, ಮೌಲ್ಯಮಾಪನಗಳಲ್ಲಿ ನಾವೀನ್ಯತೆ ಅಳವಡಿಸಿಕೊಳ್ಳುವಲ್ಲಿ ಸಹಕಾರ ನೀಡುತ್ತದೆ ಎಂದರು.



ಶಹರ ಬಿಇಒ ಎಚ್.ಎಂ.ಫಡ್ನೆಶಿ, ಗೌರವಾಧ್ಯಕ್ಷ ಡಾ.ರವಿಕುಮಾರ ಬಾರಟಕ್ಕೆ ಪ್ರತಿಜ್ಞಾ ವಿಧಿ ಬೋಧಿಸಿದರು. ಮಾರ್ಗದರ್ಶಕ ಎಂ.ಬಿ.ಕುಂಬಾರಗೇರಿ ಮಾತನಾಡಿದರು. ಮಹೇಶ್ವರಿ ಹೆಬ್ಬಾರ ಹಾಗೂ ಸುಷ್ಮಾ ಜನಪಾಡ ಪ್ರಾರ್ಥಿಸಿದರು. ರಾಜ್ಯ ಉಪಾಧ್ಯಕ್ಷರಾದ ಜಹಾನರ, ಅನುಪಮಾ, ಕಾಂತರಾಜು, ಮುನಿರಾಜು, ಖಜಾಂಚಿ ಬಸವರಾಜ ಗಾಣಿಗೇರ, ಸಂತೋಷಕುಮಾರ ಗಜಕೋಶ ವಿ.ಎಸ್.ಹುದ್ದಾರ, ಸಂಜೀವಕುಮಾರ ಭೂಶೆಟ್ಟಿ ಇದ್ದರು.

ಕ್ಷೇತ್ರದಲ್ಲಿ ಐದು ನಮ್ಮ ಕ್ಲಿನಿಕ್‌ಗಳ ಪ್ರಾರಂಭಕ್ಕೆ ಪ್ರಸ್ತಾವನೆ: ಪ್ರಸಾದ ಅಬ್ಬಯ್ಯ

ಹುಬ್ಬಳ್ಳಿ: ಹು-ಧಾ ಪೂರ್ವ ಕ್ಷೇತ್ರದ ನಮ್ಮ ಕ್ಲಿನಿಕ್‌ಗಳಿಗೆ ಶಾಸಕರ ಅನುದಾನದಲ್ಲಿ ಇಸಿಜಿ ಯಂತ್ರ ವಿತರಣೆ ಮಾಡಲಾಗಿದ್ದು, ಹೃದಯಾಘಾತ ತಡೆಯವಲ್ಲಿ ಸಹಕಾರಿಯಾಗಿವೆ. ಇವು ಬಡವರ ಆರೋಗ್ಯ ದೃಷ್ಟಿಯಿಂದ ಸಂಜೀವಿನಿಯಾಗಿ ಕೆಲಸ ಮಾಡಲಿವೆ ಎಂದು ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.

ನಗರದ ಮಹಾನಗರ ಪಾಲಿಕೆ ಕಚೇರಿಯಲ್ಲಿ ಏರ್ಪಡಿಸಲಾಗಿದ್ದ 2024-25ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 12 ಆಸ್ಪತ್ರೆಗಳಿಗೆ ಇಸಿಜಿ ಯಂತ್ರ ವಿತರಣೆ ಮತ್ತು ಹೃದಯ ರೋಗದ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹುಬ್ಬಳ್ಳಿ-ಧಾರವಾಡ ಪೂರ್ವ ಕ್ಷೇತ್ರದ 6 ನಮ್ಮ ಕ್ಲಿನಿಕ್, ನಗರ ಆರೋಗ್ಯ ಕೇಂದ್ರದ 4 ಆಸ್ಪತ್ರೆ ಹಾಗೂ ಎರಡು ಪಾಲಿಕೆ ಆಸ್ಪತ್ರೆಗಳಿಗೆ ಇಸಿಸಿ ಯಂತ್ರಗಳನ್ನು ವಿತರಿಸಲಾಗಿದೆ. ಕ್ಷೇತ್ರದಲ್ಲಿ ಇನ್ನೂ 5 ನಮ್ಮ ಕ್ಲಿನಿಕ್‌ಗಳು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಬಡವರ ಪರ ಕಾಳಜಿ ಇಟ್ಟುಕೊಂಡು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಒತ್ತು ಕೊಟ್ಟಿದ್ದೇನೆ ಎಂದರು. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳನ್ನು ರಾಷ್ಟ್ರೀಕರಣಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ಮಟ್ಟದಲ್ಲಿ ಚಿಂತನೆ ಮಾಡಬೇಕಿದೆ. ಇದರಿಂದಾಗಿ ಬಡವರಿಗೆ ಉಚಿತವಾಗಿ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಸಾಧ್ಯ ಎಂದರು.



ಹೃದ್ರೋಗ ತಜ್ಞ ಡಾ. ಅಮಿತ್ ಸತ್ತೂರ ಮಾತನಾಡಿ, ಹೃದಯಾಘಾತ ಮತ್ತು ಹೃದಯ ಸಂಬಂಧಿ ಕಾಯಿಲೆ ಇತ್ತೀಚೆಗೆ ಯುವಕರಲ್ಲಿ ಹೆಚ್ಚುತ್ತಿದೆ. ಪ್ರತಿ 33 ಸೆಕೆಂಡಿಗೆ ಒಬ್ಬರಿಗೆ ಹೃದಯಾಘಾತವಾಗುತ್ತಿದೆ. ಎಂದರು. ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ ಮಾತನಾಡಿದರು. ಡಿಎಚ್‌ಒ ಡಾ. ಪರಶುರಾಮ, ಚಿಟಗುಪ್ಪಿ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ. ಶ್ರೀಧರ ದಂಡಪ್ಪನವರ, ಟಿಎಚ್‌ಒ ಡಾ.ಹುಲಗಣ್ಣ ಇಂಜಗನರಿ, ಡಾ.ಭಾರತಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಜಿ.ವಿ. ಓಂಕಾರಗೌಡ್ರ ಇದ್ದರು.

ನೀರು ಸರಬರಾಜಿನಲ್ಲಿ ವ್ಯತ್ಯಯ

ಹುಬ್ಬಳ್ಳಿ: ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ನೀರು ಸರಬರಾಜು ಮಾಡುವ ನೀರು ಶುದ್ಧೀಕರಣ ಘಟಕಗಳಲ್ಲಿ ಸ್ವಚ್ಛತಾ ಕಾರ್ಯವನ್ನು ಜೂನ್ 9 ಮತ್ತು 10 ರಂದು ಹಮ್ಮಿಕೊಂಡಿರುವುದರಿಂದ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ನೀರು ಸರಬರಾಜು ವ್ಯತ್ಯಯದಿಂದಾಗಿ ಮುಂದಿನ ನೀರು ಸರಬರಾಜು ಪೂರೈಕೆಯ 2 ವೇಳಾಪಟ್ಟಿಗಳಲ್ಲಿ ಬದಲಾವಣೆಯಾಗುವ ಸಾಧ್ಯತೆಯಿದೆ. ಸಾರ್ವಜನಿಕರು ಸಹಕರಿಸುವಂತೆ ಕೆಯುಐಡಿಎಫ್‌ಸಿ ಯೋಜನಾ ಅನುಷ್ಠಾನ ಘಟಕದ ಕುಸ್ಲೆಂಪ್ ಯೋಜನೆಯ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಸ್ತುತ ಮಳೆಗಾಲ ಪ್ರಾರಂಭವಾಗಿರುವುದರಿಂದ ಸವದತ್ತಿ ಮೂಲ ಸ್ಥಾವರಕ್ಕೆ ಮಣ್ಣು ಮಿಶ್ರಿತ ನೀರು ಹರಿದು ಬಂದಿರುವ ಕಾರಣ ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ನೀರು ಸರಬರಾಜು ಮಾಡುವ ಅಮ್ಮಿನಭಾವಿ ನೀರು ಶುದ್ಧೀಕರಣ ಘಟಕಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಮಣ್ಣು ಮಿಶ್ರಿತ ನೀರು ಬಂದು ಶುದ್ಧೀಕರಣ ಘಟಕದಲ್ಲಿ ಕಾರ್ಯಾಚರಣೆ ಮಾಡಲು ಅಡಚಣೆ ಉಂಟಾಗಿದೆ. ಶುದ್ಧೀಕರಣ ಪ್ರಕ್ರಿಯೆಗಳನ್ನು ಮಾಡಿ ನೀರು ಸರಬರಾಜು ಮಾಡಿದರೂ ಸಹಿತ ಹೊಸ ನೀರಿನಲ್ಲಿ ಪ್ರಕ್ಷುಬ್ಧತೆ ಕಂಡು ಬರುವುದರಿಂದ ಸಾರ್ವಜನಿಕರು ಮುಂಜಾಗ್ರತಾ ಕ್ರಮವಾಗಿ ನೀರನ್ನು ಸೋಸಿ, ಕುದಿಸಿ, ಆರಿಸಿ ಬಳಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಯೋಗ ಮತ್ತು ಅವಿನ್ಯಾ ವಸಂತ-2026 ಕಾರ್ಯಕ್ರಮ



ಹುಬ್ಬಳ್ಳಿ: ಇಲ್ಲಿಯ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್ ಮಾದರಿಗಳು ಮತ್ತು ಸಾಮಾಜಿಕ ನಾವೀನ್ಯ ಯೋಜನೆಗಳ ಪ್ರದರ್ಶನವಾದ ಪ್ರಯೋಗ ಮತ್ತು ಅವಿನ್ಯಾ ವಸಂತ -2026 ಕಾರ್ಯಕ್ರಮ ಮಂಗಳವಾರ ಸಂಪನ್ನಗೊಂಡಿತು.

ಕುಲಪತಿ ಡಾ. ಪ್ರಕಾಶ ತೆವರಿ ಮಾತನಾಡಿ, ಎಂಜಿನಿಯರಿಂಗ್ ಎಕ್ಸ್‌ಪ್ಲೋರೇಷನ್ ಮತ್ತು ಸೋಷಿಯಲ್ ಇನ್ನೋವೇಷನ್ ಪ್ರದರ್ಶನಕ್ಕೆ ಉತ್ತಮ ವೇದಿಕೆಯಾಗಿದೆ. ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಸೃಷ್ಟಿಗೆ ಸಹಕಾರಿಯಾಗಲಿದೆ. ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕೌಶಲವನ್ನು ಉತ್ತೇಜಿಸುತ್ತದೆ ಎಂದರು.

ಪ್ರದರ್ಶನಿಯ ಸಂಕಲನ ಬಿಡುಗಡೆ ಮಾಡಲಾಯಿತು. ಕುಲಸಚಿವ ಡಾ.ಬಿ.ಎಸ್. ಅನಾಮಿ, ಕಾರ್ಯನಿರ್ವಾಹಕ ಡೀನ್ ಪ್ರೊ.ಬಿ.ಎಲ್. ದೇಸಾಯಿ, ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಡಾ. ಉಮಾ ಮುದೇನಗುಡಿ, ವಿದ್ಯಾರ್ಥಿ ಕಲ್ಯಾಣದ ಡೀನ್ ಡಾ. ಸಂಜಯ ಕೊಟಬಾಗಿ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥೆ ಡಾ. ವಿಜಯಲಕ್ಷ್ಮೀ ಎಂ., ವಿಎಲ್‌ಎಸ್‌ಐ ಮುಖ್ಯಸ್ಥೆ ಡಾ. ಸುಜಾತಾ ಕೊಟಬಾಗಿ, ಡಾ. ಸುನಿತಾ ಬೂದಿಹಾಳ, ಡಾ.ಜಿ.ಯು. ರಾಜು, ಡಾ. ನಿತಿನ್ ಕುಲಕರ್ಣಿ, ಪ್ರೊ.ವಿ.ಎ. ಗೌಡರ ಇತರರಿದ್ದರು. ದೇಶದ ವಿವಿಧ ಭಾಗಗಳಿಂದ 1,600ಕ್ಕೂ ಹೆಚ್ಚು ವಿದ್ಯಾರ್ಥಿಗಳು, 322 ತಂಡಗಳು, ಶಿಕ್ಷಣ ತಜ್ಞರು ಭಾಗವಹಿಸಿದ್ದರು. ಎಂಜಿನಿಯರಿಂಗ್ ಎಕ್ಸ್‌ಪ್ಲೋರೇಷನ್ ಪಠ್ಯಕ್ರಮದ 182 ತಂಡಗಳು ಹಾಗೂ ಸೋಷಿಯಲ್ ಇನ್ನೋವೇಷನ್ ಪಠ್ಯಕ್ರಮದ 140 ತಂಡಗಳು ಆಗಮಿಸಿದ್ದವು. ಮಹಾರಾಷ್ಟ್ರದ ವಾಲ್ಚಂದ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಐವರು ಬೋಧಕರು, ಉಡುಪಿ, ಹೈದರಾಬಾದ್, ಚಿನ್ಮಯ ವಿದ್ಯಾಲಯ, ಕೇಂದ್ರೀಯ ವಿದ್ಯಾಲಯದ ಬೋಧಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೃಷ್ಣರಾಜ ಒಡೆಯರ್ ಕಸಾಪ ರೂವಾರಿ

ಧಾರವಾಡ: ಸ್ವಾತಂತ್ರ್ಯ ಪೂರ್ವದಲ್ಲಿ ಆಡಳಿತ ನಡೆಸಿ ಭಾಷೆ, ಸಂಸ್ಕೃತಿ, ಶಿಕ್ಷಣ, ಉದ್ಯಮದ ಅಭಿವೃದ್ಧಿಗೆ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ನಾಂದಿ ಹಾಡಿದ್ದಾಗಿ ಸಾಹಿತಿ ಡಾ.ಚಂದ್ರಶೇಖರ ರೊಟ್ಟಿಗವಾಡ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನ ಕಾರ್ಯಕ್ರಮದಲ್ಲಿ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಹಿತ್ಯ ಪರಿಷತ್ ಸ್ಥಾಪನೆ ರೂಪವಾರಿ ಎಂದರು.

ನಾಡುನುಡಿ, ನೆಲ-ಜಲ ರಕ್ಷಣೆ ಉದ್ದೇಶಕ್ಕೆ ಸ್ಥಾಪಿಸಿದ ಸಾಹಿತ್ಯ ಪರಿಷತ್ ಇಂದು ಜಗತ್ತಿನಲ್ಲಿಯೇ ಬೃಹತ್ ಸ್ವಾಯತ್ತ ಸಂಸ್ಥೆಯಾಗಿ ಬೆಳೆದು ನಿಂತಿದೆ. ಈ ಸಂಸ್ಥೆ ಮಾಡಬೇಕಾದ ಕೆಲಸ ಇನ್ನೂ ಸಾಕಷ್ಟಿವೆ ಎಂದರು.

ಇದೇ ವೇಳೆ ಡಾ. ಆರ್.ಸಿ.ಹಿರೇಮಠ, ಗಣಪತಿ ಶೆಟ್ಟಿ, ದಿ.ಚೆನ್ನಮ್ಮ ಪಟ್ಟಣಶೆಟ್ಟಿ, ದಿ.ಈರಪ್ಪ ಪಟ್ಟಣಶೆಟ್ಟಿ, ಶಿವಲಿಂಗಮ್ಮ ಕಟ್ಟಿ ಹಾಗೂ ದಿ. ವೀರಪ್ಪ ವೀರಭದ್ರಪ್ಪ ಗಡಾದ ದತ್ತಿ ಕುರಿತು ಉಪನ್ಯಾಸ ಕೂಡ ಜರುಗಿತು. ನಿವೃತ್ತಿ ಹೊಂದಿದ ಡಾ. ಎಸ್.ವಿ.ಮನಗುಂಡಿ, ಪ್ರೊ. ಪಿ.ಜಿ.ಪಾಟೀಲ, ಪ್ರೊ. ಆರ್.ಸಿ.ಪಾಟೀಲ, ಪಿ.ಕೆ.ಚಿಕ್ಕಮಠ, ಎಸ್.ಜಿ.ಹಿರೇಮಠ, ಶ್ರೀನಾಥ್ ಜೋಶಿ ಅವರನ್ನು ಸನ್ಮಾನಿಸುವ ಮೂಲಕ ಗೌರವಿಸಲಾಯಿತು. ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಅಧ್ಯಕ್ಷತೆ ವಹಿಸಿದ್ದರು. ಮಹಾಂತೇಶ ನರೇಗಲ್ಲ, ಪ್ರೊ. ಕೆ.ಎಸ್.ಕೌಜಲಗಿ, ಪ್ರಮೀಳಾ ಜಕ್ಕಣ್ಣವರ, ಗಂಗಾಧರ ಗಾಡದ, ಪ್ರೊ. ಎಸ್. ಎಂ.ನಾಗಭೂಷಣ, ಮೇಘಾ ಹುಕ್ಕೇರಿ ಇದ್ದರು.



ವಿದ್ಯಾರ್ಥಿಗಳಿಗೆ ಉತ್ತಮ ಸಂಸ್ಕಾರ ನೀಡಿ



ಕುಂದಗೋಳ: ತಾಲೂಕಿನ ಸಂಶಿ ಗ್ರಾಮದ ಕೆಎಲ್‌ಇ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ಅಂತಿಮ ವರ್ಷದ ಬಿಕಾಂ ಪದವಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಮತ್ತು ವಾರ್ಷಿಕ ಸ್ನೇಹ ಸಮ್ಮೇಳನ ಜರುಗಿತು.

ಕಾಲೇಜಿನ ಹಳೇಯ ವಿದ್ಯಾರ್ಥಿನಿ ಪೊಲೀಸ್ ಇನ್ಸ್‌ಪೆಕ್ಟರ್ ವನಮಾಲಾ ದಾನಣ್ಣವರ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತ ಗುರಿ ಇಟ್ಟು ಕೊಂಡು ಸತತ ಪ್ರಯತ್ನಿಸಿದರೆ ಸಾಧನೆ ಸಾಧ್ಯ. ಜೊತೆಗೆ ಉತ್ತಮ ಸಂಸ್ಕಾರ ಬೆಳೆಸಿಕೊಳ್ಳಬೇಕು ಎಂದರು.

ಅವರನ್ನು ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಸ್ಥಾನಿಕ ಆಡಳಿತ ಮಂಡಳಿ ಅಧ್ಯಕ್ಷ ಎ.ಬಿ. ಉಪ್ಪಿನ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು. ಕಳೆದ ವರ್ಷ ಬಿಕಾಂ ಪದವಿ 6ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು ಮತ್ತು ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು.

ಬಿ.ಬಿ. ಬೂದಿಹಾಳ, ಬಿ.ಎಂ. ಕಜ್ಜಿ ಉಪಸ್ಥಿತರಿದ್ದರು. ಪ್ರಾಚಾರ್ಯ ಪ್ರೊ. ರಮೇಶ ಯ ಅತ್ತಿಗೇರಿ ಸ್ವಾಗತಿಸಿದರು. ಯಶೋದಾ ಆಲೂರ, ಕಾವ್ಯ ಕಬ್ಬೆರ ಕಾರ್ಯಕ್ರಮ ನಿರೂಪಿಸಿದರು. ಡಾ, ಎಂ ಸಿ ಅಂಗಡಿ ಬಹುಮಾನ ವಿತರಣೆ ಕಾರ್ಯಕ್ರಮ ನಡೆಸಿಕೊಟ್ಟರು. ಕಾವ್ಯ ಬುಕನಟ್ಟಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಐಶ್ವರ್ಯ ಬಾಲೆಹೊಸೂರ ವಂದಿಸಿದರು.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೃಷ್ಟಿ
ಬುಧವಾರ 10 ಜೂನ್ 2026, ಹುಬ್ಬಳ್ಳಿ



ಒಂದು ನೋಟದಲ್ಲಿ: ದಾಖಲೆ ಗುರುತಿಸುವ ಪ್ರಮುಖ ಪ್ರಥಮಗಳು



ರಕ್ಷಣೆ

ಆಮದು ರಾಷ್ಟ್ರದಿಂದ

38,400

ಕೋಟಿ ರೂ. ರಫ್ತು ರಾಷ್ಟ್ರದೆಡೆಗೆ
ಎ-ಸ್ಯಾಟ್ ಕ್ಷಿಪಣಿ ಕ್ಲಬ್ ಪ್ರವೇಶ
ಪಿಎಫ್‌ಬಿಆರ್ ಕ್ರಿಟಿಕಾಲಿಟಿ

ಭಯೋತ್ಪಾದನೆ

- ಸುಮಾರು 50 ವರ್ಷಗಳಲ್ಲಿ ಮೊದಲ ಬಾರಿಗೆ ಪಾಕ್ ನೆಲದೊಳಗೆ ಸೇನಾ ಕಾರ್ಯಾಚರಣೆ
- 370ನೇ ವಿಧಿ ನಿಷ್ಕ್ರಿಯ
- ಸಿಂಧೂ ಒಪ್ಪಂದ ಅಮಾನತು

ವಿದೇಶಾಂಗ

- ಜಿ-20 ಘೋಷಣೆಗೆ ಶೇ.100 ಒಮ್ಮತ
- ಗ್ಲೋಬಲ್ ಸೌತ್ ಧ್ವನಿಯಾಗಿ ನಾಯಕತ್ವ
- ವಿಶ್ವದ ಔಷಧಾಲಯ

ಆಡಳಿತ ನ್ಯಾಯ

ಬ್ರಿಟಿಷ್ ಕಾಲದ ಕಾನೂನು ಬದಲಿಗೆ ಮೊದಲ ಬಾರಿಗೆ ಸ್ವದೇಶಿ ಭಾರತೀಯ ನ್ಯಾಯ ಸಂಹಿತಾ ಸೇರಿದಂತೆ ಮೂರು ಹೊಸ ಕಾನೂನು



ಪ್ರಥಮ ಎಂಬ ಮಂತ್ರ

ರಾಷ್ಟ್ರ ಪ್ರಥಮ ಎಂಬ ಪದ ಕೇವಲ ಒಂದು ಘೋಷಣೆಯಲ್ಲ, ಅದು ಕಳೆದ ಹನ್ನೆರಡು ವರ್ಷಗಳ ಆಡಳಿತದ ತಾತ್ವಿಕ ಆಧಾರ ಎಂದು ಸರ್ಕಾರ ಪ್ರತಿಪಾದಿಸುತ್ತದೆ. ರಕ್ಷಣಾ ರಫ್ತಿನಿಂದ ನಕ್ಸಲ್ ನಿರ್ಮೂಲನೆಯವರೆಗೆ, ಕಾಶ್ಮೀರದ ಏಕೀಕರಣದಿಂದ ಸ್ವದೇಶಿ ಕಾನೂನುಗಳವರೆಗೆ ಪ್ರತಿಯೊಂದು ಪ್ರಥಮವೂ ಇದು ಸಾಧ್ಯವಿಲ್ಲ ಎಂಬ ಹಳೆಯ ನಂಬಿಕೆಯನ್ನು ಮುರಿದ ಕ್ಷಣವಾಗಿದೆ.

> **ನನ್ನ ಸರ್ಕಾರ ತೆಗೆದುಕೊಳ್ಳುವ ಪ್ರತಿ ನಿರ್ಧಾರ, ಸಾಗುವ ಪ್ರತಿ ದಿಕ್ಕು ಒಂದೇ ಮಾನದಂಡದ ಮೇಲೆ ನಿಂತಿದೆ: ರಾಷ್ಟ್ರ ಪ್ರಥಮ.**
> ■ ನರೇಂದ್ರ ಮೋದಿ, ಪ್ರಧಾನಮಂತ್ರಿ

> **ಭಯೋತ್ಪಾದನೆ ವಿರುದ್ಧ ನಮ್ಮ ನೀತಿ ಶೂನ್ಯ ಸಹಿಷ್ಣುತೆ. ಭಾರತೀಯರ ರಕ್ತ ಚೆಲ್ಲಲು ಯತ್ನಿಸುವವರಿಗೆ ಅದೇ ಭಾಷೆಯಲ್ಲಿ ಉತ್ತರ ಸಿಗುತ್ತದೆ.**
> ■ ನರೇಂದ್ರ ಮೋದಿ, ಪ್ರಧಾನಮಂತ್ರಿ

ರಾಷ್ಟ್ರ ಪ್ರಥಮ

ಒಂದು ಸರ್ಕಾರವನ್ನು ಅಳೆಯುವ ಮಾನದಂಡಗಳು ಹಲವು. ಆದರೆ ಯಾವುದನ್ನು ಮೊದಲ ಬಾರಿಗೆ ಮಾಡಿತು ಎಂಬ ಪ್ರಶ್ನೆ ಇತಿಹಾಸದ ದೃಷ್ಟಿಯಿಂದ ಅತ್ಯಂತ ನಿರ್ಣಾಯಕವಾದದ್ದು. ಏಕೆಂದರೆ ಪ್ರಥಮ ಎಂಬುದು ಕೇವಲ ಒಂದು ಸಾಧನೆ ಅಲ್ಲ, ಅದು ಒಂದು ಮನಃಸ್ಥಿತಿಯ ಬದಲಾವಣೆಯ ಸಂಕೇತ. ಇದು ಸಾಧ್ಯವಿಲ್ಲ ಎಂಬ ದಶಕಗಳ ನಂಬಿಕೆಯನ್ನು ಇದು ಸಾಧ್ಯ ಎಂಬ ನಿರ್ಧಾರವಾಗಿ ಪರಿವರ್ತಿಸುವ ಕ್ಷಣವೇ ಪ್ರಥಮ. ಕಳೆದ ಹನ್ನೆರಡು ವರ್ಷಗಳಲ್ಲಿ ಕೇಂದ್ರ ಸರ್ಕಾರ ರಾಷ್ಟ್ರಪ್ರಥಮ (ನೇಷನ್ ಫಸ್ಟ್) ಎಂಬ ಮಂತ್ರವನ್ನು ಮುಂದಿಟ್ಟುಕೊಂಡು ಇಂಥ ಹಲವು ಪ್ರಥಮಗಳನ್ನು ದಾಖಲಿಸಿದೆ ಎಂಬುದು ಸರ್ಕಾರದ ಪ್ರತಿಪಾದನೆ.

ರಕ್ಷಣಾ ಕ್ಷೇತ್ರದ ಪ್ರಥಮಗಳು: ಆಮದು ರಾಷ್ಟ್ರದಿಂದ ರಫ್ತು ರಾಷ್ಟ್ರದೆಡೆಗೆ

ಭಾರತದ ರಕ್ಷಣಾ ಕ್ಷೇತ್ರ ದಶಕಗಳ ಕಾಲ ಆಮದು ಎಂಬ ಪದದಿಂದಲೇ ಗುರುತಿಸಿಕೊಂಡಿತ್ತು. ಯುದ್ಧ ವಿಮಾನ, ಫಿರಂಗಿ, ಮದ್ದುಗುಂಡು ಸೇರಿದಂತೆ ಬಹುತೇಕ ಎಲ್ಲವೂ ವಿದೇಶದಿಂದ ಬರುತ್ತಿತ್ತು. ಆ ಚಿತ್ರಣ ಬದಲಾಗಿರುವುದು ಈ ಹನ್ನೆರಡು ವರ್ಷಗಳ ಪ್ರಥಮಗಳಲ್ಲಿ ಪ್ರಮುಖವಾದದ್ದು ಎಂಬುದು ಸರ್ಕಾರದ ವಾದ. 2014ರಲ್ಲಿ ಸುಮಾರು 689 ಕೋಟಿ ರೂ.ನಷ್ಟಿದ್ದ ರಕ್ಷಣಾ ರಫ್ತು 2026ರ ವೇಳೆಗೆ ಸುಮಾರು 38,400 ಕೋಟಿ ರೂ.ಗೆ ತಲುಪಿದೆ. ಅಂದರೆ ಸುಮಾರು 56 ಪಟ್ಟು ಹೆಚ್ಚಳ. ಇದು ಭಾರತ ಮೊದಲ ಬಾರಿಗೆ ಶಸ್ತ್ರ ಆಮದು ಮಾಡಿಕೊಳ್ಳುವ ದೇಶದಿಂದ ರಫ್ತು ಮಾಡುವ ದೇಶವಾಗಿ ಗುರುತಿಸಿಕೊಂಡ ಕ್ಷಣ ಎಂದು ಬಣ್ಣಿಸಲಾಗಿದೆ.



ಮೋದಿ ಸರ್ಕಾರದ ಪ್ರಥಮಗಳ ದಾಖಲೆ

ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ಎಂಬ ಪದ ಭಾರತದ ರಾಜಕೀಯ ಮತ್ತು ಆಡಳಿತ ಇತಿಹಾಸದಲ್ಲಿ ಪದೇ ಪದೇ ಮೊಳಗಿದ ಹನ್ನೆರಡು ವರ್ಷಗಳಿವು. ಗಡಿಯಿಂದ ಸಂಸತ್ತಿನವರೆಗೆ, ಕಾಶ್ಮೀರದಿಂದ ಬಸ್ತಾರ್‌ವರೆಗೆ ಕೇಂದ್ರ ಸರ್ಕಾರದ ಪ್ರಥಮಗಳ ಒಂದು ವಿಶ್ಲೇಷಣಾತ್ಮಕ ಅವಲೋಕನ.

ಬಾಹ್ಯಾಕಾಶ ಮತ್ತು ಪರಮಾಣು ಪ್ರಥಮ

ಮಿಷನ್ ಶಕ್ತಿಯ ಮೂಲಕ ಶತ್ರು ಉಪಗ್ರಹವನ್ನು ನಾಶಪಡಿಸುವ ನಿಖರ ಸಾಮರ್ಥ್ಯ ಪಡೆದು ಭಾರತ ಎ-ಸ್ಯಾಟ್ ಕ್ಷಿಪಣಿ ಹೊಂದಿರುವ ಆಯ್ದ ರಾಷ್ಟ್ರಗಳ ಗುಂಪಿಗೆ ಸೇರಿತು. ಸುಮಾರು 27,000 ಕೋಟಿ ರೂ. ವೆಚ್ಚದ 52-ಉಪಗ್ರಹಗಳ ರಕ್ಷಣಾ ವ್ಯವಸ್ಥೆ ಶತ್ರುಗಳ ಮೇಲೆ ನಿರಂತರ ಕಣ್ಗಾವಲಿಡುತ್ತದೆ ಎಂದು ಹೇಳಲಾಗಿದೆ. ಪರಮಾಣು ಕ್ಷೇತ್ರದಲ್ಲಿ, ಏಪ್ರಿಲ್ 2026ರಲ್ಲಿ ಕಲ್ಪಾಕಂನ ಪ್ರೊಟೋಟೈಪ್ ಫಾಸ್ಟ್ ಬ್ರೀಡರ್ ರಿಯಾಕ್ಟರ್ (ಪಿಎಫ್‌ಬಿಆರ್) ಕ್ರಿಟಿಕಾಲಿಟಿ ಸಾಧಿಸಿದ್ದು ಮಹತ್ವದ ಹೆಜ್ಜೆ. ಎರಡನೇ ಸ್ವದೇಶಿ ಪರಮಾಣು ಚಾಲಿತ ಬ್ಯಾಲಿಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿ ಐಎನ್‌ಎಸ್ ಅರಿಘಾತ್ ರಕ್ಷಣಾ ಪಡೆಗೆ ಸೇರಿದ್ದು, ಶತ್ರುವಿನ ದಾಳಿಯನ್ನು ಸಹಿಸಿಕೊಂಡು ನಂತರ ಪ್ರಬಲ ಪ್ರತಿದಾಳಿ ನಡೆಸುವ ತ್ರಿವಳಿ ಪರಮಾಣು ಸಾಮರ್ಥ್ಯವನ್ನು ಬಲಪಡಿಸಿದೆ. ಮಹಿಳಾ ಭಾಗವಹಿಸುವಿಕೆಯ ದೃಷ್ಟಿಯಿಂದಲೂ ಇದು ಪ್ರಥಮಗಳ ಅವಧಿ. 2014ರಲ್ಲಿ ಸುಮಾರು 3,000 ಇದ್ದ ಮಹಿಳಾ ಅಧಿಕಾರಿಗಳ ಸಂಖ್ಯೆ 2026ರ ವೇಳೆಗೆ 11,000 ದಾಟಿದೆ. ರಕ್ಷಣಾ ಸ್ಟಾರ್ಟ್‌ಅಪ್‌ಗಳು ಅತ್ಯಲ್ಪ ಎಂಬ ಸ್ಥಿತಿಯಿಂದ 1,000ಕ್ಕೂ ಹೆಚ್ಚಿನ ಸಂಖ್ಯೆಗೆ ಬೆಳೆದಿರುವುದು ಸ್ವದೇಶಿ ತಂತ್ರಜ್ಞಾನ ಪರಿಸರ ವ್ಯವಸ್ಥೆಯ ಸಂಕೇತ ಎಂದು ಬಿಂಬಿಸಲಾಗಿದೆ.

ಅಂಕಿ-ಅಂಶಗಳ ಕನ್ನಡಿ: ರಕ್ಷಣಾ ಕ್ಷೇತ್ರ (2014 - 2026)(ರೂ.ಗಳಲ್ಲಿ)

ಮಾನದಂಡ	2014	2026	ಬದಲಾವಣೆ
ರಕ್ಷಣಾ ರಫ್ತು	686 ಕೋಟಿ	38,400 ಕೋಟಿ	56 ಪಟ್ಟು
ರಕ್ಷಣಾ ಬಜೆಟ್	2.5 ಲಕ್ಷ ಕೋಟಿ	7.9 ಲಕ್ಷ ಕೋಟಿ	3.2 ಪಟ್ಟು
ರಕ್ಷಣಾ ಉತ್ಪಾದನೆ	46,000 ಕೋಟಿ	1.5 ಲಕ್ಷ ಕೋಟಿ	3.3 ಪಟ್ಟು
ಮದ್ದುಗುಂಡು ಸ್ವದೇಶೀಕರಣ	ಶೇ.32	ಶೇ. 90	2.8 ಪಟ್ಟು
ಮಹಿಳಾ ಅಧಿಕಾರಿಗಳು	3,000	11,000+	3.7 ಪಟ್ಟು

ಬಂದೂಕಿನ ಬದಲು ಅಭಿವೃದ್ಧಿ

ನಕ್ಸಲ್ ನಿರ್ಮೂಲನೆ ಕೇವಲ ಭದ್ರತಾ ಯಶಸ್ಸಲ್ಲ, ಅದಕ್ಕೆ ಅಭಿವೃದ್ಧಿಯ ಆಯಾಮವೂ ಇದೆ. 2017ರಿಂದೀಚೆಗೆ ನಕ್ಸಲ್-ಪೀಡಿತ ಪ್ರದೇಶಗಳಲ್ಲಿ 15,100ಕ್ಕೂ ಹೆಚ್ಚು ಕಿ.ಮೀ ರಸ್ತೆ ನಿರ್ಮಾಣ, 9,600ಕ್ಕೂ ಹೆಚ್ಚು ಮೊಬೈಲ್ ಟವರ್‌ಗಳ ಮೂಲಕ ಸಂಪರ್ಕ, ಬ್ಯಾಂಕಿಂಗ್ ಸೇವೆಯೊಂದಿಗೆ 6,000ಕ್ಕೂ ಹೆಚ್ಚು ಅಂಚೆ ಕಚೇರಿಗಳು ಮತ್ತು ಸುಮಾರು 1,800 ಬ್ಯಾಂಕ್ ಶಾಖೆಗಳು ಆರಂಭವಾಗಿವೆ. 70 ವರ್ಷಗಳ ಕಾಲ ನಿರ್ಲಕ್ಷಿತವಾಗಿದ್ದ ಹಳ್ಳಿಗಳಿಗೆ ಈಗ ರಸ್ತೆ, 4ಜಿ, ಶಾಲೆ ಮತ್ತು ಮೂಲಸೌಕರ್ಯ ತಲುಪಿವೆ ಎಂಬುದು ಭದ್ರತೆ + ಅಭಿವೃದ್ಧಿ ಮಾದರಿಯ ಯಶಸ್ಸಿನ ಸಂಕೇತ ಎಂದು ಬಣ್ಣಿಸಲಾಗಿದೆ. ಎಲ್ಲಿ ಒಮ್ಮೆ ಗುಂಡಿನ ಮೊಳಗಿತ್ತೋ ಅಲ್ಲಿ ಈಗ ಅಭಿವೃದ್ಧಿಯ ಹಾಡು ಮೊಳಗುತ್ತಿದೆ. ಎಲ್ಲಿ ಭಯದ ರಾತ್ರಿಗಳಿದ್ದವೋ ಅಲ್ಲಿ ಈಗ ಭರವಸೆಯ ಕಿರಣ ಎಂಬ ಸಂಸತ್ತಿನಲ್ಲಿ ಆಡಿದ ಕಾವ್ಯಾತ್ಮಕ ನುಡಿ ಈ ಪರಿವರ್ತನೆಯ ಸಂಕೇತವಾಗಿದೆ.

ಐವತ್ತು ವರ್ಷಗಳಲ್ಲಿ ಮೊದಲ ಬಾರಿಗೆ

ಉರಿ ದಾಳಿಯ ನಂತರದ ಸರ್ಜಿಕಲ್ ಸ್ಟ್ರೈಕ್ (2016), ಪುಲ್ವಾಮಾ ನಂತರದ ಬಾಲಾಕೋಟ್ ವಾಯುದಾಳಿ (2019) ಮತ್ತು ಆಪರೇಷನ್ ಸಿಂದೂರ (2025) ಈ ಮೂರೂ ಪ್ರಥಮಗಳ ಸರಣಿ. ಬಾಲಾಕೋಟ್ ದಾಳಿಯನ್ನು ಮೊದಲ ಬಾರಿಗೆ ಭಾರತ ಪಾಕಿಸ್ತಾನದ ನೆಲದೊಳಗೆ ಜೈಷ್-ಎ-ಮೊಹಮ್ಮದ್ ಶಿಬಿರಗಳ ಮೇಲೆ ನಡೆಸಿದ ವಾಯುದಾಳಿಯಾಗಿದೆ. ಆಪರೇಷನ್ ಸಿಂದೂರದ ವೇಳೆ ಸುಮಾರು 50 ವರ್ಷಗಳಲ್ಲಿ ಮೊದಲ ಬಾರಿಗೆ ಭಾರತೀಯ ಸೇನೆಯ ಕಾರ್ಯಾಚರಣೆ ಪಾಕಿಸ್ತಾನದ ಒಳಭಾಗ ತಲುಪಿತು. 100ಕ್ಕೂ ಹೆಚ್ಚು ಭಯೋತ್ಪಾದಕ ಶಿಬಿರಗಳು ಮತ್ತು 9 ಅಡಗುತಾಣಗಳು ನಾಶವಾದವು, 11 ಸೇನಾ ಠಾಣೆಗಳ ಮೇಲೆ ನಿಖರ ದಾಳಿ ನಡೆಯಿತು.


ರೆಡ್ ಕಾರಿಡಾರ್‌ನಿಂದ ಗ್ರೀನ್ ಗ್ರೋಥ್ ಝೋನ್: ಶೂನ್ಯ ನಕ್ಸಲ್ ಜಿಲ್ಲೆ

ಭಾರತ ನಕ್ಸಲ್‌ಮುಕ್ತ ಎಂಬ ಘೋಷಣೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 2026ರ ಮಾರ್ಚ್ 30ರಂದು ಲೋಕಸಭೆಯಲ್ಲಿ ಈ ಘೋಷಣೆ ಮಾಡಿದರು. ಏಪ್ರಿಲ್ 2026ರಿಂದ ಯಾವುದೇ ಜಿಲ್ಲೆ ಎಲ್‌ಡಬ್ಲ್ಯೂಇ -ಪೀಡಿತ (ಎಡಪಂಥೀಯ ಉಗ್ರವಾದ ಪೀಡಿತ) ಆಗಿ ಉಳಿದಿಲ್ಲ ಎಂದು ಗೃಹ ಸಚಿವಾಲಯ ಎಲ್ಲ ರಾಜ್ಯಗಳಿಗೆ ತಿಳಿಸಿದೆ. 2014ರಲ್ಲಿ 126 ಇದ್ದ ಎಲ್‌ಡಬ್ಲ್ಯೂಇ -ಪೀಡಿತ ಜಿಲ್ಲೆಗಳ ಸಂಖ್ಯೆ 2026ರ ವೇಳೆಗೆ ಶೂನ್ಯಕ್ಕಿಳಿದಿರುವುದೇ ಇಲ್ಲಿನ ಕೇಂದ್ರಬಿಂದು.



ಸಿಂಧೂ ಜಲ ಒಪ್ಪಂದ ತಡೆ- ಒಂದು ನೀತಿ-ಪಲ್ಲಟ

ನೀರಿನ ಭದ್ರತೆಯ ವಿಷಯದಲ್ಲಿ ದಾಖಲೆ ಒಂದು ಸ್ಪಷ್ಟ ಪ್ರಥಮವನ್ನು ಮುಂದಿಡುತ್ತದೆ. ಹಿಂದೆ ಭಯೋತ್ಪಾದಕ ದಾಳಿಗಳ ನಂತರವೂ ಸಿಂಧೂ ಜಲ ಒಪ್ಪಂದ ಮುಂದುವರಿಯುತ್ತಿತ್ತು. ಈಗ ಆ ಒಪ್ಪಂದವನ್ನು ಅಮಾನತಿನಲ್ಲಿ (ಅಬೆಯನ್ಸ್) ಇರಿಸಲಾಗಿದೆ. ಮಾತು ಮತ್ತು ಭಯೋತ್ಪಾದನೆ ಜೊತೆಗೆ ಸಾಗಲಾರವು, ವ್ಯಾಪಾರ ಮತ್ತು ಭಯೋತ್ಪಾದನೆ ಜೊತೆಗೆ ಸಾಗಲಾರವು, ನೀರು ಮತ್ತು ರಕ್ತ ಒಟ್ಟಿಗೆ ಹರಿಯಲಾರವು ಎಂಬ ಪ್ರಧಾನಿಯ ಮಾತು ಈ ನೀತಿಯ ಸಾರಾಂಶವಾಗಿದೆ. ಇದರ ಜೊತೆಗೆ ಪ್ರಹಾರ್ ಎಂಬ ಮೊದಲ ಸಮಗ್ರ ರಾಷ್ಟ್ರೀಯ ಭಯೋತ್ಪಾದನಾ-ವಿರೋಧಿ ಕಾರ್ಯತಂತ್ರ ಮತ್ತು ಮಿಷನ್ ಸುದರ್ಶನ ಚಕ್ರ ಎಂಬ ಸಮಗ್ರ ಭದ್ರತಾ ವ್ಯವಸ್ಥೆಯ ಕೆಲಸ ಆರಂಭವಾಗಿರುವುದನ್ನೂ ಪ್ರಸ್ತಾಪಿಸಲಾಗಿದೆ. ಜಮ್ಮು-ಕಾಶ್ಮೀರದ ಚಿತ್ರಣವೂ ಐತಿಹಾಸಿಕವಾಗಿ ಬದಲಾಗಿದೆ. 2004-14ರ ಅವಧಿಯ 7,200ಕ್ಕೂ ಹೆಚ್ಚು ಭಯೋತ್ಪಾದಕ ಘಟನೆಗಳಿಗೆ ಹೋಲಿಸಿದರೆ 2014-25ರ ಅವಧಿಯಲ್ಲಿ 2,407 ಘಟನೆಗಳು ದಾಖಲಾಗಿವೆ. 2023ರಿಂದ ಏಪ್ರಿಲ್ 2026ರವರೆಗೆ ಸಂಘಟಿತ ಕಲ್ಲೆಸೆತ ಶೂನ್ಯ ಮತ್ತು ಸಂಘಟಿತ ಬಂದ್ / ಮುಷ್ಕರಗಳೂ ಸಂಪೂರ್ಣ ನಿಂತಿವೆ. 370ನೇ ವಿಧಿಯನ್ನು ನಿಷ್ಕ್ರಿಯಗೊಳಿಸಿ ಮೊದಲ ಬಾರಿಗೆ ಜಮ್ಮು-ಕಾಶ್ಮೀರವನ್ನು ಸಂಪೂರ್ಣ ಏಕೀಕರಣಗೊಳಿಸಿದ್ದು ಮತ್ತೊಂದು ಪ್ರಥಮ. ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಶಿಕ್ಷಾ ಪ್ರಮಾಣ ಶೇ.92 ದಾಟಿದ್ದು, ವಿಶ್ವದ ಭಯೋತ್ಪಾದನಾ-ವಿರೋಧಿ ಸಂಸ್ಥೆಗಳಲ್ಲೇ ಅತ್ಯುನ್ನತ ಎಂದು ದಾಖಲೆ ಪ್ರತಿಪಾದಿಸುತ್ತದೆ.



ಪಶುಪತಿಯಿಂದ ತಿರುಪತಿವರೆಗೆ ಚಾಚಿದ್ದ ರೆಡ್ ಕಾರಿಡಾರ್

ಒಂದು ಕಾಲದಲ್ಲಿ ಪಶುಪತಿಯಿಂದ ತಿರುಪತಿಯವರೆಗೆ ಚಾಚಿಕೊಂಡಿದ್ದ ರೆಡ್ ಕಾರಿಡಾರ್ ಅನ್ನು ಸಂಪೂರ್ಣ ಕಿತ್ತುಹಾಕಲಾಗಿದೆ. 50ಕ್ಕೂ ಹೆಚ್ಚು ವರ್ಷಗಳಲ್ಲಿ ಮೊದಲ ಬಾರಿಗೆ ಭಾರತದ ಮುಖ್ಯಭೂಮಿಯಲ್ಲಿ ಯಾವುದೇ ನಕ್ಸಲ್-ನಿಯಂತ್ರಿತ ಪ್ರದೇಶ ಉಳಿದಿಲ್ಲ ಎಂಬುದು ಇಲ್ಲಿನ ಪ್ರಮುಖ ಪ್ರಥಮ. 2024ರಲ್ಲಿ ಛತ್ತೀಸ್‌ಘಢದಲ್ಲಿ ಒಂದೇ ವರ್ಷದಲ್ಲಿ ಅತಿ ಹೆಚ್ಚು 290 ನಕ್ಸಲರು ಹತರಾದರು. 2025ರ 21 ದಿನಗಳ ಕಾರೆಗುಟ್ಟ ಗುಡ್ಡ ಕಾರ್ಯಾಚರಣೆಯಲ್ಲಿ 31 ಕುಖ್ಯಾತ ನಕ್ಸಲರನ್ನು ಒಬ್ಬ ಸೈನಿಕನೂ ಹುತಾತ್ಮನಾಗದೆ ನಿರ್ಮೂಲನೆ ಮಾಡಲಾಗಿದೆ. ತೆಲಂಗಾಣ-ಛತ್ತೀಸ್‌ಘಢ ಗಡಿಯ 50 ಕಿ.ಮೀ ಉದ್ದ, 37 ಕಿ.ಮೀ ಅಗಲದ ಗುಡ್ಡದ ಮೇಲೆ ನಡೆದ ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ (2025) ಈ ಸಾಲಿನ ಮಹತ್ವದ ಕಾರ್ಯಾಚರಣೆ.

> **ನಮ್ಮ ಸಶಸ್ತ್ರ ಪಡೆಗಳಿಗೆ ಸಾಮರ್ಥ್ಯವೂ ಇದೆ, ತಂತ್ರವೂ ಇದೆ. ಯಾರಾದರೂ ದಾಳಿ ಮಾಡಲು ಯತ್ನಿಸಿದರೆ ಶತ್ರುವಿಗೆ ಅದೇ ಭಾಷೆಯಲ್ಲಿ ಉತ್ತರ ಕೊಡುವುದು ಹೇಗೆ ಎಂದು ಮೂರೂ ಪಡೆಗಳಿಗೂ ಚೆನ್ನಾಗಿ ಗೊತ್ತಿದೆ.**
> ■ ನರೇಂದ್ರ ಮೋದಿ, ಪ್ರಧಾನಮಂತ್ರಿ

ಭಯೋತ್ಪಾದನೆ ವಿರುದ್ಧ: ಗಡಿ ದಾಟಿದ ಪ್ರಥಮ ನೀತಿ

ಭಯೋತ್ಪಾದನೆ ವಿರುದ್ಧದ ಪ್ರಥಮಗಳು ದಾಖಲೆಯ ಅತ್ಯಂತ ಗಮನ ಸೆಳೆಯುವ ಭಾಗ. 2014ರ ಆಗ ಮತ್ತು 2026ರ ಈಗ ನಡುವಿನ ವ್ಯತ್ಯಾಸವನ್ನು ಈಗ ಗುರುತಿಸಬಹುದು. 2014ರ ಹಿಂದೆ ದಾಳಿಯ ನಂತರ ಕೇವಲ ರಾಜತಾಂತ್ರಿಕ ಪತ್ರವ್ಯವಹಾರ ನಡೆಯುತ್ತಿತ್ತು, 2026ರ ಹೊಸ ಸಾಮಾನ್ಯ (ನ್ಯೂ ನಾರ್ಮಲ್) ಎಂದರೆ ನಿರ್ಣಾಯಕ ಮತ್ತು ತ್ವರಿತ ಪ್ರತಿದಾಳಿ. ಯಾವುದೇ ಪರಮಾಣು ಬೆದರಿಕೆಯನ್ನು ಸಹಿಸದಿರುವುದು ಮೋದಿ ಆಡಳಿತ ಕಾಲದ ಹೊಸ ದೃಢ ನೀತಿ.



ಬ್ರಿಟಿಷ್ ಕಾಲದ ಕಾನೂನುಗಳಿಗೆ ವಿದಾಯ

ಆಡಳಿತ-ನ್ಯಾಯ ಕ್ಷೇತ್ರದಲ್ಲಿ ದಾಖಲೆ ದೊಡ್ಡ ಪ್ರಥಮವೊಂದು ರಚನೆಯಾಗಿದೆ. 150 ವರ್ಷಗಳಷ್ಟು ಹಳೆಯ ಬ್ರಿಟಿಷ್ ಕಾಲದ



ಕಾನೂನುಗಳ ಬದಲಿಗೆ ಭಾರತೀಯ ನ್ಯಾಯ ಸಂಹಿತಾ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮದಂಥ ಮೊದಲ ಬಾರಿಗೆ ಭಾರತ ತನ್ನದೇ ಕಾನೂನುಗಳನ್ನು ಪಡೆದಿದೆ. 1860ರ ಭಾರತೀಯ ದಂಡ ಸಂಹಿತೆಯ 511 ಸೆಕ್ಷನ್‌ಗಳ ಬದಲಿಗೆ ಈಗ 358 ಸೆಕ್ಷನ್‌ಗಳಿವೆ. 7 ವರ್ಷ ಅಥವಾ ಹೆಚ್ಚಿನ ಶಿಕ್ಷೆಯ ಪ್ರತಿ ಅಪರಾಧಕ್ಕೂ ವಿಧಿವಿಜ್ಞಾನ (ಫೋರೆನ್ಸಿಕ್) ತನಿಖೆಯನ್ನು ಕಡ್ಡಾಯಗೊಳಿಸಿರುವುದು, ತನಿಖೆ-ಆರೋಪಪಟ್ಟಿ-ತೀರ್ಪಿಗೆ ಕಾಲಮಿತಿ ನಿಗದಿ ಮಾಡಿರುವುದು ಶಿಕ್ಷೆ ಅಲ್ಲ, ನ್ಯಾಯ ಎಂಬ ಆಶಯದ ಪ್ರಥಮ ಎಂದು ಬಣ್ಣಿಸಲಾಗಿದೆ. ಪ್ರಧಾನಿ ಮೊದಲ ಬಾರಿಗೆ ಸ್ವದೇಶಿ ತೇಜಸ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ್ದು ಆತ್ಮನಿರ್ಭರ ಸಂಕೇತದ ಪ್ರಥಮ ಕ್ಷಣ ಎಂದೂ ದಾಖಲೆ ಗುರುತಿಸುತ್ತದೆ.

ವ್ಯಾಪಾರ ಒಪ್ಪಂದಗಳು ಮತ್ತು ಜಾಗತಿಕ ನೆರವು


ರಷ್ಯಾ-ಉಕ್ರೇನ್ ಸಂಘರ್ಷದ ವೇಳೆ ಆಪರೇಷನ್ ಗಂಗಾ ಮತ್ತು ಕೋವಿಡ್-19 ಸಾಂಕ್ರಾಮಿಕದ ವೇಳೆ ವ್ಯಾಕ್ಸಿನ್ ಮೈತ್ರಿಯ ಮೂಲಕ 99 ರಾಷ್ಟ್ರಗಳಿಗೆ 30 ಕೋಟಿಗೂ ಹೆಚ್ಚು ಲಸಿಕೆ ಪೂರೈಸಿ ಭಾರತ ವಿಶ್ವದ ಔಷಧಾಲಯ ಎಂದು ಗುರುತಿಸಿಕೊಂಡಿದೆ. ಭಾರತ-ನ್ಯೂಜಿಲ್ಯಾಂಡ್ ಮುಕ್ತ ವ್ಯಾಪಾರ ಒಪ್ಪಂದದಲ್ಲಿ ಶೇ.100 ಸುಂಕ ಸಾಲುಗಳ ನಿರ್ಮೂಲನೆ, ಭಾರತ-ಐರೋಪ್ಯ ಒಕ್ಕೂಟ ಎಫ್‌ಟಿಎ ಅಡಿ ಮೌಲ್ಯದ ದೃಷ್ಟಿಯಿಂದ ಶೇ.99 ವ್ಯಾಪಾರಕ್ಕೆ ಸುಂಕ ರಿಯಾಯಿತಿ, 2026ರ ಹಾರ್ಮುಜ್ ಬಿಕ್ಕಟ್ಟಿನ ವೇಳೆ ಸಕ್ರಿಯ ರಾಜತಾಂತ್ರಿಕತೆಯ ಮೂಲಕ ತೈಲ ಪೂರೈಕೆಯಲ್ಲಿ ಅಡಚಣೆಯಾಗದಂತೆ ನೋಡಿಕೊಂಡಿದ್ದು ಇವೆಲ್ಲ ಆರ್ಥಿಕ ರಾಜತಾಂತ್ರಿಕತೆಯ ಪ್ರಥಮಗಳ ಸಾಲಿನಲ್ಲಿವೆ. 2014-25ರ ಅವಧಿಯಲ್ಲಿ 70 ಲಕ್ಷ ಕೋಟಿ ರೂ.ಗೂ ಹೆಚ್ಚು ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಮತ್ತು 2024-25ರ ಆರ್ಥಿಕ ವರ್ಷದಲ್ಲಿ ಸುಮಾರು 13 ಲಕ್ಷ ಕೋಟಿ ರೂ. ವಿದೇಶಿ ರವಾನೆ (ರೆಮಿಟನ್ಸ್) ಪಡೆದು ವಿಶ್ವದಲ್ಲೇ ಅತಿ ಹೆಚ್ಚು ರೆಮಿಟನ್ಸ್ ಪಡೆಯುವ ದೇಶ ಎಂಬ ಸ್ಥಾನ ಪಡೆದಿರುವುದನ್ನೂ ದಾಖಲೆ ಪ್ರಸ್ತಾಪಿಸುತ್ತದೆ.



ವಿದೇಶಾಂಗ ನೀತಿ ಮತ್ತು ಆಡಳಿತ ಸುಧಾರಣೆಯ ಪ್ರಥಮಗಳು

ವಿದೇಶಾಂಗ ನೀತಿಯ ಕ್ಷೇತ್ರದಲ್ಲಿ ಏಕೆ ಭಾರತ? ಎಂಬ ಪ್ರಶ್ನೆ ಭಾರತ ಏಕೆ ಬೇಡ? ಎಂಬ ಆತ್ಮವಿಶ್ವಾಸದ ಹೇಳಿಕೆಯಾಗಿ ಬದಲಾಗಿದೆ. 2023ರ ಹೊಸದಿಲ್ಲಿ ಜಿ-20 ಶೃಂಗದಲ್ಲಿ ನಾಯಕರ ಘೋಷಣೆಗೆ ಶೇ. 100 ಒಮ್ಮತ ಸಾಧಿಸಿದ್ದು ವಿಭಜಿತ ಜಾಗತಿಕ ವ್ಯವಸ್ಥೆಯಲ್ಲಿ ಭಾರತದ ನಾಯಕತ್ವದ ಪ್ರಥಮ ಎಂದು ಗುರುತಿಸಲಾಗಿದೆ. ಗ್ಲೋಬಲ್ ಸೌತ್‌ನ ಧ್ವನಿಯಾಗಿ 125 ಅಭಿವೃದ್ಧಿಶೀಲ ರಾಷ್ಟ್ರಗಳ ಸಮಸ್ಯೆಗಳನ್ನು ಪ್ರತಿನಿಧಿಸಲು ವಾಯ್ಸ್ ಆಫ್ ಗ್ಲೋಬಲ್ ಸೌತ್ ಶೃಂಗಗಳನ್ನು ಆಯೋಜಿಸಿದ್ದು ಮತ್ತೊಂದು ಮೊದಲು.





ತೇಜಸ್‌ನಿಂದ ಬ್ರಹ್ಮೋಸ್‌ವರೆಗೆ

ಈ ಪ್ರಥಮಗಳ ಸಾಲಿನಲ್ಲಿ ಹಲವು ನಿರ್ದಿಷ್ಟ ಮೈಲಿಗಲ್ಲುಗಳಿವೆ. 83 ತೇಜಸ್ ಎಂಕೆ-1ಎ ಯುದ್ಧ ವಿಮಾನಗಳಿಗೆ ನೀಡಲಾದ ಆದೇಶ ಇದುವರೆಗಿನ ಅತಿ ದೊಡ್ಡ ಸ್ವದೇಶಿ ಯುದ್ಧ ವಿಮಾನ ಆದೇಶವಾಗಿದೆ. ಬ್ರಹ್ಮೋಸ್ ಏರೋಸ್ಪೇಸ್‌ನ ಆದಾಯ 2025-26ರ ಆರ್ಥಿಕ ವರ್ಷದಲ್ಲಿ 5,200 ಕೋಟಿ ರೂ. ತಲುಪಿದ್ದು, ಸುಮಾರು 4,000 ಕೋಟಿ ರೂ. ಮೌಲ್ಯದ ರಫ್ತು ಆದೇಶಗಳು ಬಂದಿವೆ. 41 ಆರ್ಡ್‌ನೆನ್ಸ್ ಕಾರ್ಖಾನೆಗಳನ್ನು 7 ರಕ್ಷಣಾ ಸಾರ್ವಜನಿಕ ವಲಯ ಸಂಸ್ಥೆಗಳಾಗಿ (ಡಿಪಿಎಸ್‌ಯು) ಪುನರ್‌ರಚಿಸಲಾಗಿದೆ. ಇದು ಸ್ವಾತಂತ್ರ್ಯಾನಂತರದ ರಕ್ಷಣಾ ಉತ್ಪಾದನಾ ರಚನೆಯಲ್ಲಿನ ಒಂದು ಬೃಹತ್ ಬದಲಾವಣೆಯಾಗಿದೆ.

ಅಲೆಮಾರಿ ಸಮುದಾಯದ ಏಳ್ಗೆಗೆ ಕಾರ್ಯಸಿದ್ಧರಾಗಿ: ದುರ್ಗಾದಾಸ್

• ಬೆಂಗಳೂರು: ಸ್ವಾಭಿಮಾನಿ, ಧರ್ಮನಿಷ್ಠ ಮತ್ತು ದೇಶಭಕ್ತ ಅಲೆಮಾರಿ ಸಮುದಾಯವು ನಮ್ಮ ಸಹೋದರರೇ ಆಗಿದ್ದಾರೆ. ಅವರ ಏಳಿಗೆಗೆ ಕೆಲಸ ಮಾಡಲು ನಾವೆಲ್ಲರೂ ಸಿದ್ಧರಾಗಬೇಕು ಎಂದು ಅಖಿಲ ಭಾರತ ಘುಮಂತು ಕಾರ್ಯ ಪ್ರಮುಖ್ ದುರ್ಗಾದಾಸ್ ವ್ಯಾಸ್ ಕರೆ ನೀಡಿದ್ದಾರೆ.

ನಗರದ ಉತ್ತುಂಗ ಸಭಾಂಗಣದಲ್ಲಿ ನಡೆದ ಘುಮಂತು ಕಾರ್ಯ (ಅಲೆಮಾರಿ, ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯದ ಕಾರ್ಯ) ಕರ್ನಾಟಕ ದಕ್ಷಿಣ ಪ್ರಾಂತದ ಪ್ರಾಂತ ಬೈಠಕ್‌ನಲ್ಲಿ ಅವರು ಮಾತನಾಡಿದರು. ದೇಶದಲ್ಲಿ ಅಲೆಮಾರಿ ಸಮುದಾಯಕ್ಕೆ ಸೇರಿದ 15 ಕೋಟಿ ಜನಸಂಖ್ಯೆಯಿದೆ. ಈ ಪೈಕಿ 4 ಕೋಟಿ ಜನರು ದಯನೀಯ ಸ್ಥಿತಿಯಲ್ಲಿದ್ದಾರೆ. ಅಲೆಮಾರಿ ಸಮುದಾಯಕ್ಕೂ ಇತಿಹಾಸವಿದೆ. ಸ್ವಾತಂತ್ರ್ಯ ಹೋರಾಟದಲ್ಲಿಯೂ ಅವರು ಭಾಗಿಯಾಗಿದ್ದಾರೆ. ಆದರೆ, ಈ ಇತಿಹಾಸವನ್ನು ಎಲ್ಲಿಯೂ ದಾಖಲಿಸಿಲ್ಲ. ಅಲೆಮಾರಿ ಸಮುದಾಯದ ಇತಿಹಾಸಕ್ಕೆ ಮನ್ನಣೆಯನ್ನೂ ಕೊಟ್ಟಿಲ್ಲ. ಬ್ರಿಟಿಷರ ಕಾಲದಲ್ಲಿ ಅಲೆಮಾರಿ ಸಮುದಾಯಗಳನ್ನು ಅಧಿಸೂಚಿತ ಬುಡಕಟ್ಟು ಜನಾಂಗಗಳು (ನೋಟಿಫೈಡ್ ಟ್ರೈಬ್ಸ್) ಎಂದು ಗುರುತಿಸಿ ಅವರನ್ನು ಅತ್ಯಂತ ಕೀಳಾಗಿ ನಡೆಸಿಕೊಳ್ಳಲಾಗಿತ್ತು ಎಂದು ವಿವರಿಸಿದರು.

ಅಲೆಮಾರಿ ಸಮುದಾಯವು ದೇಶದ ಇತರೆಲ್ಲ ಸಮುದಾಯ, ವರ್ಗಗಳ ಅವಶ್ಯಕತೆಗಾಗಿ ಅಲೆಮಾರಿಗಳಾಗಿದ್ದಾರೆ. ಸ್ವಾತಂತ್ರ್ಯಾನಂತರ 1952ರಲ್ಲಿ ಕೆಲವು ಸಮುದಾಯಗಳನ್ನು



ಅಧಿಸೂಚನೆ ಯಿಂದ ತೆಗೆದುಹಾಕಲಾಯಿತು. ಇದರಿಂದ ಅಲೆಮಾರಿ, ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯ ಎಂದು ವಿಂಗಡಣೆಯಾಯಿತು ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ವು ಇಡೀ ಸಮಾಜ ನಮ್ಮದು ಎಂಬ ನೆಲೆಯಲ್ಲಿ ನಾಲ್ಕು ವರ್ಷಗಳ ಹಿಂದೆ ಅಲೆಮಾರಿ ಸಮುದಾಯಗಳ ಮಧ್ಯೆ ಘುಮಂತು ಕಾರ್ಯ ಪ್ರಾರಂಭಿಸಿದೆ. ಅಲೆಮಾರಿ ಸಮುದಾಯದ ಈಗಿನ ಸ್ಥಿತಿಯನ್ನು ಇನ್ನಷ್ಟು ಉತ್ತಮಗೊಳಿಸಲು ಉಳ್ಳವರು ಅವಶ್ಯಕತೆ ಇದ್ದವರಿಗೆ ಸಹಾಯ ಮಾಡಲು, ಸರ್ಕಾರದ ಅನೇಕ ಯೋಜನೆಗಳನ್ನು ಅವರಿಗೆ ದೊರಕಿಸುವುದಕ್ಕಾಗಿ, ಆರೋಗ್ಯ, ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಇತ್ಯಾದಿಗಳನ್ನು ತಳಮಟ್ಟದ ಸಮುದಾಯಗಳಿಗೆ ತಲುಪಿಸುವುದಕ್ಕಾಗಿ ಕೆಲಸ ಮಾಡುತ್ತಿದೆ ಎಂದು ದುರ್ಗಾದಾಸ್ ತಿಳಿಸಿದರು.

ಇದಕ್ಕಾಗಿ ಘುಮಂತು ಕಾರ್ಯದಲ್ಲಿ ಆರು ಕೆಲಸಗಳು ಪ್ರಾರಂಭವಾಗಿವೆ. ಈಗಾಗಲೇ 2 ಲಕ್ಷಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ದಾಖಲೆ ಪತ್ರಗಳನ್ನು ಕೊಡಿಸಲಾಗಿದೆ. ಶಿಕ್ಷಣ ಸವಲತ್ತು, ವಿದ್ಯಾರ್ಥಿವೇತನ ಒದಗಿಸಲಾಗುತ್ತಿದೆ. ಆದರೆ, ಹೊರಗಿನಿಂದ ಬಂದವರಿಗೆ ಎಲ್ಲಾ ಸೌಲಭ್ಯ ಸಿಗುತ್ತಿದೆ. ಅವರ ಬಳಿ ಆಧಾರ್ ಕಾರ್ಡ್, ಗ್ಯಾಸ್ ಸಂಪರ್ಕ, ಪಡಿತರಚೀಟಿ ಎಲ್ಲವೂ ಇದೆ. ವಿಪರ್ಯಾಸವೆಂದರೆ, ಅಲೆಮಾರಿ ಸಮುದಾಯಕ್ಕೆ ಶಕ್ತಿ ಇಲ್ಲದಿರುವುದರಿಂದ ಅವರು ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಎಲ್ಲರೂ ಅವರ ಏಳಿಗೆಗಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಚಿತ್ರದುರ್ಗದ ಅಖಿಲ ಭಾರತ ಯಾದವ ಮಹಾ ಸಂಸ್ಥಾನದ ಶ್ರೀ ಕೃಷ್ಣ ಜಗದ್ಗುರು ಯಾದವಾನಂದ ಸ್ವಾಮೀಜಿ ಭಾಗವಹಿಸಿ ಆಶೀರ್ವಚನ ನೀಡಿದರು. ಆರ್‌ಎಸ್‌ಎಸ್ ದಕ್ಷಿಣ ಪ್ರಾಂತ ಪ್ರಚಾರಕ್ ಗುರುಪ್ರಸಾದ್ ಸಮಾರೋಪ ಭಾಷಣ ಮಾಡಿದರು. ಆರ್‌ಎಸ್‌ಎಸ್ ಪ್ರಾಂತ ಸಂಚಾಲಕ ಉಮಾಪತಿ, ಘುಮಂತು ಕಾರ್ಯ ಕರ್ನಾಟಕ ದಕ್ಷಿಣ ಪ್ರಾಂತದ ಸಂಯೋಜಕ್ ಗುರುಗಣೇಶ್ ಉಪಸ್ಥಿತರಿದ್ದರು.

ಇದೇ ವೇಳೆ ಅಲೆಮಾರಿ ಸಮುದಾಯದ ಕಿರು ಪರಿಚಯದ ಪತ್ರಕ ಬಿಡುಗಡೆ ಮಾಡಲಾಯಿತು. ಬೈಠಕ್‌ನಲ್ಲಿ ಕರ್ನಾಟಕ ರಾಜ್ಯ ಪಾಣಾರ ಯಾನೆ ನಲಿಕೆ ಸಮಾಜದ ಸೇವಾ ಸಂಘದ ರಾಜ್ಯಾಧ್ಯಕ್ಷ ದೈವ ನರ್ತಕ ದಯಾನಂದ ಎಸ್., ಸಾಗರದ ಉಮಾ, ವಕೀಲ ರವಿ ಮಾವಿನಕುಂಟೆ ಭಾಗವಹಿಸಿದ್ದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಜನರನ್ನು ವಿಭಜಿಸುವ ಸನಾತನ ಧರ್ಮವನ್ನು ರದ್ದು ಮಾಡಬೇಕು
– ಉದಯನಿಧಿ ಸ್ಟಾಲಿನ್

– ಪೋಲೀಸರು ನಿಜವಾದ ಕಳ್ಳನನ್ನು ಹಿಡಿಯುವ ಬದಲು ರಾಜಕೀಯ ಒತ್ತಡದಿಂದ ಯಾರೋ ನಿರಪರಾಧಿಯನ್ನು ಬಂಧಿಸಿದಂತಿದೆ ಈ ಆರೋಪ. ನಿಮಗೆ ಧೈರ್ಯವಿದ್ದರೆ ಭಾರತ ಪಾಕಿಸ್ತಾನ ವಿಭಜನೆಗೆ ಕಾರಣರಾದ ಮತೀಯರ ಬಗ್ಗೆ ಮಾತನಾಡಿ!

ದಿನ ಭವಿಷ್ಯ

ಮೇಷ
ತುಸು ಕ್ಲಿಷ್ಟಕರ ದಿನ. ವೃತ್ತಿ ಒತ್ತಡ ದೈಹಿಕ ಸುಸ್ತಿಗೂ ಕಾರಣವಾದೀತು. ಕೆಲ ವಿಷಯ ಮಾನಸಿಕ ಗೊಂದಲ ಸೃಷ್ಟಿಸುವುದು.

ವೃಷಭ
ನಿಮ್ಮ ಕಾರ್ಯ ಸಾಧಿಸಲ್ಪಡಲಿದೆ. ಆದರೆ ವಿಳಂಬವಾಗಿ. ಸಂಬಂಧದಲ್ಲಿ ಒಡಕು. ತೈಲಖಾದ್ಯ ಆರೋಗ್ಯ ಕೆಡಿಸಬಹುದು.

ಮಿಥುನ
ವೃತ್ತಿಯಲ್ಲಿ ತೊಡಕು. ಹೆಚ್ಚಿನ ಅವಕಾಶ ಸಿಗದು. ಮೇಲಧಿಕಾರಿ ಜತೆ ಉದ್ವಿಗ್ನತೆ. ವಾದ ಮಾಡಲು ಹೋಗಬೇಡಿ. ಸಹನೆ ಕಾಯ್ದುಕೊಳ್ಳಿ.

ಕಟಕ
ಧೈರ್ಯಗೆಡಬೇಡಿ. ಎಂತಹ ಪ್ರತಿಕೂಲ ಪರಿಸ್ಥಿತಿ ಎದುರಾದರೂ ದೇವರ ಕೃಪೆ ನಿಮಗಿದೆ. ಶಾಂತಿ, ಸಹನೆ ಕಾಯ್ದುಕೊಳ್ಳಿ, ಎಲ್ಲ ಸರಿಯಾಗಲಿದೆ.

ಸಿಂಹ
ಕಾರ್ಯಶೈಲಿಯಲ್ಲಿ ಬದಲಾವಣೆ ಸಂಭವ. ನಿರೀಕ್ಷೆಗಿಂತ ಹೆಚ್ಚು ಕೆಲಸದ ಒತ್ತಡ. ಸಂಜೆ ವೇಳೆಗೆ ಎಲ್ಲ ಸುಸೂತ್ರ. ಮೆಚ್ಚುಗೆ ಪಡೆಯುವಿರಿ.

ಕನ್ಯಾ
ವೃತ್ತಿ ಕಾರ್ಯದಲ್ಲಿ ಪೂರ್ಣ ಮಗ್ನರು. ಇತರ ವಿಷಯಕ್ಕೆ ಗಮನ ಹರಿಯದು. ಕುಟುಂಬದ ಸಮಸ್ಯೆಗೂ ಗಮನ ಕೊಡಿ. ಆರ್ಥಿಕ ಒತ್ತಡ.

ತುಲಾ
ವೃತ್ತಿಯಲ್ಲಿ ಏರಿಳಿತ ಎದುರಿಸುವಿರಿ. ಲಕ್ಷ್ಯ ಕಡಿಮೆ ಮಾಡದಿರಿ. ಧಾರ್ಮಿಕ ಕ್ಷೇತ್ರ ಭೇಟಿ ನಿರಾಳತೆ ತರುವುದು. ಆರ್ಥಿಕ ಹಿನ್ನಡೆ.

ವೃಶ್ಚಿಕ
ಕಠಿಣ ದಿನ. ಹೆಚ್ಚು ಹೊಣೆಗಾರಿಕೆ. ಉತ್ಸಾಹ ತರುವ ಇತರ ಕಾರ್ಯದಲ್ಲಿ ತೊಡಗಿ. ಆರ್ಥಿಕ ಪ್ರಗತಿ ನಿರೀಕ್ಷಿಸಿದಷ್ಟು ಆಗದು.

ಧನು
ಹೆಚ್ಚು ಪರಿಶ್ರಮ ಪಟ್ಟು ನಿಮ್ಮ ಸಾಮರ್ಥ್ಯ ತೋರ್ಪಡಿಸಿ. ಟೀಕೆಗಳಿಗೆ ಉತ್ತರ ಕೊಡಿ. ಕೆಲವರಿಗೆ ಕಾಲು, ಸೊಂಟ ನೋವು ಕಾಡಬಹುದು.

ಮಕರ
ಉತ್ಸಾಹಪೂರ್ಣ ದಿನ. ಕಾರ್ಯ ಸಫಲತೆ. ಸಂಗಾತಿ ಜತೆಗಿನ ಭಿನ್ನಮತ ಬಗೆಹರಿಸಿ. ಖರ್ಚು ಕಡಿಮೆ ಮಾಡಲು ಯೋಜನೆ ಹಾಕಿ.

ಕುಂಭ
ವೃತ್ತಿ ಮತ್ತು ಮನೆಯಲ್ಲಿ ಕಠಿಣ ದಿನ. ಸುಗಮವಾಗಿ ಸಾಗದು. ಅನಿರೀಕ್ಷಿತ ಪಯಣ. ಕ್ಲಪ್ತ ಕಾಲದಲ್ಲಿ ಆಹಾರ ಸೇವಿಸಿ. ಆರೋಗ್ಯ ಕಾಯ್ದುಕೊಳ್ಳಿ.

ಮೀನ
ಯೋಜಿಸಿ ಕಾರ್ಯ ಎಸಗಿ. ಇಲ್ಲವಾದರೆ ಒತ್ತಡಕ್ಕೆ ಸಿಲುಕುವಿರಿ. ಸಣ್ಣಪುಟ್ಟ ಚಿಂತೆ ಸದಾ ಕಾಡುತ್ತಿರುತ್ತದೆ. ಆಂಜನೇಯನ ಭಜಿಸಿ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 8,5,1,7

ಹೈನಿಂದ 15 ದಿನಗಳ ತುರ್ತು ಪೆರೋಲ್ ಮಂಜೂರು

• ಬೆಂಗಳೂರು: ಮರಣಶೈಯ್ಯೆಯಲ್ಲಿರುವ 97 ವರ್ಷದ ತಾತನನ್ನು ಕಂಡು ಕೊನೆಘಳಿಗೆಯಲ್ಲಿ ಆತನ ಬಳಿ ಇದ್ದು ಆರೈಕೆ ಮಾಡಲು, ಜೀವಾವಧಿ ಶಿಕ್ಷೆಗೆ ಒಳಗಾಗಿ ಸದ್ಯ ಜೈಲಿನಲ್ಲಿರುವ ಮೊಮ್ಮಗನಿಗೆ ಮಾನವೀಯತೆಯ ಆಧಾರದಲ್ಲಿ ಹೈಕೋರ್ಟ್ ಮಂಗಳವಾರ 15 ದಿನಗಳ ತುರ್ತು ಪೆರೋಲ್ ಮಂಜೂರು ಮಾಡಿದೆ. ತನ್ನ ತಂದೆ ಮರಣಶೈಯ್ಯೆಯಲ್ಲಿದ್ದು ಆತನನ್ನು ಕಾಣಲು ಮೊಮ್ಮಗನಿಗೆ ಪೆರೋಲ್ ಮಂಜೂರು ಮಾಡಬೇಕು ಎಂದು ಜೀವಾವಧಿ ಶಿಕ್ಷೆಗೊಳಗಾಗಿ ಮೈಸೂರು ಕೇಂದ್ರ ಕಾರಾಗೃಹದಲ್ಲಿರುವ ಎನ್.ಡಿ ನವೀನ್ ಅಲಿಯಾಸ್ ಸಬ್ಸಿಡಿ ನವೀನ್ ತಂದೆ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕು ನುಗ್ಗೇಹಳ್ಳಿ ಗ್ರಾಮದ ಎನ್.ಎನ್. ದೇವರಾಜು ಎಂಬುವರು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠವು 15 ದಿನಗಳ ತುರ್ತು ಪೆರೋಲ್ ಮಂಜೂರು ಮಾಡಿ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಕೊಲೆ ಪ್ರಕರಣದಲ್ಲಿ ನವೀನ್‌ಗೆ 2024ರ ಡಿ.18ರಂದು ಜೀವಾವಧಿ ಶಿಕ್ಷೆಯಾಗಿದೆ. ಅದಕ್ಕೂ ಮೊದಲು 2022ರ ಅಕ್ಟೋಬರ್ 2ರಿಂದ ಆತ ಜೈಲಿನಲ್ಲಿದ್ದಾನೆ. ಈಗ ಆತನ 97 ವರ್ಷದ ತಾತ ಮರಣಶೈಯ್ಯೆಯಲ್ಲಿದ್ದು, ತಾತನನ್ನು ಕಾಣಲು ಪೆರೋಲ್ ಮಂಜೂರು ಮಾಡಬೇಕು ಎಂದು ಕೋರಿದರು. ಇದಕ್ಕೆ ಸರ್ಕಾರದ ಪರ ವಕೀಲರು ಈ ಹಿಂದೆ ಅಪರಾಧಿಗೆ ಮೂರು ಬಾರಿ ಪೆರೋಲ್ ಮಂಜೂರು ಮಾಡಲಾಗಿದೆ.

ಸರ್ಕಾರದ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕೆ ಪರಮೇಶ್ವರ ಸೂಚನೆ

ಯುವಕರಿಗೆ ಉತ್ತೇಜನ

• ಬೆಂಗಳೂರು: ಗ್ರಾಮೀಣ ಮತ್ತು ಪಾರಂಪರಿಕ ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆ ನೀಡುವ ಯುವಕರಿಗೆ ಉತ್ತೇಜನ ನೀಡಬೇಕು ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಹೇಳಿದರು.

ಮಂಗಳವಾರ ವಿಧಾನಸೌಧದಲ್ಲಿ ನಡೆದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಮುಜರಾಯಿ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿ, ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿದರು. ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಸೂಚನೆ ನೀಡಿದರು. ಕ್ರೀಡಾ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಸರ್ಕಾರದಿಂದ ನೀಡಲಾಗುವ ವಿವಿಧ ಪ್ರಶಸ್ತಿಗಳ ಕುರಿತು ಸಭೆಯಲ್ಲಿ ಚರ್ಚಿಸಿದರು. ಸಾಧಕರಿಗೆ ನೀಡಬೇಕಿರುವ ಕ್ರೀಡಾ ಪ್ರಶಸ್ತಿಗಳನ್ನು ಯಾವುದೇ ಕಾರಣಕ್ಕೂ ಬಾಕಿ ಉಳಿಸಬಾರದು. ಅರ್ಹ ಕ್ರೀಡಾಪಟುಗಳನ್ನು ಪಾರದರ್ಶಕವಾಗಿ ಗುರುತಿಸಿ, ಪ್ರಶಸ್ತಿಗಳನ್ನು ನೀಡುವ ಮೂಲಕ ಅವರಸಾಧನೆಯನ್ನು ಗೌರವಿಸುವ ಕೆಲಸವಾಗಬೇಕು. ಇದು ಇತರ ಯುವ ಕ್ರೀಡಾಪಟುಗಳಿಗೂ ಪ್ರೇರಣೆಯಾಗಲಿದೆ ಎಂದು ಅವರು ಹೇಳಿದರು.

ಒಲಂಪಿಕ್, ಏಷ್ಯಾನ್ ಗೇಮ್ಸ್, ಕಾಮನ್ವೆಲ್ತ್ ಗೇಮ್ಸ್ ಸೇರಿದಂತೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ರಾಜ್ಯಕ್ಕೆ ಕೀರ್ತಿ ತಂದ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ವಿವಿಧ ಇಲಾಖೆಯಲ್ಲಿನ ಹುದ್ದೆಗಳಿಗೆ ನೇಮಕ ಮಾಡುವ ಮೂಲಕ, ಕ್ರೀಡಾಪಟುಗಳಿಗೆ ಉತ್ತೇಜನ ಸರ್ಕಾರದ ಜವಾಬ್ದಾರಿ ಎಂದು ತಿಳಿಸಿದರು.



ಗ್ರಾಮೀಣ ಭಾಗದಲ್ಲಿ ಅನೇಕ ಪ್ರತಿಭಾವಂತ ಕ್ರೀಡಾಪಟುಗಳಿದ್ದು, ಅವರಿಗೆ ಸೂಕ್ತ ತರಬೇತಿ, ಆರ್ಥಿಕ ನೆರವು ಮತ್ತು ಸ್ಪರ್ಧಾತ್ಮಕ ಅವಕಾಶಗಳನ್ನು ಒದಗಿಸಿದರೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಅಲ್ಲದೆ, ರಾಜ್ಯದ ಸಾಂಪ್ರದಾಯಿಕ ಕ್ರೀಡೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮ ರೂಪಿಸಬೇಕು.
■ **ಡಾ.ಜಿ.ಪರಮೇಶ್ವರ್**, ಉಪಮುಖ್ಯಮಂತ್ರಿ

ಭಕ್ತರಿಗೆ ದೇವಸ್ಥಾನದಲ್ಲಿ ಸೌಲಭ್ಯ ಕಲ್ಪಿಸಿ: ಮುಜರಾಯಿ ಇಲಾಖೆಯ ಆಡಳಿತಾತ್ಮಕ ವಿಚಾರಗಳ ಕುರಿತು ಸಮಗ್ರವಾಗಿ ಪರಿಶೀಲನೆ ನಡೆಸಿದರು. ರಾಜ್ಯದ ಮುಜರಾಯಿ ಇಲಾಖೆಗೆ ಒಳಪಡುವ ದೇವಸ್ಥಾನಗಳ ನಿರ್ವಹಣೆ, ಭಕ್ತರಿಗೆ ಒದಗಿಸಲಾಗುತ್ತಿರುವ ಸೌಕರ್ಯಗಳು ಹಾಗೂ ಇಲಾಖೆಯ ಕಾರ್ಯಕ್ಷಮತೆಯನ್ನು ಮತ್ತಷ್ಟು ಸುಧಾರಿಸಬೇಕು. ಖಾಲಿ ಇರುವ 235 ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪ್ರಾರಂಭಿಸಬೇಕು. ಈ ನಿಟ್ಟಿನಲ್ಲಿ ಇಲಾಖೆಯ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ನಿಗದಿತ ಸಮಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಂದಾಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಕುಮಾರ್, ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ನಿರ್ದೇಶಕ ಬಸವರಾಜೇಂದ್ರ ಹಾಗೂ ಮುಜರಾಯಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೋದಿ ಯಶಸ್ಸಿಗೆ ಇಂದು ರಾಜ್ಯದೆಲ್ಲೆಡೆ ವಿಶೇಷ ಪೂಜೆ

• ಬೆಂಗಳೂರು: ಪ್ರಧಾನಮಂತ್ರಿ ಮೋದಿ ಅವರು ಚುನಾಯಿತ ಪ್ರಧಾನಿಗಳಾಗಿ ಕಳೆದ 12 ವರ್ಷಗಳಿಂದ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಜೂ. 10ರಂದು ಇಡೀ ರಾಜ್ಯದಾದ್ಯಂತ ಎಲ್ಲ ದೇವಸ್ಥಾನಗಳಲ್ಲಿ ಮೋದಿ ಅವರ ಆಯುಸ್ಸು, ಆರೋಗ್ಯ ವೃದ್ಧಿಗಾಗಿ ಪೂಜೆ ನೆರವೇರಿಸಲಾಗುವುದೆಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ತಿಳಿಸಿದ್ದಾರೆ.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮಲ್ಲೇಶ್ವರದಲ್ಲಿ ಪೂಜೆ ನೆರವೇರಿಸಲಿದ್ದಾರೆ. ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಉಪಸ್ಥಿತರಿರುವರು. ರಾಜ್ಯ ಉಸ್ತುವಾರಿ ಡಾ.ರಾಧಾ ಮೋಹನ್ ದಾಸ್ ಅಗ್ರವಾಲ್ ಅವರು ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ, ಸಹ ಉಸ್ತುವಾರಿ ಸುಧಾಕರ ರೆಡ್ಡಿ ಮಲ್ಲೇಶ್ವರದಲ್ಲಿ ಪೂಜೆ ನೆರವೇರಿಸಲಿದ್ದಾರೆ. ವಿಪಕ್ಷ ನಾಯಕ ಆರ್.ಅಶೋಕ ಬನಶಂಕರಿಯಲ್ಲಿ ಪೂಜೆ ಸಲ್ಲಿಸುವರು ಎಂದರು.

ಮೋದಿ ಅವರು 4,398 ದಿನಗಳ ಯಶಸ್ವಿ ಆಡಳಿತದ ಮೂಲಕ ದೇಶದ ಜನರ ಸೇವೆ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಆಯುಸ್ಸು, ಆರೋಗ್ಯ ವೃದ್ಧಿಗಾಗಿ ಪೂಜೆ ನಡೆಸಲಾಗುತ್ತಿದೆ. ಶಾಸಕ ಗೋಪಾಲಯ್ಯ ಅವರು ಮಹಾಲಕ್ಷ್ಮಿ ಲೇಔಟ್‌ನ ಶ್ರೀ ವೀರಾಂಜನೇಯ ದೇವಸ್ಥಾನದಲ್ಲಿ, ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಶಾಂತಿನಗರ ಕೆಂಪಮ್ಮ ದೇವಸ್ಥಾನದಲ್ಲಿ ಪೂಜೆಯಲ್ಲಿ ಭಾಗವಹಿಸುವರು ಎಂದು ತಿಳಿಸಿದ್ದಾರೆ.

ಇಂದು ಮುಖ್ಯಮಂತ್ರಿ ಡಿಕೆಶಿ ದಿಲ್ಲಿಗೆ

• ಬೆಂಗಳೂರು: ಎರಡು ದಿನಗಳ ಕಾಲ ಸಿಎಂ ಡಿ.ಕೆ ಶಿವಕುಮಾರ್, ಡಿಸಿಎಂ ಪರಮೇಶ್ವರ್ ದಿಲ್ಲಿಗೆ ಪ್ರಯಾಣಿಸುತ್ತಿದ್ದು, ಬುಧವಾರ ಬೆಳಗ್ಗೆ ಬೆಂಗಳೂರಿನಿಂದ ತೆರಳಲಿರುವ ಅವರು, ಮಧ್ಯಾಹ್ನ ಎಐಸಿಸಿ ನಾಯಕರನ್ನು ಭೇಟಿ ಮಾಡಲಿದ್ದು, ಬಳಿಕ ಎಐಸಿಸಿ, ಎನ್‌ಎಸ್‌ಯುಐ, ಇಂಡಿಯನ್ ಯೂತ್ ಕಾಂಗ್ರೆಸ್ ಮತ್ತು ಆಲ್ ಇಂಡಿಯಾ ಮಹಿಳಾ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಲಿದ್ದಾರೆ. ಸಂಜೆ 7.30ಕ್ಕೆ ಹಿರಿಯ ಐಎಸ್ ಅಧಿಕಾರಿಗಳ ಜತೆಗೆ ಕರ್ನಾಟಕ ಭವನದಲ್ಲಿ ಭೋಜನ ಕೂಟದಲ್ಲಿ ಭಾಗಿಯಾಗಲಿರುವ ಅವರು, ಗುರುವಾರ ನೀತಿ ಆಯೋಗದ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ದೇವೇಗೌಡರ ಬಗ್ಗೆ ಕಾಳಜಿ ಹಾಸ್ಯಾಸ್ಪದ: ಬಿವೈವಿ

ಕಾಂಗ್ರೆಸ್‌ನ ಮೊಸಳೆ ಕಣ್ಣೀರು ಬೇಡ

• ಬೆಂಗಳೂರು: ದೇಶದ ಪ್ರಧಾನಿಯಾಗಿದ್ದ ಎಚ್.ಡಿ. ದೇವೇಗೌಡ ಅವರನ್ನು ಆ ಹುದ್ದೆಯಿಂದ ಕೆಳಗಿಸಿದ ಕುಖ್ಯಾತಿಯಿರುವ ಕಾಂಗ್ರೆಸ್‌ನವರು ಅವರ ಕುರಿತು ಮೊಸಳೆ ಕಣ್ಣೀರು ಸುರಿಸುವ ಅವಶ್ಯಕತೆ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಕರ್ನಾಟಕದ ಕಾಂಗ್ರೆಸ್ ಪಕ್ಷದ ಉಸ್ತುವಾರಿ ಸುರ್ಜೇವಾಲ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ದೇವೇಗೌಡರ ಕುರಿತು ಮೊಸಳೆ ಕಣ್ಣೀರು ಸುರಿಸುವ ಅಗತ್ಯವಿಲ್ಲ ಎಂದಿದ್ದಾರೆ.

ಪ್ರಧಾನಮಂತ್ರಿ ಸ್ಥಾನವನ್ನು ಅಲಂಕರಿಸಿ, ಹೆಮ್ಮೆಯ ಕನ್ನಡಿಗ ಎನಿಸಿಕೊಂಡಿರುವ ಎಚ್.ಡಿ. ದೇವೇಗೌಡ ಅವರನ್ನು ಪ್ರಧಾನಿ ಪದವಿಯಿಂದ ಕೆಳಗಿಳಿಸಿದ ಕುಖ್ಯಾತಿ ಕಾಂಗ್ರೆಸ್ ಪಕ್ಷದ ಮೇಲಿರುವುದನ್ನು ಕಾಂಗ್ರೆಸ್ ಮುಂದಾಳುಗಳು ಮರೆತಂತಿದೆ. ಜನತಾದಳ ಪಕ್ಷವನ್ನು ಇಬ್ಭಾಗ ಮಾಡಲು ಯತ್ನಿಸಿದ್ದು ಕಾಂಗ್ರೆಸ್. ಈ ನೋವು ದೇವೇಗೌಡರನ್ನು ರಾಜಕೀಯ ಜೀವನದುದ್ದಕ್ಕೂ ಕಾಡಿದೆ. ಇಷ್ಟಾಗಿಯೂ ಕೊಳಕು ರಾಜಕಾರಣ ಮಾಡುವುದನ್ನು ನಿಲ್ಲಿಸದ ಕಾಂಗ್ರೆಸ್ಸಿಗರು, ದೇವೇಗೌಡರ ಕುರಿತು ಕೃತಕ ಕಾಳಜಿಯ ಮಾತನಾಡುತ್ತಿರುವ ಪರಿ ಹಾಸ್ಯಾಸ್ಪದವಾಗಿದೆ ಎಂದು ಟೀಕಿಸಿದ್ದಾರೆ.

ಬಿಜೆಪಿಯು ದೇವೇಗೌಡರನ್ನು ಅತ್ಯಂತ ಗೌರವದಿಂದ ನಡೆಸಿಕೊಂಡಿದೆ. ಭಾರತದ ಸಮಗ್ರತೆ ಉಳಿಯಬೇಕಾದರೆ, ಅಭಿವೃದ್ಧಿ ಹೊಂದಬೇಕಾದರೆ ಅದು ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಿಂದ ಮಾತ್ರ ಸಾಧ್ಯ ಎಂಬ ನಂಬಿಕೆಯಿಂದ ದೇವೇಗೌಡ ಅವರು ಬಿಜೆಪಿಯನ್ನು ಬೆಂಬಲಿಸಿ, ಎನ್‌ಡಿಎಗೆ ತಮ್ಮ ಜೆಡಿಎಸ್ ಪಕ್ಷವನ್ನು ಸೇರಿಸಿದ್ದಾರೆ. ಇದನ್ನು ಕಂಡು ಸಹಿಸಲಾಗದ ಸ್ಥಿತಿಯಲ್ಲಿರುವ ಕಾಂಗ್ರೆಸ್ಸಿಗರು ದೇವೇಗೌಡರ ಹೆಸರನ್ನು ಬಳಸಿಕೊಂಡು ರಾಜಕಾರಣ ಮಾಡಲು ಹೊರಟಿರುವುದು ನಾಚಿಗೆಗೇಡಿತನದ ಪರಮಾವಧಿ ಎಂದು ಆಕ್ಷೇಪಿಸಿದ್ದಾರೆ.

ಬಿರುಕು ಸೃಷ್ಟಿಗೆ ಕೈ ಹುನ್ನಾರ

ಪುಟ ೧➡ **ಅಧಿಕಾರಕ್ಕಾಗಿ ಇನ್ನೊಬ್ಬರ ಮನೆ ಬಾಗಿಲಿಗೆ ಹೋಗಿಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟು ಬಂದರು ಎಂದರು. ಕಳೆದ ಬಾರಿ ದೇವೇಗೌಡರ ಅವಿರೋಧ ಆಯ್ಕೆಗೆ ಕಾಂಗ್ರೆಸ್ ಬೆಂಬಲ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಎಚ್‌ಡಿಕೆ, ದೇವೇಗೌಡರ ವಿರುದ್ಧ ಇನ್ನೊಬ್ಬ ಅಭ್ಯರ್ಥಿ ನಿಲ್ಲುವ ಅವಕಾಶ ಇರಲಿಲ್ಲ. ದೇವೇಗೌಡರು ಕಾಂಗ್ರೆಸ್ ಬೆಂಬಲದಿಂದ ರಾಜ್ಯಸಭೆಗೆ ಹೋಗಲಿಲ್ಲ. ಕಳೆದ ಬಾರಿ ದೇವೇಗೌಡರನ್ನು ರಾಜ್ಯಸಭೆಗೆ ಅಭ್ಯರ್ಥಿ ಮಾಡಿ, ನಾವು ಅಭ್ಯರ್ಥಿ ಹಾಕಲ್ಲ ಎಂದು ಯಡಿಯೂರಪ್ಪನವರೇ ಕರೆ ಮಾಡಿ ತಿಳಿಸಿದರು. ಅದಾದ ಬಳಿಕ ನಾನು ಒತ್ತಾಯ ಮಾಡಿ ಅಭ್ಯರ್ಥಿ ಮಾಡಿದ್ದು ಎಂದು ಹೇಳಿದರು. ದೇವೇಗೌಡರಿಗೆ ಟಿಕೆಟ್ ತಪ್ಪಿಸಿ ಒಕ್ಕಲಿಗರಿಗೆ ಬಿಜೆಪಿ ಅನ್ಯಾಯ ಮಾಡಿದೆ ಎಂಬ ಕಾಂಗ್ರೆಸ್ ಆರೋಪದಲ್ಲಿ ಹುರುಳಿಲ್ಲ. ಒಕ್ಕಲಿಗ ಮುಖ್ಯಮಂತ್ರಿ ಇರಬೇಕಾದರೆ ರಾಜ್ಯಸಭೆ ತಗೊಂಡು ಏನ್ಮಾಡ್ತೀರಾ ಎಂದು ಪ್ರಶ್ನಿಸಿದರು.**

ಅವರ ಹಿರಿತನ, ಸೇವೆ ಉಲ್ಲೇಖಿಸಿ ಸಂಸತ್ತಿನಲ್ಲಿ ಸ್ವತಃ ಪ್ರಧಾನ ಮಂತ್ರಿಗಳೇ ಭಾವುಕವಾಗಿ ಮಾತನಾಡಿ ಅವರ ಕೊಡುಗೆ, ಸಾಧನೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ರಾಷ್ಟ್ರವನ್ನು ಮುನ್ನಡೆಸುವ ನಿಟ್ಟಿನಲ್ಲಿ ಅವರ ಮಾರ್ಗದರ್ಶನ ಸದಾ ನಮಗೆ ಬೇಕೆಂದು ಹೇಳಿದ್ದಾರೆ. ಈ ನಿಟ್ಟಿನಲ್ಲಿ ಅತ್ಯುತ್ತಮ ರಾಜಕೀಯ ಹಾಗೂ ವ್ಯಕ್ತಿಗತ ಗೌರವಗಳ ಬಾಂಧವ್ಯವಿರುವ ದೇವೇಗೌಡರೊಂದಿಗಿನ ಸಂಬಂಧಕ್ಕೆ ಹುಳಿ ಹಿಂಡುವ ಮಾತುಗಳು ಕಾಂಗ್ರೆಸ್ಸಿಗರ ವಿಕೃತ ನಡೆ ಎನ್ನುವುದನ್ನು ಕರ್ನಾಟಕದ ಜನತೆ ಅರ್ಥೈಸಿಕೊಳ್ಳದಷ್ಟು ಮುಗ್ಧರಲ್ಲ ಎನ್ನುವ ತಿಳಿವಳಿಕೆ ಕಾಂಗ್ರೆಸ್ಸಿಗರಿಗಿರಲಿ ಎಂದು ತಿಳಿಸಿದ್ದಾರೆ.

ಭಾರತದಿಂದ 12 ಅಣ್ವಸ್ತ್ರ ನಿಯೋಜನೆ: ಸಿಪ್ರಿ ವರದಿ

ಪುಟ ೧➡ **ದಾಸ್ತಾನು ಹೆಚ್ಚಳ:** ಭಾರತದ ಶಸ್ತ್ರಾಗಾರವನ್ನು ಈಗ ಕೇವಲ ದಾಸ್ತಾನು ಎಂದು ಪರಿಗಣಿಸುವ ಬದಲಿಗೆ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ ಎಂದು ವರ್ಗೀಕರಿಸಲಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಭಾರತದ ಅಣ್ವಸ್ತ್ರಗಳ ಸಂಖ್ಯೆಯಲ್ಲಿ ಸಣ್ಣ ಪ್ರಮಾಣದ ಏರಿಕೆಯಾಗಿದ್ದು, ಜನವರಿ ಹೊತ್ತಿಗೆ ಈ ದಾಸ್ತಾನು ಸುಮಾರು 190ಕ್ಕೆ ತಲುಪಿದೆ ಎಂದು ವರದಿ ಅಂದಾಜಿಸಿದೆ. ಈ ಆಯುಧಗಳನ್ನು ನೆಲದಿಂದ ಉಡಾಯಿಸಬಹುದಾದ ಕ್ಷಿಪಣಿಗಳು, ಯುದ್ಧವಿಮಾನಗಳು ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿಗಳಿಗೆ (ಎಸ್‌ಎಸ್‌ಬಿಎನ್), ಅಂದರೆ ತ್ರಿವಳಿ ರಕ್ಷಣಾ ವ್ಯವಸ್ಥೆಗೆ ನಿಯೋಜಿಸಲಾಗಿದೆ.

ಶಾಂತಿಕಾಲದ ಸನ್ನದ್ಧತೆ: ಭಾರತ ಇತ್ತೀಚೆಗೆ ಕ್ಷಿಪಣಿಗಳನ್ನು ಕ್ಯಾನಿಸ್ಟರ್‌ಗಳಲ್ಲಿ (ವಿಶೇಷ ಕವಚ) ಇರಿಸಲು ಮತ್ತು ಸಮುದ್ರದಲ್ಲಿ ಗಸ್ತುಗಳನ್ನು ನಡೆಸಲು ಮುಂದಾಗಿದೆ. ಭೂಗತ ಕ್ಷಿಪಣಿ ಸೈಲೋಗಳು ಮತ್ತು ಹೊಸ ಪರಮಾಣು ಜಲಾವೃತ ನೌಕೆಗಳಲ್ಲಿ ಸದಾ ಸಿದ್ಧವಿರುವ ಶಸ್ತ್ರಾಸ್ತ್ರಗಳನ್ನು ಇರಿಸುತ್ತಿರುವುದು ಶಾಂತಿಕಾಲದಲ್ಲೂ ಸನ್ನದ್ಧತೆ ಹೆಚ್ಚಿಸುವ ಸೂಚನೆಯಾಗಿದೆ.

ಬದಲಾಗದ ರಕ್ಷಣಾ ಸಿದ್ಧಾಂತ: ಈ ಸಾಂಸ್ಥಿಕ ಬದಲಾವಣೆಗಳ ಹೊರತಾಗಿಯೂ ಭಾರತ ತನ್ನ 'ಮೊದಲು ಬಳಸುವುದಿಲ್ಲ' ಎಂಬ ಪರಮಾಣು ನೀತಿಗೆ ಬದ್ಧವಾಗಿದೆ. ಯಾವುದೇ ದೇಶದ ವಿರುದ್ಧ ಮೊದಲ ದಾಳಿ ನಡೆಸದಿರಲು ಬದ್ಧವಾಗಿರುವ ಭಾರತ, ತನ್ನ ಮೇಲಾಗುವ ಪರಮಾಣು ದಾಳಿಗೆ ಪ್ರತೀಕಾರ ತೀರಿಸಿಕೊಳ್ಳಲು ಮಾತ್ರ ಇದನ್ನು ಬಳಸಲಿದೆ. ಈ ಸಾಮರ್ಥ್ಯ ಕೇವಲ ದಾಳಿ ತಡೆಯುವ ಉದ್ದೇಶ ಹೊಂದಿದೆಯೇ ಹೊರತು ಶಸ್ತ್ರಾಸ್ತ್ರ ಸ್ಪರ್ಧೆಗೆ ಅಲ್ಲ ಎಂದು ವರದಿ ಸ್ಪಷ್ಟಪಡಿಸಿದೆ.

ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ

ಪುಟ ೧➡ ಆದರೆ ಅಧಿಕಾರಿಗಳು ತಮ್ಮ ನಿರ್ಧಾರವನ್ನು ಬದಲಾಯಿಸಲಿಲ್ಲ. ಹೀಗಾಗಿ, ಆಯೋಗದ ಕಚೇರಿ ಮುಂದೆ ಕೈ ನಾಯಕರು ಪ್ರತಿಭಟನೆ ನಡೆಸಿದ್ದಾರೆ. ಕಾಂಗ್ರೆಸ್ ನಾಯಕರು, ಪ್ರಕರಣದ ಕುರಿತು ಕೇವಲ ನೋಟಿಸ್ ನೀಡಿರುವ ಹಂತದಲ್ಲಿದ್ದಾಗ ಅದನ್ನು ಬಹಿರಂಗಪಡಿಸುವ ಕಡ್ಡಾಯ ನಿಯಮ ಇಲ್ಲ ಎಂದು ವಾದಿಸಿದ್ದಾರೆ. ಆದಾಗ್ಯೂ, ಚುನಾವಣಾಧಿಕಾರಿಗಳು ಮಾಹಿತಿಯನ್ನು ಮರೆಮಾಚಲಾಗಿದೆ ಎಂಬ ಆಕ್ಷೇಪವನ್ನು ಪರಿಗಣಿಸಿ ನಾಮಪತ್ರ ತಿರಸ್ಕರಿಸಿದ್ದಾರೆ. ಈ ಬೆಳವಣಿಗೆಯಿಂದ ಮಧ್ಯಪ್ರದೇಶದ ರಾಜ್ಯಸಭೆ ಚುನಾವಣೆ ಇನ್ನಷ್ಟು ಕುತೂಹಲ ಕೆರಳಿಸಿದ್ದು, ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಹೊಸ ರಾಜಕೀಯ ವಾಕ್ಸಮರಕ್ಕೂ ಕಾರಣವಾಗಿದೆ. ನಾಮಪತ್ರ ತಿರಸ್ಕಾರದ ವಿರುದ್ಧ ಕಾನೂನು ಹೋರಾಟ ನಡೆಸುವ ಸಾಧ್ಯತೆಯನ್ನು ಕಾಂಗ್ರೆಸ್ ಪರಿಶೀಲಿಸುತ್ತಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಹತಾಶ ಪಾಕ್‌ನಿಂದ ಪಿಒಕೆನಲ್ಲಿ ಕ್ರೌರ್ಯ

ಪುಟ ೧➡ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಪೊಲೀಸ್ ದೌರ್ಜನ್ಯ ಮಿತಿಮೀರಿದ್ದು, ವರದಿಗಳನ್ನು ನೋಡಿದ್ದೇವೆ. ವರದಿಗಳ ಪ್ರಕಾರ, ಹಲವು ಅಮಾಯಕ ನಾಗರಿಕರು ಮತ್ತು ಪ್ರತಿಭಟನಾಕಾರರು ಗುಂಡಿನ ದಾಳಿಯಲ್ಲಿ ಕೊಲ್ಲಲ್ಪಟ್ಟಿದ್ದಾರೆ, ಇನ್ನೂ ಹಲವರು ಗಾಯಗೊಂಡಿದ್ದಾರೆಂಬ ಸತ್ಯವನ್ನು ಜೈಸ್ವಾಲ್ ಉಲ್ಲೇಖಿಸಿದ್ದಾರೆ.

ಪಾಕ್ ರಾಜಕೀಯ ಕುತಂತ್ರ: ಪಿಒಕೆ ಮೇಲೆ ರಾಜಕೀಯ ನಿಯಂತ್ರಣ ಹೇರುವ ಉದ್ದೇಶದಿಂದ ಜುಲೈ 27ರಂದು ನಡೆಯಲಿರುವ ಶಾಸನಸಭೆ ಚುನಾವಣೆಯಲ್ಲಿ ನಿರಾಶ್ರಿತರಿಗೆ 12 ಸ್ಥಾನಗಳನ್ನು ಕಾಯ್ದಿರಿಸಲು ಪಾಕ್ ಯೋಜನೆ ಹಾಕಿತ್ತು. ಪಿಒಕೆನಲ್ಲಿ ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ಜೆಎಎಸಿಯನ್ನೇ ಭಯೋತ್ಪಾದಕ ಸಂಘಟನೆಯೆಂದು ಘೋಷಿಸಿದ ಪಾಕ್ ಸರ್ಕಾರ, ಜೂ.6ರಂದು ಸಂಘಟನೆಯ ಮೇಲೆ ನಿಷೇಧ ಹೇರಿತ್ತು. ಜೂ.7ರಿಂದ ಜೆಎಎಸಿ ಸದಸ್ಯರು ಚುನಾವಣೆ ಹಿನ್ನೆಲೆಯಲ್ಲಿ ಬೀದಿ ಗಿಳಿದು ಪ್ರತಿಭಟನೆ ಆರಂಭಿಸಿದ್ದು, ಹಿಂಸಾಚಾರದಲ್ಲಿ 30 ಪ್ರತಿಭಟನಾಕಾರರು ಮೃತಪಟ್ಟಿದ್ದು, 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಪರಿವರ್ತನೆಯ ದಶಕ

ಪುಟ ೧➡ 'ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣ' ಎಂಬ ಧ್ಯೇಯದೊಂದಿಗೆ ಸರ್ಕಾರ ಕಾರ್ಯನಿರ್ವಹಿಸಿದ್ದು, ದೇಶದ ಪ್ರತಿ ವರ್ಗದ ಜನರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರಲು ಪ್ರಯತ್ನಿಸಿದೆ ಎಂದು ಹೇಳಿದರು. ಕಳೆದ 12 ವರ್ಷಗಳಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿದ್ದು, ವಿಶ್ವದ ಪ್ರಮುಖ ಆರ್ಥಿಕ ಶಕ್ತಿಗಳ ಸಾಲಿನಲ್ಲಿ ಸ್ಥಾನ ಗಿಟ್ಟಿಸಿಕೊಂಡಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕೋಟ್ಯಂತರ ಜನರಿಗೆ ಉಚಿತ ಆಹಾರ ಧಾನ್ಯ ವಿತರಣೆ, ಪ್ರಧಾನ ಮಂತ್ರಿ ಜನಧನ್ ಯೋಜನೆ ಮೂಲಕ ಬ್ಯಾಂಕಿಂಗ್ ಸೇವೆಗಳ ವ್ಯಾಪಕ ವಿಸ್ತರಣೆ, ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ಆರೋಗ್ಯ ರಕ್ಷಣೆ, ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ ಮನೆಗಳ ನಿರ್ಮಾಣ ಹಾಗೂ ಜಲ್ ಜೀವನ್ ಮಿಷನ್ ಮೂಲಕ ಗ್ರಾಮೀಣ ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಒದಗಿಸಿರುವುದನ್ನು ಪ್ರಧಾನಿ ಪ್ರಮುಖ ಸಾಧನೆಗಳಾಗಿ ಉಲ್ಲೇಖಿಸಿದರು.

ಭಾರೀ ತೆರಿಗೆ ವಿನಾಯಿತಿ: ಮಧ್ಯಮ ವರ್ಗದ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಹಲವು ನಿರ್ಧಾರಗಳನ್ನು ಕೈಗೊಂಡಿದೆ ಎಂದು ಹೇಳಿದ ಮೋದಿ, ಹೊಸ ತೆರಿಗೆ ವ್ಯವಸ್ಥೆಯಲ್ಲಿ ವಾರ್ಷಿಕ 12.75 ಲಕ್ಷ ರೂ.ವರೆಗೆ ಆದಾಯ ಹೊಂದಿರುವವರಿಗೆ ಪರಿಣಾಮಕಾರಿ ತೆರಿಗೆ ವಿನಾಯಿತಿ ನೀಡಿರುವುದನ್ನು ವಿಶೇಷವಾಗಿ ಪ್ರಸ್ತಾಪಿಸಿದರು. ಇದರಿಂದ ಮಧ್ಯಮ ವರ್ಗದ ಕುಟುಂಬಗಳ ಉಳಿತಾಯ ಹೆಚ್ಚಾಗಲಿದ್ದು, ದೇಶೀಯ ಬಳಕೆ ಮತ್ತು ಹೂಡಿಕೆ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ ಎಂದರು. ಡಿಜಿಟಲ್ ಇಂಡಿಯಾ ಅಭಿಯಾನ ದೇಶದ ಆಡಳಿತ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತಂದಿದೆ ಎಂದು ಪ್ರಧಾನಿ ಹೇಳಿದರು. ಯುಪಿಐ ಆಧಾರಿತ ಡಿಜಿಟಲ್ ವಹಿವಾಟು ವಿಶ್ವದ ಗಮನ ಸೆಳೆದಿದ್ದು, ಇಂದು ಭಾರತ ಜಾಗತಿಕ ಡಿಜಿಟಲ್ ಪಾವತಿ ಕ್ಷೇತ್ರದಲ್ಲಿ ಮುಂಚೂಣಿಯ ರಾಷ್ಟ್ರವಾಗಿ ಹೊರಹೊಮ್ಮಿದೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಡಿಜಿಟಲ್ ಸೇವೆ ವಿಸ್ತರಿಸಿರುವುದರಿಂದ ಪಾರದರ್ಶಕತೆ ಮತ್ತು ಸುಗಮ ಸೇವಾ ವಿತರಣೆಗೆ ನೆರವಾಗಿದೆ ಎಂದು ಅವರು ತಿಳಿಸಿದರು.

ಭರಪೂರ ಮೂಲಸೌಕರ್ಯ

ಪುಟ ೧➡ **ಹೊಸ ರಾಷ್ಟ್ರೀಯ ಹೆದ್ದಾರಿಗಳು, ವಂದೇ ಭಾರತ್ ರೈಲುಗಳ ಜಾಲ, ಆಧುನಿಕ ವಿಮಾನ ನಿಲ್ದಾಣಗಳು, ಬಂದರುಗಳ ವಿಸ್ತರಣೆ ಹಾಗೂ ವೇಗದ ಸಂಪರ್ಕ ವ್ಯವಸ್ಥೆಗಳು ದೇಶದ ಆರ್ಥಿಕ ಬೆಳವಣಿಗೆಗೆ ಬಲ ತುಂಬಿವೆ. ಈ ಯೋಜನೆಗಳು ಉದ್ಯೋಗ ಸೃಷ್ಟಿ ಹಾಗೂ ಹೂಡಿಕೆ ಆಕರ್ಷಣೆಯಲ್ಲಿಯೂ ಮಹತ್ವದ ಪಾತ್ರ ವಹಿಸಿವೆ ಎಂದು ಅವರು ಹೇಳಿದರು. ಮಹಿಳೆಯರ ಸಬಲೀಕರಣಕ್ಕೂ ಸರ್ಕಾರ ವಿಶೇಷ ಆದ್ಯತೆ ನೀಡಿದೆ ಎಂದು ಮೋದಿ ಹೇಳಿದರು. ಉಜ್ವಲಾ ಯೋಜನೆ, ಮಾತೃತ್ವ ಸೌಲಭ್ಯಗಳ ವಿಸ್ತರಣೆ, ಮಹಿಳಾ ಸ್ವಸಹಾಯ ಸಂಘಗಳಿಗೆ ನೆರವು ಹಾಗೂ ಮಹಿಳಾ ಮೀಸಲಾತಿ ಮಸೂದೆ ಜಾರಿಯಂತಹ ಕ್ರಮಗಳು ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿವೆ ಎಂದು ಅಭಿಪ್ರಾಯಪಟ್ಟರು.**

ವಾರಕ್ಕೊಂದು ದಿನ ಮೌಲ್ಯಶಿಕ್ಷಣ

ಪುಟ ೧➡ ಕಳೆದ ಶೈಕ್ಷಣಿಕ ವರ್ಷದ ದ್ವಿತೀಯಾರ್ಧದಲ್ಲಿ ಪ್ರಾಯೋಗಿಕವಾಗಿ ಆರಂಭಗೊಂಡಿದ್ದ ಮೌಲ್ಯ ಶಿಕ್ಷಣಕ್ಕೆ ಈ ವರ್ಷ ಮತ್ತಷ್ಟು ಬಲ ನೀಡಲಾಗಿದ್ದು, ಈ ಹಿಂದೆ ಡಿಜಿಟಲ್ ಪುಸ್ತಕಗಳ ಮೂಲಕ ಬೋಧನೆ ನಡೆದಿದ್ದರೆ, ಇದೀಗ ಮುದ್ರಿತ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತಿದೆ. ಶಾಲಾ ವೇಳಾಪಟ್ಟಿಯಲ್ಲಿಯೇ ಪ್ರತ್ಯೇಕ ಅವಧಿಯನ್ನು ಮೀಸಲಿಡುವ ಮೂಲಕ ಇದನ್ನು ಶಿಕ್ಷಣದ ಅವಿಭಾಜ್ಯ ಅಂಗವನ್ನಾಗಿ ರೂಪಿಸಲಾಗಿದೆ.

ಮೌಲ್ಯ ಶಿಕ್ಷಣವನ್ನು ಪ್ರತ್ಯೇಕ ವಿಷಯವನ್ನಾಗಿ ಬೋಧಿಸುವ ಬದಲಿಗೆ ಗಣಿತ, ವಿಜ್ಞಾನ ಮತ್ತು ಸಮಾಜವಿಜ್ಞಾನ ಪಠ್ಯಗಳೊಂದಿಗೆ ಸೇರಿರುವುದು ಈ ಯೋಜನೆಯ ವಿಶೇಷತೆ. ಉದಾಹರಣೆಗೆ ಭಾಷಾ ಪಾಠಗಳಲ್ಲಿ ಗೌರವ ಮತ್ತು ವೈವಿಧ್ಯತೆ ಕುರಿತು ಚಟುವಟಿಕೆಗಳನ್ನು ಸೇರಿಸಲಾಗಿದೆ. ಗಣಿತದಲ್ಲಿ ಹೊಣೆಗಾರಿಕೆ ಎಂಬ ಉಪಮೌಲ್ಯದೊಂದಿಗೆ ಜೀವನ ಮೌಲ್ಯಗಳನ್ನು ಸೇರ್ಪಡಿಸುವ ಚಟುವಟಿಕೆಗಳು ಹೊಂದಿವೆ. ಇದರೊಂದಿಗೆ ವಿದ್ಯಾರ್ಥಿಗಳಲ್ಲಿ ಮೌಲ್ಯ ಶಿಕ್ಷಣದಿಂದ ಉಂಟಾಗುವ ಸಕಾರಾತ್ಮಕ ವರ್ತನಾ ಬದಲಾವಣೆಗಳನ್ನು ಅವಲೋಕಿಸಿ ಅದನ್ನು ಸಮಗ್ರ ಪ್ರಗತಿ ಪತ್ರದಲ್ಲಿ ದಾಖಲಿಸಬೇಕಿದೆ.

ಏಕೆ ಅಗತ್ಯವಾಯಿತು ಮೌಲ್ಯ ಶಿಕ್ಷಣ?: ಇತ್ತೀಚಿನ ವರ್ಷಗಳಲ್ಲಿ ಶಾಲಾ ಹಂತದಲ್ಲಿಯೇ ಶಿಸ್ತು ಸಮಸ್ಯೆಗಳು, ಸೈಬರ್ ಕಿರುಕುಳ, ಮಾದಕ ವಸ್ತುಗಳ ಆಕರ್ಷಣೆ, ಹಿಂಸಾತ್ಮಕ ಪ್ರವೃತ್ತಿಗಳು ಮತ್ತು ಸಾಮಾಜಿಕ ಜವಾಬ್ದಾರಿಯ ಕೊರತೆ ಕಂಡುಬರುತ್ತಿದೆ. ಕೇವಲ ಶೈಕ್ಷಣಿಕ ಸಾಧನೆಗಳಿಂದ ಸಮಾಜಕ್ಕೆ ಉತ್ತಮ ನಾಗರಿಕರನ್ನು ರೂಪಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ. ಅದರೊಂದಿಗೆ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕೂಡ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆ, ವ್ಯಕ್ತಿತ್ವ ವಿಕಸನ ಮತ್ತು ಮೌಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಈ ಶಿಫಾರಸುಗಳ ಅನುಸಾರ ರಾಜ್ಯ ಸರ್ಕಾರವೂ ಮೌಲ್ಯ ಶಿಕ್ಷಣವನ್ನು ಶಿಕ್ಷಣದ ಅವಿಭಾಜ್ಯ ಅಂಗವನ್ನಾಗಿ ಮಾಡಲು ಮುಂದಾಗಿದೆ.

234 ಚಟುವಟಿಕೆಗಳ ಮೌಲ್ಯ ಶಿಕ್ಷಣ ಬೋಧನೆ: ಮೌಲ್ಯ ಶಿಕ್ಷಣದ ಅಡಿಯಲ್ಲಿ ಗೌರವ, ಪ್ರಾಮಾಣಿಕತೆ ಮತ್ತು ನಿಷ್ಠೆ, ಭಾವನಾತ್ಮಕ ಮತ್ತು ಸ್ಥಿತಿಸ್ಥಾಪಕತ್ವ, ಅನುಭೂತಿ, ವೈವಿಧ್ಯತೆ ಸಮತೆ ಮತ್ತು ಒಳಗೊಳ್ಳುವಿಕೆ, ಸುರಕ್ಷತೆ ಸೇರಿ ಒಟ್ಟು 10 ಬಹುಮುಖ್ಯ ಮೌಲ್ಯಗಳನ್ನು ಹೊಂದಿದೆ. ಈ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ಕಲಿಸಲು 234 ಚಟುವಟಿಕೆಗಳನ್ನು ರೂಪಿಸಲಾಗಿದೆ. ಪ್ರತಿಯೊಂದರ ಮೌಲ್ಯವನ್ನು ಹಲವು ಉಪಮೌಲ್ಯಗಳಾಗಿ ವಿಂಗಡಿಸಿ, ತರಗತಿವಾರು ಮತ್ತು ವಯೋಮಾನದ ಅನುಗುಣವಾಗಿ ಚಟುವಟಿಕೆಗಳನ್ನು ಸಿದ್ಧಪಡಿಸಲಾಗಿದೆ.

ಬಿಟ್‌ಕಾಯಿನ್: ನಲಪಾಡ್ ವಿರುದ್ಧ ಎಸ್‌ಐಟಿ ಚಾರ್ಜ್‌ಶೀಟ್

ಬೆಂಗಳೂರು: ತುಮಕೂರಿನ ಖಾಸಗಿ ಕಂಪನಿಯ ಬಿಟ್‌ಕಾಯಿನ್ ಕಳವು ಕೃತ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯಿಂದ ಯುವ ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್‌ಗೆ ಪಾಲು ಸಿಕ್ಕಿದೆ ಎಂದು ಎಸ್‌ಐಟಿ ಸಲ್ಲಿಸಿರುವ



ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದೆ. ಇದರಿಂದಾಗಿ ಮೊಹಮ್ಮದ್ ನಲಪಾಡ್‌ಗೆ ಸಂಕಷ್ಟ ಎದುರಾಗಿದೆ.

ಬಿಟ್ ಕಾಯಿನ್ ಪ್ರಕರಣದ ಸಂಬಂಧ ನ್ಯಾಯಾಲಯಕ್ಕೆ ವಿಶೇಷ ತನಿಖಾ ತಂಡ (ಎಸ್‌ಐಟಿ) ನಲಪಾಡ್ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ. ಈ ಆರೋಪ ಪಟ್ಟಿಯಲ್ಲಿ, ನಲಪಾಡ್ ಜೊತೆ ಅವರ ಆಪ್ತ ಸ್ನೇಹಿತರ ಹೆಸರೂ ಹಗರಣದಲ್ಲಿ ಪ್ರಸ್ತಾಪವಾಗಿದೆ. 2017ರಲ್ಲಿ ಬಿಟ್ ಕಾಯಿನ್ ಟ್ರೇಡಿಂಗ್ ಕಂಪನಿಯಾದ ತುಮಕೂರಿನ ಖಾಸಗಿ ಕಂಪನಿ ಶ್ರೀಕಿ ಗ್ಯಾಂಗ್ ದೋಚಿತ್ತು.

ಈ ಬಗ್ಗೆ ತುಮಕೂರಿನ ಹೊಸ ಬಡಾವಣೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣದ ತನಿಖೆ ಪೂರ್ಣಗೊಳಿಸಿದ ಎಸ್ ಐಟಿ ಅಧಿಕಾರಿಗಳು, ಕೆಲ ದಿನಗಳ ಹಿಂದೆ ಹ್ಯಾಕರ್ ಶ್ರೀಕಿ ಮತ್ತು ಆತನ ಸ್ನೇಹಿತ ರಾಬಿನ್ ವಂಡೇವಾಲಾ, ಮೊಹಮ್ಮದ್ ನಲಪಾಡ್ ಸೇರಿದ ಇತರರ ವಿರುದ್ಧ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದೆ ಎಂದು ತಿಳಿದು ಬಂದಿದೆ.

ಹಣ ವರ್ಗಾವಣೆ ಆರೋಪದಲ್ಲಿ ಜಾರಿ ನಿರ್ದೇಶನಾಲಯ (ಇಡಿ) ತನಿಖೆ ನಡೆಸುತ್ತಿದ್ದು, ಇತ್ತೀಚೆಗೆ ನಲಪಾಡ್ ಮನೆ ಮೇಲೆ ಈ ಸಂಬಂಧ ದಾಳಿಯೂ ನಡೆಸಿತು. ಇದರ ಬೆನ್ನಲ್ಲೇ ಎಸ್‌ಐಟಿ ಚಾರ್ಜ್ ಶೀಟ್ ಸಲ್ಲಿಸಿದೆ. ತುಮಕೂರಿನ ಖಾಸಗಿ ಕಂಪನಿಯ ಬಿಟ್ ಕಾಯಿನ್ ಕಳವು ಕೃತ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯಿಂದ ನಲಪಾಡ್‌ಗೆ ಪಾಲು ಸಿಕ್ಕಿದೆ ಎಂದು ಎಸ್‌ಐಟಿ ಉಲ್ಲೇಖಿಸಿದೆ.




ಭಾನುವಾರ ರಾತ್ರಿ ಹೃದಯಾಘಾತದಿಂದ ನಿಧನರಾದ ಎಐಸಿಸಿ ಕಾರ್ಯದರ್ಶಿ, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ಅವರಿಗೆ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅಂತಿಮ ನಮನ ಸಲ್ಲಿಸಲಾಯಿತು. ಈ ವೇಳೆ ಸಿಎಂ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ ಇದ್ದರು. ಸಂಜೆ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಜೂನ್‌ನಲ್ಲಿ ತುಂಬಿ ತುಳುಕುತ್ತಿದ್ದ ಹಾರಂಗಿ ಜಲಾಶಯ ಈಗ ಖಾಲಿ

ಮಡಿಕೇರಿ: ಜಿಲ್ಲೆಯ ಪ್ರಮುಖ ಜಲಾಶಯವಾದ ಹಾರಂಗಿ ಅಣೆಕಟ್ಟೆಯು ಕಳೆದ ಸಾಲಿನ ಜೂನ್ ಮೊದಲ ವಾರದಲ್ಲೇ ಶೇ.90ರಷ್ಟು ಭರ್ತಿಯಾಗಿತ್ತು.

ಅಲ್ಲದೆ ಅಣೆಕಟ್ಟೆಯ ಸುರಕ್ಷತೆ ದೃಷ್ಟಿಯಿಂದ ಮತ್ತು ಜೂನ್, ಜುಲೈ ತಿಂಗಳಲ್ಲಿ ಹೆಚ್ಚು ಮಳೆ ಬೀಳುವ ಮುನ್ಸೂಚನೆಯ ಹಿನ್ನೆಲೆಯಲ್ಲಿ ನದಿಗೆ ನೀರನ್ನು ಹರಿಸಲಾಗುತ್ತಿತ್ತು. ಆದರೆ ಈ ಸಾಲಿನಲ್ಲಿ



ಮುಂಗಾರು ಮಳೆಯಲ್ಲಿ ಹಿನ್ನಡೆಯಾಗಿರುವುದರಿಂದ ಅಣೆಕಟ್ಟೆಯ ನೀರಿನ ಸಂಗ್ರಹ ತೀರಾ ಕಡಿಮೆ ಇದ್ದು, ಜಲಾಶಯ ಖಾಲಿ ಖಾಲಿಯಾಗಿ ಗೋಚರಿಸುತ್ತಿದೆ. ಕಳೆದ ಸಾಲಿನಲ್ಲಿ ಜೂನ್ ಮೊದಲ ವಾರದಲ್ಲಿ ಅಣೆಕಟ್ಟೆಯಲ್ಲಿ 6.50. ಟಿ.ಎಂ.ಸಿ. ನೀರು ಸಂಗ್ರಹವಾಗಿತ್ತು. ಕಳೆದ ಬಾರಿ ಮೇ ತಿಂಗಳಲ್ಲೇ ಹೆಚ್ಚು ಮಳೆ ಬಿದ್ದ ಕಾರಣದಿಂದಾಗಿ ಅಣೆಕಟ್ಟೆಯ ಒಳ ಹರಿವು 1,800 ಕ್ಯುಸೆಕ್ಸ್‌ಗಿಂತಲೂ ಅಧಿಕವಾಗಿತ್ತು.

ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿದ್ದರಿಂದ ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹ ಹೆಚ್ಚಾಗಿ ಜೂನ್ ಮೊದಲ ವಾರದಲ್ಲೇ ವಿದ್ಯುತ್ ಘಟಕದ ಮೂಲಕ ನದಿಗೆ 1600 ಕ್ಯುಸೆಕ್ ನೀರನ್ನು ಹರಿಸಲಾಗಿತ್ತು. ಆದರೆ ಈ ಸಾಲಿನಲ್ಲಿ ಮಳೆಯ ಪ್ರಮಾಣ ತೀರಾ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಪ್ರಸಕ್ತ ಅಣೆಕಟ್ಟೆಯ ನೀರಿನ ಮಟ್ಟ ಕೇವಲ 2.97 ಟಿ.ಎಂ.ಸಿ.ಗೆ ಇಳಿದಿದೆ. ದಿನಂಪ್ರತಿ ಕೇವಲ 200 ಕ್ಯುಸೆಕ್ಸ್ ನೀರನ್ನು ಮಾತ್ರ ನದಿಗೆ ಹರಿಸಲಾಗುತ್ತಿದೆ. ಜಲಾಶಯದ ಸುರಕ್ಷತೆಯ ದೃಷ್ಟಿಯಿಂದ ಕಾವೇರಿ ನೀರಾವರಿ ನಿಗಮದ ಸೂಚನೆಯಂತೆ ನೀರಾವರಿ ಇಲಾಖೆಯಿಂದ ಅಣೆಕಟ್ಟೆಯ ಮುಖ್ಯ ಕ್ರಸ್ಟ್ ಗೇಟ್‌ಗಳ ದುರಸ್ತಿ ಸೇರಿದಂತೆ ಮುನ್ನೆಚ್ಚರಿಕೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಅಣೆಕಟ್ಟೆಯ ಸಂಪೂರ್ಣವಾಗಿ ಭರ್ತಿಯಾದ ಸಂಧರ್ಭದಲ್ಲಿ ನೀರಾವರಿ ಸಲಹಾ ಸಮಿತಿ ಸಭೆಯ ನಂತರ ಮುಂದಿನ ಹಂಗಾಮು ಬೆಳೆಗೆ ನೀರು ಹರಿಸಲಾಗುವುದು ಎಂದು ಅಣೆಕಟ್ಟೆಯ ಉಸ್ತುವಾರಿ ಕಿರಣ್ ದೇವಯ್ಯ ಮಾಹಿತಿ ನೀಡಿದ್ದಾರೆ.

ಕಿರುಸುದ್ದಿ

ಕಾರ್ತಿಕ್ ಘೋರ್ಪಡೆ ನಿಧನಕ್ಕೆ ಗಣ್ಯರ ಸಂತಾಪ

ಸಂಡೂರು: ಇಲ್ಲಿನ ಬಿಜೆಪಿ ಹಿರಿಯ ಮುಖಂಡ, ಸಂಡೂರು ಘೋರ್ಪಡೆ ರಾಜವಂಶಸ್ಥರಾದ ಕಾರ್ತಿಕೇಯ ಮುರಾರಿರಾವ್ ಘೋರ್ಪಡೆ(66) ಅವರು ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರಿಗೆ ಪತ್ನಿ ಸೇರಿದಂತೆ ಇಬ್ಬರು ಪುತ್ರಿಯರಿದ್ದು, ಅನೇಕ ಬಂಧು ಬಳಗವನ್ನು ಅಗಲಿದ್ದಾರೆ. ಕಾರ್ತಿಕ್ ಘೋರ್ಪಡೆ ಅವರ ಅಕಾಲಿಕ ನಿಧನದ ಸುದ್ದಿ ತೀವ್ರ ಆಘಾತವನ್ನುಂಟು ಮಾಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ. ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ, ನಗರ ಕ್ಷೇತ್ರದ ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ, ಎಮ್ಮೆಲ್ಸಿ ವೈ.ಎಂ.ಸತೀಶ್, ಮಾಜಿ ಸಚಿವ ಬಿ.ಶ್ರೀರಾಮುಲು, ಮಾಜಿ ಸಂಸದ ಸಣ್ಣ ಫಕೀರಪ್ಪ, ಎಸ್ಸಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಜಿ.ಟಿ.ಪಂಪಾಪತಿ, ಮಾಜಿ ಶಾಸಕರಾದ ಎಂ.ಎಸ್. ಸೋಮಲಿಂಗಪ್ಪ, ಟಿ.ಎಚ್.ಸುರೇಶ್ ಬಾಬು ಸೇರಿದಂತೆ ಸಂಡೂರಿನ ಕಾರ್ತಿಕ್ ಕಾಳೆ, ಸಂಡೂರು ರಮೇಶ್ ಅನೇಕ ಗಣ್ಯರು, ಸ್ವಯರ್ ಉಕ್ಕು ಕಾರ್ಖಾನೆ ಎಲ್ಲ ಸಿಬ್ಬಂದಿ, ಶಿಕ್ಷಣ ಸಂಸ್ಥೆಯ ಎಲ್ಲ ಸಿಬ್ಬಂದಿ, ಸಂತಾಪ ಸೂಚಿಸಿದ್ದಾರೆ.

ಮಹಿಳೆ ಮೇಲೆ ಅತ್ಯಾಚಾರ: ಹತ್ತು ಮಂದಿ ಬಂಧನ

ದಾವಣಗೆರೆ: ಚನ್ನಗಿರಿ ತಾಲೂಕಿನಲ್ಲಿ ಜಮೀನೊಂದರಲ್ಲಿ 41 ವರ್ಷದ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಆಕೆ ಖಾಸಗಿ ಫೋಟೋ ಹಾಗೂ ವಿಡಿಯೋ ಚಿತ್ರೀಕರಿಸಿ ಹರಿಬಿಟ್ಟ ಆರೋಪದಲ್ಲಿ ಓರ್ವ ಅಪ್ರಾಪ್ತ ಸೇರಿದಂತೆ 10 ಮಂದಿ ವಿರುದ್ಧ ಬಸವಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪತಿ ಕುಡಿದು ಬಂದಿದ್ದರಿಂದ ಮುನಿಸಿಕೊಂಡ ಮಹಿಳೆಯು ಜೂ.3ರಂದು ಸಂಜೆ 7 ಗಂಟೆ ಸುಮಾರಿಗೆ ಗಂಡನ ಊರಿನಿಂದ ತನ್ನ ತವರಿಗೆ ಹೊರಟಿದ್ದಳು. ಅದೇ ಗ್ರಾಮದ ಚಿಕನ್ ಅಂಗಡಿ ಬಳಿ ಅಳುತ್ತಾ ಬರುತ್ತಿದ್ದ ಸಂತ್ರಸ್ತೆಯನ್ನು ಯುವಕನೋರ್ವ ಮಾತನಾಡಿಸಿ ತಂಪು ಪಾನೀಯ ಕುಡಿಸಿದ್ದಾನೆ. ಅಷ್ಟರಲ್ಲಿ ಆಕೆಗೆ ಮತ್ತು ಬಂದಂತಾಗಿದ್ದು, ಜೊತೆಗಿದ್ದ ಇನ್ನೊಬ್ಬನೊಂದಿಗೆ ಮನೆಗೆ ಬಿಡುವುದಾಗಿ ಹೇಳಿ ಬೈಕ್‌ನಲ್ಲಿ ಕೂರಿಸಿಕೊಂಡು, ಜಮೀನೊಂದಕ್ಕೆ ಕರೆದೊಯ್ದಿದ್ದರು. ಜೂ.8ರಂದು ಆಕೆಯ ಅಣ್ಣನ ಮಗ ಕರೆ ಮಾಡಿ, ಫೋಟೋ, ವಿಡೀಯೋ ಮೊಬೈಲ್‌ಗಳಲ್ಲಿ ಹರಿದಾಡುತ್ತಿರುವ ಸಂಗತಿ ತಿಳಿಸಿದ್ದಾನೆ. ಆಗ ಜೂ. 3ರಂದು ರಾತ್ರಿ ನಡೆದ ಘಟನೆ ಬಗ್ಗೆ ಆಕೆ ಗಮನಕ್ಕೆ ತಂದಿದ್ದಾಳೆ. ಆಗ ಮಹಿಳೆ ಅಣ್ಣನ ಮಗ ಯಲೋದಹಳ್ಳಿಯ ಇಸ್ತ್ರೀ ನಾಗರಾಜ ಎಂಬಾತನ ಬಳಿ ಹೋಗಿ ವಿಚಾರಿಸಿದಾಗ ಮಹಿಳೆ ಮೇಲೆ ತಾನು ಸೇರಿದಂತೆ ಚಟಾಕಿ ನಾಗರಾಜ, ಮಧು, ಅರ್ಜುನ, ಬಸ ವಂತ, ಕುಂದೂರ ಮಾರುತಿ, ಮನು, ಜೋಗಿ ಸುನೀಲ, ಪ್ರದೀಪ ಸಾಮೂಹಿಕ ಅತ್ಯಾಚಾರ ಎಸಗಿದ್ದಾಗಿ ಬಾಯಿ ಬಿಟ್ಟಿದ್ದಾನೆ.

ರಾಜ್ಯ ಸರ್ಕಾರದಿಂದ ಕನಿಷ್ಠ ವೇತನ ಹೆಚ್ಚಳ ತೀರ್ಮಾನ: ಈಶ್ವರ್ ಖಂಡ್ರೆ
ಜಿ ರಾಮ್ ಜಿ ವೇತನ ಹೆಚ್ಚಿಸಿ

ಬೆಂಗಳೂರು: ಪ್ರಸಕ್ತ ಬೆಲೆ ಏರಿಕೆ ಸರಿದೂಗಿಸಲು ರಾಜ್ಯ ಸರ್ಕಾರ ಕಾರ್ಮಿಕರ ಕನಿಷ್ಠ ವೇತನವನ್ನು ಹೆಚ್ಚಿಸಲು ತೀರ್ಮಾನಿಸಿದ್ದು, ಈ ಹಿಂದಿನ ಮನರೇಗಾದ ಹೊಸ ರೂಪವಾದ ವಿಬಿ-ಜಿ ರಾಮ್ ಜಿ ಯ ಕನಿಷ್ಠ ವೇತನವನ್ನು ಹೆಚ್ಚಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಕೇಂದ್ರ ಸಚಿವರನ್ನು ಆಗ್ರಹಿಸಿದರು.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅಧ್ಯಕ್ಷತೆಯಲ್ಲಿ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರೊಂದಿಗೆ ಮಂಗಳವಾರ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಈಗಾಗಲೇ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳಕ್ಕೆ ಅನುಮೋದನೆ ನೀಡಿದ್ದು, ಇದೇ ಪ್ರಕಾರವಾಗಿ ಕೇಂದ್ರ ಸರ್ಕಾರವೂ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹಣ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಗ್ರಾಮೀಣ ಜನರ ಬದುಕು ಹಸನಾಗಿಸಲು ಶ್ರಮಿಸಲಾಗುವುದು ಎಂದರು. ಜೂ. 28 ಹಾಗೂ 29ರಂದು ಹೊಸದಿಲ್ಲಿಯಲ್ಲಿ ವಿಬಿ- ಜಿ ರಾಮ್ ಜಿ ಯೋಜನೆ ಅನುಷ್ಠಾನದ ಬಗ್ಗೆ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆ ಕರೆಯಲಾಗಿದ್ದು, ತಾವು ಈ ಸಭೆಯಲ್ಲಿ ಭಾಗಿಯಾಗಿ, ರಾಜ್ಯದ ಬೇಡಿಕೆಗಳನ್ನು ಮಂಡಿಸುವುದಾಗಿ ಈಶ್ವರ ಖಂಡ್ರೆ ತಿಳಿಸಿದರು. ಸಭೆಯಲ್ಲಿ ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲ ಮತ್ತಿತರರು ಭಾಗಿಯಾಗಿದ್ದರು.

ವಿಮಾನ ಸಮಯ ಬದಲಾವಣೆಗೆ ಸಚಿವ ಗರಂ

ಬೆಂಗಳೂರು: ಸ್ಟಾರ್ ಏರ್ ವಿಮಾನಯಾನ ಸಂಸ್ಥೆ ಬೆಂಗಳೂರು-ಬೀದರ್- ಬೆಂಗಳೂರು ನಡುವಿನ ವೇಳಾಪಟ್ಟಿಯಲ್ಲಿ ಸಮಯ ಬದಲಾವಣೆ ಮಾಡಿರುವುದಕ್ಕೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ



ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿಯವರಿಗೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರಿಗೆ ಪತ್ರ ಬರೆದಿರುವ ಅವರು, ಈ ಹಿಂದೆ ಪ್ರತಿದಿನ ಬೆಂಗಳೂರಿನಿಂದ ಬೆಳಗ್ಗೆ 6.30ಕ್ಕೆ ಹಾರಾಟ ಆರಂಭಿಸುತ್ತಿದ್ದ 84 ಆಸನಗಳ ವಿಮಾನ 7.45ಕ್ಕೆ ಬೀದರ್ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಿತ್ತು. ಬಳಿಕ ಬೆಳಗ್ಗೆ 8.15ಕ್ಕೆ ಬೀದರ್‌ನಿಂದ ಹಾರಾಟ ಆರಂಭಿಸಿ ಬೆಳಗ್ಗೆ 9.30ಕ್ಕೆ ಬೆಂಗಳೂರಿಗೆ ಆಗಮಿಸುತ್ತಿತ್ತು ಇದು ಬೀದರ್ ಮತ್ತು ಸುತ್ತಮುತ್ತಲ ಜಿಲ್ಲೆಗಳ ಹಾಗೂ ನೆರೆಯ ತೆಲಂಗಾಣದ ವಿಮಾನಯಾನ ಪ್ರಯಾಣಿಕರಿಗೆ, ವ್ಯಾಪಾರಸ್ಥರಿಗೆ ಮತ್ತು ಪ್ರವಾಸಿಗರಿಗೆ ಅನುಕೂಲಕರವಾಗಿತ್ತು ಎಂದು ತಿಳಿಸಿದ್ದಾರೆ. ಬೀದರ್ ವಿಮಾನ ನಿಲ್ದಾಣ ಭಾರತೀಯ ವಾಯುಪಡೆಗೆ ಸೇರಿದ್ದು, ಈ ಹಿಂದೆ ಇದ್ದ ಬೆಳಗಿನ ವೇಳಾಪಟ್ಟಿಗೆ ರಕ್ಷಣಾ ಇಲಾಖೆ ಮತ್ತು ಕೇಂದ್ರ ಸರ್ಕಾರದ ನಾಗರಿಕ ವಿಮಾನಯಾನ ಸಚಿವಾಲಯ ತನ್ನ ಅನುಮತಿ ನೀಡಿತ್ತು. ಆದರೆ, ಸ್ಟಾರ್ ಏರ್ ಸಂಸ್ಥೆ ಈಗ ಏಕಾ ಏಕಿ ವೇಳಾಪಟ್ಟಿಯನ್ನು ಬದಲಾವಣೆ ಮಾಡಿ, ಜೂ.10ರಿಂದ ಮಧ್ಯಾಹ್ನ 12.30ಕ್ಕೆ ಬೆಂಗಳೂರು ವಿಮಾನ ನಿಲ್ದಾಣದಿಂದ ಹಾರಾಟ ಆರಂಭಿಸಿ 1.45ಕ್ಕೆ ಬೀದರ್‌ಗೆ ಬರಲಿದೆ. ಮತ್ತೆ ಬೀದರ್‌ನಿಂದ ಮಧ್ಯಾಹ್ನ 2.30ಕ್ಕೆ ಹೊರಟು ಬೆಂಗಳೂರಿಗೆ 3.30ಕ್ಕೆ ತಲುಪಲಿದೆ. ಈ ವೇಳಾಪಟ್ಟಿಯಿಂದ ಯಾವುದೇ ಪ್ರಯಾಣಿಕರಿಗೆ ಅನುಕೂಲ ಆಗುವುದಿಲ್ಲ. ಇದರಿಂದಾಗಿ ಪ್ರಯಾಣಿಕರ ಸಂಖ್ಯೆ ಇಳಿಮುಖವಾಗುವ ಸಾಧ್ಯತೆಯೂ ಇದೆ ಎಂದು ತಿಳಿಸಿದ್ದಾರೆ. ಸರ್ಕಾರ ಮತ್ತು ಕೆಕೆಆರ್ ಡಿಬಿಯಿಂದ ನೀಡುತ್ತಿರುವ ವಿಜಿಎಫ್ ನಿಷ್ಪ್ರಯೋಜಕವಾಗುತ್ತದೆ ಎಂದು ಹೇಳಿದರು.

“ ಜೂ.1 ರಿಂದ ಜಾರಿಯಾಗಬೇಕಿರುವ ಮನರೇಗಾ ವಿಬಿ-ಜಿ ರಾಮ್ ಜಿ ಅಡಿಯಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರ 60:40ರ ಅನುಪಾತದಲ್ಲಿ 5,709.90 ಕೋಟಿ ರೂ. ಮಧ್ಯಂತರ ಹಂಚಿಕೆ ಮಾಡಿದ್ದು, ಇದಕ್ಕೆ ಶೇ.40ರ ಅನುಪಾತದಲ್ಲಿ 3806.60 ಕೋಟಿ ರೂ. ನೀಡಬೇಕಾಗಿದೆ, ಈ ಯೋಜನೆ ಅನುಷ್ಠಾನಕ್ಕಾಗಿ ಸಿಎಂಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

■ **ಈಶ್ವರ ಖಂಡ್ರೆ, ಸಚಿವ**

ಖರ್ಗೆ ಹೇಳಿಕೆಗೆ ಬಿವೈವಿ ತಿರುಗೇಟು

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಲು ಪ್ರಯತ್ನಿಸಿದ ಅನೇಕ ಸರ್ಕಾರಗಳು ಜನರಿಂದ ತಿರಸ್ಕರಿಸಲ್ಪಟ್ಟಿವೆ



ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ. ಗೃಹಸಚಿವ ಪ್ರಿಯಾಂಕ್ ಖರ್ಗೆ ಅವರ ಆರ್‌ಎಸ್‌ಎಸ್ ಕುರಿತ ಹೇಳಿಕೆಗೆ ವಿಜಯೇಂದ್ರ ಅವರು ಸಾಮಾಜಿಕ ಜಾಲತಾಣದಲ್ಲಿ ತಿರುಗೇಟು ನೀಡಿದ್ದಾರೆ.

ಪ್ರಿಯಾಂಕ್ ಖರ್ಗೆ ಅವರೇ ನಿಮ್ಮ ಮೂಲಕ ಹೇಳಿಸಿರುವ ಮಾತು ನಿಮ್ಮ ಮುಖ್ಯಸ್ಥರದೇ (ಚೀಫ್) ಆಗಿರಬೇಕು. ಹಲವು ಸರ್ಕಾರಗಳು ಬಂದು ಹೋಗಿವೆ. ಆರ್‌ಎಸ್‌ಎಸ್ ಅನ್ನು ನಿಷೇಧಿಸಲು ಪ್ರಯತ್ನಿಸಿದ ಅನೇಕ ಸರ್ಕಾರಗಳು ಅಂತಿಮವಾಗಿ ಜನರಿಂದ ತಿರಸ್ಕರಿಸಲ್ಪಟ್ಟವು. ಆದರೆ, ಆರ್‌ಎಸ್‌ಎಸ್ ಹಿಂದು ಸಮಾಜವನ್ನು ಒಗ್ಗೂಡಿಸುವ ಮತ್ತು ಹಿಂದು ಧರ್ಮದ ಸಂದೇಶವನ್ನು ಪ್ರಪಂಚದೊಂದಿಗೆ ಹಂಚಿಕೊಳ್ಳುವ ಸಾಮರ್ಥ್ಯವಿರುವ ಬಲವಾದ, ಸಮೃದ್ಧ ಭಾರತದ ದೃಷ್ಟಿಕೋನಕ್ಕೆ ಕೊಡುಗೆ ನೀಡುವ ತನ್ನ ಧ್ಯೇಯದಲ್ಲಿ ದೃಢವಾಗಿ ನಿಂತಿದೆ ಎಂದು ತಿಳಿಸಿದ್ದಾರೆ.

ನೀವು ಎತ್ತಿಹಿಡಿಯಲು ಪ್ರತಿಜ್ಞೆ ಮಾಡಿದ ಸಂವಿಧಾನದ ಚೌಕಟ್ಟಿನೊಳಗೆ ಆರ್‌ಎಸ್‌ಎಸ್ ಕಾರ್ಯನಿರ್ವಹಿಸುತ್ತದೆ. ಅಲ್ಲದೇ ನಿಮಗೆ ನಿರಾಶೆ ಉಂಟು ಮಾಡುವಂತೆ, ಆರ್‌ಎಸ್‌ಎಸ್ ಈಗ ತನ್ನ ಸ್ಥಾಪನೆಯ 100 ವರ್ಷಗಳನ್ನು ಪೂರೈಸಿದೆ. ಇದು ನಿಮಗೆ ಕಷ್ಟಕರವಾಗಿರುತ್ತದೆ ಮತ್ತು ಬಹುಶಃ ನಿಮ್ಮ ನೈಜ ಮುಖ್ಯಸ್ಥ ಒಪ್ಪಿಕೊಳ್ಳುವುದು ಇನ್ನೂ ಹೆಚ್ಚು ಕಷ್ಟಕರವಾಗಿರುತ್ತದೆ ಎಂದು ಲೇವಡಿ ಮಾಡಿದ್ದಾರೆ.

> ಆರೆಸ್ಸೆಸ್ ನಿಷೇಧಿಸಲು ಪ್ರಯತ್ನಿಸಿದ ಸರ್ಕಾರಗಳಿಗೆ ಜನರಿಂದ ತಿರಸ್ಕಾರ

ಏತನ್ಮಧ್ಯೆ, ನಿಮ್ಮ ಕಲಬುರಗಿ ಕ್ಷೇತ್ರವು ಹಲವಾರು ಅಭಿವೃದ್ಧಿ ಸೂಚಕಗಳಲ್ಲಿ ಕಳಪೆ ಸ್ಥಾನದಲ್ಲಿದೆ. ಇದು ವರ್ಷಗಳ ಅಸಮರ್ಪಕ ಆಡಳಿತ, ನಿಷ್ಪರಿಣಾಮಕಾರಿ ನಾಯಕತ್ವವನ್ನು ಪ್ರತಿಬಿಂಬಿಸುತ್ತದೆ. ನೀವು ಆರ್‌ಎಸ್‌ಎಸ್ ಮೇಲೆ ದಾಳಿ ಮಾಡುವುದು ಹೆಡ್‌ಲೈನ್‌ಗಳನ್ನು ಸೃಷ್ಟಿಸಬಹುದು. ಆದರೆ, ಅದು ನಿಮ್ಮನ್ನು ಆಯ್ಕೆ ಮಾಡಿದ ಜನರ ಜೀವನವನ್ನು ಸುಧಾರಿಸುವುದಿಲ್ಲ ಎಂದಿದ್ದಾರೆ. ಕಲಬುರಗಿ ಮತ್ತು ಕರ್ನಾಟಕದ ಜನರು ಉತ್ತಮ ಆಡಳಿತ, ಸಮರ್ಪಕ ಅಭಿವೃದ್ಧಿ, ಹೊಣೆಗಾರಿಕೆ ಮತ್ತು ನಾಯಕತ್ವವನ್ನು ನಿರೀಕ್ಷಿಸುತ್ತಾರೆ. ಆಡಳಿತ ವೈಫಲ್ಯಗಳಿಂದ ಅವರ ಗಮನವನ್ನು ಬೇರೆಡೆ ಸೆಳೆಯಲು ಇಂತಹ ಹೇಳಿಕೆಗಳು ಯುಕ್ತವಲ್ಲ ಎಂದು ವಿಜಯೇಂದ್ರ ಎಚ್ಚರಿಸಿದ್ದಾರೆ.

ಶೇ.5.7ರಷ್ಟು ರಫ್ತು ವಲಯ ಪ್ರಗತಿ

ಬೆಂಗಳೂರು: ಕಳೆದ 12 ವರ್ಷಗಳ ಅವಧಿಯಲ್ಲಿ ಭಾರತದ ಒಟ್ಟಾರೆ ರಫ್ತು ವಲಯವು ಶೇ.5.7ರಷ್ಟು ಬೆಳವಣಿಗೆ ದಾಖಲಿಸಿದ್ದು, ಈ ಮೂಲಕ ಜಾಗತಿಕ ಮಟ್ಟದಲ್ಲಿ ದೇಶದ ವ್ಯಾಪಾರ ಸಾಮರ್ಥ್ಯ ವಿಸ್ತರಣೆ ಯಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯದ ಹೆಚ್ಚುವರಿ ಕಾರ್ಯ ದರ್ಶಿ ದರ್ಪಣ್ ಜೈನ್ ತಿಳಿಸಿದರು.

ಮುಕ್ತ ವ್ಯಾಪಾರ ಒಪ್ಪಂದ, ಐಟಿ ಸೇವೆಗಳ ಕ್ಷೇತ್ರದಲ್ಲಿ ಭಾರತದ 12 ವರ್ಷಗಳ ಪ್ರಗತಿ ಕುರಿತು ನಗರದ ಖಾಸಗಿ ಹೋಟೆಲ್‌ನಲ್ಲಿ ಮಾಧ್ಯಮ ಸಂವಾದದಲ್ಲಿ ಮಾಹಿತಿ ಹಂಚಿಕೊಂಡ ಅವರು, ಭಾರತದ ಸೇವಾ ವಲಯದ ರಫ್ತು ಶೇ.9.3ರಷ್ಟು ಗಣನೀಯ ಪ್ರಗತಿಯನ್ನು ಕಾಣುವ ಮೂಲಕ ದೇಶದ ಆರ್ಥಿಕತೆಗೆ ಬಲ ನೀಡಿದೆ. ಇದು ಒಟ್ಟಾರೆ ವ್ಯಾಪಾರ ಕೊರತೆಯನ್ನು ಸರಿದೂಗಿಸಲು ನೆರವಾಗಿದೆ ಎಂದರು. ಶೇ.35 ರಷ್ಟು ಇದ್ದ ರಫ್ತು ಪ್ರಮಾಣವು ಶೇ.48ಕ್ಕೆ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದರು.

ಪ್ರಸ್ತುತ 38 ದೇಶಗಳೊಂದಿಗೆ 9 ಮುಕ್ತ ವ್ಯಾಪಾರ ಒಪ್ಪಂದಗಳನ್ನು ಕಳೆದ 5 ವರ್ಷಗಳಲ್ಲಿ ಮಾಡಲಾಗಿದೆ. ಇದರಿಂದ 56 ಟ್ರಿಲಿಯನ್ ಯುಎಸ್ ಡಾಲರ್‌ನಷ್ಟು ಜಿಡಿಪಿ ಮೌಲ್ಯವರ್ಧನೆಯಾಗಿದೆ. ಮೋದಿ ಅವರ ವಿಕಸಿತ ಭಾರತ 2047 ರ ದೂರದರ್ಶಿತ್ವದ ಗುರಿ ತಲುಪಲು, ಭಾರತವನ್ನು ಜಾಗತಿಕ ರಫ್ತು ಕೇಂದ್ರವಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಇಲಾಖೆಯು ದೃಢ ಹೆಜ್ಜೆಯಿಟ್ಟಿದೆ ಎಂದು ಹೇಳಿದರು.

ರಫ್ತು ಬೆಳವಣಿಗೆ: ಎಲೆಕ್ಟ್ರಾನಿಕ್ ಸರಕುಗಳ ರಫ್ತು ಕ್ಷೇತ್ರವು ಶೇ.20.3 ರಷ್ಟು ಅತ್ಯುನ್ನತ ಬೆಳವಣಿಗೆ ಸಾಧಿಸಿದೆ. ಇದರ ರಫ್ತು ಮೌಲ್ಯ 47.96 ಶತಕೋಟಿ ಯುಎಸ್ ಡಾಲರ್‌ಗೆ ತಲುಪಿದೆ. ಇಂಜಿನಿಯರಿಂಗ್ ಸರಕುಗಳು 122.4 ಶತಕೋಟಿ ಯುಎಸ್ ಡಾಲರ್ ತಲುಪುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿವೆ ಎಂದು ವಿವರಿಸಿದರು.

ನೌಕರರಿಗೆ ಶೀಘ್ರ ನೋಂದಾಯಿಸಲು ಸೂಚನೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ನಗದುರಹಿತ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (ಕೆಎಎಸ್‌ಎಸ್)ಯಲ್ಲಿ ಇನ್ನೂ ನೋಂದಣಿ ಮಾಡಿಸದ ನೌಕರರ ವಿವರಗಳನ್ನು ತುರ್ತಾಗಿ ಎಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ದಾಖಲಿಸುವಂತೆ ರಾಜ್ಯ ಸರ್ಕಾರ ಸೂಚನೆ ನೀಡಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಉಪಕಾರ್ಯದರ್ಶಿಗಳು ಹೊರಡಿಸಿರುವ ಸುತ್ತೋಲೆಯಲ್ಲಿ, ಕೆಎಎಸ್‌ಎಸ್ ಯೋಜನೆಗೆ ಒಳಪಡುವ ಅಥವಾ ಒಳಪಡದಿರುವ ಕುರಿತು ನೌಕರರಿಂದ ಲಿಖಿತ ಅಭಿಪ್ರಾಯ ಪಡೆಯುವ ಪ್ರಕ್ರಿಯೆ ಈಗಾಗಲೇ ಪೂರ್ಣಗೊಂಡಿರುವುದಾಗಿ ತಿಳಿಸಲಾಗಿದೆ. 2025ರ ನ.25ರ ಒಳಗೆ ಯೋಜನೆಯಿಂದ ಹೊರಗುಳಿಯುವ ಕುರಿತು ಲಿಖಿತವಾಗಿ ತಿಳಿಸದ ನೌಕರರನ್ನು ಸ್ವಯಂಚಾಲಿತವಾಗಿ ಯೋಜನೆಗೆ ಸೇರ್ಪಡೆಯಾಗಿರುವವರಾಗಿ ಪರಿಗಣಿಸಲಾಗಿದೆ.

ರಾಜ್ಯದಲ್ಲಿ ಒಟ್ಟು 3,76,955 ಸರ್ಕಾರಿ ನೌಕರರು ಕೆಎಎಸ್ ಯೋಜನೆಗೆ ಓಪಿಟಿ -ಇನ್ ಆಗಿದ್ದು, 23,081 ನೌಕರರು ಓಪಿಟಿ -ಔಟ್ ಆಗಿದ್ದಾರೆ. ಆದರೆ ಓಪಿಟಿ -ಇನ್ ಆಗಿರುವ ನೌಕರರಲ್ಲಿ ಕೇವಲ 1,79,339 ನೌಕರರು ಮತ್ತು ಅವರ ಅವಲಂಬಿತರ ವಿವರಗಳು ಮಾತ್ರ ಎಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ದಾಖಲೆಯಾಗಿವೆ. ಇನ್ನೂ 1,97,616 ನೌಕರರು ಮತ್ತು ಅವರ ಕುಟುಂಬದ ಅರ್ಹ ಸದಸ್ಯರ ವಿವರಗಳ ನೋಂದಣಿ ಬಾಕಿಯಿದೆ.

ಹೆಚ್ಚಿನ ಸಂಖ್ಯೆಯ ನೌಕರರ ವಿವರಗಳು ಇನ್ನೂ ನೋಂದಾಯಿಸದಿರುವುದರಿಂದ, ಯೋಜನೆಯ ಪ್ರಯೋಜನ ಪಡೆಯುವಲ್ಲಿ ತೊಂದರೆಗಳು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ನೋಂದಣಿ ಮಾಡಿಸಿರುವ ನೌಕರರನ್ನು ಹೊರತುಪಡಿಸಿ ಉಳಿದಿರುವ 1.97 ಲಕ್ಷಕ್ಕೂ ಹೆಚ್ಚು ನೌಕರರು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರ ಮಾಹಿತಿಯನ್ನು ಜು.15ರೊಳಗೆ ಕಡ್ಡಾಯವಾಗಿ ಎಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ದಾಖಲಿಸಬೇಕು ಎಂದು ಎಲ್ಲಾ ಡಿಡಿಒ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ರಾಷ್ಟ್ರಚಿಂತನೆಯ ರಂಗರೂಪ: ಯುಗಪ್ರವರ್ತಕ ಡಾ. ಹೆಡಗೇವಾರ್ | ಭಾಷೆಯ ಗಡಿ ಮೀರಿ ಕನ್ನಡಿಗರ ಹೃದಯ ತಟ್ಟಿದ ನಾಟಕ
ಡಾ.ಹೆಡಗೇವಾರ್ ತಪೋಮಯ ಜೀವನದ ತಲ್ಲಣಕ್ಕೆ ಮರುಗಿದ ಪ್ರೇಕ್ಷಕರು

ಡಾ. ಶೇಖರ ದೊಡ್ಡಗೌಡರ

ರಂಗಭೂಮಿ ಎನ್ನುವುದು ಕೇವಲ ಕಲ್ಪನೆಗಳ ಲೋಕವಲ್ಲ; ಅದು ಸಮಾಜದ ಜಾಗೃತಿ ಮತ್ತು ಇತಿಹಾಸದ ಪುನರುತ್ಥಾನದ ಪ್ರಬಲ ಮಾಧ್ಯಮ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪನೆಯಾಗಿ ನೂರು ವರ್ಷಗಳು ತುಂಬುತ್ತಿರುವ ಈ ಭವ್ಯ ಸಂಘ ಶತಾಬ್ದಿಯ ಸಂದರ್ಭದಲ್ಲಿ, ಈ ಮಾತನ್ನು ಅಕ್ಷರಶಃ ಸತ್ಯವಾಗಿಸಿದ ಅಪೂರ್ವ ರಂಗಪ್ರಯೋಗವೊಂದಕ್ಕೆ ಸಾಕ್ಷಿಯಾಗುವ ಮೂಲಕ, ಬೆಂಗಳೂರಿನ ಸಾಂಸ್ಕೃತಿಕ ಇತಿಹಾಸದಲ್ಲಿ 2026ರ ಜೂನ್ 6 ಮತ್ತು 7ರ ಸಾಯಂಕಾಲಗಳು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತದ್ದಾಗಿದ್ದವು. ನಾಗಪುರದ ಪ್ರಸಿದ್ಧ ನಾದಬ್ರಹ್ಮ ಸಂಸ್ಥೆ ಪ್ರಸ್ತುತಪಡಿಸಿದ ಯುಗಪ್ರವರ್ತಕ ಡಾ. ಹೆಡಗೇವಾರ್ ಹಿಂದಿ ನಾಟಕವನ್ನು ಸತತ ಎರಡು ಪ್ರದರ್ಶನಗಳಲ್ಲಿ ತೆರೆದಿಟ್ಟಿತು.

ಈ ರಂಗಪ್ರಯೋಗ ಕೇವಲ ನಾಟಕವಾಗಿರದೆ, ಶತಮಾನದ ಸಂಘದ ಗಂಗೋತ್ರಿಯ ಉಗಮವನ್ನು ಮತ್ತು ಡಾಕ್ಟರ್ ಜೀ ಅವರ ನಿಸ್ವಾರ್ಥ ಬದುಕನ್ನು ಕಣ್ಣೆದುರು ತಂದಿಟ್ಟ ದಿವ್ಯದರ್ಶನವಾಗಿತ್ತು. ಭಾಷೆಯ ಗಡಿಗಳನ್ನು ಮೀರಿ ಕನ್ನಡಿಗರ ಹೃದಯ ಮರುಗುವಂತೆ ಮಾಡಿದ ಈ ನಾಟಕದ ವೈಚಾರಿಕ ಹರಿವು ಪ್ರತಿಯೊಬ್ಬರಲ್ಲೂ ರಾಷ್ಟ್ರಭಕ್ತಿಯ ಹೊಸಚೈತನ್ಯವನ್ನು ತುಂಬಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕ ಪರಮ ಪೂಜನೀಯ ಡಾ. ಕೇಶವಬಲಿರಾಮ್ ಹೆಡಗೇವಾರ್‌ರವರ ತಪೋಮಯ ಜೀವನದ ತಲ್ಲಣಗಳನ್ನು ಪ್ರೇಕ್ಷಕರ ಎದುರು ಅತ್ಯಂತ ಮಾರ್ಮಿಕವಾಗಿ ಅನಾವರಣಗೊಳಿಸಿತು.

ಆ ತಪೋಮಯ ಪ್ರಯಾಣದ ಆರಂಭವಾಗಿ ನಾಟಕದ ಮೊದಲ ದೃಶ್ಯವೇ ಪ್ರೇಕ್ಷಕರನ್ನು ಇತಿಹಾಸದ ರಹಸ್ಯ ಕಾಲಘಟ್ಟಕ್ಕೆ ಕರೆದೊಯ್ಯುತ್ತದೆ. ಕೋಲ್ಕತ್ತಾದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದ ಯುವಕ ಕೇಶವರಾವ್ ಹೆಡಗೇವಾರ್, ಬ್ರಿಟಿಷರ ಕಣ್ಣಿಗೆ ಮಣ್ಣೆರಚಿ ಕ್ರಾಂತಿಕಾರಿಗಳ ಸಂಘಟನೆಯಾದ ಅನುಶೀಲನ ಸಮಿತಿ'ಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ರೋಮಾಂಚಕ ಸನ್ನಿವೇಶದೊಂದಿಗೆ ನಾಟಕ ತೆರೆದುಕೊಳ್ಳುತ್ತದೆ.


ಅಂದಿನ ದಿನಗಳಲ್ಲಿ ಬ್ರಿಟಿಷ್ ಗುಪ್ತಚರ ಇಲಾಖೆಯ ತೀಕ್ಷ್ಣ ನಿಗಾದಿಂದ ತಪ್ಪಿಸಿಕೊಳ್ಳಲು ಅವರಿಗೆ ನೀಡಲಾಗಿದ್ದ ರಹಸ್ಯ



ನಾಮವೇ ಕೋಕೇನ್'. ರಂಗದ ಮೇಲೆ ಮೂಡಿಬರುವ ಈ ಆರಂಭಿಕ ದೃಶ್ಯ ತೀವ್ರವಾದ ಭಾವುಕತೆಯಿಂದ ಕೂಡಿದೆ. ತಮ್ಮ ಪ್ರಾಣದ ಹಂಗು ತೊರೆದು ದೇಶಕ್ಕಾಗಿ ಹೋರಾಡುತ್ತಿದ್ದ ಸಹ ಕ್ರಾಂತಿಕಾರಿ ಯೊಬ್ಬರ ಅಕಾಲಿಕ ಬಲಿದಾನದ ಸುದ್ದಿ ಕೇಳಿ ಯುವ ಹೆಡಗೇವಾರ್ ತೀವ್ರವಾಗಿ ನೊಂದುಕೊಳ್ಳುವ, ಆತಂಕ ಮತ್ತು ತಲ್ಲಣಕ್ಕೆ ಒಳಗಾಗುವ ದೃಶ್ಯವನ್ನು ಕಲಾವಿದರು ಅತ್ಯಂತ ಮಾರ್ಮಿಕವಾಗಿ ಅಭಿನಯಿಸಿದ್ದಾರೆ. ಆದರೆ, ಒಡನಾಡಿಯ ನಿಧನದಿಂದ ಧೃತಿಗೆಡದ ಕೋಕೇನ್' (ಡಾ. ಹೆಡಗೇವಾರ್), ಆ ತೀವ್ರ ದುಃಖವನ್ನೇ ಬ್ರಿಟಿಷರ ವಿರುದ್ಧದ ಜ್ವಾಲಾಮುಖಿ ಆಕ್ರೋಶವನ್ನಾಗಿ ಮಾರ್ಪಡಿಸಿಕೊಳ್ಳುತ್ತಾರೆ. ಈ ದೃಶ್ಯವು ನಾಟಕದ ಮುಂದಿನ ಭವ್ಯ ಕಥಾವಸ್ತುವಿಗೆ ಮತ್ತು ಅವರ ಅಪ್ರತಿಮ ದೇಶಭಕ್ತಿಗೆ ಅತ್ಯಂತ ಶಕ್ತಿಶಾಲಿ ಮುನ್ನುಡಿಯನ್ನಿಡುತ್ತದೆ.

ದಿನನಿತ್ಯದ ಶಾಖೆ, ಸಂಘ ಕಾರ್ಯಗಳ ಕುರಿತು ಆಳವಾಗಿ ಚರ್ಚಿಸಿ, ಯೋಜನೆ ರೂಪಿಸಿ, ಅವುಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ದಾರಿ ತೋರುವ ಬೈಠಕ್', ಹಾಗೂ ಸ್ವಯಂಸೇವಕರಿಗೆ ಅಗತ್ಯವಾದ ಜ್ಞಾನ, ಕೌಶಲ್ಯಗಳನ್ನು ಧಾರೆ ಎರೆದು ಅವರನ್ನು ಸಂಘ ಕಾರ್ಯಕ್ಕೆ ಸಂಪೂರ್ಣವಾಗಿ ಸಜ್ಜುಗೊಳಿಸುವ ವಿಶಿಷ್ಟ ತರಬೇತಿಯ ವರ್ಗಗಳ ಮೂಲಕ ಪರಸ್ಪರ ಪ್ರೀತಿ-ವಿಶ್ವಾಸ ಬೆಸೆಯುವ ಕಾರ್ಯಪದ್ಧತಿ, ಪ್ರಾರ್ಥನೆ ಹಾಗೂ ಭಗವಾಧ್ವಜದ ಸಮ್ಮುಖದಲ್ಲಿ ಶಿಸ್ತಿನ ಸಿಪಾಯಿಗಳನ್ನು ನಿರ್ಮಿಸುವ ಆ ಭವ್ಯ ಪ್ರಕ್ರಿಯೆಯನ್ನು ನಾಟಕವು ಪ್ರೇಕ್ಷಕರ ಕಣ್ಣಿಗೆ ಕಟ್ಟುವಂತೆ ಪ್ರಸ್ತುತಪಡಿಸಿದೆ.

ಡಾಕ್ಟರ್‌ಜೀ ಅವರು ತಮ್ಮ ಜೀವಿತಾವಧಿಯ ಕೊನೆಯ 15 ವರ್ಷಗಳಲ್ಲಿ ಹಾಕಿಕೊಟ್ಟ ಈ ಭದ್ರವಾದ ಬುನಾದಿಯೇ, ಇಂದು ಒಂದು ಯುಗವನ್ನು (ನೂರುವರ್ಷಗಳನ್ನು) ದಾಟಿಯೂ ಜಗತ್ತಿನ ಅತಿ ದೊಡ್ಡ ಸ್ವಯಂಸೇವಾ ಸಂಘಟನೆಯಾಗಿ ಅಖಂಡವಾಗಿ ಬೆಳೆದು ನಿಲ್ಲಲು ಕಾರಣ ಎಂಬುದನ್ನು ನಾಟಕವು ತಾರ್ಕಿಕವಾಗಿ ನಿರೂಪಿಸುತ್ತದೆ. ನಿರ್ದೇಶಕರಾದ ಸುಬೋಧ್ ಸಹಸ್ರಬುದ್ಧೆ ಅವರ ರಂಗಕಲ್ಪನೆ ಅತ್ಯಂತ ಉನ್ನತ ಮಟ್ಟದ್ದಾಗಿದೆ. ನಾಟಕದ ನಡುವೆ ಪ್ರೇರಣೆಯ ರೂಪದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರಸಂಗವನ್ನು ತಂದಿರುವುದು ಮತ್ತು ಕರ್ತವ್ಯ ಪ್ರಜ್ಞೆಯನ್ನು ಎಚ್ಚರಿಸಲು ಕೃಷ್ಣ-ಅರ್ಜುನರ ಸಂವಾದವನ್ನು ಜೋಡಿಸಿರುವುದು ನಿರ್ದೇಶನದ ವಿಶಿಷ್ಟ ಚಾತುರ್ಯವಾಗಿದೆ. ಇಡೀ ನಾದಬ್ರಹ್ಮ ತಂಡದ ಪ್ರಕಾರ, ಈ ರಂಗಪ್ರಯೋಗ ಕೇವಲ ಅವರ ವೈಯಕ್ತಿಕ ಸಾಧನೆಯಲ್ಲ, ಬದಲಿಗೆ ಡಾಕ್ಟರ್‌ಜೀ ಅವರ ಒಟ್ಟಾರೆ ತಪಸ್ಸಿನ ಪ್ರೇರಣೆಯಿಂದ ನಡೆದ ಒಂದು ಈಶ್ವರೀಯ ಕಾರ್ಯವಾಗಿದೆ. ಇಂದಿನ ಯುವ ಪೀಳಿಗೆಗೆ ನಮ್ಮ ಸಾಂಸ್ಕೃತಿಕ ಬೇರುಗಳನ್ನು ಹೆಮ್ಮೆಯಿಂದ ಪರಿಚಯಿಸಲು ಈ ನಾಟಕ ಅತ್ಯಂತ ಪ್ರಸ್ತುತವಾಗಿದೆ.



ನಾಟಕದ ಪ್ರಥಮಾರ್ಧವು ಸಂಘದ ಸ್ಥಾಪನೆಯ ಭವ್ಯ ಇತಿಹಾಸವನ್ನು ತೆರೆದಿಟ್ಟರೆ, ದ್ವಿತೀಯಾರ್ಧದಲ್ಲಿ ಮಾಧವ ಸದಾಶಿವ ಗೋಲವಲ್ಕರ್ (ಶ್ರೀಗುರೂಜಿ) ಅವರ ಪ್ರವೇಶ ಪ್ರೇಕ್ಷಕರಲ್ಲಿ ಹೊಸ ಕುತೂಹಲ ಮತ್ತು ರೋಮಾಂಚನವನ್ನು ಹುಟ್ಟುಹಾಕುತ್ತದೆ. ಆಧ್ಯಾತ್ಮದ ಕಡೆಗೆ ತೀವ್ರ ಒಲವು ಹೊಂದಿದ್ದ, ರಾಮಕೃಷ್ಣ ಮಿಷನ್‌ನ ಸನ್ಯಾಸತ್ವದತ್ತ ಆಕರ್ಷಿತ ರಾಗಿದ್ದ ಗುರೂಜಿಯವರ ಅದ್ಭುತ ತೇಜಸ್ಸು ಮತ್ತು ಅಪ್ರತಿಮ ಪ್ರತಿಭೆಯನ್ನು ಡಾಕ್ಟರ್‌ಜೀ ಗುರುತಿಸುವ ದೃಶ್ಯ ನಾಟಕಕ್ಕೆ ಹೊಸ ತಿರುವು ನೀಡುತ್ತದೆ. ಕೇವಲ ವೈಯಕ್ತಿಕ ಮೋಕ್ಷಕ್ಕಾಗಿ ತಪಸ್ಸು ಮಾಡುವುದಕ್ಕಿಂತ, ನೊಂದಿರುವ ಇಡೀ ಸಮಾಜದ ಮುಕ್ತಿಗಾಗಿ ಕಾಯಕ ಮಾಡುವುದೇ ನಿಜವಾದ ಆಧ್ಯಾತ್ಮ ಮತ್ತು ದೈವಕಾರ್ಯ ಎಂಬುದನ್ನು ಡಾಕ್ಟರ್‌ಜೀ ಅವರು ಗುರೂಜಿಯವರಿಗೆ ಮನವರಿಕೆ ಮಾಡಿಕೊಡುವ ಪರಿ ಅನನ್ಯ.

ಈ ಇಬ್ಬರು ಮಹಾನ್ ಚೇತನಗಳ ನಡುವಿನ ಅಪೂರ್ವ ಬಾಂಧವ್ಯ ಮತ್ತು ಕೊನೆಗೆ ಗುರೂಜಿಯವರು ಡಾಕ್ಟರ್‌ಜೀ ಅವರ ಮಾತಿಗೆ ಒಪ್ಪಿ ತಮ್ಮ ಇಡೀ ಜೀವನವನ್ನು ಸಂಘಕಾರ್ಯಕ್ಕಾಗಿ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವ ಭಾವುಕ ಸನ್ನಿವೇಶವು ಪ್ರೇಕ್ಷಕರ ಕಣ್ಣಾಲಿಗಳನ್ನು ಒದ್ದೆಯಾಗಿಸುತ್ತದೆ. ಇತಿಹಾಸದ ಅತ್ಯಂತ ಅಪರೂಪದ ಹಾಗೂ ಭಾವುಕ ಕ್ಷಣವನ್ನು ಪ್ರೇಕ್ಷಕರ ಕಣ್ಣೆದುರು ಮರುಸೃಷ್ಟಿಸುತ್ತದೆ.

ಅನಾರೋಗ್ಯದ ಆ ಕಠಿಣ ದಿನಗಳ ನಡುವೆಯೂ ಮೂಡಿಬರುವ ನಾಟಕದ ಅತ್ಯಂತ ಭಾವುಕ, ಅತಿ ಹೆಚ್ಚು ಪ್ರೇರಣಾದಾಯಕ ದೃಶ್ಯವೆಂದರೆ, ಅದು 1940ರ ನಾಗಪುರದ ಸಂಘ ಶಿಕ್ಷಾ ವರ್ಗದಲ್ಲಿ ಡಾಕ್ಟರ್‌ಜೀ ಅವರು ನೀಡಿದ ಕೊನೆಯ ಐತಿಹಾಸಿಕ ಬೌದ್ಧಿಕ್. ತಮ್ಮೆಲ್ಲಾ ದೈಹಿಕ ನೋವನ್ನು ಮರೆತು ಸಿಂಹಗರ್ಜನೆ ಮಾಡುವ ಅವರ ಆ ಪ್ರಖರ ಧ್ವನಿ ಇಡೀ ರಂಗಮಂದಿರವನ್ನೇ ಒಂದು ಕ್ಷಣ ಮೌನವಾಗಿಸಿ, ನಿಶ್ಯಬ್ದಗೊಳಿಸುತ್ತದೆ. ನನಗೆ ನಿಮ್ಮ ಕಣ್ಣೆದುರು ಇಡೀ ಹಿಂದುಸ್ಥಾನದ ಭವ್ಯ ವೈಭವದ ದರ್ಶನ ವಾಗುತ್ತಿದೆ. ಸಂಘ ಕಾರ್ಯವು ಕೇವಲ ನಿತ್ಯದ ಶಾಖೆಗೆ ಮಾತ್ರ ಸೀಮಿತವಾಗಬಾರದು; ನಮ್ಮಲ್ಲಿ ಯಾರೊಬ್ಬರೂ ಎಂದಿಗೂ ನಾನು ಹಿಂದೆ ಸ್ವಯಂಸೇವಕನಾಗಿದ್ದೆ ಎಂದು ಭೂತಕಾಲದಲ್ಲಿ ಮಾತನಾಡಬಾರದು. ಬದಲಿಗೆ, ನಮ್ಮ ಜೀವನದ ಕೊನೆಯ ಉಸಿರಿರುವವರೆಗೂ ನಾವು ಸ್ವಯಂಸೇವಕರಾಗಿಯೇ ರಾಷ್ಟ್ರಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಗದ್ಗದಿತ ಕಂಠದಿಂದ ನೀಡುವ ಆ ಅಂತಿಮ ಸಂದೇಶ, ಕೇವಲ ರಂಗದ ಮೇಲಿದ್ದ ಸ್ವಯಂಸೇವಕರಿಗಷ್ಟೇ ಅಲ್ಲ, ಇಡೀ ಪ್ರದರ್ಶನವನ್ನು ಉಸಿರು ಬಿಗಿಹಿಡಿದು ವೀಕ್ಷಿಸುತ್ತಿದ್ದ ನಮ್ಮಂತಹ ಪ್ರತಿಯೊಬ್ಬ ಪ್ರೇಕ್ಷಕನ ನರನಾಡಿಗಳಲ್ಲೂ ಅಭೂತಪೂರ್ವ



ವಿದ್ಯುತ್ ಸಂಚಲನ ಉಂಟುಮಾಡುತ್ತದೆ.

ಆ ವಿದ್ಯುತ್ ಸಂಚಲನದ ಬೆನ್ನಲ್ಲೇ ಮೂಡಿಬರುವ ನಾಟಕದ ಮಹಾಮುಕ್ತಾಯವು ಪ್ರತಿಯೊಬ್ಬ ಪ್ರೇಕ್ಷಕನ ಹೃದಯವನ್ನು ಭಾರವಾಗಿಸುತ್ತದೆ. ಜೊತೆಗೆ ಇಡೀ ಸಭಾಂಗಣ ನಿಲ್ಲದ ಕರತಾಡನಕ್ಕೆ ಸಾಕ್ಷಿಯಾಗುವಂತೆ ಮಾಡುತ್ತದೆ. 1940ರ ಜೂನ್ 21ರಂದು ಡಾಕ್ಟರ್‌ಜೀ ಅವರ ಮಹಾನಿರ್ವಾಣದ ಕೊನೆಯ ಕ್ಷಣಗಳು ಹತ್ತಿರ ಬಂದಾಗ, ರಂಗದ ಮೇಲಿನ ವಾತಾವರಣ ಅತ್ಯಂತ ಗಂಭೀರವಾಗುತ್ತದೆ.

ಸಾವು ಕಣ್ಣೆದುರು ಬಂದು ನಿಂತಿದ್ದರೂ, ದೈಹಿಕ ಪ್ರಜ್ಞೆ ತಪ್ಪುತ್ತಿದ್ದರೂ ಅವರ ಒಳಮನಸ್ಸು ನಿರಂತರವಾಗಿ ಜಪಿಸುತ್ತಿದ್ದದ್ದು ಮಾತ್ರ ತಾಯ್ನಾಡಿನ ಪರಮಪವಿತ್ರ ಮಂತ್ರವನ್ನೇ. ತಮ್ಮ ಕೊನೆಯ ಉಸಿರನ್ನು ಎಳೆಯುವ ಮುನ್ನ ಡಾಕ್ಟರ್ಜೀ ಅವರು ಅತ್ಯಂತ ಗಂಭೀರ ಹಾಗೂ ಭಕ್ತಿಪೂರ್ವಕವಾಗಿ ಉಚ್ಚರಿಸುವ ಆ ಅಂತಿಮ ಮಹಾಶಬ್ದಗಳು: ಹಿಂದೂ ರಾಷ್ಟ್ರ, ಭಾರತ್ ಮಾತಾ ಮತ್ತು ವಂದೇ ಮಾತರಂ! ಯುಗ ಪ್ರವರ್ತಕ' ಎನ್ನುವ ಶೀರ್ಷಿಕೆಗೆ ನಾಗಪುರದ ಆ ಧೀಮಂತ ಕಲಾವಿದರು ರಂಗದ ಮೇಲೆ ಸಂಪೂರ್ಣ ನ್ಯಾಯ ಒದಗಿಸಿದ್ದರು. ಡಾಕ್ಟರ್‌ಜೀ ಅವರು ದೈಹಿಕವಾಗಿ ಮರೆಯಾಗಿದ್ದರೂ, ಅವರು ಬಿತ್ತಿದ ಆ ಪ್ರಖರ ರಾಷ್ಟ್ರಚಿಂತನೆಯ ರಂಗರೂಪ ಇಂದಿಗೂ, ಮುಂದಿಗೂ ದೇಶದ ಕೋಟ್ಯಂತರ ಸ್ವಯಂಸೇವಾ ರೂಪದ ಕಾರ್ಯಕರ್ತರಲ್ಲಿ ಸದಾಜೀವಂತವಾಗಿರುತ್ತದೆ ಎಂಬುದನ್ನು ಈ ನಾಟಕ ಪ್ರತಿಯೊಬ್ಬರ ಮನದ ಆಳಕ್ಕೆ ತಲುಪಿಸುತ್ತದೆ.

ಸಂಪಾದಕೀಯ

ಇಚ್ಛಾಶಕ್ತಿಯ ಸುದೀರ್ಘ ಹರಿವು

ಇಂದಿಗೆ ನರೇಂದ್ರ ಮೋದಿಯವರು ದೀರ್ಘಾವಧಿಯವರೆಗೆ ಪ್ರಧಾನಮಂತ್ರಿಯಾದ ನಾಯಕ ಎಂಬ ದಾಖಲೆಗೆ ಸೇರುತ್ತಾರೆ. ಇದಕ್ಕೆ ಮೊದಲು ನೆಹರು ದೀರ್ಘಾವಧಿಯವರೆಗೆ ಅಧಿಕಾರದಲ್ಲಿದ್ದವರು ಎಂಬ ದಾಖಲೆ ಇತ್ತು. ಇದು ಕೂಡ ಒಂದು ದಾಖಲೆಯೇ? ಅದು ಸಂವಿಧಾನ ಕೊಟ್ಟ ಅವಕಾಶವಲ್ಲವೇ ಎಂಬ ಪ್ರಶ್ನೆಗಳು ಅನೇಕರಿಗೆ ಬರಬಹುದು. ದಾಖಲೆ ಎಂಬ ಪದ ' ಹೊಂದಾಣಿಕೆಯಾಗದು ಎಂದೂ ಕೆಲವರಿಗನಿಸಬಹುದು. ಅದರೂ ಮೋದಿಯವರು ದೀರ್ಘಾವಧಿಯ ಪ್ರಧಾನಮಂತ್ರಿ ಎಂಬ ಸಂಗತಿಯಂತೂ ದೇಶಕ್ಕೆ ಮುಖ್ಯ. ಇವರಿಬ್ಬರೂ ಆಳಿದ ಕಾಲಘಟ್ಟ, ಸಂದರ್ಭ ಸಂಪೂರ್ಣ ಭಿನ್ನ. ಹಾಗಾಗಿ ವಿವೇಚನೆ ಇಲ್ಲದ ನೆಹರು ಮಾಡಿದ್ದನ್ನು ಮೋದಿ ಮಾಡಿದರು ಎನ್ನುವುದೂ ವಿವೇಕದ ನಡೆಯಲ್ಲ, ಆದರೆ ಅದಕ್ಕೆ ಹೊರತಾದ ಕೆಲವು ಸಂಗತಿಗಳಂತೂ ಇದ್ದೇ ಇದೆ.



ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾದ ನೆಹರು ಪ್ರಧಾನಮಂತ್ರಿಯಾಗಿದ್ದು ಗಾಂಧೀಜಿಯವರ ಕೃಪಾಕಟಾಕ್ಷದಿಂದ. ಸ್ವಾತಂತ್ರ್ಯದ ಆರಂಭದ ವರ್ಷಗಳಲ್ಲಿ ನೆಹರು ಅವರಿಗೆ ಸಹಜವಾದ ಗೊಂದಲಗಳಿದ್ದವು. ಆದರೆ ಸಂವಿಧಾನ ರಚನೆಯಾಗಿ ಜನರಿಂದ ಆಯ್ಕೆಯಾದ ಮೇಲೂ ಅವರ ಗೊಂದಲ ನಿವಾರಣೆಯಾಗಲಿಲ್ಲ. ಕಾಶ್ಮೀರದ ಸಂಗತಿಯನ್ನು ಅಂತಾರಾಷ್ಟ್ರೀಯ ಸಮಸ್ಯೆಯೆಂಬಂತೆ ಬಿಂಬಿಸಿದ್ದರಿಂದ ಹಿಡಿದು ಸಮಾಜವಾದವೋ, ಬಂಡವಾಳವಾದವೋ ಎಂಬ ಗೊಂದಲದವರೆಗೆ ಕೊನೆಯವರೆಗೂ ನಿವಾರಣೆಯಾಗಲಿಲ್ಲ. ಹೊಸ ಭಾರತ ಉದಯವಾಗಿದೆ ಎಂಬ ಭ್ರಮೆಯಲ್ಲಿಯೇ ಇದ್ದ ಅವರಿಗೆ ಈ ನೆಲ ಶತಮಾನಗಳ ಹಿಂದಿನಿಂದಲೇ ಶ್ರೇಷ್ಠ ನಾಗರಿಕ ಸಮಾಜವನ್ನು ಅಳವಡಿಸಿಕೊಂಡಿತ್ತು ಎಂಬುದನ್ನು ಒಪ್ಪುವ ಮನಸ್ಥಿತಿ ಅವರಿಗೆ ಬರಲೇ ಇಲ್ಲ. ಪರಿಣಾಮ ಸಮಸ್ಯೆಗಳೆಲ್ಲವೂ ಅಲ್ಲಿಂದಲೇ ಹುಟ್ಟಿದವು, ಬೆಳೆದವು, ಹೆಮ್ಮರವಾದವು. ಸೆಕ್ಯುಲರಿಸಮ್ಮಿನ ಭ್ರಾಂತಿಯಿಂದ ಮೊದಲುಗೊಂಡು ತನ್ನೆಲ್ಲಾ ಸಮಸ್ಯೆಗಳಿಗೆ ವಿದೇಶಿಯರಲ್ಲೇ ಪರಿಹಾರವಿದೆ ಎಂದು ನಂಬಿದ ಯುಗವನ್ನು ಬಟ್ಟಂಗಿಗಳು ನೆಹರೂಯಿಯನ್ ಯುಗವೆಂದು ಬಣ್ಣಿಸಿ ಭಾರತ ಓಟವನ್ನು ಕುಂಠಿತಗೊಳಿಸಿದರು. ಹಾಗಾಗಿ ಇಂದು ನಾವು ದೇಶದಲ್ಲಿ ಯಾವುದನ್ನು ಸಮಸ್ಯೆ ಎಂದು ನೋಡುತ್ತೇವೆಯೋ ಅವೆಲ್ಲವೂ ಆ ಯುಗದ ಮೂಲಕ್ಕೇ ಹೋಗುತ್ತದೆ. ಆ ಸಮಸ್ಯೆಗಳೆಲ್ಲವೂ ಇಂದು ಒಂದೊಂದಾಗಿ ಪರಿಹಾರವಾಗುತ್ತಿದೆ ಎಂದರೆ ಅದಕ್ಕೆ ಕಾರಣ ನರೇಂದ್ರ ಮೋದಿಯವರ ಭಾರತ ಪ್ರೀತಿ. ಅಂದು ಜಾಗತಿಕ ನಾಯಕರ ಮನೆ ಬಾಗಿಲು ಕಾಯುತ್ತಿದ್ದ ಪ್ರತ್ಯೇಕಿಸಿಟ್ಟ ಕಾಶ್ಮೀರ ಇಂದು ದೇಶದ ಉಳಿದ ರಾಜ್ಯಗಳಲ್ಲೊಂದು. ಇಂದು ದೇಶ ಸಬ್ ಕಾ ವಿಕಾಸ್ ಎನ್ನುವ ಘೋಷಣೆಯಲ್ಲಿ ಏಕತೆಯನ್ನು ಅನುಭವಿಸುತ್ತಿದೆ. ಅಂದು ಜಾಗತಿಕ ನಾಯಕರ ಮನೆ ಬಾಗಿಲು ಕಾಯುತ್ತಿದ್ದ ಭಾರತ ಇಂದು ವಿಶ್ವದ ಪ್ರಬಲ ಶಕ್ತಿಗಳಲ್ಲೊಂದು. ಪಟ್ಟಿ ಮಾಡುತ್ತಾ ಹೋದರೆ ಇನ್ನೆಷ್ಟೋ. ಇದಕ್ಕೆಲ್ಲಾ ಪ್ರಧಾನಮಂತ್ರಿಯವರ ಇಚ್ಛಾಶಕ್ತಿಯೇ ಕಾರಣ ಎನ್ನದೆ ಇನ್ನೇನೂ ಹೇಳಲಾಗುವುದಿಲ್ಲ. ಇಬ್ಬರು ನಾಯಕರ ತುಲನೆ ಸಲ್ಲ ಎಂದರೂ ಇಬ್ಬರು ನಾಯಕರ ಛಲ ಮತ್ತು ಇಚ್ಛಾಶಕ್ತಿಯನ್ನು ಅಳೆದರೆ ತಪ್ಪಿಲ್ಲ. ನೆಹರು ಅವರಿಗೆ ಅಂದು ಗೊಂದಲಗಳಿಲ್ಲದಿದ್ದರೆ ಭಾರತದ ಸ್ಥಾನ ಇನ್ನೆಲ್ಲೋ ಇರುತ್ತಿತ್ತು ಎನ್ನುವುದು ಮಾತ್ರ ಸತ್ಯ.

ರಾಜಕಾರಣದ ವ್ಯಾಕರಣ ಬದಲಿಸಿದ ಮೋದಿ

ಅಜಯ್ ಸಿಂಗ್

ಮೈಲಿಗಲ್ಲುಗಳು ಮತ್ತು ಕಾಲಮಾನ-ಇವು ಪರಿವರ್ತನೆಯ ಯುಗದ ಸರಿಯಾದ ಅಳತೆಗೋಲುಗಳಲ್ಲ, ಅವು ಕೇವಲ ಅಂಕಿ-ಅಂಶಗಳು. ನರೇಂದ್ರ ಮೋದಿ ಅವರು ದೇಶದಲ್ಲಿ ಅತ್ಯಂತ ದೀರ್ಘಕಾಲ ಸೇವೆ ಸಲ್ಲಿಸಿದ ಪ್ರಧಾನಮಂತ್ರಿ ಆಗುವುದು ಕೇವಲ ಒಂದು ಮೈಲಿಗಲ್ಲನ್ನು ದಾಟುವುದು ಮಾತ್ರವಲ್ಲ, ಅದೊಂದು ಸುದೀರ್ಘ ಅಧಿಕಾರಾವಧಿಯ ದಾಖಲೆಗಿಂತ ಮಹತ್ವದ್ದು. ಈ ಕಾಲದ ಮನೋಭಾವವನ್ನು ಕೇವಲ ಸಂಖ್ಯೆಗಳಲ್ಲಿ ಹಿಡಿದಿಡಲು ಸಾಧ್ಯವಿಲ್ಲ ಮತ್ತು ಆ ಮನೋಭಾವದಲ್ಲಿ ಅವರು ಭಾರತದ ಪ್ರತಿಭೆಯನ್ನು ಪ್ರತಿನಿಧಿಸುತ್ತಾರೆ. ಅವರ ಸಾರ್ವಜನಿಕ ಜೀವನದ ಪಥವು ಸಾಮಾನ್ಯದಿಂದ ಅಸಾಮಾನ್ಯದ ಕಡೆಗೆ ರೂಪಾಂತರಗೊಂಡಿದೆ. ಸಂಘ ಪರಿವಾರದಿಂದ ಪ್ರೇರಣೆ ಪಡೆದ ಒಬ್ಬ ಸಾಮಾನ್ಯ ಆರ್‌ಎಸ್‌ಎಸ್ ಕಾರ್ಯಕರ್ತನಾಗಿ ಅವರ ಪಯಣ ಆರಂಭವಾಯಿತು. 1950 ಮತ್ತು 60ರ ದಶಕದಲ್ಲಿ ಅವರು ತಮ್ಮ ತವರು ರಾಜ್ಯವಾದ ಗುಜರಾತ್‌ನಲ್ಲಿ ಆಗಿನ ಕಾಲಕ್ಕೆ ಅತ್ಯಂತ ಕಡಿಮೆ ಜನಪ್ರಿಯವಾಗಿದ್ದ ಸಿದ್ಧಾಂತವನ್ನು ಪ್ರತಿಪಾದಿಸಿದವರು.



ಆ ಕಾಲದ ಸಾಂಪ್ರದಾಯಿಕ ರಾಜಕಾರಣಿಗಳಿಗಿಂತ ಭಿನ್ನವಾಗಿ ಅವರು ಹೆಮ್ಮೆಪಟ್ಟುಕೊಳ್ಳಲು ಯಾವುದೇ ರಾಜಕೀಯ ಅಥವಾ ಗಣ್ಯರ ವಂಶಾವಳಿಯ ಹಿನ್ನೆಲೆ ಇಲ್ಲದವರು. ಹ್ಯಾರೋ, ಆಕ್ಸ್‌ಫರ್ಡ್, ಕೊಲಂಬಿಯಾ ಅಥವಾ ಹಾರ್ವರ್ಡ್‌ನಂತಹ ವಿದೇಶಿ ವಿವಿಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳ ವಿಶೇಷ ಕ್ಲಬ್‌ಗಳನ್ನು ಇಡೀ ಜಗತ್ತು ಗೌರವದಿಂದ ನೋಡುತ್ತಿತ್ತು. ಸರ್ ವಿನ್‌ಸ್ಟನ್ ಚರ್ಚಿಲ್ ಮತ್ತು ಭಾರತದ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರು ಹ್ಯಾರೋ ಬಾಯ್ಸ್ ಎಂದೇ ಪರಿಚಿತರಾಗಿದ್ದರು. ಅವರು ಒಂದೇ ಭಾಷೆಯನ್ನು ಮಾತನಾಡುತ್ತಿದ್ದರು ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಗಣ್ಯರ ಬಳಗದಲ್ಲಿದ್ದರು. ಆದರೆ ಮೋದಿಯವರು ಅಂತಹ ಎಲ್ಲಾ ವಿವರಣೆಗಳನ್ನು ಸಂಪೂರ್ಣವಾಗಿ ಸುಳ್ಳಾಗಿಸಿದರು. ದೇಶಾದ್ಯಂತ ಸಾಮಾನ್ಯ ಜನರೊಂದಿಗೆ ಸಂವಾದ ನಡೆಸುವ ಮೂಲಕ ತಮ್ಮ ತಳಮಟ್ಟದ ಅನುಭವದಿಂದ ಅವರು ಭಾರತೀಯ ಸಮಾಜದ ಬಗ್ಗೆ ಜ್ಞಾನವನ್ನು ಪಡೆದುಕೊಂಡರು. ಜನರ ಆತಂಕಗಳು ಮತ್ತು ಆಕಾಂಕ್ಷೆಗಳ ಬಗ್ಗೆ ಅವರಿಗೆ ಅಸಾಧಾರಣವಾದ ಒಳನೋಟಗಳಿದ್ದವು. ಅವರು ರಾಜಕಾರಣವನ್ನು ವೃತ್ತಿಯಾಗಿ ಆರಿಸಿಕೊಂಡರು ಮತ್ತು ಅದನ್ನು ತಮ್ಮ ಸೈದ್ಧಾಂತಿಕ ಅನ್ವೇಷಣೆಯೊಂದಿಗೆ ಜೋಡಿಸಿದರು. ಅವರ ಈ ಕಾರ್ಯಾಚರಣೆಗೆ ಸಹಾಯ ಮಾಡಿದ್ದು ಅವರ ಎರಡು ಪ್ರಬಲ ಗುಣಗಳು. ವೈಯಕ್ತಿಕ ಜೀವನದಲ್ಲಿ ಅವರ ಸಂಯಮ (ವೈರಾಗ್ಯ) ಮತ್ತು ಸಾರ್ವಜನಿಕ ನಡವಳಿಕೆಯಲ್ಲಿ ಅವರ ಪ್ರಾಯೋಗಿಕತೆ.

ಅವರು ವಿರೋಧಾಭಾಸಗಳನ್ನು ಅತ್ಯಂತ ಸುಲಭವಾಗಿ ನಿಭಾಯಿಸುತ್ತಾರೆ. ಉದಾಹರಣೆಗೆ, ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮೋದಿಯವರು ಸಬ್ಸಿಡಿಗಳ ಮೇಲೆ ಅವಲಂಬಿತವಾಗಿರದ ಬೆಳವಣಿಗೆಯ ಮಾದರಿಯೊಂದನ್ನು ಬಲವಾಗಿ ಪ್ರತಿಪಾದಿಸಿದರು. ಅದೇ ರೀತಿ ಪ್ರಧಾನಮಂತ್ರಿಯಾಗಿ ಸಾಂಕ್ರಾಮಿಕ ರೋಗ ಹರಡಿದ ನಂತರ ದೇಶದಲ್ಲಿ ಯಾರೂ ಹಸಿವಿನಿಂದ ಬಳಲಬಾರದೆಂದು ವಿಶ್ವದ ಅತಿ ದೊಡ್ಡ ಆಹಾರ ಭದ್ರತಾ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಅವರ ಸಾಮಾಜಿಕ ವಸತಿ ಯೋಜನೆ ಮತ್ತು ಆಯುಷ್ಮಾನ್ ಭಾರತ್‌ನಂತಹ ವಿಮಾ ಯೋಜನೆಗಳು ಸಮಾಜದ ಅತ್ಯಂತ ದುರ್ಬಲ ವರ್ಗಗಳ ಕಾಳಜಿಯಿಂದ ಜಾರಿಯಾದಂತಹವು. ಜನರ ಅತ್ಯಂತ ಪ್ರಮುಖ ಆದ್ಯತೆಗಳಾದ ರೋಟಿ, ಕಪ್ಡಾ ಔರ್ ಮಕಾನ್ (ಅನ್ನ, ಬಟ್ಟೆ, ವಸತಿ) ಮತ್ತು ಆರೋಗ್ಯದ ಅಗತ್ಯಗಳನ್ನು ಅವರು ಪೂರೈಸಿದರು. ಈ ಕಾಳಜಿಗಳನ್ನು 60ರ ದಶಕದ ಆರಂಭದಿಂದ ಇತ್ತೀಚಿನವರೆಗೂ ಸಮಾಜವಾದಿಗಳು ರಾಜಕೀಯ ಘೋಷಣೆಗಳಾಗಿ ಮಾತ್ರ ಬಳಸುತ್ತಿದ್ದರು. ಇಂದಿನ ಭಾರತದಲ್ಲಿ ಅಂತಹ ಘೋಷಣೆಗಳು ಪ್ರಾಯೋಗಿಕವಾಗಿ ಅಪ್ರಸ್ತುತವಾಗಿವೆ.

ವಾಸ್ತವವಾಗಿ ಮೋದಿಯವರು ದೇಶದ ರಾಜಕಾರಣವನ್ನು ಅತ್ಯಂತ ಆಳವಾಗಿ ಮರುಕಲ್ಪಿಸಿದ್ದಾರೆ. ದಶಕಗಳ ಕಾಲ ದೇಶವನ್ನು ಕಾಡುತ್ತಿದ್ದ ಸಮಸ್ಯೆಗಳು ಈಗ ಇತಿಹಾಸದ ಪಠ್ಯಕ್ರಮದ ಭಾಗವಾಗಿವೆ. ಜನರ ಸಾಮೂಹಿಕ ಕಲ್ಪನೆಯಲ್ಲಿ ಅಯೋಧ್ಯೆ ಈಗ ಒಂದು ಭವ್ಯವಾದ ದೇವಾಲಯದ ಸಂಕೀರ್ಣದ ಚಿತ್ರಣವನ್ನು ನೀಡುತ್ತದೆಯೇ ಹೊರತು ದೇವಾಲಯ-ಮಸೀದಿ ವಿವಾದದ ಸ್ಥಳವಾಗಿ ಅಲ್ಲ. ದೇಶಾದ್ಯಂತ ಹಿಂದು ದೇವಾಲಯಗಳನ್ನು ಅವುಗಳ ಪ್ರಾಚೀನ ವೈಭವಕ್ಕೆ ಮರುಸ್ಥಾಪಿಸಿರುವುದು ಸಾಂಸ್ಕೃತಿಕ ಏಕತೆಯ ಪ್ರಬಲ ಸಂದೇಶವನ್ನು ರವಾನಿಸುತ್ತದೆ. ಆಶ್ಚರ್ಯಕರ ಸಂಗತಿಯೆಂದರೆ ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ ನಂತರ ದೇಶ ಪ್ರವಾಸ ಕೈಗೊಂಡಾಗ ಮಹಾತ್ಮಾ ಗಾಂಧೀಜಿ ಅವರೂ ಸಹ ಇಂತಹದೇ ಪುನಶ್ಚೇತನದ ಕನಸು ಕಂಡಿದ್ದರು. ಕಾಂಗ್ರೆಸ್‌ನಲ್ಲಿದ್ದ ಗಾಂಧೀಜಿ ಅವರ ಶಿಷ್ಯರು ಅವರ ಆಶಯವನ್ನು ಈಡೇರಿಸುವಲ್ಲಿ ವಿಫಲರಾದರು. ಮೋದಿ ಆ ಕನಸನ್ನು ನನಸು ಮಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಜಮ್ಮು ಮತ್ತು ಕಾಶ್ಮೀರದ ಸ್ಥಾನಮಾನವು ಒಂದು ದೊಡ್ಡ ಗುಣಪಡಿಸಲಾಗದ ಗಾಯವಾಗಿತ್ತು. ರಾಜಕೀಯ ಅಸ್ಪಷ್ಟತೆಯು ಮುಸ್ಲಿಂ ಪ್ರಾಬಲ್ಯದ ಕಣಿವೆಯಲ್ಲಿ ಪ್ರತ್ಯೇಕತಾವಾದ ಮತ್ತು ಉಗ್ರಗಾಮಿತ್ವವನ್ನು ಪ್ರಚೋದಿಸಿತ್ತು. 2014ಕ್ಕಿಂತ ಮೊದಲು ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ಭಾರತೀಯ ಸಂವಿಧಾನದ ವ್ಯಾಪ್ತಿಯನ್ನು ಮೀರಿ ರಾಜ್ಯವನ್ನು 1953 ಕ್ಕಿಂತ ಮುಂಚಿನ ಸ್ಥಿತಿಗೆ ಮರುಸ್ಥಾಪಿಸಬೇಕೆಂದು ಒತ್ತಾಯಿಸಿ ಹಲವು ನಿರ್ಣಯಗಳನ್ನು ಅಂಗೀಕರಿಸಲಾಗಿತ್ತು. ಆದರೆ ಒಂದೇ ಏಟಿಗೆ ಆ ರಾಜ್ಯವನ್ನು ಇಬ್ಭಾಗ ಮಾಡಿ ಕೇಂದ್ರಾಡಳಿತ ಪ್ರದೇಶವಾಗಿ ಪರಿವರ್ತಿಸಲಾಯಿತು. ಆ ಮೂಲಕ 370ನೇ ವಿಧಿಯನ್ನು ಇತಿಹಾಸದ ಒಂದು ಅಪ್ರಸ್ತುತ ಅವಶೇಷವನ್ನಾಗಿ ಮಾಡಲಾಯಿತು. ಪ್ರತ್ಯೇಕತಾವಾದದ ಭೂತವು ಝೇಲಂ ನದಿಯ ಕೆಸರಿನಂತೆ ಆಳವಾಗಿ ಹೂತುಹೋಗಿದೆ. ದೇಶದ ಉಳಿದ ಭಾಗಗಳೊಂದಿಗೆ ಸಂಪೂರ್ಣ ಮತ್ತು ಬೇಷರತ್ತಾದ ಏಕೀಕರಣಕ್ಕಾಗಿ ಆ ಪ್ರದೇಶದ ಜನರಲ್ಲಿ ಇಂದು ತೀವ್ರ ಹಂಬಲವಿದೆ. ತೀರಾ ಇತ್ತೀಚಿನ ಭೂತಕಾಲದಲ್ಲಿ ಉಗ್ರಗಾಮಿತ್ವ ಮತ್ತು ಹಿಂಸಾಚಾರದಿಂದ ತತ್ತರಿಸಿದ್ದ ಈಶಾನ್ಯ ರಾಜ್ಯಗಳ ವಿಷಯದಲ್ಲೂ ಇದು ಅನ್ವಯಿಸುತ್ತದೆ.

ಮೋದಿ ಅವರು ಗಣಿತದ ಒಂದು ಪಾಠವನ್ನು ಅರಿವಿಲ್ಲದೆಯೇ ಅಳವಡಿಸಿಕೊಂಡಂತೆ ತೋರುತ್ತದೆ. ಅದೇನೆಂದರೆ, ಸಮಸ್ಯೆಯನ್ನು ಸೃಷ್ಟಿಸಿದ ಮನಸ್ಥಿತಿಯಿಂದಲೇ ಆ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ. ಅವರು ದೇಶದ ರಾಜಕೀಯ ಮನಸ್ಥಿತಿಯನ್ನೇ ಸಂಪೂರ್ಣವಾಗಿ ಬದಲಾಯಿಸಿದರು ಮತ್ತು ಅದನ್ನು ಎಂದಿಗೂ ಹಿಂತಿರುಗಿಸಲಾಗದ ಹಾದಿಯಲ್ಲಿ ಮುನ್ನಡೆಸಿದರು.

ಸಾರ್ವಜನಿಕ ಜೀವನದ ನಡವಳಿಕೆಯಲ್ಲಿ ಇಂತಹ ಆಮೂಲಾಗ್ರ ಬದಲಾವಣೆಯು ತೀವ್ರ ಪ್ರತಿಕ್ರಿಯೆಗಳನ್ನು ಉಂಟುಮಾಡುವುದು ಸಹಜ. ಇದರ ಪರಿಣಾಮವಾಗಿ ಮೋದಿ ಅವರಿಗೆ ಪ್ರಶಂಸೆಗಿಂತ ಟೀಕೆಗಳೇ ಹೆಚ್ಚು ಸಿಗುತ್ತವೆ. ಆದರೆ ಅವರು ತಮ್ಮ ಬದ್ಧತೆಗಳಲ್ಲಿ ಧೃತಿಗೆಡದೆ ಸ್ಥಿರವಾಗಿ ಉಳಿದಿದ್ದಾರೆ.

ತಮ್ಮ 24 ವರ್ಷಗಳ ಆಡಳಿತಾವಧಿಯಲ್ಲಿ, ಮೊದಲು ಗುಜರಾತ್ ಮುಖ್ಯಮಂತ್ರಿಯಾಗಿ ಮತ್ತು ನಂತರ ಭಾರತದ ಪ್ರಧಾನಮಂತ್ರಿಯಾಗಿ ಅವರು ನೈಸರ್ಗಿಕ ಮತ್ತು ರಾಜಕೀಯ ಎರಡೂ ರೂಪದಲ್ಲೂ ಅನೇಕ ಅಭೂತಪೂರ್ವ ಬಿಕ್ಕಟ್ಟುಗಳನ್ನು ಎದುರಿಸಿದ್ದಾರೆ. ಗುಜರಾತ್‌ನಲ್ಲಿ ಕಾರ್ಯಾಂಗದ ಮುಖ್ಯಸ್ಥರಾಗಿ ಅವರ 13 ವರ್ಷಗಳ ಅಧಿಕಾರಾವಧಿಯಲ್ಲಿ ಯುಪಿಎ ನೇತೃತ್ವದ ಪ್ರತಿಕೂಲ ಕೇಂದ್ರ ಸರ್ಕಾರವನ್ನು ಒಂದು ದಶಕದ ಕಾಲ (2004–2014) ಎದುರಿಸಬೇಕಾಯಿತು. ಆ ಸರ್ಕಾರವು ರಾಜ್ಯವನ್ನು ಬಹುತೇಕ ಶತ್ರುವಿನಂತೆ ನಡೆಸಿಕೊಂಡಿತು. ಸೃಷ್ಟಿಸಲಾದ ಕ್ರಿಮಿನಲ್ ಪ್ರಕರಣಗಳಲ್ಲಿ ಅವರನ್ನು ಸಿಲುಕಿಸಲು ವ್ಯವಸ್ಥಿತ ಪ್ರಯತ್ನಗಳು ನಡೆದವು. ಅದೇ ರೀತಿ ಪ್ರಧಾನಮಂತ್ರಿಯಾಗಿ ಅವರ ಪ್ರಸ್ತುತ ಅವಧಿಯು ಮಾನವ ಇತಿಹಾಸದ ಅತ್ಯಂತ ಕೆಟ್ಟ ಬಿಕ್ಕಟ್ಟುಗಳಲ್ಲಿ ಒಂದಾದ ಸಾಂಕ್ರಾಮಿಕ ರೋಗವನ್ನು ಎದುರಿಸಿತು. ಯುರೋಪ್ ಮತ್ತು ಮಧ್ಯಪ್ರಾಚ್ಯದಲ್ಲಿ ಯುದ್ಧಗಳು ಭುಗಿಲೆದ್ದಿದ್ದು ಭಾರತದ ಮೇಲೆ ಭಾರಿ ಭೌಗೋಳಿಕ ರಾಜಕೀಯ ಮತ್ತು ಆರ್ಥಿಕ ಪರಿಣಾಮ ಬೀರಿದೆ. ಇದಕ್ಕೆ ಚಾಣಾಕ್ಷ ರಾಜತಾಂತ್ರಿಕ ಮಾರ್ಗದರ್ಶನದ ಅಗತ್ಯವಿತ್ತು. ಭಾರತದಲ್ಲಿ ಭಯೋತ್ಪಾದನೆಗೆ ಪಾಕಿಸ್ತಾನ ನೀಡುವ ಬೆಂಬಲವನ್ನು ತಡೆಯಲು ದಂಡನಾತ್ಮಕ ಸರ್ಜಿಕಲ್ ಸ್ಟ್ರೈಕ್‌ಗಳು, ಬಾಲಕೋಟ್ ವೈಮಾನಿಕ ದಾಳಿ ಮತ್ತು ಆಪರೇಷನ್ ಸಿಂಧೂರ್ ಅನ್ನು ಪ್ರಾರಂಭಿಸಿದಾಗಲೂ ಸಹ, ಉದ್ವಿಗ್ನತೆಯು ಸಂಪೂರ್ಣ ನಿಯಂತ್ರಣದಲ್ಲಿತ್ತು ಮತ್ತು ಅದನ್ನು ಎಂದಿಗೂ ಪೂರ್ಣ ಪ್ರಮಾಣದ ಯುದ್ಧವಾಗಿ ಬದಲಾಗಲು ಬಿಡಲಿಲ್ಲ. ಅವರ ರಾಜಕೀಯ ವಿರೋಧಿಗಳು ಅವರಲ್ಲಿರುವ ಹಲವು ವೈಫಲ್ಯಗಳನ್ನು ಎತ್ತಿ ತೋರಿಸಬಹುದು ಮತ್ತು ಭಾರತದಂತಹ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಜಾಪ್ರಭುತ್ವದಲ್ಲಿ, ಮೋದಿ ಅವರಂತಹ ವ್ಯಕ್ತಿತ್ವವನ್ನು ಹಲವು ರೀತಿಯಲ್ಲಿ ವಿಶ್ಲೇಷಿಸುವುದು ಸಹಜ. ಭಾರತದ ಚುನಾಯಿತ ಪ್ರಧಾನಮಂತ್ರಿಯಾಗಿ ಅವರ ಸುದೀರ್ಘ ಅವಧಿಯು ಘಟನಾಪ್ರಧಾನವಾಗಿದೆ ಮತ್ತು ಜನರ ಸೂಕ್ಷ್ಮ ಪರಿಶೀಲನೆಗೆ ಮುಕ್ತವಾಗಿದೆ.

ಇತಿಹಾಸವು ಯಾವುದೇ ಭಾವನೆಗಳು ಮತ್ತು ಪೂರ್ವಗ್ರಹಗಳಿಂದ ಮುಕ್ತವಾಗಿರುತ್ತದೆ ಎಂದು ಭಾವಿಸಲಾಗಿದೆ. ಮಹಾತ್ಮಾ ಗಾಂಧೀಜಿ ಅವರನ್ನು ಅವರದೇ ಕಾಲದಲ್ಲಿ ನಿಂದಿಸಲಾಯಿತು ಮತ್ತು ಪ್ರಶಂಸಿಸಲಾಯಿತು. ಆದರೆ ಅವರ ಅತ್ಯಂತ ಪ್ರಭಾವಶಾಲಿ ಐತಿಹಾಸಿಕ ಮೌಲ್ಯಮಾಪನವು ವಿಜ್ಞಾನದ ಪ್ರತಿಭೆ ಆಲ್ಬರ್ಟ್ ಐನ್‌ಸ್ಟೈನ್ ಅವರಿಂದ ಬಂತು. ಅವರು ಇಂತಹ ರಕ್ತಮಾಂಸದ ಮನುಷ್ಯನೊಬ್ಬ ಎಂದಾದರೂ ಈ ಭೂಮಿಯ ಮೇಲೆ ನಡೆದಾಡಿದ್ದನೆಂಬುದನ್ನು ಮುಂದಿನ ಪೀಳಿಗೆಯವರು ನಂಬುವುದು ಕಷ್ಟ ಎಂದು ಅವರು ಬರೆದಿದ್ದರು. ಇತಿಹಾಸವನ್ನು ನಿಖರವಾದ ಪದಗಳಲ್ಲಿ ಮಂಡಿಸಲು ಐನ್‌ಸ್ಟೈನ್‌ನಂತಹ ದೂರದೃಷ್ಟಿಯ ಅಗತ್ಯವಿದೆ. ಆದರೆ ಮುಂದಿನ ಪೀಳಿಗೆಗೆ ಮೋದಿ ಅವರ ಐತಿಹಾಸಿಕ ಮೌಲ್ಯಮಾಪನವೂ ಅಷ್ಟೇ ಪ್ರಭಾವಶಾಲಿಯಾಗಿರಲಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

(ಲೇಖಕರು ಭಾರತದ ರಾಷ್ಟ್ರಪತಿಯವರ ಮಾಜಿ ಪತ್ರಿಕಾ ಕಾರ್ಯದರ್ಶಿ ಮತ್ತು 'ದಿ ಆರ್ಕಿಟೆಕ್ಟ್ ಆಫ್ ದಿ ನ್ಯೂ ಬಿಜೆಪಿ: ಹೌ ನರೇಂದ್ರ ಮೋದಿ ಟ್ರಾನ್ಸ್‌ಫಾರ್ಮ್ಡ್ ದಿ ಪಾರ್ಟಿ' ಪುಸ್ತಕದ ಕರ್ತೃ)

ದೇಶದ ಪ್ರಗತಿ ಪಥ ಬದಲಿಸಿದ ಮೋದಿ

ಏಕನಾಥ ಶಿಂಧೆ, ಮಹಾರಾಷ್ಟ್ರ ಉಪಮುಖ್ಯ ಮಂತ್ರಿ







ನರೇಂದ್ರ ಮೋದಿಯವರು ನಿರಂತರ ಸುದೀರ್ಘ ಅವಧಿಗೆ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ ಸಾಧನೆಗೆ ಈಗ ಪಾತ್ರರಾಗಿದ್ದಾರೆ. ಇಂದು ಮೋದಿಯವರು ಪ್ರಧಾನಿ ಗಾದಿಯಲ್ಲಿ 4,399 ದಿನಗಳನ್ನು ಪೂರೈಸಲಿದ್ದು, ಆ ಮೂಲಕ ಜವಾಹರಲಾಲ್ ನೆಹರೂ ಪ್ರಧಾನಿಯಾಗಿದ್ದ 4,398 ದಿನಗಳ ಸಾಧನೆಯನ್ನು ಮೀರಿ ಮುಂದುವರಿಯಲಿದ್ದಾರೆ. ನೆಹರೂ ಯುಗವು ಭಾರತದ ನಿಧಾನ ಪ್ರಗತಿಯನ್ನು ದಾಖಲಿಸಿದ್ದರೆ, ಮೋದಿಯವರ ಯುಗದಲ್ಲಿ ಭಾರತವು ಅಭಿವೃದ್ಧಿಯತ್ತ ದಾಪುಗಾಲು ಇಡುತ್ತಿರುವುದು ಈ ಎರಡು ಆಡಳಿತ ಕಾಲದ ವ್ಯತ್ಯಾಸವಾಗಿದೆ.

ಪ್ರಧಾನಿ ನರೇಂದ್ರ ಮೋದಿಯವರು ಕಳೆದ 12 ವರ್ಷಗಳಿಂದ 'ನವಭಾರತ' ನಿರ್ಮಾಣಕ್ಕಾಗಿ ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ. ವಿರೋಧಿಗಳ ಅಪಪ್ರಚಾರ, ಟೀಕೆ ಮತ್ತು ಚಾರಿತ್ರ್ಯಹನನದ ಪ್ರಯತ್ನಗಳನ್ನೆಲ್ಲ ಲೆಕ್ಕಿಸದೆ ಮೋದಿಯವರು ತಮ್ಮ ಗುರಿಸಾಧನೆಯ ಪ್ರಯತ್ನದಲ್ಲಿ ಅವಿಚಲಿತರಾಗಿ ಮುಂದುವರಿಯುತ್ತಿದ್ದಾರೆ.

ಈ ಹಿಂದೆಲ್ಲಾ ಸಾಮಾನ್ಯವಾಗಿ ಭಾರತದ ಪ್ರಗತಿಯನ್ನು ತುಲನೆ ಮಾಡುವಾಗ 'ಸ್ವಾತಂತ್ರ್ಯ ಪೂರ್ವ' ಮತ್ತು 'ಸ್ವಾತಂತ್ರ್ಯಾನಂತರ'ದ ಕಾಲ ಎಂದು ಹೇಳಲಾಗುತ್ತಿತ್ತು. ಆದರೆ ಈಗ ಭಾರತವು ಸಾಧಿಸಿರುವ ಅದ್ಭುತ ಪ್ರಗತಿಯ ಬಳಿಕ ದೇಶೀಯವಾಗಿಯೂ, ಜಾಗತಿಕವಾಗಿಯೂ '2014ರ ಮುನ್ನ' ಮತ್ತು '2014ರ ನಂತರ' ಎಂಬ ಕಾಲಖಂಡವನ್ನು ಉಲ್ಲೇಖಿಸಲಾಗುತ್ತಿದೆ. ಮೋದಿಯವರ ಭವಿಷ್ಯದ ಕುರಿತಾದ ದೂರದೃಷ್ಟಿಯೇ ಇದಕ್ಕೆಲ್ಲ ಕಾರಣವಾಗಿದೆ.

1947ರ ಬಳಿಕ 67 ವರ್ಷಗಳ ಅವಧಿಯಲ್ಲಿ ಭಾರತವು ಹಲವಾರು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿತೆಂಬುದು ನಿಜ. ಆದರೆ ಅದು ಪ್ರತಿಯೊಂದು ಪ್ರಜಾತಾಂತ್ರಿಕ ದೇಶವೂ ಸಾಧಿಸಬಹುದಾದ ನಿಧಾನ ಪ್ರಗತಿ. ಆದರೆ ಕಳೆದ 12 ವರ್ಷಗಳಲ್ಲಿ ನಾವು ಕಾಣುತ್ತಿರುವುದು ಕ್ಷಿಪ್ರವಾದ ಹಾಗೂ ದೇಶವನ್ನು ಜಾಗತಿಕವಾಗಿ ಮೇಲೆತ್ತಬಲ್ಲ ಅಭೂತಪೂರ್ವ ಪ್ರಗತಿ.

ಮೊದಲ 67 ವರ್ಷಗಳ ಆಡಳಿತದಲ್ಲಿ ಬಡತನ ನಿವಾರಣೆಗೆ ಮತ್ತು ಅಭಿವೃದ್ಧಿ ಸಾಧಿಸಲು ಹಲವಾರು ಕಾರ್ಯಕ್ರಮಗಳನ್ನು ಪ್ರಕಟಿಸಲಾಯಿತಾದರೂ ಮತ್ತು 'ಗರೀಬಿ ಹಟಾವೋ'ದಂತಹ ಘೋಷಣೆಗಳನ್ನು ಮೊಳಗಿಸಲಾಯಿತಾದರೂ ಬರೀ ಘೋಷಣೆಯಿಂದ ಏನೂ ಸಾಧಿಸಲ್ಪಡಲಿಲ್ಲ. ಕಾಂಗ್ರೆಸ್ ಆಳ್ವಿಕೆಯ ಈ ಸಮಯದಲ್ಲಿ ಖಾದಿಧಾರಿ ರಾಜಕಾರಣಿಗಳು ಮಾತ್ರ ತಮ್ಮ ಜೇಬು ತುಂಬಿಸಿಕೊಳ್ಳುತ್ತಾರೆ ಎಂಬ ಪರಿಕಲ್ಪನೆ ಜನರಲ್ಲಿ ಉಂಟಾಗಲು ಕಾರಣವಾಯಿತು. ಆದರೆ ಮೋದಿಯವರ ಆಡಳಿತದಲ್ಲಿ ಇದು ಬದಲಾಯಿತು. ರಾಷ್ಟ್ರೀಯ ಹಿತಾಸಕ್ತಿ ಆದ್ಯತೆ ಪಡೆಯಿತು. ಮೋದಿಯವರು ಭ್ರಷ್ಟಾಚಾರದ ನಿಯಂತ್ರಣ ಮಾಡಿದರು, ಪ್ರಗತಿಗೆ ಇರುವ ಅಡ್ಡಿಗಳನ್ನು ತೊಲಗಿಸಿದರು. ಪ್ರಗತಿಪರರ ಹೆಸರಿನಲ್ಲಿ ಕಾಂಗ್ರೆಸ್ ನಿರ್ಮಿಸಿದ್ದ ಬೌದ್ಧಿಕ ಅಡೆತಡೆಗಳನ್ನು ನಿವಾರಿಸಿದರು.

ಮೋದಿಯವರು 2001ರ ಅಕ್ಟೋಬರ್ 7ರಿಂದ 2014ರ ಮೇ 11ರ ವರೆಗೆ ಗುಜರಾತಿನ ಮುಖ್ಯಮಂತ್ರಿಯಾಗಿದ್ದರು. ಅವರು ಮೂರು ಅವಧಿಗಳಿಗೆ ಮುಖ್ಯಮಂತ್ರಿಯಾಗಿದ್ದಾಗ ವಿರೋಧಿಗಳು ಅವರ ವಿರುದ್ಧ ಸಾಕಷ್ಟು ಅಪಪ್ರಚಾರ ಮಾಡಿದರು, ಅವರ ಸ್ಫೂರ್ತಿಯನ್ನು ಕುಂದಿಸಲು ಯತ್ನಿಸಿದರು. ಆದರೆ ಮೋದಿಜೀ ಈ ಎಲ್ಲಾ ಅಡೆತಡೆಗಳನ್ನು ನಿವಾರಿಸಿ 'ಗುಜರಾತ್ ಮಾದರಿ' ಎಂಬ ಅಭಿವೃದ್ಧಿಯ ಹೊಸಶಕೆಯನ್ನು ಆರಂಭಿಸಿದರು. 'ವೈಬ್ರೆಂಟ್ ಗುಜರಾತ್' ಸಮ್ಮೇಳನದ ಮೂಲಕ ದೊಡ್ಡ ಪ್ರಮಾಣದಲ್ಲಿ ವಿದೇಶಿ ಹೂಡಿಕೆಯನ್ನು ಆಕರ್ಷಿಸಿದರು. ರೈತರಿಗೆ ದಿನದ 24 ಗಂಟೆ ವಿದ್ಯುತ್ ಪೂರೈಸುವ ಮೂಲಕ ರಾಜ್ಯದಲ್ಲಿ ರೈತಕ್ರಾಂತಿಯನ್ನು ಅನುಷ್ಠಾನಿಸಿದರು. ಆಡಳಿತದಲ್ಲಿ ತಂತ್ರಜ್ಞಾನವನ್ನು ಅಳವಡಿಸುವುದರೊಂದಿಗೆ ಭ್ರಷ್ಟಾಚಾರ ಕಡಿಮೆಯಾಗಿ ಪಾರದರ್ಶಕತೆಗೆ ಅವಕಾಶ ಕಲ್ಪಿಸಿತು.

''ಜನರು ನನ್ನನ್ನು ಟೀಕಿಸಲಿ ಅಥವಾ ಹೊಗಳಲಿ, ನನ್ನ ಗುರಿ ದೇಶದ ಅಭಿವೃದ್ಧಿ'' ಎನ್ನುವುದು ಮೋದಿಜೀಯವರ ಧ್ಯೇಯವಾಕ್ಯ. 2014ರಲ್ಲಿ ಪ್ರಧಾನಿಯಾದ ಬಳಿಕವೂ ಅವರು ಇದೇ ಧ್ಯೇಯದೊಂದಿಗೆ ಮುಂದುವರಿಯುತ್ತಿದ್ದಾರೆ. 'ಟೀಕಾಕಾರನೊಬ್ಬ ಪಕ್ಕದಲ್ಲಿರಬೇಕು' ಎಂದು ಹೇಳುವುದಿದೆ. ಆದರೆ ಮೋದಿಜೀಗೆ ಸಂಬಂಧಿಸಿ ಹೇಳುವುದಾದರೆ ಗಲ್ಲಿಗಲ್ಲಿಯಲ್ಲಿ ಟೀಕಾಕಾರರು ಹುಟ್ಟಿಕೊಂಡರು.



ಟೀಕಾಕಾರರು ಮತ್ತು ವಿರೋಧಿಗಳು ಚೆಲ್ಲಿದ ದ್ವೇಷದ ನೆಲದಲ್ಲಿ ಮೋದಿಯವರು ಅಭಿವೃದ್ಧಿಯ ಉದ್ಯಾನವನವನ್ನು ಬೆಳೆಸಬಲ್ಲರು.

ಆದರೆ ಅಂತ್ಯದಲ್ಲಿ ಭಾರತದ ಅಭಿವೃದ್ಧಿಯ ಬಿರುಗಾಳಿಯನ್ನು ತಡೆಯಲು ಅವರಾರಿಗೂ ಆಗಲಿಲ್ಲ. ಕಳೆದ 12 ವರ್ಷಗಳಲ್ಲಿ ಭಾರತವು ಬಡತನ ನಿರ್ಮೂಲನೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದೆ ಎಂದು ವಿಶ್ವಬ್ಯಾಂಕ್ ವರದಿ ಹೇಳುತ್ತಿದೆ. 2011–12ರಲ್ಲಿ ಶೇ. 27ರಷ್ಟಿದ್ದ ಬಡವರ ಸಂಖ್ಯೆಯು ಈಗ ಶೇ. 5–6ಕ್ಕಿಳಿದಿದೆ.

''ಮೋದೀಜಿ ಹೇಳಿದಂತೆ ನಡೆಯುವವರು ಹಾಗೂ ತಮ್ಮಿಂದ ಮಾಡಲಾಗುವುದನ್ನೇ ಹೇಳುವವರು'' ಎಂಬ ಮಾತು ಈಗ ಪ್ರಚಲಿತವಾಗಿದೆ. ಕಳೆದ 12 ವರ್ಷಗಳಲ್ಲಿ ಅವರ ಕಾರ್ಯಾನುಷ್ಠಾನ ಶೈಲಿಯು ಈ ಹೇಳಿಕೆಯನ್ನು ದೃಢಪಡಿಸಿದೆ. ದೇಶದ ನಾಯಕನೊಬ್ಬ ಎಷ್ಟು ಪತ್ರಿಕಾಗೋಷ್ಠಿಯನ್ನು ನಡೆಸಿದ್ದಾನೆ ಎಂಬ ಆಧಾರದಲ್ಲಿ ಆತನನ್ನು ಅಳೆಯುವ ಟೀಕಾಕಾರರು ಕೇವಲ ಭಾರತದಲ್ಲಷ್ಟೇ ಕಂಡುಬರುತ್ತಾರೆ. ಆದರೆ ಮೋದಿಯವರು ಮಾಧ್ಯಮಗಳ ಮುಂದೆ ದೊಡ್ಡ ದೊಡ್ಡ ಹೇಳಿಕೆಗಳನ್ನು ನೀಡಲು ಹೋಗುವುದಿಲ್ಲ. ಅವರು ಪ್ರಚಾರದಿಂದ ದೂರವಾಗಿ, ಮೌನವಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಕಳೆದ 67 ವರ್ಷಗಳಲ್ಲಿ ಕಾಂಗ್ರೆಸ್ ಆಡಳಿತ ಮತ್ತು ಕಾಂಗ್ರೆಸ್ ಸಿದ್ಧಾಂತದಿಂದ ರೂಪಿಸಲ್ಪಟ್ಟ ಕೊಳೆಗಳನ್ನು ತೊಳೆಯಲೇ ಮೋದಿಯವರು ಬಹಳಷ್ಟು ಶ್ರಮಪಡಬೇಕಾಗಿ ಬಂತು. ಆಡಳಿತ ಶುದ್ಧೀಕರಣವನ್ನು ಘೋಷಿಸಿದ ಅವರು ಈ ಕಾರ್ಯಕ್ಕೆ ಆದ್ಯತೆ ನೀಡಿದರು. ತಮ್ಮ ಕೆಲಸದ ಬಗ್ಗೆ ಮಾತಿನಿಂದ ಹೇಳುವ ಅಗತ್ಯವಿಲ್ಲ, ಆದರ ಬದಲಾಗಿ ತನ್ನ ಕೃತಿಗಳಿಂದಲೇ ಅದನ್ನು ಸಾಬೀತುಪಡಿಸುತ್ತೇನೆ ಎಂಬುದು ಮೋದಿಯವರ ಚಿಂತನೆ.

ಕಳೆದ 12 ವರ್ಷಗಳ ಮೋದಿ ಆಡಳಿತದ ಸಾಧನೆಗಳನ್ನು ವಿವಿಧ ದಿಕ್ಕುಗಳಿಂದ ನೋಡಬಹುದಾಗಿದೆ. ಸಾಮಾಜಿಕ ಸುಧಾರಣೆ, ರಾಜಕೀಯ ಬದಲಾವಣೆ, ಸಾಂಸ್ಕೃತಿಕ ಪುನರುತ್ಥಾನ, ಜಾಗತಿಕವಾಗಿ ಹೆಚ್ಚಿದ ಭಾರತದ ಘನತೆ ಮೊದಲಾದವು ಇದಕ್ಕೆ ನಿದರ್ಶನ. ಜನಧನ್ ಯೋಜನೆ, ಸ್ವಚ್ಛ ಭಾರತ ಅಭಿಯಾನ, ಜಿಎಸ್‌ಟಿ ಅನುಷ್ಠಾನ, ಆಯುಷ್ಮಾನ್ ಭಾರತ್, ಡಿಜಿಟಲ್ ಇಂಡಿಯಾ, ಆತ್ಮನಿರ್ಭರ ಭಾರತ, ತ್ರಿವಳಿ ತಲಾಖ್ ಕಾನೂನು, ಸಂವಿಧಾನದ 370ನೇ ವಿಧಿ ರದ್ಧತಿ, ಹೊಸ ಸಂಸತ್‌ಭವನ ನಿರ್ಮಾಣ, ಶ್ರೀರಾಮ ಮಂದಿರ ನಿರ್ಮಾಣ, ಕಾಶಿ ವಿಶ್ವನಾಥ ಕಾರಿಡಾರ್ ನಿರ್ಮಾಣ... ಒಂದೇ ಎರಡೇ, ಮೋದಿ ಸಾಧನೆಯ ಗರಿಗಳು ಅನೇಕ!!

ಈಗ ದೇಶಾದ್ಯಂತ ಷಟ್ಪಥ ಮತ್ತು ಅಷ್ಟಪಥಗಳ ರಸ್ತೆ ಜಾಲ ಹರಡಿರಬೇಕಾದರೆ ಅದಕ್ಕೆ ಮೋದಿಜೀಯವರ ಅಭಿವೃದ್ಧಿಯ ದೃಷ್ಟಿಕೋನವೇ ಕಾರಣ. ಕಳೆದ 70 ವರ್ಷಗಳಲ್ಲಿ ದೇಶದಲ್ಲಿ ಸರಿಯಾದ ರಸ್ತೆ ಸೌಕರ್ಯಗಳನ್ನೂ ಒದಗಿಸಲು ಹಿಂದಿನ ಆಡಳಿತಗಳಿಗೆ ಸಾಧ್ಯವಾಗಲಿಲ್ಲವೆನ್ನುವುದು ದುರದೃಷ್ಟಕರ. 2014ರಿಂದ ಆರಂಭಿಸಿ ದೇಶಾದ್ಯಂತ 375000 ಕಿ.ಮೀ. ಹೊಸ ರಸ್ತೆಗಳನ್ನು ನಿರ್ಮಿಸಲಾಗಿದೆ. ರಸ್ತೆಗಳು ಆರ್ಥಿಕ ಮತ್ತು ಕೈಗಾರಿಕಾ ಪ್ರಗತಿಯ ಮೂಲಭೂತ ಆವಶ್ಯಕತೆಗಳಾಗಿವೆ. ಜತೆಗೇ ಸಾಮಾನ್ಯ ಜನರ ಜೀವನಾಡಿಯೂ ಆಗಿದೆ.ದೇಶಕ್ಕೆ ಇದನ್ನು ಅರಿತುಕೊಳ್ಳಲು ಇಷ್ಟು ದೀರ್ಘಕಾಲ ಬೇಕಾಯಿತು.

ನಮಾಮಿ ಗಂಗಾ ಯೋಜನೆಯು ನರೇಂದ್ರ ಮೋದಿ ಸರಕಾರದ ಅತ್ಯಂತ ಮಹತ್ವದ ಪರಿಸರ ಸಂರಕ್ಷಣೆ ಯೋಜನೆ. ಈ ಯೋಜನೆಯಡಿಯಲ್ಲಿ ಗಂಗಾ ಮತ್ತು ಅದರ ಉಪನದಿಗಳ ಶುದ್ಧೀಕರಣ ಕಾರ್ಯ ಕೈಗೊಳ್ಳಲಾಗಿದೆ. ಇದು ದೇಶಾದ್ಯಂತ ನದಿ ಸಂರಕ್ಷಣೆ ಕುರಿತಾದ ಜಾಗೃತಿಯನ್ನು ಮೂಡಿಸಿದೆ.

ಮೋದಿಜೀಯವರು ಭಾರತೀಯ ರೈಲ್ವೆಯನ್ನು ಆಧುನೀಕರಣಗೊಳಿಸುವಲ್ಲಿ ಮಹತ್ತರ ಯಶಸ್ಸು ಸಾಧಿಸಿದ್ದಾರೆ. ರೈಲು ನಿಲ್ದಾಣಗಳ ನವೀಕರಣ, ಹೊಸ ರೈಲುಗಳ ಸೇರ್ಪಡೆ, ಹೈಸ್ಪೀಡ್ ರೈಲು ಯೋಜನೆ ಮುಂತಾದವು ಪ್ರಯಾಣಿಕರಿಗೆ ಸುರಕ್ಷಿತ ಮತ್ತು ಉತ್ತಮ ಪ್ರಯಾಣದ ಅನುಭವ ನೀಡುತ್ತಿವೆ. ವಂದೇಭಾರತ್ ನಂತಹ ಆಧುನಿಕ ರೈಲುಗಳು ಮತ್ತು ಪ್ರಮುಖ ನಗರಗಳಲ್ಲಿ ಮೆಟ್ರೋ ಸೇವೆ ವಿಸ್ತರಣೆ ಭಾರತೀಯರ ದೈನಂದಿನ ಜೀವನವನ್ನು ಸುಗಮಗೊಳಿಸಿದೆ.

ಸರ್ಜಿಕಲ್ ದಾಳಿಗಳನ್ನು ನಡೆಸುವ ಮೂಲಕ ಮೋದಿಜೀಯವರು ಭಾರತವು ತನ್ನ ವಿರೋಧಿಗಳಿಗೆ ಕ್ಷಿಪ್ರ ಪ್ರತ್ಯುತ್ತರ ನೀಡಬಲ್ಲುದೆಂಬುದನ್ನು ಸಾಬೀತುಪಡಿಸಿದ್ದಾರೆ. ಪಾಕಿಸ್ತಾನಿ ಪ್ರೇರಿತ ಭಯೋತ್ಪಾದಕರು ಭಾರತದೊಳಕ್ಕೆ ನುಸುಳಿ ಬಂದು ಇಲ್ಲಿ ವಿಧ್ವಂಸಕ ಕೃತ್ಯಗಳನ್ನೆಸಗಿ ಸುರಕ್ಷಿತವಾಗಿ ಪಾರಾಗಬಹುದು ಎಂದು ಈವರೆಗೆ ತಿಳಿದುಕೊಂಡಿದ್ದರು. ಆದರೆ ಈಗ ಭಾರತೀಯ ಸೇನೆಯು ವಿರೋಧಿ ನೆಲದೊಳಗೆ ನುಗ್ಗಿ ಭಯೋತ್ಪಾದಕರನ್ನು ಸದೆಬಡಿಯುವಲ್ಲಿ ಸಫಲವಾಗಿದೆ. ಆಂತರಿಕ ಭಯೋತ್ಪಾದನೆಗೆ ಹೆಸರಾದ ನಕ್ಸಲೀಯ ಪಿಡುಗನ್ನು ಕೂಡಾ ಈಗ ದಮನಿಸಲಾಗಿದೆ.

ನಾನು ಮತ್ತು ನನ್ನ ಪೂರ್ಣ ಕುಟುಂಬವು ಪ್ರಧಾನಿ ಮೋದಿಜೀಯವರ ಪ್ರೀತಿವಾತ್ಸಲ್ಯಕ್ಕೆ ಪಾತ್ರರಾಗಿರುವುದು ನಮ್ಮ ಅದೃಷ್ಟ. ಪ್ರತಿಬಾರಿ ಅವರನ್ನು ಭೇಟಿಯಾದಾಗಲೂ ''ಹೇಗಿದ್ದೀರಿ ಏಕನಾಥ್‌ಜೀ'' ಎಂದು ಅವರು ವಿಚಾರಿಸಿಕೊಳ್ಳುತ್ತಾರೆ.

ರಾಜಕೀಯದಲ್ಲಿ ಮೋದಿಜೀಯವರದು ಸುಗಮ ಹಾದಿಯಲ್ಲ. ಅವರ ಹಾದಿಯಲ್ಲಿ ಟೀಕಾಕಾರರು, ನಿಂದಕರು ಸದಾ ಅಡ್ಡಗಾಲಿಡಲು ಯತ್ನಿಸುತ್ತಾರೆ. ಆದರೆ ಮೋದಿಜೀಯವರು ತಮಗೆದುರಾಗುವ ಟೀಕೆ, ದ್ವೇಷ, ಅಸೂಯೆ, ವೈಯಕ್ತಿಕ ನಿಂದನೆ ಮುಂತಾದವುಗಳನ್ನೆಲ್ಲಾ ಮೀರಿ ಮುಂದೆ ಸಾಗುವರೆಂಬ ವಿಶ್ವಾಸ ನನಗಿದೆ. ಟೀಕಾಕಾರರು ಮತ್ತು ವಿರೋಧಿಗಳು ಚೆಲ್ಲಿದ ದ್ವೇಷದ ನೆಲದಲ್ಲಿ ಮೋದಿಯವರು ಅಭಿವೃದ್ಧಿಯ ಉದ್ಯಾನವನವನ್ನು ಬೆಳೆಸಬಲ್ಲರು.

ಶ್ರಾದ್ಧದ ಪ್ರಕಾರಗಳು ಮತ್ತು ಅವುಗಳ ಮಹತ್ತ್ವ

ಪಿತೃಕಾರ್ಯವು ದೇವಕಾರ್ಯದಷ್ಟೇ ಮಹತ್ತ್ವದ್ದು ಮತ್ತು ಇದನ್ನು ತಪ್ಪದೇ ಮಾಡಬೇಕೆಂಬುದಾಗಿ ಉಪನಿಷತ್ತು ತಿಳಿಸುತ್ತದೆ.

ಪದಸಂಚಲನ

ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಪಿತೃಋಣದ ಅಪಾಕರಣೆಗಾಗಿ ಮಾಡಲಾಗುವ ಕರ್ಮವೇ ಶ್ರಾದ್ಧಕಾರ್ಮ. ವ್ಯಕ್ತಿಯ ಮರಣದ ಅನಂತರ ಮಾಡಲಾಗುವ ಮೊಟ್ಟ ಮೊದಲ ಶ್ರಾದ್ಧವೆಂದರೆ, ಅದು ನಗ್ನಪ್ರಚ್ಛಾದನಶ್ರಾದ್ಧ. ಹನ್ನೆರಡನೆಯ ದಿನ ಪಿಂಡಸಂಯೋಜನೆಯ ಮೂಲಕ ಮೃತವ್ಯಕ್ತಿಗೆ ಪಿತೃಗಳ ಸ್ಥಾನ ದೊರಕುವವರೆಗೆ ಅವರು ಪ್ರೇತರಾಗಿರುತ್ತಾರೆ. ಹಾಗಾಗಿಯೇ ಅಲ್ಲಿಯವರೆಗೆ ಪಿತುಃ ಪ್ರೇತೇ ಎಂದೇ ಸಂಬೋಧಿಸಲಾಗುತ್ತದೆ. ಪ್ರೇತವನ್ನು ಕುರಿತು ಮಾಡಲಾಗುವ ಮೊದಲ ಶ್ರಾದ್ಧಕ್ಕೆ ನಗ್ನಪ್ರಚ್ಛಾದನಶ್ರಾದ್ಧ ಎಂದು ಕರೆಯಲಾಗುತ್ತದೆ. ಈ ಶ್ರಾದ್ಧದ ಅಂಗವಾಗಿ ಧಾನ್ಯಸಹಿತವಾದ ಪಾತ್ರೆ, ದೀಪ, ಕಂಚಿನ ಅಡುಗೆಯ ಪಾತ್ರೆ ಹಾಗೂ ಬಟ್ಟೆಯನ್ನು ಸೇರಿಸಿ ದಾನವಾಗಿ ಕೊಡಲಾಗುತ್ತದೆ.

ರುದ್ರಗಣಶ್ರಾದ್ಧ: ಏಕಾದಶಾಹದ ದಿನ ಹನ್ನೊಂದು ವಿಪ್ರರಲ್ಲಿ ಏಕಾದಶರುದ್ರರನ್ನು ಆವಾಹಿಸಿ ಪ್ರೇತತ್ವವಿಮೋಚನೆಗಾಗಿ ಅಕ್ಕಿ, ತೆಂಗಿನಕಾಯಿ ಮೊದಲಾದವುಗಳನ್ನು ನೀಡುವುದನ್ನು ರುದ್ರಗಣಶ್ರಾದ್ಧ ಎಂದು ಕರೆಯಲಾಗುತ್ತದೆ. ಏಕಾದಶಾಹದಂದು ಮಾಡಲಾಗುವ ಕಾರ್ಯಗಳನ್ನು ಶಿವಪ್ರೀತ್ಯರ್ಥವಾಗಿಯೂ, ಸಪಿಂಡೀಕರಣದ ದಿನ (ದ್ವಾದಶಾಹ) ಮಾಡುವ ಕಾರ್ಯಗಳನ್ನು ವಿಷ್ಣುಪ್ರೀತ್ಯರ್ಥವಾಗಿಯೂ ಮಾಡಲಾಗುತ್ತದೆ.

ನವಶ್ರಾದ್ಧ: ವ್ಯಕ್ತಿಯು ಮರಣವನ್ನು ಹೊಂದಿದ ದಿನದಿಂದ ಹನ್ನೊಂದನೆಯ ದಿನಗಳೊಳಗೆ ಬರುವ 1,3,5,7,9,11 ಈ ವಿಷಮಸಂಖ್ಯೆಯ ದಿನಗಳಲ್ಲಿ ಮಾಡಲಾಗುವ ವಿಶೇಷಶ್ರಾದ್ಧಗಳನ್ನು ನವಶ್ರಾದ್ಧ ಎಂಬುದಾಗಿ ಕರೆಯಲಾಗಿದೆ. ಸ್ನಾನದ ಅನಂತರ ಕರ್ತೃವು ಮೈಯನ್ನು ಒರೆಸಿಕೊಳ್ಳದೇ ಪವಿತ್ರಧಾರಿಯಾಗಿ ಆರು ಬಾಳೆಲೆಗಳಲ್ಲಿ ಅಕ್ಕಿ-ತೆಂಗಿನಕಾಯಿಯನ್ನು ಹಾಕಿ ದಾನ ಮಾಡುವ ಪ್ರಕ್ರಿಯೆಯನ್ನೇ ನವಶ್ರಾದ್ಧ ಎನ್ನಲಾಗುತ್ತದೆ.

ಷೋಡಶಶ್ರಾದ್ಧ: ಈ ಶ್ರಾದ್ಧಕ್ಕೆ ಮತ್ತೊಂದು ಹೆಸರು ಮಲಿನಶ್ರಾದ್ಧ ಎಂಬುದಾಗಿ. ಷೋಡಶಶ್ರಾದ್ಧದಲ್ಲಿ 360 ಪಿಂಡ ಮತ್ತು 16 ಮಾಸಿಕ ಪಿಂಡಗಳನ್ನು ನೀಡಲಾಗುತ್ತದೆ. ಇದು ಪ್ರೇತವನ್ನು ಉದ್ದೇಶಿಸಿ ಮಾಡಲಾಗುವ ಶ್ರಾದ್ಧವಾಗಿದೆ. ಪ್ರೇತಕ್ಕೆ ಪಿತೃಲೋಕವನ್ನು ಸೇರಲು ಒಂದು ವರ್ಷ ಕಾಲ ಬೇಕಾಗುತ್ತದೆಂದು ಹೇಳಲಾಗುತ್ತದೆ. ಅವರೆಗೆ ಪ್ರತಿದಿನವೂ ಪಿಂಡಪ್ರದಾನದ ಮೂಲಕ ಪ್ರೇತಾತ್ಮವನ್ನು ತೃಪ್ತಿಪಡಿಸಬೇಕೆಂಬ ಉದ್ದೇಶದಿಂದ ಇದನ್ನು ಆಚರಿಸಲಾಗುತ್ತದೆ. ಇದನ್ನು ಏಕಾದಶಾಹದಂದು ವೃಷೋತ್ಸರ್ಗಹೋಮದ ಅನಂತರ ಆಚರಿಸಲಾಗುತ್ತದೆ.

ಸಪಿಂಡೀಕರಣಶ್ರಾದ್ಧ:

ಅಶುದ್ಧಃ ಸ್ಯಾತ್ ಸದಾ ಪುತ್ರೋ ನ ಶುದ್ಧ್ಯತಿ ಕದಾಚನ ।
ಸೂತಕಂ ನ ನಿವರ್ತೇತ ಸಪಿಂಡೀಕರಣಂ ವಿನಾ ॥

ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ. ಅರ್ಥಾತ್ ಸಪಿಂಡೀಕರಣವನ್ನು ಮಾಡದಿದ್ದರೆ ಮಕ್ಕಳಿಗೆ ಆಶೌಚದಿಂದ ಶುದ್ಧಿಯು ದೊರೆಯುವುದಿಲ್ಲ. ಎಲ್ಲ ಮಕ್ಕಳೂ ಸೇರಿ ಜ್ಯೇಷ್ಠಪುತ್ರನ ನೇತೃತ್ವದಲ್ಲಿ ಇದನ್ನು ಮಾಡಲಾಗುತ್ತದೆ. ಮರಣದ ಹನ್ನೆರಡನೆಯ ದಿನ ಈ ಶ್ರಾದ್ಧವನ್ನು ಮಾಡಲಾಗುತ್ತದೆ. ಸಪಿಂಡೀಕರಣವೆಂದರೆ ಮೃತನಾದ ವ್ಯಕ್ತಿಗಿಂತ ಮುಂಚೆ ಕಳೆದುಹೋದ ಮೂರು ತಲೆಮಾರಿನ ಪಿತೃಗಳ ಸಮೂಹದೊಡನೆ ಈಗ ತೀರಿಹೋದ ವ್ಯಕ್ತಿಯನ್ನು ಪಿತೃರೂಪದಲ್ಲಿ ಸೇರಿಸುವುದಾಗಿದೆ. ಸಪಿಂಡೀಕರಣದಿಂದ ಮೃತರಿಗೆ ಪ್ರೇತತ್ವದ ನಿವಾರಣೆಯಾಗಿ ಪಿತೃಸ್ಥಾನವು ಲಭ್ಯವಾಗುತ್ತದೆ. **ದ್ವಾದಶಾಹೇ ಸಪಿಂಡಾಖ್ಯಂ ಮುಖ್ಯಂ ಕಲಿಯುಗೇ ಸ್ಮೃತಮ್** ಎಂಬುದಾಗಿ ಶಾಸ್ತ್ರವು ಸಪಿಂಡೀಕರಣದ ಮಹತ್ತ್ವವನ್ನು ತಿಳಿಸುತ್ತದೆ.

ಪಾಥೇಯಶ್ರಾದ್ಧ: ಮರಣದ ದಿನದಿಂದ ಹದಿಮೂರನೆಯ ದಿನ ಮಾಡಲಾಗುವ ಶ್ರಾದ್ಧವನ್ನು ಪಾಥೇಯಶ್ರಾದ್ಧ ಎನ್ನಲಾಗುತ್ತದೆ. ಇದಕ್ಕೆ ಪತಂಗ ಎಂಬುದಾಗಿಯೂ ಕರೆಯಲಾಗುತ್ತದೆ. ವರ್ಷಕ್ಕೊಮ್ಮೆ ಮಾಡಲಾಗುವ ಶ್ರಾದ್ಧದ ರೀತಿಯಲ್ಲಿಯೇ ಇದನ್ನೂ ಮಾಡಲಾಗುತ್ತದೆ. ಪಾಥೇಯಶ್ರಾದ್ಧದಿಂದ ಆರಂಭಿಸಿ ಪ್ರತಿಮಾಸಿಕಶ್ರಾದ್ಧ, ಪ್ರಥಮಾಬ್ಧಿಕಶ್ರಾದ್ಧ, ಪ್ರತಿಸಾಂವತ್ಸರಿಕಶ್ರಾದ್ಧ ಈ ಎಲ್ಲವುಗಳಲ್ಲಿಯೂ ಮೂರು ಪಿಂಡಗಳನ್ನು ಪ್ರದಾನ ಮಾಡಿ ಶ್ರಾದ್ಧವನ್ನು ಮಾಡಲಾಗುತ್ತದೆ. ಶ್ರಾದ್ಧಗಳಲ್ಲಿ ಪಚನಾಗ್ನಿ, ಬ್ರಾಹ್ಮಣಭೋಜನ, ಪಿಂಡಪ್ರದಾನಗಳೆಂಬ ಮೂರು ಕಾರ್ಯಗಳು ಸಮಾನವಾಗಿರುತ್ತವೆ.

ಮಾಸಿಕಶ್ರಾದ್ಧ: ಸಾಮಾನ್ಯವಾಗಿ ಪ್ರತಿತಿಂಗಳೂ ಮಾಡುವ ಶ್ರಾದ್ಧಕ್ಕೆ ಮಾಸಿಕಶ್ರಾದ್ಧ ಎಂದು ಹೆಸರು. ಆದರೆ ವ್ಯಕ್ತಿಯು ಮರಣದಿಂದ ಒಂದು ವರ್ಷದವರೆಗೆ ಸುಮಾರು ಹದಿನಾರು ಮಾಸಿಕಶ್ರಾದ್ಧಗಳು ಬರುತ್ತವೆ. ಅವೆಲ್ಲವುಗಳಿಗೂ ಮಾಸಿಕಶ್ರಾದ್ಧವೆಂದೇ ಕರೆಯಲಾಗುತ್ತದೆ. ಇದರ ಪ್ರಕಾರ ಮೊದಲ ಮಾಸಿಕಶ್ರಾದ್ಧ ಮರಣದ ದಿನದಿಂದ ಇಪ್ಪತ್ತೊಂದನೆಯ ದಿನಕ್ಕೆ ಬರುತ್ತದೆ. ಇಪ್ಪತ್ತೇಳನೆಯ ದಿನ ಎರಡನೆಯ ಮಾಸಿಕಶ್ರಾದ್ಧವನ್ನೂ, ಮೊದಲ ತಿಂಗಳಿನ ಮರಣತಿಥಿಯಂದು ಮೂರನೆಯ ಮಾಸಿಕಶ್ರಾದ್ಧವನ್ನೂ ಆಚರಿಸಲಾಗುತ್ತದೆ. ಹಾಗೆಯೇ ಮರಣದಿನದಿಂದ ನಲವತ್ತೊಂದನೆಯ ದಿನಕ್ಕೆ ನಾಲ್ಕನೇ ಮಾಸಿಕಶ್ರಾದ್ಧವನ್ನೂ, ಮರಣತಿಥಿಯಿಂದ ಎರಡನೆಯ ತಿಂಗಳಿನ ಮರಣತಿಥಿಯಂದು ಐದನೆಯ ಮಾಸಿಕಶ್ರಾದ್ಧವನ್ನೂ ಆಚರಿಸಲಾಗುತ್ತದೆ. ಇಲ್ಲಿಂದ ಮುಂದೆ ಮೂರು, ನಾಲ್ಕು ಮತ್ತು ಐದನೆಯ ತಿಂಗಳಿಗೆ ತಿಥಿಯ ಪ್ರಕಾರ ಆರು, ಏಳು ಮತ್ತು ಎಂಟನೆಯ ಮಾಸಿಕಶ್ರಾದ್ಧವನ್ನು ಆಚರಿಸಲಾಗುತ್ತದೆ.

ಊನಷಾಣ್ಮಾಸಿಕಶ್ರಾದ್ಧ: ಇದನ್ನು ಮರಣದಿನದಿಂದ 171ನೇ ದಿನ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ನೌಕಾದಾನ ಮಾಡಲಾಗುತ್ತದೆ. ಮೃತವ್ಯಕ್ತಿಯು ವೈತರಣೀನದಿಯನ್ನು ದಾಟಲು ಇದು ಸಹಾಯಕ ಎಂಬುದಾಗಿ ಗರುಡಪುರಾಣದಲ್ಲಿ ತಿಳಿಸಲಾಗಿದೆ.ಇಲ್ಲಿಂದ ಮುಂದೆ ಮತ್ತೆ ತಿಥಿಯ ಪ್ರಕಾರ ಆರು, ಏಳು, ಎಂಟು, ಒಂಬತ್ತು, ಹತ್ತು, ಹನ್ನೊಂದನೆಯ ತಿಂಗಳಲ್ಲಿ ಕ್ರಮವಾಗಿ ಹತ್ತು, ಹನ್ನೊಂದು, ಹನ್ನೆರಡು, ಹದಿಮೂರು, ಹದಿನಾಲ್ಕು ಮತ್ತು ಹದಿನೈದನೆಯ ಮಾಸಿಕಶ್ರಾದ್ಧವನ್ನು ಆಚರಿಸಲಾಗುತ್ತದೆ. ಮರಣದಿನದಿಂದ 346ನೇ ದಿನ ಊನಾಬ್ಧಿಕಶ್ರಾದ್ಧವನ್ನು ಆಚರಿಸಲಾಗುತ್ತದೆ. ಹೀಗೆ ಹದಿನಾರು ಮಾಸಿಕಶ್ರಾದ್ಧಗಳನ್ನು ಆಚರಿಸಿ, ಹನ್ನೆರಡನೆಯ ತಿಂಗಳು ಪ್ರಥಮಾಬ್ಧಿಕ ಶ್ರಾದ್ಧವನ್ನು ಆಚರಿಸಲಾಗುತ್ತದೆ. ಮರಣದಿನದಿಂದ 361ನೇ ದಿನ ಆಚರಿಸಲಾಗುವ ಶ್ರಾದ್ಧಕ್ಕೆ ಪತಂಗಶ್ರಾದ್ಧ ಅಥವಾ ಪಿತೃಸಂಗಮಶ್ರಾದ್ಧ ಎಂಬುದಾಗಿ ಕರೆಯಲಾಗುತ್ತದೆ. ಒಂದು ವೇಳೆ ಹದಿನೇಳು ಮಾಸಿಕಗಳು ಬಂದಲ್ಲಿ ಪ್ರಥಮಾಬ್ಧಿಕಶ್ರಾದ್ಧವು ಒಂದು ತಿಂಗಳಿನಷ್ಟು ಮುಂದೆ ಹೋಗುತ್ತದೆ.

ತ್ರಿಪಿಂಡೀಶ್ರಾದ್ಧ: ಪ್ರೇತಬಾಧೆಯಿದೆಯೆಂದು ದೈವಜ್ಞರು ತಿಳಿಸಿದಲ್ಲಿ ಈ ಶ್ರಾದ್ಧವನ್ನು ಮಾಡಲಾಗುತ್ತದೆ. ಇದೊಂದು ವಿಶೇಷವಾದ ಶ್ರಾದ್ಧವಾಗಿದೆ. ಯಾರಿಗೆ ಪ್ರೇತಬಾಧೆ ಇದೆಯೋ ಅವರಿಗೆ ಮಾತ್ರ ಆಚರಿಸಲಾಗುವ ಶ್ರಾದ್ಧವಿದು.

ಪಿತೃಸಂಗಮಶ್ರಾದ್ಧ: ಇದನ್ನು ಪತಂಗಶ್ರಾದ್ಧ ಎಂದೂ ಕರೆಯಲಾಗುತ್ತದೆ. ಕಟಪಯಾದಿ ಸೂತ್ರದ ಅಕ್ಷರಗಳ ಲೆಕ್ಕಾಚಾರದಲ್ಲಿ ಪತಂಗವೆಂದರೆ 361ನೆಯ ದಿನವಾಗುತ್ತದೆ.

ಮಹಾಲಯಶ್ರಾದ್ಧ: ಪಿತೃಪಕ್ಷದಲ್ಲಿ ಯಾವುದೇ ನಿಶ್ಚಿತವಾದ ದಿನದಂದು ಮಹಾಲಯಶ್ರಾದ್ಧವನ್ನು ಮಾಡಲಾಗುತ್ತದೆ. ಸಾಮಾನ್ಯವಾಗಿ ವ್ಯಕ್ತಿಯು ಮರಣಹೊಂದಿದ ತಿಥಿಯಂದೇ ಮಾಡಲಾಗುತ್ತದೆ. ಆಷಾಢಮಾಸದಿಂದ ಆರಂಭಿಸಿ ಐದು ಪಕ್ಷಗಳವರೆಗೆ ಪಿತೃಪಕ್ಷವೆಂದು ಗುರುತಿಸಲಾಗುತ್ತದೆ. ಈ ದಿನಗಳಲ್ಲಿ ಪಿತೃಗಳು ಆಹಾರವನ್ನು ಬಯಸುತ್ತಾರೆ ಎಂದು ಹೇಳಲಾಗುತ್ತದೆ. ಆದರೆ ಮೃತವ್ಯಕ್ತಿಯ ಪ್ರಥಮಾಬ್ಧಿಕಶ್ರಾದ್ಧವಾಗದೇ ಈ ಶ್ರಾದ್ಧವನ್ನು ಆಚರಿಸುವಂತಿಲ್ಲ.

ಹೀಗೆ ಸಂದುಹೋದ ನಮ್ಮ ಪಿತೃಗಳ ನೆನಪಿನಲ್ಲಿ ಮಾಡಲಾಗುವ ಕರ್ಮವನ್ನೇ ಶ್ರಾದ್ಧ ಎಂಬುದಾಗಿ ಕರೆಯಲಾಗುತ್ತದೆ. ಇದನ್ನು ಮಾಡುವುದರಿಂದ ಏನು ಪ್ರಯೋಜನ ಎಂದು ಕೆಲವರು ಕೇಳುವುದುಂಟು. ಇವೆಲ್ಲವೂ ಅವರವರ ಶ್ರದ್ಧೆಗೆ ಸಂಬಂಧಿಸಿದ್ದು. ಹಾಗೆ ನೋಡಿದರೆ ಎಲ್ಲ ಕರ್ಮಾಂಗಗಳೂ ಕೂಡ ಶ್ರದ್ಧೆಯುಳ್ಳವನಿಗೇ ಹೌದು.

ಕರ್ಮಣಿ ಶ್ರಾದ್ಧೋ ಅಧಿಕಾರೀ ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ. ತಪ್ಪದೇ ಶ್ರಾದ್ಧವನ್ನು ಆಚರಿಸಿದರೆ ವಸುರೂಪದಲ್ಲಿರುವ ಪಿತೃಗಳು ಆಯುಸ್ಸನ್ನೂ, ರುದ್ರರೂಪದಲ್ಲಿರುವ ಪಿತೃಗಳು ಧನವನ್ನೂ, ಆದಿತ್ಯರೂಪದಲ್ಲಿರುವ ಪಿತೃಗಳು ಪ್ರಜಾಸಂಪತ್ತನ್ನೂ ಕರುಣಿಸುತ್ತಾರೆ ಎಂಬುದಾಗಿ ಶಾಸ್ತ್ರಗಳಲ್ಲಿ ತಿಳಿಸಲಾಗಿದೆ. ಪಿತೃಕಾರ್ಯವು ದೇವಕಾರ್ಯದಷ್ಟೇ ಮಹತ್ತ್ವದ್ದು ಮತ್ತು ಇದನ್ನು ತಪ್ಪದೇ ಮಾಡಬೇಕೆಂಬುದಾಗಿ ಉಪನಿಷತ್ತು ತಿಳಿಸುತ್ತದೆ. **ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಮ್** ಎಂಬುದಾಗಿ ತೈತ್ತಿರೀಯೋಪನಿಷತ್ತು ತಿಳಿಸಿದೆ. ದೇವತಾಕಾರ್ಯಗಳೂ ಕೂಡ ಋಣಪ್ರಜ್ಞೆಯಿಂದಲೇ ಆಚರಿಸುವಂಥದ್ದು. ಪಿತೃಕಾರ್ಯವೂ ಋಣಪ್ರಜ್ಞೆಯಿಂದಲೇ ಮಾಡುವಂಥದ್ದು. ಯಾರಿಗೆ ಇಂಥ ಋಣಭಾವ ಇದೆಯೋ ಅವರು ಖಂಡಿತವಾಗಿ ಈ ಕಾರ್ಯಗಳನ್ನು ತಮ್ಮ ಸಂಪ್ರದಾಯ, ಆಚಾರಗಳಿಗೆ ಅನುಸಾರವಾಗಿ ತಿಳಿದು ಮಾಡಬೇಕಾದದ್ದು ಸೂಕ್ತವಾದುದು.

ಮೋದಿ ಸರ್ಕಾರಕ್ಕೆ 12 ವರ್ಷ ಪೂರ್ಣ

ಸುದೀರ್ಘ ನಾಯಕತ್ವ ಇಂದು ಎನ್‌ಡಿಎ ಸಭೆ

ಹೊಸದಿಲ್ಲಿ: ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 12 ವರ್ಷಗಳನ್ನು ಪೂರ್ಣಗೊಳಿಸಿರುವ ಹಿನ್ನೆಲೆ ಹಾಗೂ ದೇಶದ ಅತಿ ದೀರ್ಘಾವಧಿ ನಿರಂತರವಾಗಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿಯಾಗಿ ಮೋದಿ ಹೊಸ ದಾಖಲೆ ನಿರ್ಮಿಸುತ್ತಿರುವ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್‌ಡಿಎ) ಬುಧವಾರ ರಾಜಧಾನಿಯಲ್ಲಿ ಮಹತ್ವದ ಸಭೆ ನಡೆಸಲಿದೆ.



ಭಾರತ ಮಂಟಪಂನಲ್ಲಿ ನಡೆಯಲಿರುವ ಈ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ಉನ್ನತ ನಾಯಕರು ಹಾಗೂ ಎನ್‌ಡಿಎಯ ಎಲ್ಲ ಮಿತ್ರಪಕ್ಷಗಳ ಪ್ರಮುಖರು ಭಾಗವಹಿಸಲಿದ್ದಾರೆ. ಮೋದಿ ಅವರು ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ದಾಖಲೆಯನ್ನು ಹಿಂದಿಕ್ಕುತ್ತಿರುವ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸುವ ವಿಶೇಷ ನಿರ್ಣಯವೊಂದನ್ನು ಸಭೆಯಲ್ಲಿ ಅಂಗೀಕರಿಸುವ ಸಾಧ್ಯತೆಯಿದೆ.

1952ರ ಸಾರ್ವತ್ರಿಕ ಚುನಾವಣೆಯ ನಂತರ ಚುನಾಯಿತ ಪ್ರಧಾನಿಯಾಗಿ ನೆಹರೂ 4,399 ದಿನಗಳ ಕಾಲ ಅಧಿಕಾರದಲ್ಲಿದ್ದರು. ಜೂ.10ರಂದು ಮೋದಿ ಅವರು ಈ ದಾಖಲೆಯನ್ನು ಮೀರಲಿದ್ದು, ದೇಶದ ಅತಿ ಹೆಚ್ಚು ದಿನಗಳ ಕಾಲ ನಿರಂತರವಾಗಿ ಅಧಿಕಾರದಲ್ಲಿರುವ ಚುನಾಯಿತ ಪ್ರಧಾನಿಯಾಗಲಿದ್ದಾರೆ. 2014ರ ಮೇ 26ರಂದು ಮೊದಲ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದ ಮೋದಿ, 2019ರಲ್ಲಿ ಮರು ಆಯ್ಕೆಯಾಗಿ ಎರಡನೇ ಅವಧಿ ಆರಂಭಿಸಿದ್ದರು. 2024ರ ಜೂನ್ 9ರಂದು ಮೂರನೇ ಅವಧಿಗೂ ಅಧಿಕಾರ ಸ್ವೀಕರಿಸಿದ್ದರು. ಮೂಲಗಳ ಪ್ರಕಾರ, ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಪ್ರಧಾನಿ ಮೋದಿ ಅವರ ಸಾಧನೆಯನ್ನು ಅಭಿನಂದಿಸುವ ನಿರ್ಣಯ ಮಂಡಿಸಲಿದ್ದು, ನಾಗಾಲ್ಯಾಂಡ್ ಮುಖ್ಯಮಂತ್ರಿ ನೆಫಿಯು ರಿಯೊ ಅದನ್ನು ಅನುಮೋದಿಸಲಿದ್ದಾರೆ. ಬಳಿಕ ವಿವಿಧ ಮಿತ್ರಪಕ್ಷಗಳ ನಾಯಕರು ಚರ್ಚೆಯಲ್ಲಿ ಭಾಗವಹಿಸಿ ನಿರ್ಣಯವನ್ನು ಅಂಗೀಕರಿಸಲಿದ್ದಾರೆ. ನಿರ್ಣಯದ ಬಳಿಕ ಪ್ರಧಾನಿ ಮೋದಿ ಸಭೆಯನ್ನು ಉದ್ದೇಶಿಸಿ ಮಾತನಾಡುವ ನಿರೀಕ್ಷೆಯಿದೆ.

75ಕ್ಕೂ ಹೆಚ್ಚು ನಾಯಕರು ಭಾಗಿ: ಎನ್‌ಡಿಎ ಆಡಳಿತವಿರುವ 22 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಮೈತ್ರಿಕೂಟದ ಎಲ್ಲಾ ಪಕ್ಷಗಳ ಅಧ್ಯಕ್ಷರು ಮತ್ತು ಹಿರಿಯ ನಾಯಕರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸುಮಾರು 35 ಮಿತ್ರಪಕ್ಷಗಳನ್ನು ಪ್ರತಿನಿಧಿಸುವ 75ಕ್ಕೂ ಹೆಚ್ಚು ಹಿರಿಯ ನಾಯಕರು ಸಭೆಯಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ತಿಳಿದುಬಂದಿದೆ.

ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಜೆ.ಪಿ. ನಡ್ಡಾ, ಶಿವರಾಜ್ ಸಿಂಗ್ ಚೌಹಾಣ್ ಸೇರಿದಂತೆ ಹಲವು ಬಿಜೆಪಿ ನಾಯಕರು ಭಾಗವಹಿಸಲಿದ್ದಾರೆ. ಮಿತ್ರಪಕ್ಷಗಳ ಪರವಾಗಿ ಟಿಡಿಪಿಯ ಕೆ. ರಾಮ್ ಮೋಹನ್ ನಾಯ್ಡು, ಜೆಡಿಯುನ ರಾಜೀವ್ ರಂಜನ್ ಸಿಂಗ್, ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ಹಾಗೂ ಅಪ್ನಾದಳದ ಅನುಪ್ರಿಯಾ ಪಟೇಲ್ ಕೂಡ ಹಾಜರಾಗುವ ಸಾಧ್ಯತೆ ಇದೆ.

ಮೋದಿ ಯುಗದಲ್ಲಿ ಭೂ ಬಂದರು ವ್ಯಾಪಾರ ವೃದ್ಧಿ

ಹೊಸದಿಲ್ಲಿ: ವಿಜ್ಞಾನ ಭವನದಲ್ಲಿ ಭೂ ಬಂದರು ನಿರ್ವಹಣಾ ವ್ಯವಸ್ಥೆಯನ್ನು (ಎಲ್‌ಪಿಎಂಎಸ್) ಮಂಗಳವಾರ ಉದ್ಘಾಟಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕಳೆದ 12 ವರ್ಷಗಳ ಪ್ರಧಾನಿ ಮೋದಿ ಆಡಳಿತದಲ್ಲಿ 2014ರಲ್ಲಿ 5000 ಕೋಟಿ ರೂ. ಇದ್ದ ಭೂ ಬಂದರು ವ್ಯಾಪಾರ 83,000 ಕೋಟಿ ರೂ. ವರೆಗೆ ಬೆಳೆದಿದೆ ಎಂದು ಮೋದಿ ನಾಯಕತ್ವವನ್ನು ಕೊಂಡಾಡಿದ್ದಾರೆ.

ಹೊಸ ಭೂ ಬಂದರು ನಿರ್ವಹಣಾ ವ್ಯವಸ್ಥೆಯಿಂದ ಶೇ.90 ದಾಖಲೆಪತ್ರಗಳ ಕೆಲಸ ಕಡಿಮೆಯಾಗುತ್ತದೆ ಹಾಗೂ ಅಂತಾರಾಷ್ಟ್ರೀಯ ಗಡಿ ಭದ್ರತೆಯನ್ನು ಹೆಚ್ಚಿಸುತ್ತದೆ. ಇದು ಸಿಂಗಲ್ ಎಲೆಕ್ಟ್ರಾನಿಕ್ ವಿಂಡೋ ಸಿಸ್ಟಂ ಹೊಂದಿದ್ದು, ಪ್ರಕ್ರಿಯೆಯ ಸಮಯ ಶೇ.40ರಿಂದ 60ರಷ್ಟು ಕಡಿಮೆಯಾಗಲಿದೆ. ಪ್ರಸ್ತಾವಿಸಲಾದ ಸ್ಮಾರ್ಟ್ ಗಡಿಗಳು ಹೊಸ ಡಿಜಿಟಲ್ ಅಡಿಪಾಯವನ್ನು ಹಾಕಿಕೊಟ್ಟಿವೆ ಎಂದು ಶಾ ಹೇಳಿದ್ದಾರೆ. ಮುಂದಿನ 3 ವರ್ಷಗಳಲ್ಲಿ 11 ಭೂ ಬಂದರು: ಗಡಿ ಜಿಲ್ಲೆಗಳ ಮೇಲಿನ ವಲಸೆ ಒತ್ತಡವನ್ನು ಕಡಿಮೆ ಮಾಡುವುದಲ್ಲದೆ ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುವ 15 ಭೂ ಬಂದರುಗಳು ಪ್ರಸ್ತುತ ದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ಮುಂದಿನ ಮೂರು ವರ್ಷಗಳಲ್ಲಿ ಇನ್ನೂ 11 ಭೂ ಬಂದರುಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಇದೆ.

ಭೂ ಬಂದರುಗಳು ಕೇವಲ ವ್ಯಾಪಾರ ಸಾಗಣೆಯ ಮಾರ್ಗಗಳಷ್ಟೇ ಅಲ್ಲ; ಅವು ಭದ್ರತೆಯ ಕವಚ, ಸಾಂಸ್ಕೃತಿಕ ವಿನಿಮಯದ ಸೇತುವೆ ಹಾಗೂ ಗಡಿಭಾಗಗಳಿಂದ ವಲಸೆಯನ್ನು ನಿಯಂತ್ರಿಸುವ ಸಾಧನವೂ ಆಗಿವೆ ಎಂದು ಅವರು ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ಸುವೇಂದು ಅಧಿಕಾರಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿ ತನ್ನ ಮೊದಲ ತಿಂಗಳನ್ನು ಪೂರೈಸಿದ್ದು, ವ್ಯಾಪಕ ಆಡಳಿತಾತ್ಮಕ ನಿರ್ಧಾರಗಳು, ಮೂಲಸೌಕರ್ಯ ಯೋಜನೆಗಳು ಮತ್ತು ನೀತಿ ಬದಲಾವಣೆಗಳನ್ನು ಜಾರಿಗೆ ತಂದಿದೆ. ಇದೇ ಸಮಯದಲ್ಲಿ ಪ್ರಮುಖ ವಿರೋಧ ಪಕ್ಷ ತೃಣಮೂಲ ಕಾಂಗ್ರೆಸ್, ಆಂತರಿಕ ಅಸ್ಥಿರತೆಯಿಂದ ನಲುಗಿದೆ, ಸಂಭವನೀಯ ಭಾರೀ ಬಂಡಾಯವೊಂದಕ್ಕೆ ಪಕ್ಷ ಸಿದ್ಧವಾಗುತ್ತಿದೆ.

ಸುವೇಂದು ಸರ್ಕಾರಕ್ಕೆ ಬಹುಪರಾಕ್

ಪಶ್ಚಿಮ ಬಂಗಾಳದಲ್ಲಿ ಕಮಲ ಅರಳಿ ಒಂದು ತಿಂಗಳು, ಯೋಜನೆ ಆವಿಷ್ಕಾರ ಹತ್ತಾರು



ಸುದ್ದಿ ಸಮಗ್ರ

ಮೂಲಸೌಕರ್ಯ ಅಭಿವೃದ್ಧಿ

ಹಲವಾರು ರಾಜಕೀಯ ಬೆಳವಣಿಗೆಗಳ ನಡುವೆಯೇ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನವದೆಹಲಿಗೆ ಭೇಟಿ ನೀಡಿ ಕೇಂದ್ರ ಸಚಿವರೊಂದಿಗೆ ಸಭೆ ನಡೆಸಿದರು. ಇದರ ಫಲವಾಗಿ ಪಶ್ಚಿಮ ಬಂಗಾಳದಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ವಿಮೆ ಯೋಜನೆಯನ್ನು ಜಾರಿಗೊಳಿಸುವ ಒಪ್ಪಂದವನ್ನು ಅಂತಿಮಗೊಳಿಸಲಾಯಿತು. ವಿವಿಧ ಅಭಿವೃದ್ಧಿ ಯೋಜನೆಗಳು, ಗಡಿ ಭದ್ರತೆ, ಕಾನೂನು ಜಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ಹಲವು ರಂಗಗಳಲ್ಲಿ ಸರ್ಕಾರ ಮುಂದಡಿ ಇಟ್ಟಿದೆ ಎಂದು ರಾಜ್ಯ ಸರ್ಕಾರ ಸಮರ್ಥಿಸಿಕೊಂಡಿದೆ.

ಗಡಿ ಮೂಲಸೌಕರ್ಯ ಮೇಲ್ದರ್ಜೆಗೆ

ಸರ್ಕಾರ ತನ್ನ ಆರಂಭಿಕ ತಿಂಗಳಿನಲ್ಲಿ ಗಡಿ ನಿರ್ವಹಣೆ ಮತ್ತು ಕಾನೂನುಬಾಹಿರ ನುಸುಳುವಿಕೆಯನ್ನು ತಡೆಯುವಿಕೆಗೆ ಆದ್ಯತೆ ನೀಡಿದೆ. ಮೂಲಸೌಕರ್ಯ ಅಭಿವೃದ್ಧಿಗೆ ಅನುಕೂಲವಾಗುವಂತೆ ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) 142 ಎಕರೆಗಿಂತ ಹೆಚ್ಚು ಭೂಮಿ ಹಸ್ತಾಂತರಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಈ ಹಿಂದೆ ಬೇಲಿ ಹಾಕದ ದೊಡ್ಡ ಪ್ರದೇಶದಲ್ಲಿ ಬೇಲಿ ಹಾಕುವ ಪ್ರಕ್ರಿಯೆಯನ್ನು ಸುಗಮಗೊಳಿಸುವ ಇಚ್ಛೆಯನ್ನು ಸರ್ಕಾರ ವ್ಯಕ್ತಪಡಿಸಿದ್ದು, ಯೋಜನೆಗಳ ತ್ವರಿತ ಜಾರಿಗೆ ವಿವಿಧ ವಿಭಾಗಗಳಿಗೆ ಗುರಿಗಳನ್ನು ನಿಗದಿಪಡಿಸಿದೆ.

ಸಾರ್ವಜನಿಕ ಸ್ಥಳಗಳ ನಿಯಂತ್ರಣ

ಸಾರ್ವಜನಿಕ ರಸ್ತೆಗಳು ಮತ್ತು ಪ್ರಮುಖ ಸಾರಿಗೆ ಮಾರ್ಗಗಳಲ್ಲಿ ನಮಾಜ್ ಮಾಡುವುದನ್ನು ನಿಷೇಧಿಸುವುದು ಸೇರಿದಂತೆ ಸಾರ್ವಜನಿಕ ಸ್ಥಳಗಳನ್ನು ನಿಯಂತ್ರಿಸುವ ಕ್ರಮಗಳನ್ನು ಸರ್ಕಾರ ಪರಿಚಯಿಸಿದೆ. ಸಾರ್ವಜನಿಕ ರಸ್ತೆಗಳು ಸಾರಿಗೆ ಮತ್ತು ತುರ್ತು ಸೇವೆಗಳಿಗಾಗಿ ಮುಕ್ತವಾಗಿರಬೇಕು ಎಂದು ಸರ್ಕಾರ ವಾದಿಸಿದೆ. ಧಾರ್ಮಿಕ ಚಟುವಟಿಕೆಗಳನ್ನು ಸಾರ್ವಜನಿಕ ಸಾರಿಗೆ ಮಾರ್ಗಗಳ ಬದಲಿಗೆ ಗೊತ್ತುಪಡಿಸಿದ ಸ್ಥಳಗಳಲ್ಲಿ ನಡೆಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಲ್ಯಾಣ ಕಾರ್ಯಕ್ರಮಗಳಿಗೆ ಚಾಲನೆ

ಸರ್ಕಾರ ಅಧಿಕಾರ ವಹಿಸಿಕೊಂಡ ಕೆಲವೇ ವಾರಗಳಲ್ಲಿ ಮಹಿಳೆಯರು ಮತ್ತು ಕುಟುಂಬಗಳಿಗಾಗಿ ಕಲ್ಯಾಣ ಯೋಜನೆಗಳನ್ನು ಘೋಷಿಸಲಾಯಿತು. ಸಾರಿಗೆ ವೆಚ್ಚವನ್ನು ಕಡಿಮೆ ಮಾಡಲು, ರಾಜ್ಯದಲ್ಲಿ ಮಹಿಳಾ ಪ್ರಯಾಣಿಕರಿಗೆ ಉಚಿತ ಬಸ್ ಪ್ರಯಾಣವನ್ನು ಪರಿಚಯಿಸಿತು. ಹೆಚ್ಚುವರಿಯಾಗಿ, ಸಾಮಾಜಿಕ ಬೆಂಬಲ ವ್ಯವಸ್ಥೆಗಳನ್ನು ಬಲಪಡಿಸಲು ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಹಣಕಾಸಿನ ನೆರವನ್ನು ವಿಸ್ತರಿಸಲು ಅನ್ನಪೂರ್ಣ ಯೋಜನೆಯನ್ನು ಪ್ರಮುಖ ಕಲ್ಯಾಣ ಕಾರ್ಯಕ್ರಮವಾಗಿ ಪ್ರಾರಂಭಿಸಲಾಯಿತು.

ವಾಣಿಜ್ಯ ಮತ್ತು ಶೈಕ್ಷಣಿಕ ನಿಯಮಗಳು

ಆರೋಗ್ಯ ಸೌಲಭ್ಯಗಳು ಮತ್ತು ಶಿಕ್ಷಣ ಸಂಸ್ಥೆಗಳ ಸುತ್ತ ಸುರಕ್ಷಿತ ವಾತಾವರಣ ನಿರ್ಮಿಸಲು ಶಾಲೆಗಳು ಮತ್ತು ಆಸ್ಪತ್ರೆಗಳ ಸಮೀಪದಲ್ಲಿ ಮದ್ಯದ ಅಂಗಡಿಗಳ ಕಾರ್ಯಾಚರಣೆಯನ್ನು ನಿಷೇಧಿಸಲು ಸರ್ಕಾರ ನಿರ್ಧರಿಸಿದೆ. ಜತೆಗೆ, ಶಾಲೆಗಳಲ್ಲಿ ವಂದೇ ಮಾತರಂ ಗಾಯನವನ್ನು ಕಡ್ಡಾಯಗೊಳಿಸಿ ನಿರ್ದೇಶನ ಹೊರಡಿಸಲಾಗಿದ್ದು, ವಿದ್ಯಾರ್ಥಿಗಳಲ್ಲಿ ನಾಗರಿಕ ಮೌಲ್ಯಗಳು ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಉತ್ತೇಜಿಸುವ ಪ್ರಯತ್ನ ಎಂದು ಬಿಜೆಪಿ ಆಡಳಿತ ಬಣ್ಣಿಸಿದೆ.

ಕಾನೂನು ಜಾರಿ ಅಭಿಯಾನಗಳು

ಕಾನೂನು ಮತ್ತು ಸುವ್ಯವಸ್ಥೆಗೆ ಹೆಚ್ಚಿನ ಗಮನ ನೀಡಲಾಗಿದ್ದು, ರಾಜ್ಯಾದ್ಯಂತ ಸುಲಿಗೆ ಮತ್ತು ಕಾನೂನುಬಾಹಿರ ಹಣ ವಸೂಲಿ ವಿರುದ್ಧ ಕಠಿಣ ಕ್ರಮವನ್ನು ಪ್ರಾರಂಭಿಸಲಾಗಿದೆ. ಹಲವಾರು ದೂರುಗಳನ್ನು ಪರಿಶೀಲಿಸಲು ಮತ್ತು ಸಾಕ್ಷ್ಯಗಳಿರುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಜಾರಿ ಸಂಸ್ಥೆಗಳಿಗೆ ಸೂಚನೆ ನೀಡಲಾಗಿದೆ. ಆರ್ ಜಿ ಕರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಹಲವಾರು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಿದ್ದು, ಹೊಣೆಗಾರಿಕೆ ಮತ್ತು ಪಾರದರ್ಶಕತೆಗೆ ತನ್ನ ಬದ್ಧತೆ ತೋರ್ಪಡಿಸಿದೆ.

ಅಧಿಕಾರಶಾಹಿಯ ಪುನರ್‌ರಚನೆ

ಅಧಿಕಾರಶಾಹಿ ಪುನರ್ರಚನೆಯಲ್ಲಿ, ರಾಜ್ಯ ಮತ್ತು ಕೇಂದ್ರದ ನಡುವಿನ ಸಮನ್ವಯವನ್ನು ಬಲಪಡಿಸಲು ರಾಜ್ಯ ಕೆಡರ್ ಅಧಿಕಾರಿಗಳಿಗೆ ಕೇಂದ್ರ ಸರ್ಕಾರಕ್ಕೆ ನಿಯೋಜನೆ ಮೇಲೆ ಹೋಗುವ ಅವಕಾಶಗಳನ್ನು ಸುಗಮಗೊಳಿಸಲಾಗಿದೆ. ಸಾರಿಗೆ ಮೂಲಸೌಕರ್ಯದಲ್ಲಿ, ಕೇಂದ್ರ ಸಂಸ್ಥೆಗಳೊಂದಿಗೆ ಸಮನ್ವಯ ಸುಧಾರಿಸುವ ಮೂಲಕ ವರ್ಷಗಳಿಂದ ವಿಳಂಬವಾಗಿದ್ದ ಮೆಟ್ರೋ ರೈಲು ಯೋಜನೆಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರಗತಿ ಸಾಧಿಸಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಜತೆಗೆ ಹೈ-ಸ್ಪೀಡ್ ರೈಲು ಮತ್ತು ಬುಲೆಟ್ ರೈಲು ಜಾಲಗಳಿಗೆ ಬೆಂಬಲ ವ್ಯಕ್ತಪಡಿಸಿದೆ.

ಕೈಗಾರಿಕಾ ಅಭಿವೃದ್ಧಿ ಯೋಜನೆಗಳು

ಮಮತಾ ಬ್ಯಾನರ್ಜಿ ನೇತೃತ್ವದ ಪ್ರತಿಭಟನೆಗಳ ನಂತರ ಟಾಟಾ ಗ್ರೂಪ್ ತನ್ನ ಯೋಜನೆಯನ್ನು ಹಿಂತೆಗೆದುಕೊಂಡಾಗ ಉಂಟಾಗಿದ್ದ ರಾಜ್ಯದ ಐತಿಹಾಸಿಕ ಕೈಗಾರಿಕಾ ವಿರೋಧಿ ಗ್ರಹಿಕೆಯನ್ನು ಬದಲಾಯಿಸಲು ಸರ್ಕಾರ ಹಲವಾರು ಉದ್ಯಮಿಗಳೊಂದಿಗೆ ಮಾತುಕತೆ ನಡೆಸಿದೆ. ಟಾಟಾ ಗ್ರೂಪ್ ಅನ್ನು ಪಶ್ಚಿಮ ಬಂಗಾಳಕ್ಕೆ ಮರಳಿ ತರಲು ಸರ್ಕಾರ ಶ್ರಮಿಸುತ್ತಿದೆ. ಹೆಚ್ಚುವರಿಯಾಗಿ, ಅಮುಲ್‌ನ ಅತಿ ದೊಡ್ಡ ಡೈರಿ ಪ್ಲಾಂಟ್‌ಗೆ ಜೂನ್ 13 ರಂದು ಶಂಕುಸ್ಥಾಪನೆ ಮತ್ತು ಭೂಮಿ ಪೂಜೆ ನೆರವೇರಲು ದಿನಾಂಕ ನಿಗದಿಯಾಗಿದೆ.ಆರಂಭಿಕ ತಿಂಗಳು ಹಿಂದಿನ ಸರ್ಕಾರದ ಆದ್ಯತೆಗಳಿಂದ ಹಿಂದೆ ಸರಿಯುವ ಕೆಲಸ ನಡೆದಿದೆ. ಸಾಕಷ್ಟು ಜನಪ್ರಿಯ ಘೋಷಣೆಗಳನ್ನು ಮಾಡಲಾಗಿದೆ. ಎರಡನೇ ತಿಂಗಳು ಪ್ರಾರಂಭವಾಗುತ್ತಿದ್ದಂತೆ, ಅನುಷ್ಠಾನ, ಯೋಜನೆಗಳ ವಿಸ್ತರಣೆ ಮತ್ತು ಫಲಿತಾಂಶಗಳ ಮೌಲ್ಯಮಾಪನದ ಕಡೆಗೆ ಗಮನ ಹರಿಸುವ ನಿರೀಕ್ಷೆಯಿದೆ.



ಕಿರುಸುದ್ದಿ

ಶೀಘ್ರ ಮೋದಿ ಫ್ರಾನ್ಸ್, ಸ್ಲೋವಾಕಿಯಾ ಪ್ರವಾಸ

ಹೊಸದಿಲ್ಲಿ: ಜೂನ್ 13ರಿಂದ ಒಂದು ವಾರಗಳ ಭೇಟಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್ ಮತ್ತು ಸ್ಲೋವಾಕಿಯಾಗಳಿಗೆ ಒಂದು ವಾರದ ಪ್ರವಾಸವನ್ನು ಕೈಗೊಳ್ಳಲಿದ್ದಾರೆ. ತಮ್ಮ ಈ ಭೇಟಿಯಲ್ಲಿ ಅವರು ದ್ವಿಪಕ್ಷೀಯ ಸಂಬಂಧಗಳನ್ನು ವಿಸ್ತರಿಸುವ ಮಾರ್ಗಗಳನ್ನು ಅನ್ವೇಷಣೆ ಮತ್ತು ಜಾಗತಿಕ ಸವಾಲುಗಳ ಬಗ್ಗೆ ಚರ್ಚಿಸಲಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ (ಎಂಇಎ) ಪ್ರಕಾರ, ಮೋದಿಯವರು ಫ್ರಾನ್ಸ್‌ನ ಇವಿಯಾನ್‌ನಲ್ಲಿ ಜೂ16 ಮತ್ತು 17ರಂದು ನಡೆಯುವ ಜಿ7 ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

ಸೋನಿಯಾ-ದೀದಿ ಭೇಟಿ

ಹೊಸದಿಲ್ಲಿ: ವಿಧಾನಸಭೆ ಚುನಾವಣೆ ಬಳಿಕ ತೃಣಮೂಲ ಕಾಂಗ್ರೆಸ್ ಆಂತರಿಕ ಕಲಹ ಬಳಲುತ್ತಿರುವ ಮಧ್ಯೆ ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮಂಗಳವಾರ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಉಭಯ ನಾಯಕಿಯರು ಮುಂದಿನ ಕಾರ್ಯತಂತ್ರ ಕುರಿತು ಸಮಾಲೋಚನೆ ನಡೆಸಿದ್ದಾರೆ.

ಕುವೈತ್ ದೊರೆಗೆ ಬೆಂಬಲ ಸೂಚಿಸಿದ ಪ್ರಧಾನಿ ಮೋದಿ

ಹೊಸದಿಲ್ಲಿ: ಮಧ್ಯಪ್ರಾಚ್ಯ ಯುದ್ಧ ಸಂದರ್ಭ ಕುವೈತ್‌ನ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಗೆ ಭಾರತದ ಬಲವಾದ ಬೆಂಬಲವನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪುನರುಚ್ಚರಿಸಿದ್ದಾರೆ.

ಕುವೈತ್ ದೊರೆ ಶೇಖ್ ಮೇಶಲ್ ಅಲ್-ಅಹ್ಮದ್ ಅಲ್-ಜಾಬರ್ ಅಲ್ ಸಬಾ ಅವರೊಂದಿಗೆ ದೂರವಾಣಿ ಕರೆ ಮೂಲಕ ಪ್ರಧಾನಿ ಮೋದಿ ಮಾತುಕತೆ ನಡೆಸಿದ್ದಾರೆ. ಮಧ್ಯಪ್ರಾಚ್ಯದಲ್ಲಿನ ಇತ್ತೀಚೆಗಿನ ಬೆಳವಣಿಗೆಗಳ ಕುರಿತು ಚರ್ಚಿಸಿದ್ದಾರೆ.

ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ತೀವ್ರಗೊಂಡಿರುವ ಉದ್ವಿಗ್ನತೆ ಕುರಿತು ಪ್ರಧಾನಿ ಮೋದಿ ಅತೀವ ಕಾಳಜಿ ವ್ಯಕ್ತಪಡಿಸಿದ್ದು, ಕುವೈತ್‌ನ ಸಾರ್ವಭೌಮತ್ವ ಮತ್ತು ಭೌಗೋಳಿಕ ಅಖಂಡತೆಯ ಮೇಲೆ ನಡೆಯುವ ದಾಳಿಗಳನ್ನು ಭಾರತವು ಬಲವಾಗಿ ಖಂಡಿಸುತ್ತದೆ ಎಂದು ಪುನರುಚ್ಚರಿಸಿದ್ದಾರೆ ಎಂದು ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

ಕುವೈತ್‌ನಲ್ಲಿವಾಸಿಸುತ್ತಿರುವ ದೊಡ್ಡ ಭಾರತೀಯ ಸಮುದಾಯದ ಯೋಗಕ್ಷೇಮ ಮತ್ತು ಸುರಕ್ಷತೆಯ ಬಗ್ಗೆ ವೈಯಕ್ತಿಕವಾಗಿ ಗಮನ ಹರಿಸಿರುವುದಕ್ಕೆ ಕುವೈತ್ ದೊರೆಗೆ ಪ್ರಧಾನಿ ಮೋದಿ ಕೃತಜ್ಞತೆಗಳನ್ನು ತಿಳಿಸಿದ್ದಾರೆ.

ಪ್ರದೇಶದಲ್ಲಿ ಉದ್ವಿಗ್ನತೆ ಕಡಿಮೆಗೊಳಿಸುವುದು, ಶಾಂತಿ ಮಾತುಕತೆ ಮೊದಲಾದ ರಾಜತಾಂತ್ರಿಕ ಮಾರ್ಗ ಅನುಸರಿಸುವಂತೆ ಮೋದಿ ಪುನರುಚ್ಚರಿಸಿದ್ದಾರೆ. ಇದೇ ಸಂದರ್ಭ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ನೊಂದಿಗೆ ಕೆಲವೇ ದಿನಗಳಲ್ಲಿ ಒಪ್ಪಂದ ಆಗಬಹುದು. ಒಪ್ಪಂದ ಅಂತಿಮಗೊಳ್ಳುವವರೆಗೆ ಹಾರ್ಮುಜ್ ಮೇಲಿನ ನಿರ್ಬಂಧಗಳು ಹಾಗೆಯೇ ಇರಲಿವೆ ಎಂದು ಹೇಳಿದ್ದಾರೆ.

ಪಂಜಾಬ್: ಉಗ್ರ ಜಾಲದ ಸಹಚರರಿಬ್ಬರ ಬಂಧನ

ಅಮೃತಸರ: ಪಂಜಾಬ್ ಪೊಲೀಸ್ ಮತ್ತು ಕೇಂದ್ರ ಸಂಸ್ಥೆಗಳು ಗಡಿಯಾಚೆಗಿನ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕ ಹೊಂದಿದ್ದ ಇಬ್ಬರು ವ್ಯಕ್ತಿಗಳನ್ನು ಮಂಗಳವಾರ ಬಂಧಿಸಿದ್ದು, ಅಮೃತಸರದ ಖಾಸಾ ಪ್ರದೇಶದಲ್ಲಿ ಅವರಿಂದ ಎರಡು ಹ್ಯಾಂಡ್ ಗ್ರೆನೇಡ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತರನ್ನು ತಾರ್ನ್ ತಾರನ್ ನಿವಾಸಿಗಳಾದ ದೇವಿಂದರ್ ಸಿಂಗ್ ಮತ್ತು ರಾಜ್‌ವಿಂದರ್ ಸಿಂಗ್ ಎಂದು ಗುರುತಿಸಲಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ತಿಳಿಸಿದ್ದಾರೆ. ಗುಪ್ತಚರ ಮಾಹಿತಿ ಆಧಾರಿತ ಶೋಧ ಕಾರ್ಯಾಚರಣೆಯ ಸಂದರ್ಭದಲ್ಲಿ ಹ್ಯಾಂಡ್ ಗ್ರೆನೇಡ್‌ಗಳು ಪತ್ತೆಯಾದ ನಂತರ ಅಧಿಕಾರಿಗಳು ಆರೋಪಿಗಳು ಪ್ರಯಾಣಿಸುತ್ತಿದ್ದ ವಾಹನವನ್ನು ಜಪ್ತಿ ಮಾಡಿದ್ದಾರೆ. ಪ್ರಾದೇಶಿಕ ಶಾಂತಿ ಕದಡುವ ಚಟುವಟಿಕೆಗಳನ್ನು ಯೋಜಿಸಲು ಆರೋಪಿಗಳು ವಿದೇಶಿ ಮೂಲದ ಹ್ಯಾಂಡ್ಲರ್‌ಗಳೊಂದಿಗೆ ನೇರ ಸಂಪರ್ಕದಲ್ಲಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಅಮೃತಸರ ಜೈಲಿನಲ್ಲಿದ್ದ ಹರ್ವಂತ್ ಸಿಂಗ್ ಅಲಿಯಾಸ್ ಹ್ಯಾರಿ ಎಂಬ ಕೈದಿ ಈ ಇಬ್ಬರನ್ನು ವಿದೇಶಿ ಹ್ಯಾಂಡ್ಲರ್‌ಗೆ ಪರಿಚಯಿಸಿದ್ದ ಎಂದು ಹಿರಿಯ ಪೊಲೀಸ್ ಅಧೀಕ್ಷಕ ಕನ್ವಲ್‌ಪ್ರೀತ್ ಸಿಂಗ್ ಚಾಹಲ್ ತಿಳಿಸಿದ್ದಾರೆ. ಶಂಕಿತರು ಈ ಹಿಂದೆ ಹರ್ವಂತ್‌ನ ಸಹಚರರಿಗೆ ಹಲವಾರು ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ಕಳ್ಳಸಾಗಣೆ ಮಾಡಿದ್ದರು. ಕಾನೂನು ಜಾರಿ ಅಧಿಕಾರಿಗಳು ಕಾರಾಗೃಹದ ಆವರಣದೊಳಗೆ ಹರ್ವಂತ್‌ಗೆ ಸೇರಿದ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಂಡಿದ್ದು, ಈ ಕುರಿತು ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ.

ನಕಲಿ ಸಹಿ: ಮಮತಾ ನಿವಾಸದಲ್ಲಿ ಶೋಧ

ಕೋಲ್ಕತ್ತಾ: ಶಾಸಕರ ನಕಲಿ ಸಹಿ ಹಗರಣದ ತನಿಖೆಗೆ ಸಂಬಂಧಿಸಿದಂತೆ ಅಪರಾಧ ತನಿಖಾ ಇಲಾಖೆ (ಸಿಐಡಿ) ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಕೋಲ್ಕತಾ ನಿವಾಸಕ್ಕೆ ಶೋಧನಾ ವಾರಂಟ್‌ನೊಂದಿಗೆ ಮಂಗಳವಾರ ದಾಳಿ ನಡೆಸಿದೆ.

ಕಾಳಿಘಾಟ್ ಪೊಲೀಸ್ ಸಿಬ್ಬಂದಿಯೊಂದಿಗೆ ಆಗಮಿಸಿದ ಅಧಿಕಾರಿಗಳು ಮಧ್ಯಾಹ್ನದ ವೇಳೆಗೆ 30 ಬಿ ಹರೀಶ್ ಚಟರ್ಜಿ ರಸ್ತೆಯಲ್ಲಿರುವ ಪಕ್ಷದ ಕೇಂದ್ರ ಕಚೇರಿ ತಲುಪಿದರು. ಸದ್ಯ ದಿಲ್ಲಿಯಲ್ಲಿರುವ ಬ್ಯಾನರ್ಜಿ ನಿವಾಸ ಹಾಗೂ ಸಂಸದ ಅಭಿಷೇಕ್ ಬ್ಯಾನರ್ಜಿಯ ಕಚೇರಿ ಮತ್ತು ನಿವಾಸ ಸೇರಿದಂತೆ ಒಟ್ಟು ಮೂರು ಸ್ಥಳಗಳಲ್ಲಿ ಸಿಐಡಿಯ ಪ್ರತ್ಯೇಕ ತಂಡಗಳು ಏಕಕಾಲದಲ್ಲಿ ಪರಿಶೀಲನೆ ನಡೆಸಿವೆ.ಪಕ್ಷದ ಶಾಸಕರ ಸಹಿಗಳನ್ನು ಈ ಕೇಂದ್ರ ಕಚೇರಿಯಲ್ಲೇ ಸಂಗ್ರಹಿಸಲಾಗಿತ್ತು ಎಂದು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ನೀಡಿದ ಉತ್ತರದ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ. ಶೋವಂದೇಬ್ ಚಟ್ಟೋಪಾಧ್ಯಾಯ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಗುರುತಿಸುವಂತೆ ಕೋರಿ ವಿಧಾನಸಭೆಯ ಸ್ಪೀಕರ್‌ಗೆ ಸಲ್ಲಿಸಲಾದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ತನಿಖೆ ನಡೆಯುತ್ತಿದೆ.

ದಾಖಲೆಯಲ್ಲಿರುವ 70 ಸಹಿಗಳಲ್ಲಿ 14 ಸಹಿಗಳನ್ನು ನಕಲು ಮಾಡಲಾಗಿದೆ ಎಂದು ಶಾಸಕರಾದ ರಿತಬ್ರತ ಬ್ಯಾನರ್ಜಿ ಮತ್ತು ಸಂದೀಪನ್ ಸಹಾ ದೂರು ನೀಡಿದ್ದರು. ಎಫ್‌ಐಆರ್ ದಾಖಲಾದ ನಂತರ ಮುಖ್ಯಮಂತ್ರಿ ಸುವೇಂದು ಅಧಿಕಾರಿ ದೂರುದಾರರ ಹೆಸರುಗಳನ್ನು ಬಹಿರಂಗಪಡಿಸಿದ್ದರು, ಮತ್ತು ಪಕ್ಷ ತಕ್ಷಣವೇ ಇಬ್ಬರನ್ನೂ ಉಚ್ಚಾಟಿಸಿತ್ತು.

ವಾಯುಪಡೆ, ಸಿಆರ್‌ಪಿಎಫ್ ನಿಯೋಜನೆ

ಹೊಸದಿಲ್ಲಿ: ಜೂನ್21ರಂದು ನಡೆಯಲಿರುವ ನೀಟ್-ಯುಜಿ ಮರುಪರೀಕ್ಷೆಯನ್ನು ಸುರಕ್ಷಿತವಾಗಿ ನಡೆಸಲು ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಭಾರತೀಯ ವಾಯುಪಡೆ ಹಾಗೂ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳನ್ನು ನಿಯೋಜಿಸುತ್ತಿದೆ. ಪ್ರಶ್ನೆಪತ್ರಿಕೆಗಳ ಸಾಗಣೆ ಸಮಯವನ್ನು ಹತ್ತು ದಿನಗಳಿಂದ ನಾಲ್ಕೈದು ದಿನಗಳಿಗೆ ಕಡಿತಗೊಳಿಸಲು ವಾಯುಪಡೆಯ ಹೆಲಿಕಾಪ್ಟರ್ ಮತ್ತು ವಿಮಾನಗಳನ್ನು ಬಳಸಿಕೊಳ್ಳುವ ಕುರಿತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೊಂದಿಗೆ ಚರ್ಚಿಸಿದ್ದಾರೆ. ವಿತರಣಾ ಕೇಂದ್ರಗಳಿಂದ ಪರೀಕ್ಷಾ ಕೇಂದ್ರಗಳಿಗೆ ಸುರಕ್ಷಿತ ಸಾಗಣೆಯನ್ನು ಖಚಿತಪಡಿಸಿಕೊಳ್ಳಲು ಸಿಆರ್‌ಪಿಎಫ್, ಬಿಎಸ್‌ಎಫ್ ಮತ್ತು ಸಿಐಎಸ್‌ಎಫ್ ಒಳಗೊಂಡ ಕೇಂದ್ರ ಪಡೆಗಳನ್ನು ನಿಯೋಜಿಸುವ ಸಾಧ್ಯತೆಯಿದೆ.

ಗ್ರಾಮೀಣ ಉದ್ಯೋಗಕ್ಕೆ ಹೊಸ ಚೈತನ್ಯ | ಜುಲೈ 1ರಿಂದ ಜಿರಾಮ್‌ಜಿ ಆರಂಭ

ಗ್ರಾಮೀಣಾಭಿವೃದ್ಧಿಗೆ 1.25 ಲಕ್ಷ ಕೋ. ರೂ.

ಹೊಸದಿಲ್ಲಿ: ಗ್ರಾಮೀಣ ಉದ್ಯೋಗ, ಕಾರ್ಮಿಕರ ಭದ್ರತೆ ಹಾಗೂ ಹಳ್ಳಿಗಳ ಸಮಗ್ರ ಅಭಿವೃದ್ಧಿಗೆ ಹೊಸ ಉತ್ತೇಜನ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರ ನರೇಗಾ ಬದಲಿಗೆ ಹೊಸದಾಗಿ ಜಾರಿ ಮಾಡಲಿರುವ ವಿಕಸಿತ ಭಾರತ ಜಿರಾಮ್‌ಜಿ ಅಡಿಯಲ್ಲಿ 1.25 ಲಕ್ಷ ಕೋಟಿ ರೂ. ಮೊತ್ತದ ಅನುದಾನ ಘೋಷಿಸಲಾಗಿದೆ.

ಜು.1ರಿಂದ ಜಾರಿಗೆ ಬರುವ ವಿಕಸಿತ ಭಾರತ ಜಿರಾಮ್‌ಜಿ ಕುರಿತಂತೆ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರೊಂದಿಗೆ ನಡೆದ ಸಭೆಯಲ್ಲಿ ಕೇಂದ್ರ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಈ ಘೋಷಣೆ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ ವಿಕಸಿತ ಭಾರತ ಜಿರಾಮ್‌ಜಿ ಗ್ರಾಮೀಣ ಭಾರತದಲ್ಲಿ ಉದ್ಯೋಗ ಸೃಷ್ಟಿ, ಮೂಲಸೌಕರ್ಯ ನಿರ್ಮಾಣ ಮತ್ತು ಕಾರ್ಮಿಕರ ಜೀವನೋಪಾಯಕ್ಕೆ ಹೊಸ ದಿಕ್ಕು ನೀಡಲಿದೆ ಎಂದು ಚೌಹಾಣ್ ಹೇಳಿದರು.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ಎಂಎನ್‌ಆರ್‌ಇಜಿಎ) ಅಡಿಯಲ್ಲಿ ಈಗಾಗಲೇ 30,000 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಇದರ ಜೊತೆಗೆ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಮಧ್ಯಂತರವಾಗಿ 95,692 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದ್ದು, ಒಟ್ಟಾರೆ ಅನುದಾನ 1.25 ಲಕ್ಷ ಕೋಟಿ ರೂ. ಮೀರಿದೆ. ಈ ಹಣ ದೇಶದ ಸುಮಾರು 2.8 ಲಕ್ಷ ಗ್ರಾಮ ಪಂಚಾಯಿತಿಗಳಿಗೆ ತಲುಪಲಿದ್ದು, ಅಭಿವೃದ್ಧಿ ಕಾಮಗಾರಿಗಳು ಮತ್ತು ಉದ್ಯೋಗ ಸೃಷ್ಟಿಗೆ ಬಳಸಲಾಗುವುದು ಎಂದು ಸಚಿವರು ತಿಳಿಸಿದರು.

ಗ್ರಾಮ ಪಂಚಾಯಿತಿಗಳು ಹಾಗೂ ಗ್ರಾಮಸಭೆಗಳ ಮೂಲಕ ಅಭಿವೃದ್ಧಿ ಕಾಮಗಾರಿಗಳನ್ನು ಆಯ್ಕೆ ಮಾಡಲಾಗುವುದು. ಉದ್ಯೋಗ ಸೃಷ್ಟಿ ಮತ್ತು ವೇತನ ಪಾವತಿಯಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ನೋಡಿಕೊಳ್ಳಬೇಕು ಎಂದು ರಾಜ್ಯಗಳಿಗೆ ನಿರ್ದೇಶನ ನೀಡಲಾಗಿದೆ. ಜೂ.28 ಮತ್ತು 29ರಂದು ಹೊಸದಿಲ್ಲಿಯ ಪೂಸಾ ಸಂಸ್ಥೆಯಲ್ಲಿ ನಡೆಯಲಿರುವ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಸಮ್ಮೇಳನದಲ್ಲಿ ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕುರಿತು ಸವಿಸ್ತಾರ ಚರ್ಚೆ ನಡೆಯಲಿದೆ.

ಕರ್ನಾಟಕಕ್ಕೆ 5,709 ಕೋಟಿ ರೂ.

ಹೊಸ ಮಧ್ಯಂತರ ಅನುದಾನದಡಿ ಕರ್ನಾಟಕಕ್ಕೆ 5,709.09 ಕೋಟಿ ರೂ. ಮಂಜೂರು ಮಾಡಲಾಗಿದೆ. ಉತ್ತರ ಪ್ರದೇಶಕ್ಕೆ ಅತಿ ಹೆಚ್ಚು 12,221.48 ಕೋಟಿ ರೂ., ಪಶ್ಚಿಮ ಬಂಗಾಳಕ್ಕೆ 8,508 ಕೋಟಿ ರೂ. ಹಾಗೂ ತಮಿಳುನಾಡಿಗೆ 7,957.57 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ರಾಜ್ಯಗಳು ಮುಂಚಿತವಾಗಿಯೇ ಕಾಮಗಾರಿಗಳಿಗೆ ಅನುಮೋದನೆ ನೀಡುವ ಮೂಲಕ ಜುಲೈ 1ರಿಂದ ವೇಗವಾಗಿ ಯೋಜನೆ ಜಾರಿಗೊಳಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

ರಾಷ್ಟ್ರ ಪರಂಪರೆ ಗೌರವಿಸದವರಿಗೆ ಭಾರತ ಧರ್ಮಛತ್ರವಾಗಿರಲು ಸಾಧ್ಯವಿಲ್ಲ

ಲವ್ ಜಿಹಾದ್ ವಿರುದ್ಧ ಎಚ್ಚರಿಸಿದ ಯೋಗಿ

ಲಖನೌ: ರಾಷ್ಟ್ರದ ಪರಂಪರೆ,ಮೌಲ್ಯಗಳಿಗೆ ಗೌರವ ನೀಡದವರಿಗೆ ಭಾರತ ''ಧರ್ಮಶಾಲೆ''ಯಾಗಿರಲು ಸಾಧ್ಯವಿಲ್ಲ ಎಂದು ಸಾರಿದ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು,'ಲವ್ ಜಿಹಾದ್', ಕಾನೂನುಬಾಹಿರ ಮತಾಂತರ ಮತ್ತು ಲ್ಯಾಂಡ್ ಜಿಹಾದ್‌ಗಳಂತಹ ಪಿಡುಗುಗಳ ವಿರುದ್ಧ ಜಾಗೃತರಾಗಿರಲು ದೇಶದ ಜನತೆಯನ್ನು ಆಗ್ರಹಿಸಿದ್ದಾರೆ.

ಅವರು ಲಖನೌದಲ್ಲಿ ಜಗದ್ಗುರು ಶ್ರೀ ರಮಾನಂದಾಚಾರ್ಯ ಸ್ವಾಮಿ ರಾಮಭದ್ರಾಚಾರ್ಯರು ಆಯೋಜಿಸಿದ 9ದಿನಗಳ ಶ್ರೀರಾಮ ಕಥಾ ಮಹೋತ್ಸವದ ಸಮಾರೋಪದಲ್ಲಿ ಮಾತನಾಡಿದರು. ಭಗವಾನ್ ಶ್ರೀರಾಮ ರಾಷ್ಟ್ರೀಯ ಏಕತೆಯ ಒಂದು ಶಕ್ತಿಶಾಲಿ ಸಂಕೇತವಾಗಿ ಉಳಿಯಲಿದ್ದಾರೆ ಎಂದರು.

ರಾಜಕೀಯ ಪ್ರಚೋದನೆ ಮತ್ತು ಪೂರ್ವಾಗ್ರಹಗಳಿಂದ ಕೂಡಿದ ಕೆಲವೇ ವ್ಯಕ್ತಿಗಳನ್ನು ಹೊರತುಪಡಿಸಿ ಭಾರತೀಯ ಡಿಎನ್‌ಎ ಹೊಂದಿದ ಮತ್ತು ಯಾವುದೇ ರೂಪದಲ್ಲಿ ಭಗವಾನ್ ಶ್ರೀರಾಮನ ಚಿಂತನೆಗಳನ್ನು ತಮ್ಮ ಜೀವನದ ಭಾಗವಾಗಿಸದೆ ಇರುವ ಯಾವುದೇ ವ್ಯಕ್ತಿಗಳನ್ನು ನೀವು ಕಾಣಲು ಸಾಧ್ಯವಿಲ್ಲ ಎಂದು ಅವರು ದೃಢವಾಗಿ ಹೇಳಿದರು.



ಶ್ರೀ ರಾಮಜನ್ಮಭೂಮಿ ಚಳುವಳಿಯು ತಲೆಮಾರುಗಳವರೆಗೆ ಉಳಿದುಕೊಂಡಿರುವುದು ಏಕೆಂದರೆ, ಸಂತರು ಇದನ್ನು ಭಾರತದ ನಾಗರಿಕ ಪರಂಪರೆಯನ್ನು ರಕ್ಷಿಸುವ ಧ್ಯೇಯವೆಂದು ಪರಿಗಣಿಸಿದ್ದರು. ಸುಪ್ರೀಂ ಕೋರ್ಟ್‌ನ 2019ರ ತೀರ್ಪನ್ನು ಉಲ್ಲೇಖಿಸಿ, ಸಂವಿಧಾನ ಪೀಠವು ರಾಮಲಲ್ಲಾ ಅವರ ಜನ್ಮಸ್ಥಳವನ್ನು ಸರ್ವಾನುಮತದಿಂದ ಗುರುತಿಸಿದೆ ಮತ್ತು ನ್ಯಾಯಬದ್ಧ ಕಾನೂನು ಹೋರಾಟದಲ್ಲಿ ಸ್ವಾಮಿ ರಾಮಭದ್ರಾಚಾರ್ಯರ ಪಾತ್ರವನ್ನು ಶ್ಲಾಘಿಸಿದೆ ಎಂದು ಅವರು ಬೊಟ್ಟು ಮಾಡಿದರು.

ರಾಮಾಯಣವನ್ನು ಉಲ್ಲೇಖಿಸಿದ ಅವರು, ತಾಟಕಿಯಂತಹ ರಾಕ್ಷಸರು ಕಲಿಕೆ ಮತ್ತು ಸಂಶೋಧನೆಯಂತಹ ಜ್ಞಾನದ ಕೇಂದ್ರಗಳನ್ನು ನಾಶಗೈಯ್ಯಲು ಮಾಡಿದ ಎಲ್ಲ ಯತ್ನಗಳನ್ನೂ ಭಗವಾನ್ ಶ್ರೀರಾಮ ಸೋಲಿಸಿದ್ದನ್ನು ಪ್ರಸ್ತಾವಿಸಿದರು.

ಭಗವಾನ್‌ಶ್ರೀರಾಮ ರಾಷ್ಟ್ರೀಯ ಏಕತೆಯ ಸಂಕೇತವಾಗಿದ್ದಷ್ಟೇ, ಶ್ರೀರಾಮ ಭಾರತೀಯರ ಸ್ಫೂರ್ತಿಯಾಗಿದ್ದಾರೆ ಎಂದರು. ಇಂದು ಭಾರತೀಯ ಸಮಾಜವನ್ನು ಉಧ್ವಸ್ತಗೊಳಿಸುವ ಷಡ್ಯಂತ್ರದ ಭಾಗವಾಗಿ ನಡೆಯುತ್ತಿರುವ 'ಲವ್ ಜಿಹಾದ್', ಕಾನೂನುಬಾಹಿರ ಮತಾಂತರ, 'ಲ್ಯಾಂಡ್ ಜಿಹಾದ್'ನಂತಹ ಪಿಡುಗುಗಳ ವಿರುದ್ಧ ದೇಶದ ಜನತೆ ಜಾಗೃತರಾಗಿರುವಂತೆ ಕರೆ ನೀಡಿದರು. ಲವ್ ಜಿಹಾದ್ ಭಾರತೀಯ ಧಾರ್ಮಿಕ ಜನಸಂಖ್ಯಾ ವ್ಯವಸ್ಥೆಯನ್ನೇ ಬುಡಮೇಲುಗೊಳಿಸುವ ಸಂಚಿನ ಭಾಗವಾಗಿದೆ ಎಂದರು.

ಕಂದಾಯ ಗ್ರಾಮಗಳಲ್ಲಿ ಹಕ್ಕುಪತ್ರ ವಿತರಣೆ | ಶಾಸಕ ಚಿಮ್ಮನಕಟ್ಟಿ ಸೂಚನೆ

ಗೈರಾದ ಅಧಿಕಾರಿಗಳಿಗೆ ನೋಟಿಸ್ ನೀಡಿ



ಬಾದಾಮಿ: ಕೆಲವು ಇಲಾಖೆಗಳಲ್ಲಿ ಬಹು ವರ್ಷಗಳಿಂದ ಹಲ ಸಿಬ್ಬಂದಿ ಮತ್ತು ಅಧಿಕಾರಿಗಳು ಬೇರೂರಿರುವುದರಿಂದ ಸಾರ್ವಜನಿಕ ಕೆಲಸಗಳ ವಿಳಂಬಕ್ಕೆ ಕಾರಣವಾಗಿದ್ದು, ಅಂಥವರನ್ನು ಶೀಘ್ರವೇ ವರ್ಗಾಯಿಸಿ ಆಡಳಿತ ಕಾರ್ಯಕ್ಕೆ ವೇಗ ನೀಡಲಾಗುವುದು ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ತಾ.ಪಂ ಸಭಾಭವನದಲ್ಲಿ ಇತ್ತೀಚೆಗೆ ಜರುಗಿದ ಕೆಡಿಪಿ ತ್ರೈ ಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ಸಭೆಗೆ ಗೈರಾಗಿರುವ ಅಧಿಕಾರಿಗಳು, ಸಿಬ್ಬಂದಿ, ಗ್ರಾಮಲೆಕ್ಕಾಧಿಕಾರಿಗಳು ಹಾಗೂ ಪಿಡಿಒಗಳಿಗೆ ಕಾರಣ ಕೇಳಿ ನೋಟಿಸ್ ನೀಡಿ ಅವರಿಂದ ಸಮಂಜಸ ಉತ್ತರ ಪಡೆಯಿರಿ ಎಂದು ತಾ.ಪಂ ಇಒಗೆ ಸೂಚಿಸಿದರು.

ಸಮವಸ್ತ್ರ ಶೀಘ್ರ ವಿತರಣೆ: ಈಗಾಗಲೇ ತಾಲೂಕಿನ ಎಲ್ಲ ಶಾಲೆಗಳಿಗೆ ಪಠ್ಯ ಪುಸ್ತಕಗಳ ವಿತರಣೆ ಆಗಿದ್ದು, ಮಾರಾಟ ಪುಸ್ತಕಗಳಲ್ಲಿ ಶೇ.20 ರಷ್ಟು ಮಾತ್ರ ವಿತರಿಸಲಾಗಿದೆ. ಶೂ, ಸಮವಸ್ತ್ರಗಳು ಶೀಘ್ರವೇ ಬರಲಿದ್ದು, ಶೀಘ್ರ ವಿತರಿಸಲಾಗುವುದು ಎಂದು ಬಿಇಒ ಕೇಶವ ಪೆಟ್ಲೂರ ಹೇಳಿದರು.

ತಾಲೂಕಿನಲ್ಲಿರುವ ಬರುವ ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರು, ಶೌಚಾಲಯ ಮತ್ತು ಕಾಂಪೌಂಡ್ ಒದಗಿಸಲು ಪಿಡಿಒ, ಶಿಕ್ಷಣ ಇಲಾಖೆ ಜಂಟಿಯಾಗಿ ಸಹಕಾರದಿಂದ ಕೆಲಸ ಮಾಡಬೇಕು. ಜೊತೆಗೆ ಕಾಲಮಿತಿಯಲ್ಲಿ ಅವಧಿಗೆ ಕೊನೆಗೆ ನರೇಗಾ ಯೋಜನೆಯಲ್ಲಿ ಅನುದಾನ ಒದಗಿಸಿ ಅನುಷ್ಠಾನಗೊಳಿಸಬೇಕೆಂದು ಶಾಸಕ ಹೇಳಿದರು.

ತಾಲೂಕಿನಲ್ಲಿ ಜೆಜೆಎಂ ಯೋಜನೆಯಡಿ ಕುಡಿಯುವ ನೀರು ಸರಬರಾಜು ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ ಎಂದು ಸಭೆಯಲ್ಲಿ ಸದಸ್ಯರು ದೂರಿದಾಗ ಈ ಬಗ್ಗೆ ಅಧಿಕಾರಿ ನವೀನ ಹುಚರೆಡ್ಡಿ ನೀಡಿದ ಮಾಹಿತಿ ಬಗ್ಗೆ ಶಾಸಕರು ಸುದೀರ್ಘ ಚರ್ಚೆ ನಡೆಸಿದರು.

ಕೃಷಿ ಸಹಾಯಕ ನಿರ್ದೇಶಕ ಅಶೋಕ ತಿರಕನ್ನವರ ಮಾತನಾಡಿ, ಮೇ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದರಿಂದ ರೈತರು ಜಮೀನುಗಳನ್ನು ಹದಗೊಳಿಸಿ ಬಿತ್ತನೆಗೆ ಸಿದ್ಧತೆ ಮಾಡಿಕೊಂಡಿದ್ದಾರೆ. ಇದಕ್ಕೆ ಪೂರಕವಾಗಿ ಬೀಜ ಮತ್ತು ಗೊಬ್ಬರದ ಸಂಗ್ರಹವಿದೆ ಎಂದು ಹೇಳಿದರು.

32 ಕೃಷಿ ಹೊಂಡಗಳು ಬಂದಿದ್ದು, ಅರ್ಹರಿಗೆ ತಲಾ ಎರಡು ಲಕ್ಷ ರೂ.ವರೆಗೆ ರಿಯಾಯಿತಿ ದೊರಕಲಿದ್ದು, ಇದಕ್ಕೆ ಬೇಕಾದ ಪರಿಕರಗಳನ್ನು ಇಲಾಖೆಯಿಂದ ಕೊಡಲಾಗುವುದು. 259 ಹೆಕ್ಟೇರ್ ಜಮೀನಿನಲ್ಲಿ ತೋಟಗಾರಿಕಾ ಬೆಳೆ ಹಾನಿಯಾಗಿದ್ದು, ಸರ್ಕಾರಕ್ಕೆ ವರದಿ ಮಾಡಲಾಗಿದೆ ಎಂದು ಅಧಿಕಾರಿ ಬಾಲನಗೌಡ ಪಾಟೀಲ ಹೇಳಿದರು.

ಕಂದಾಯ ಇಲಾಖೆ: ತಾಲೂಕಿನ ಹೊಸೂರು ಗ್ರಾಮ ವ್ಯಾಪ್ತಿಯ ಗಿಡ್ಡನಾಯಕನಾಳ, ಹಣಾಪುರ, ರಾಧಾಪುರ ಮತ್ತು ತೋಗುಣಸಿ ಕಂದಾಯ ಗ್ರಾಮಗಳಲ್ಲಿ ಅಲ್ಲಿನ ಫಲಾನುಭವಿಗಳಿಗೆ ಜೂ.25 ರೊಳಗಾಗಿ ಹಕ್ಕು ಪತ್ರ ನೀಡಲಾಗುತ್ತಿದ್ದು ಇವುಗಳನ್ನು ಸಿದ್ಧಪಡಿಸಿಕೊಳ್ಳಬೇಕೆಂದು ಶಾಸಕರು ಕಂದಾಯ ಅಧಿಕಾರಿಗಳಿಗೆ ಸೂಚಿಸಿದರು.

ಇನ್ನು ಮಾಸಾಶನಕ್ಕೆ ಜನರನ್ನು ಅಲೆದಾಡಿಸುತ್ತಿರುವುದು ಗಮನಕ್ಕೆ ಬಂದಿದ್ದು, ಈ ನಿರ್ಲಕ್ಷ್ಯ ಸಹಿಸಲಾಗದು. ಕೂಡಲೇ ಎಲ್ಲ ಮಾಸಾಶನಗಳನ್ನು ಫಲಾನುಭವಿಗಳ ಹೆಸರಿಗೆ ಮಂಜೂರಿ ಮಾಡಿ ಎಂದು ಚಿಮ್ಮನಕಟ್ಟಿ ಹೇಳಿದರು.

ಸಾರಿಗೆ, ಪಶು ವೈದ್ಯಕೀಯ, ಪುರಸಭೆ, ಹೆಚ್.ಎಂ, ಸಣ್ಣ ನೀರಾವರಿ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ವರದಿಯನ್ನು ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವಲೋಕಿಸಿದರು.

ಸಭೆಯಲ್ಲಿ ಹಾಲು ಒಕ್ಕೂಟದ ನಿರ್ದೇಶಕ ಈರನಗೌಡ ಕರಿಗೌಡರ, ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎಂ.ಬುದಿಹಾಳ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು, ಪಿಡಿಒ ಇತರರು ಭಾಗವಹಿಸಿದ್ದರು.

ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನಂತೆ ಅಧಿಸೂಚನೆ ಹೊರಡಿಸಿ: ಡಾ. ಕುಲಕರ್ಣಿ



ವಿಜಯಪುರ: ಕೃಷ್ಣಾ ಮೇಲ್ದಂಡೆ ಯೋಜನೆ 60 ವರ್ಷವಾದರೂ ಜಾರಿಗೊಂಡಿಲ್ಲ ಎಂದು ಯಾರನ್ನೂ ವಿರೋಧಿಸುವ ಮೊದಲು ರೈತರು ಜಾಗೃತರಾಗಬೇಕು. ರೈತರು ಜಾಗೃತರಾಗಿ ಪ್ರಯತ್ನ ಮಾಡಿದರೆ ಯೋಜನೆ ಜಾರಿಯಾಗುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿಯಾದರೆ ಅಖಂಡ ವಿಜಯಪುರ ಜಿಲ್ಲೆಯ 57.70 ಪ್ರತಿಶತ ನೀರಾವರಿ ಆಗುತ್ತದೆ ಸದ್ಯ 15 ಪ್ರತಿಶತ ಮಾತ್ರ ನೀರಾವರಿಗೊಳಪಟ್ಟಿದೆ ಎಂದು ಹಿರಿಯ ಸಂಶೋಧಕ ನೀರಾವರಿ ತಜ್ಞ ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಹೇಳಿದರು.

ನಗರದ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಸೋಮವಾರ ಹಮ್ಮಿಕೊಂಡ ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ ಕುರಿತು ವಿಜಯಪುರ- ಬಾಗಲಕೋಟೆ ಅವಳಿ ಜಿಲ್ಲೆಯ ರೈತಪರ ಸಂಘಟನೆಗಳ ಆಶ್ರಯದಲ್ಲಿ ಹಮ್ಮಿಕೊಂಡ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಬ್ರಿಜೇಶ್ ಕುಮಾರ ತೀರ್ಪಿನಂತೆ ಅಖಂಡ ವಿಜಯಪುರ ಜಿಲ್ಲೆಗೆ 80 ಟಿಎಂಸಿ ನೀರು ಬಳಸಿಕೊಳ್ಳಲು ಅವಕಾಶ ಇದೆ ಇದರಿಂದ ಸುಮಾರು 7 ಲಕ್ಷ ಹೆಕ್ಟೇರ್ ಜಮೀನು ನೀರಾವರಿಯಾಗುತ್ತದೆ. ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸದೆ ಇರುವುದರಿಂದ ನೀರು ಆಂಧ್ರಪ್ರದೇಶಕ್ಕೆ ಹರಿದು ಹೋಗುತ್ತಿದೆ. ಅದನ್ನು ನಮ್ಮ ರೈತರಿಗೆ ಒದಗಿಸಲು ಸರ್ಕಾರಗಳು ವಿಫಲವಾಗಿವೆ ಎಂದರು.

ಹಿರಿಯ ನೀರಾವರಿ ತಜ್ಞ ಡಾ.ರಾಜೇಂದ್ರ ಪೋದ್ದಾರ ಮಾತನಾಡಿ, ಜಿಲ್ಲೆಯ ಜನ ಬರಗಾಲದಲ್ಲಿ ಹುಟ್ಟಿ ಬರಗಾಲದಲ್ಲಿ ಸಾಯುವಂತಹ ಪರಿಸ್ಥಿತಿ ಇಂದಿಗೂ ತಪ್ಪಿಲ್ಲ, ನಮ್ಮ ಜಿಲ್ಲೆಯ ಜನರ ನೀರಾವರಿ ಕನಸು ಇನ್ನು ಈಡೇರಿಲ್ಲ ಭೌಗೋಳಿಕವಾಗಿ, ಪ್ರಾದೇಶಿಕವಾಗಿ ನಮ್ಮ ಮನಸ್ಸುಗಳು ಒಡೆದಿವೆ ನೀರು ಪ್ರಕೃತಿದತ್ತ ಕೊಡುಗೆ, ಅಂತರ್ ರಾಜ್ಯ ಜಲ ವಿವಾದದಿಂದ ನೀರಿನ ಸಮಸ್ಯೆ ಉಂಟಾಗಿದೆ. ಪ್ರತಿಯೊಬ್ಬ ರೈತರು ಕೂಡ ವಿಜ್ಞಾನಿಗಳಾಗಿದ್ದಾರೆ. ಅವರು ನೀರಾವರಿ ವಿಷಯದ ಬಗ್ಗೆ ಮಾತನಾಡುವುದನ್ನು ರೂಢಿಸಿಕೊಂಡರೆ ರೈತರ ಧ್ವನಿ ವಿಧಾನಸೌಧದಲ್ಲಿ ಪ್ರತಿಧ್ವನಿಸಿದರೆ ಮಾತ್ರ ನಮ್ಮ ಪಾಲಿನ ನೀರು ಪಡೆಯಲು ಸಾಧ್ಯ ಎಂದರು.

ಹಿರಿಯ ನೀರಾವರಿ ಹೋರಾಟಗಾರ ಪಂಚಪ್ಪ ಕಲ್ಬುರ್ಗಿ ಮಾತನಾಡಿ, ಸುಪ್ರೀಂ ಕೋರ್ಟ್‌ನಲ್ಲಿ ಆಂಧ್ರ ಪ್ರದೇಶ ರಾಜ್ಯವು ತಗೆದಿರುವ ಖ್ಯಾತೆಯನ್ನು ಮೊದಲು ಕಾನೂನಾತ್ಮಕವಾಗಿ ಕರ್ನಾಟಕವನ್ನು ಪ್ರತಿನಿಧಿಸುವ ನ್ಯಾಯಾಂಶರ ತಂಡವು ಬಗೆ ಹರಿಸಬೇಕು. ಆಲಮಟ್ಟಿ ನೀರಿನ ಮಟ್ಟವನ್ನು 524.256 ಮೀಟರ್‌ಗೆ ಏರಿಸಿದಾಗ ಮುಳಗಡೆಯಾಗುವ ವಿಜಯಪುರ- ಬಾಗಲಕೋಟ ಅವಳಿ ಜಿಲ್ಲೆಯ 22 ಗ್ರಾಮಗಳ ಬಾಧಿತ ಕುಟುಂಬಗಳಿಗೆ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರ ಮುಂದಾಗಬೇಕು ಎಂದರು.

ಹುಣಶ್ಯಾಲ ಪಿ.ಬಿಯ ಸಂಗನಬಸವ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಚಾಣಕ್ಯ ಕರಿಯರ್ ಅಕಾಡೆಮಿ ಅಧ್ಯಕ್ಷ ನಿಂಗನಗೌಡ ಬಿರಾದಾರ, ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿದರು. ರೈತ ಮುಖಂಡ ಗುರುರಾಜ ಪಡಶೆಟ್ಟಿ, ಬಸವರಾಜ ಸಿದ್ದಾಪುರ ಸೇರಿ ಹಲವರು ಇದ್ದರು.

ಕಿರುಸುದ್ದಿ

ಆರೋಪಿಗಳಿಬ್ಬರ ಬಂಧನ




ಬೆಳಗಾವಿ: ಜಿಲ್ಲೆಯ ರಾಮದುರ್ಗ ತಾಲೂಕಿನ ಹುಲಕುಂದ ಗ್ರಾಮದ ಯಮನಪ್ಪ ಗುಡದಪ್ಪನವರ (45) ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಟಕೋಳ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಜಮೀನಿನ ದಾರಿಯ ವಿವಾದ ಅಥವಾ ಇತರೆ ಕಾರಣದಿಂದ ಕೊಲೆ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಪ್ರಕರಣವನ್ನು ಬಿಎನ್‌ಎಸ್ 2023ರ ಕಲಂ 103(1) ಅಡಿಯಲ್ಲಿ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ. ಜಿಲ್ಲಾ ಪೊಲೀಸ್ ಅಧಿಕಾರಿಗಳ ಮಾರ್ಗದರ್ಶನದಲ್ಲಿ ರಚಿಸಲಾದ ವಿಶೇಷ ತಂಡ ತನಿಖೆ ನಡೆಸಿ, ಆರೋಪಿಗಳಾದ ಪ್ರದೀಪ್ ಅಲಿಯಾಸ್ ಪ್ರಧಾನಪ್ಪ ಪಾತ್ರೋಟ (23) ಹಾಗೂ ರಮೇಶ್ ಮೇತ್ರಿ (25) ಇಬ್ಬರನ್ನು ಬಂಧಿಸಲಾಗಿದೆ. ಕೊಲೆಗೆ ಬಳಸಲಾಗಿರುವ ಚಾಕು ಹಾಕು ಇನ್ನಿತರ ವಸ್ತುಗಳನ್ನು ವಶಪಡಿಸಿಕೊಂಡ ಬಳಿಕ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಮಾರಕಾಸ್ತ್ರಗಳಿಂದ ಮಾರಾಮಾರಿ: ಯುವಕ ಗಂಭೀರ

ಗೋಕಾಕ: ಹಣಕಾಸು ವಿಚಾರಕ್ಕೆ ಎರಡು ಗುಂಪಿನ ನಡುವೆ ಮಾರಕಾಸ್ತ್ರಗಳಿಂದ ಭೀಕರ ಮಾರಾಮಾರಿ ನಡೆದು ಘಟನೆಯಲ್ಲಿ ಓರ್ವ ಯುವಕ ಗಂಭೀರ ಗಾಯಗೊಂಡ ಘಟನೆ ಸೋಮವಾರದಂದು ನಗರದ ಲಕ್ಷ್ಮೀ ಬಡಾವಣೆಯಲ್ಲಿ ನಡೆದಿದೆ. ಕೊಟ್ಟ ಹಣವನ್ನು ಮರಳಿ ಕೇಳಿದ ಹಿನ್ನೆಲೆ ಗಲಾಟೆ ಶುರುವಾಗಿ ಎರಡು ಗುಂಪಿನವರ ನಡುವೆ ಮಾರಾಮಾರಿ ನಡೆದಿದೆ. ಈ ದೃಶ್ಯಗಳು ಮೊಬೈಲ್‌ನಲ್ಲಿ ಸೆರೆಯಾಗಿದೆ. ಘಟನೆಯಲ್ಲಿ ವರುಣ ಸಂತೋಷ ಗೊಲ್ಲರ 16 ಎಂಬ ಯುವಕ ಗಂಭೀರವಾಗಿ ಗಾಯಗೊಂಡಿದ್ದು, ಬೆಳಗಾವಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಕುರಿತು ಗೋಕಾಕ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ತನಿಖೆ ನಡೆಸಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	1811	5896
ಉದ್ದಿನಕಾಳು	2525	6686
ಹೆಸರುಕಾಳು	4100	5220
ನೆಲಗಡಲೆ (ಶೇಂಗಾ)	4050	4700
ಹುರುಳಿ ಕಾಳು	5001	5001
ಜೋಳ	3026	4146
ಈರುಳ್ಳಿ	500	2200
ಆಲೂಗಡ್ಡೆ	1200	1600
ಕುಸುಬೆ	3366	5689
ಸೋಯಾಬಿನ್	5870	6776
ತೊಗರಿ	3502	3502
ಗೋಧಿ	2209	2269

ಒಳಪಂಗಡಗಳು ಒಂದಾದಾಗ ಪ್ರತ್ಯೇಕ ಧರ್ಮದ ಮಾನ್ಯತೆ ಸಾಧ್ಯ



ಹುಬ್ಬಳ್ಳಿ: ಲಿಂಗಾಯತರಲ್ಲಿ ಒಗ್ಗಟ್ಟಿನ ಕೊರತೆಯಿದೆ. ಎಲ್ಲ ಒಳಪಂಗಡಗಳು ಒಂದಾದಾಗ ಮಾತ್ರ ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ಮಾನ್ಯತೆ ದೊರೆಯಲು ಸಾಧ್ಯ ಎಂದು ಬಸವ ತತ್ವ ಚಿಂತಕ ಪ್ರೊ. ಸಂಜಯಕುಮಾರ ಮಾಕಲ ಹೇಳಿದರು.

ಇಲ್ಲಿನ ಲಿಂಗರಾಜ ನಗರದ ಸಮುದಾಯ ಭವನದಲ್ಲಿ ಲಿಂಗಾಯತ ಒಳಪಂಗಡಗಳ ಒಕ್ಕೂಟದಿಂದ ಹಮ್ಮಿಕೊಂಡಿದ್ದ ಅಲ್ಪಸಂಖ್ಯಾತ ಲಿಂಗಾಯತರ ಮಾನ್ಯತೆಗಾಗಿ ಹೋರಾಟ ವೇದಿಕೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಿಂದು ಎಂಬುದು ಧರ್ಮ ಅಲ್ಲ, ಅದು ಬದುಕುವ ಶೈಲಿ. ಲಿಂಗಾಯತವು ಧರ್ಮ ಎಂದು ಶರಣರ ಕಾಲದಲ್ಲಿ, ರಾಜರ, ಬ್ರಿಟಿಷರ ಆಡಳಿತದ ಅವಧಿಯಲ್ಲಿ ಉಲ್ಲೇಖಿಸಲಾಗಿದೆ. ಇದಕ್ಕೆ ಪುರಾವೆಗಳೂ ಇವೆ. ಕಸಬು ಆಧಾರದ ಮೇಲೆ ಲಿಂಗಾಯತದಲ್ಲಿ ಸಾಕಷ್ಟು ಒಳಪಂಗಡಗಳಾಗಿವೆ. ಆದರೆ ಎಲ್ಲರೂ ಲಿಂಗಾಯತರೇ. ಲಿಂಗಾಯತ ಧರ್ಮ ರಕ್ಷಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು. ಲಿಂಗಾಯತ ಪ್ರತ್ಯೇಕ ಧರ್ಮ ಮಾನ್ಯತೆಗೆ ಧ್ವನಿ ಎತ್ತಿದ್ದಕ್ಕೆ ಸಮಾಜವನ್ನು ಒಡೆಯುವ ಹುನ್ನಾರ ನಡೆಸಲಾಗುತ್ತಿದೆ ಎಂದು ಕೆಲವರಿಂದ ಟೀಕೆ ಎದುರಾಯಿತು. ಇಂತಹ ಮಾತುಗಳಿಗೆ ತಲೆ ಕೆಡಿಸಿಕೊಳ್ಳದೆ ಲಿಂಗಾಯತ ಧರ್ಮಕ್ಕಾಗಿ ಎಲ್ಲ ಒಳಪಂಗಡಗಳು ಒಂದಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಲಿಂಗಾಯತ ಮುಖಂಡ ಚಿಂತಾಮಣಿ ಸಿಂದಗಿ, ಮುಖಂಡರಾದ ನೀಲಕಂಠ ಅಸೂಟಿ, ಡಿ.ಸಿ. ರಂಗರಡ್ಡಿ ಮಾತನಾಡಿದರು.

ವಕೀಲ ವಿಜಯಕುಮಾರ ಶೀಲವಂತರ, ಲಿಂಗರಾಜನಗರದ ಮಹಿಳಾ ಮಂಡಳ ಅಧ್ಯಕ್ಷೆ ಲತಾ ಉಮ್ರಾಣಿ, ಪ್ರಮುಖರಾದ ಶಿವಣ್ಣ ಅಂಗಡಿ, ನೀಲಕಂಠ ಅಸೂಟಿ, ನಿಂಗನಗೌಡ ಮರಿಗೌಡ್ರ, ಪ್ರಕಾಶ ಬಾವಿಕಟ್ಟಿ, ಮಲ್ಲಿಕಾರ್ಜುನ ಕುಂಬಾರ, ಮಲ್ಲಿಕಾರ್ಜುನ ನರವಣಿ, ರವೀಂದ್ರನಾಥಗೌಡ, ಸುರೇಶ ಬಣವಿ, ರವಿ ಕುಡುವಕ್ಕಲಿಗ ಇದ್ದರು.

ಕಾರು ಹರಿದು ವ್ಯಕ್ತಿ ಸಾವು



ರಾಣೇಬೆನ್ನೂರ: ಮಹಿಳೆಯೊಬ್ಬರು ಕಾರು ನಿಲ್ಲಿಸುವಾಗ ಬ್ರೇಕ್ ಬದಲು ಎಕ್ಸಲೇಟರ್ ಒತ್ತಿದ ಪರಿಣಾಮ ಎದುರಿಗಿದ್ದ ವ್ಯಕ್ತಿ ಮೇಲೆ ಕಾರು ಹರಿದು ದುರ್ಮರಣ ಹೊಂದಿದ ಘಟನೆ ತಾಲೂಕಿನ ಚೌಡಯ್ಯದಾನಪುರ ಗ್ರಾಮದಲ್ಲಿ ಮಂಗಳವಾರ ಸಂಜೆ ನಡೆದಿದೆ. ಹಾವೇರಿ ತಾಲೂಕಿನ ಗುತ್ತಲ ಪಟ್ಟಣದ ಅಜ್ಜಪ್ಪ ಶಿವಪ್ಪ ಕಳಸಣ್ಣನವರ (40) ಮೃತ ದುರ್ದೈವಿ. ಬೆಂಗಳೂರಿನ ಸುಜಾತಾ ಕೆ.ಎಂ.ಕಾರು ಹಾಯಿಸಿದ ಮಹಿಳೆ. ಅಜ್ಜಪ್ಪ ವಿದ್ಯುತ್ ಗುತ್ತಿಗೆದಾರನಾಗಿ ಕೆಲಸ ಮಾಡಿಕೊಂಡಿದ್ದ. ಸುಜಾತಾಳ ಜಮೀನಿನಲ್ಲಿ ವಿದ್ಯುತ್ ಪರಿವರ್ತಕದ ಕೆಲಸವಿದ್ದ ಕಾರಣ ಅವರ ಜಮೀನಿನ ಬಳಿ ಕೆಲಸ ಮಾಡುತ್ತಿದ್ದ. ಈ ಸಮಯದಲ್ಲಿ ಕಾರಿನಲ್ಲಿ ಬಂದ ಸುಜಾತಾ ಅಜ್ಜಪ್ಪನನ್ನು ಮಾತನಾಡಿಸುವ ಸಲುವಾಗಿ ಕಾರು ನಿಲ್ಲಿಸಲು ಮುಂದಾದಾಗ ಬ್ರೇಕ್ ಬದಲು ಎಕ್ಸಲೇಟರ್ ಒತ್ತಿದ್ದಾಳೆ. ಇದರಿಂದ ಕಾರು ಎದುರಿಗೆ ನಿಂತಿದ್ದ ಅಜ್ಜಪ್ಪನ ಮೈಮೇಲೆ ಹರಿದಿದೆ. ಇದರಿಂದ ಗಂಭೀರವಾಗಿ ಗಾಯಗೊಂಡ ಆತನನ್ನು ಚಿಕಿತ್ಸೆಗಾಗಿ ದಾವಣಗೆರೆ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗುತ್ತಿತ್ತು. ಆದರೆ, ದಾರಿ ಮಧ್ಯೆಯೆ ಆತ ಮೃತಪಟ್ಟಿದ್ದಾನೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಗ್ರಾಮೀಣ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿಕ್ಷಕರು ತರಬೇತಿಯ ಸದುಪಯೋಗ ಪಡಿಸಿಕೊಳ್ಳಲಿ



ಯಲಬುರ್ಗಾ: ಒಂದರಿಂದ ಐದರವರೆಗೆ ತರಗತಿ ಬೋಧಿಸುವ ಶಿಕ್ಷಕರಿಗೆ ಈ ತರಬೇತಿಯಲ್ಲಿ ನೀಡುವ ಸಮಗ್ರ ವಿಷಯವನ್ನು ಸದುಪಯೋಗ ಪಡಿಸಿಕೊಂಡು ವಿದ್ಯಾರ್ಥಿಗಳಿಗೆ ಗುಣಮಟ್ಟ ಶಿಕ್ಷಣ ನೀಡಬೇಕು ಎಂದು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಸ್.ವ್ಹಿ.ಧರಣಾ ಹೇಳಿದರು.

ಪಟ್ಟಣದ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಶಿಕ್ಷಣ ಇಲಾಖೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್‌ರವರ ಸಹಯೋಗದಲ್ಲಿ ನಡೆದ ದ್ವಿ ಭಾಷಾ ಶಾಲೆಗಳ 1ರಿಂದ 5ನೇ ತರಗತಿವರೆಗೆ ಸೇತುಬಂಧ ಉಪಕ್ರಮ ಅನುಷ್ಠಾನಕ್ಕೆ ತಾಲೂಕಿನ 1ರಿಂದ 5ನೇ ತರಗತಿ ಬೋಧಿಸುವ ಶಿಕ್ಷಕರಿಗೆ ಒಂದು ದಿನದ ಪರಿವರ್ತನಾ ಅವಧಿ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು ಈ ತರಬೇತಿ ಮಕ್ಕಳ ಶಿಕ್ಷಣಕ್ಕೆ ಭದ್ರ ಬುನಾದಿಯಾಗಿದೆ ಎಂದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿದ್ದಲಿಂಗಪ್ಪ ಶ್ಯಾಗೋಟಿ ಮಾತನಾಡಿ ಶಿಕ್ಷಕರು ಈ ತರಬೇತಿಯಲ್ಲಿ ಪಡೆಯುವ ಹೊಸ ಹೊಸ ಕೌಶಲ್ಯಗಳನ್ನು ತಮ್ಮ ಬೋಧನಾ ವೃತ್ತಿಯಲ್ಲಿ ಅಳವಡಿಸಿಕೊಂಡು ಮಕ್ಕಳ ಮನಸ್ಸಿನಾಳಕ್ಕಿಳಿದು ಬೋಧನೆ ಮಾಡಿದಾಗ ಮಕ್ಕಳ ಕಲಿಕಾ ಮಟ್ಟ ಸುಧಾರಣೆಗೊಳ್ಳುವ ಮೂಲಕ ಅವರ ಭವಿಷ್ಯ ಉಜ್ವಲವಾಗುತ್ತದೆ ಎಂದು ಹೇಳಿದರು.

ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಶರಣಗೌಡ ಪೊಲೀಸ್‌ಪಾಟೀಲ್ ಸಭೆ ಅರ್ಧಯಕ್ಷತೆ ವಹಿಸಿದ್ದರು. ತರಬೇತಿದಾರರಾದ ಅಜೀಂ ಪ್ರೇಮ್ ಜಿ ಫೌಂಡೇಶನ್‌ನ ಸಂಚಾಲಕರಾದ ಮಂಜುಳಾ, ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳಾದ ಕಾಂತರಾಜ ಶೆಟ್ಟರ್, ರಾಜೇಸಾಬ ಮುಧೋಳ, ಬಸನಗೌಡ ರಾಯನಗೌಡ, ಸಿದ್ದಲಿಂಗಪ್ಪ ಕುಂಬಾರ ಮತ್ತಿತರರು ಶಿಕ್ಷಕರಿಗೆ ತರಬೇತಿ ನೀಡಿದರು. ಸಿಆರ್‌ಪಿ ರಾಜಮಹಮ್ಮದ ಬಾಳಿಕಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಾಗರಾಜ ಕುರಿ ಸ್ವಾಗತಿಸಿದರು, ಶಾಂತಪ್ಪ ಜುಮ್ಮನ್ನನವರ್ ನಿರೂಪಿಸಿದರು.

ಏತ ನೀರಾವರಿ ಯೋಜನೆ ಅನುಷ್ಠಾನಕ್ಕೆ ಕ್ರಮ



ಮುಂಡರಗಿ: ಜಾಲವಾಡಿಗೆ ಏತ ನೀರಾವರಿ ಯೋಜನೆಗೆ ಸರ್ಕಾರ 197ಕೋಟಿ ರೂಪಾಯಿ ಮೀಸಲಿಟ್ಟಿದ್ದು, ಹಲವು ಕಾರಣಗಳಿಂದ ಅದು ನನೆಗುದಿಗೆ ಬೀಳುತ್ತಲಿದೆ. ಸಾಧ್ಯವಾದಷ್ಟು ಬೇಗನೆ ಅದರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಡಾ.ಚಂದ್ರು ಲಮಾಣಿ ಭರವಸೆ ನೀಡಿದರು.

ಅಲ್ಪ ಸಂಖ್ಯಾತರ ಇಲಾಖೆಯ ಅಡಿಯಲ್ಲಿ ಪಟ್ಟಣದ ಬೀಮಾಂಬಿಕಾ ಕಾಲೋನಿ ಬಳಿ ಮಂಗಳವಾರ ಮೌಲಾನಾ ಅಜಾದ್ ಮಾದರಿ ವಸತಿ ಶಾಲಾ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಜಾಲವಾಡಿಗೆ ಏತ ನೀರಾವರಿ ಯೋಜನೆಯ ಅನುಷ್ಠಾನ ಕುರಿತಂತೆ ಸದನದಲ್ಲಿ ಹಲವಾರು ಬಾರಿ ಚರ್ಚಿಸಲಾಗಿದೆ. ಆದರೂ ಯೋಜನೆ ಅನುಷ್ಠಾನಗೊಳ್ಳದಿರುವುದು ಬೇಸರದ ಸಂಗತಿ. ಇಲ್ಲಿಯ ಜಗದ್ಗುರು ತೋಂಟದಾರ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೂರು ಕೋಟಿ ರೂಪಾಯಿ ವೆಚ್ಚದ ಕಟ್ಟಡ ಕಾಮಗಾರಿ ಕೈಗೊಳ್ಳಲಾಗುವುದು. ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲಾ ಕಟ್ಟಡದ ಕಾಮಗಾರಿಯನ್ನು ಸಧ್ಯದಲ್ಲಿಯೇ ಕೈಗೊಳ್ಳಲಾಗುವುದು. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಆರೇಳು ತಿಂಗಳೊಳಗಾಗಿ ಮೌಲಾನಾ ಅಜಾದ್ ವಸತಿ ಶಾಲೆಯ ಕಟ್ಟಡವನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಬಿಜೆಪಿ ಮಂಡಲದ ಅಧ್ಯಕ್ಷ ಕುಮಾರಸ್ವಾಮಿ ಹಿರೇಮಠ, ಕಾರ್ಯದರ್ಶಿ ಬಸವರಾಜ ಬಿಳಿಮಗ್ಗದ, ಪ್ರಶಾಂತ ಗುಡದಪ್ಪನವರ, ಮಲ್ಲಿಕಾರ್ಜುನ ಹಣಜಿ, ಲಿಂಗರಾಜಗೌಡ ಪಾಟೀಲ, ಕೆ.ವಿ.ಹಂಚಿನಾಳ, ಆನಂದಗೌಡ ಪಾಟೀಲ, ರವಿ ಉಪ್ಪಿನಬೆಟಗೇರಿ, ದೇವು ಹಡಪದ, ಸವಿತಾ ಸಾಸಿವಿಹಳ್ಳಿ, ಪ್ರಭಾವತಿ ಹೊಸಳ್ಳಿಹಿರೇಮಠ, ವೀಣಾ ಬೂದಿಹಾಳ, ಪುಷ್ಪಾ ಉಕ್ಕಲಿ ಉಪಸ್ಥಿತರಿದ್ದರು.

ಶಾಲಾ ಸುಂದರೀಕರಣ, ಭಿತ್ತಿಚಿತ್ರ ಅಭಿಯಾನ ಯಶಸ್ವಿ

ಬೆಳಗಾವಿ : ಶ್ರೀ ತಕ್ಷಶಿಲಾ ಗುರುಕುಲದ ವತಿಯಿಂದ ನಗರದ ಸರ್ಕಾರಿ ಬಾಲಕಿಯರ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಸುಂದರೀಕರಣ, ಸ್ವಚ್ಛತಾ ಹಾಗೂ ಭಿತ್ತಿಚಿತ್ರ ಅಭಿಯಾನವನ್ನು ಮೇ 21ರಿಂದ ಮೇ 25 ರವರೆಗೆ ಯಶಸ್ವಿಯಾಗಿ ಐದು ದಿನಗಳ ಕಾಲ ನಡೆಸಲಾಯಿತು.

ವಿದ್ಯಾರ್ಥಿನಿಯರಿಗೆ ಸ್ವಚ್ಛ, ಸುಂದರ ಹಾಗೂ ಪ್ರೇರಣಾದಾಯಕ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಕಾರ್ಯಕ್ರಮದ ಮೊದಲ ಹಂತದಲ್ಲಿ ಸ್ವಯಂಸೇವಕರು ಶಾಲೆಯ ಆವರಣ, ತರಗತಿ ಕೊಠಡಿಗಳು, ದಾರಿಗಳು ಹಾಗೂ ಸುತ್ತಮುತ್ತಲಿನ ಪ್ರದೇಶವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿದರು. ಹಲವು ವರ್ಷಗಳಿಂದ ಸಂಗ್ರಹವಾಗಿದ್ದ ಧೂಳು, ಕಸ ಹಾಗೂ ಹಳೆಯ ಬಣ್ಣದ ಅವಶೇಷಗಳನ್ನು ತೆರವುಗೊಳಿಸಿ ಗೋಡೆಗಳನ್ನು ಚಿತ್ರಕಲೆಗೆ ಸಿದ್ಧಪಡಿಸಲಾಯಿತು. ನಂತರ ಸ್ವಯಂಸೇವಕರು ಶಾಲೆಯ ವಿವಿಧ ಗೋಡೆಗಳ ಮೇಲೆ ಶೈಕ್ಷಣಿಕ ಚಿತ್ರಗಳು, ಕನ್ನಡ ಮತ್ತು ಇಂಗ್ಲಿಷ್ ಅಕ್ಷರಮಾಲೆ, ಸಂಖ್ಯೆಗಳು, ಪರಿಸರ ಜಾಗೃತಿ ಸಂದೇಶಗಳು ಹಾಗೂ ಪ್ರೇರಣಾದಾಯಕ ಕಲಾಕೃತಿಗಳನ್ನು ರಚಿಸಿದರು.

ಶಾಲೆಯ ಗೋಡೆಗಳಿಗೆ ಹೊಸ ಬಣ್ಣ ಹಚ್ಚುವ ಮೂಲಕ ಸಂಪೂರ್ಣ ಶಾಲೆಯ ವಾತಾವರಣವನ್ನು ಆಕರ್ಷಕವಾಗಿ ಪರಿವರ್ತಿಸಲಾಯಿತು. ಐದು ದಿನಗಳ ಕಾಲ ಸ್ವಯಂಸೇವಕರು ಬೆಳಗ್ಗೆಯಿಂದ ಸಂಜೆವರೆಗೆ ನಿರಂತರವಾಗಿ ಶ್ರಮಿಸಿ ತಮ್ಮ ಸಮಯ, ಶಕ್ತಿ ಮತ್ತು ಕಲಾತ್ಮಕ ಕೌಶಲ್ಯವನ್ನು ಸಮರ್ಪಿಸಿದರು. ಅವರ ಸಮರ್ಪಣೆ, ತಂಡದ ಕಾರ್ಯಪದ್ಧತಿ ಮತ್ತು ಸೇವಾ ಮನೋಭಾವದಿಂದ ಈ ಯೋಜನೆ ಯಶಸ್ವಿಯಾಗಿ ಪೂರ್ಣಗೊಂಡಿತು. ಕಾರ್ಯಕ್ರಮದ ಅವಧಿಯಲ್ಲಿ ಎಲ್ಲಾ ಸ್ವಯಂಸೇವಕರಿಗೆ ಊಟ ಮತ್ತು ಅಗತ್ಯ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಸರ್ಕಾರಿ ಬಾಲಕಿಯರ ಪ್ರಾಥಮಿಕ ಶಾಲೆಯಲ್ಲಿ ಪ್ರಸ್ತುತ 540ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿದ್ದಾರೆ. ಈ ವಿದ್ಯಾರ್ಥಿನಿಯರಿಗೆ ಉತ್ತಮ, ಸ್ವಚ್ಛ ಹಾಗೂ ಪ್ರೇರಣಾದಾಯಕ ಕಲಿಕಾ ವಾತಾವರಣವನ್ನು ಒದಗಿಸುವ ಉದ್ದೇಶದಿಂದ ಈ ಅಭಿಯಾನ ಕೈಗೊಳ್ಳಲಾಯಿತು.



ಜೂ. 12ರಂದು ಪ್ರತಿಜ್ಞಾವಿಧಿ ಸ್ವೀಕರಿಸಿ: ಡಾ. ಸುರೇಶ ಇಟ್ನಾಳ್



ಕೊಪ್ಪಳ: ವಿಶ್ವ ಬಾಲಕಾರ್ಮಿಕ ಹಾಗೂ ಕಿಶೋರಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಇದೇ ಜೂ. 12ರಂದು ಪ್ರತಿಜ್ಞಾವಿಧಿ ಬೋಧಿಸುವುದು ಕಡ್ಡಾಯವಾಗಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಕೊಪ್ಪಳ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಅಧ್ಯಕ್ಷ ಡಾ. ಸುರೇಶ ಬಿ. ಇಟ್ನಾಳ ಅವರು ತಿಳಿಸಿದ್ದಾರೆ.

ಬಾಲಕಾರ್ಮಿಕ ಮತ್ತು ಕಿಶೋರಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯು 14 ವರ್ಷದ ಒಳಗಿನ ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುವುದನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆ. ಹಾಗೆಯೇ 14 ರಿಂದ 18 ವರ್ಷದ ಮಕ್ಕಳು ಬಾಲಕಾರ್ಮಿಕರಾಗಿ ಅಪಾಯಕಾರಿ ಕ್ಷೇತ್ರದಲ್ಲಿ ದುಡಿಯುವುದನ್ನು ನಿಷೇಧಿಸಿ ಅಪಾಯಕಾರಿ ಅಲ್ಲದ ಕ್ಷೇತ್ರಗಳನ್ನು ನಿಯಂತ್ರಿಸುವಂತೆ ತಿಳಿಸುತ್ತದೆ. ದಂಡದ ಪ್ರಮಾಣವನ್ನು ಐವತ್ತು ಸಾವಿರದವರೆಗೆ ವಿಸ್ತರಿಸಲಾಗಿದೆ. ಎಲ್ಲಾ ಪ್ರಕರಣಗಳಲ್ಲೂ ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲು ಅವಕಾಶ ಕಲ್ಪಿಸಿದೆ. ಇದಕ್ಕೆ ಪೂರಕವೆಂಬಂತೆ ನಿಯಮಾವಳಿ ಮತ್ತು ಬಾಲಕಾರ್ಮಿಕ ಮತ್ತು ಕಿಶೋರಕಾರ್ಮಿಕ ಪದ್ಧತಿಯನ್ನು ಪರಿಣಾಮಕಾರಿಯಾಗಿ ನಿರ್ಮೂಲನೆ ಮಾಡಲು ಕಾರ್ಯಸೂಚಿಯನ್ನು ಕೇಂದ್ರ ಕಾರ್ಮಿಕ ಸಚಿವಾಲಯ ಬಿಡುಗಡೆ ಮಾಡಿದೆ. ರಾಜ್ಯ ಕಾರ್ಮಿಕ ಇಲಾಖೆಯು ಬಾಲ ಮತ್ತು ಕಿಶೋರಾವಸ್ಥೆ ಕಾರ್ಮಿಕ ಮುಕ್ತ ವಲಯಗಳನ್ನಾಗಿಸುವ ಕಾರ್ಯಸೂಚಿಯನ್ನು ಹೊರತಂದಿದೆ.

ಇವುಗಳ ಪರಿಣಾಮಕಾರಿ ಅನುಷ್ಠಾನ ಅವಶ್ಯಕ. ಈ ನಿಟ್ಟಿನಲ್ಲಿ ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಶ್ರಮಿಸುತ್ತಿರುವ ಎಲ್ಲಾ ಇಲಾಖೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಜವಾಬ್ದಾರಿ ಮಹತ್ವದ್ದಾಗಿದೆ. ಎಲ್ಲರೂ ಒಗ್ಗೂಡಿ ಸಹಭಾಗಿತ್ವದಿಂದ ವಿವಿಧ ಕಾರ್ಯತಂತ್ರಗಳನ್ನು ಅನುಷ್ಠಾನ ಮಾಡಿದರೆ ಮಾತ್ರ ಮಕ್ಕಳು ಬಾಲಕಾರ್ಮಿಕ ಪದ್ಧತಿಯತ್ತ ಹೋಗುವುದನ್ನು ತಡೆದು ಬಾಲಕಾರ್ಮಿಕ ಪದ್ಧತಿಯ ಸಂಪೂರ್ಣ ನಿರ್ಮೂಲನೆ ಸಾಧ್ಯ. ಕೊಪ್ಪಳ ಜಿಲ್ಲೆಯಲ್ಲಿ ಈ ಆಂದೋಲನದಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿದ್ದು, ಇದೇ ಜೂನ್ 12 ರಂದು ನಾವೆಲ್ಲರೂ ವಿಶ್ವ ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು ಜಿಲ್ಲಾ ಮಟ್ಟದಿಂದ ಪ್ರತಿಯೊಂದು ಗ್ರಾಮ ಮಟ್ಟದಲ್ಲಿ ಹಮ್ಮಿಕೊಳ್ಳುವ ಮೂಲಕ ಬಾಲಕಾರ್ಮಿಕ ಹಾಗೂ ಕಿಶೋರಕಾರ್ಮಿಕ ಪದ್ಧತಿಯ ನಿರ್ಮೂಲನೆಗೆ ಕೈಜೋಡಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಸತತ ಪರಿಶ್ರಮದಿಂದ ಸಾಧನೆಯತ್ತ ಸಾಗಿ: ಹಂಗರಗಿ

ಸಿಂದಗಿ: ವಿದ್ಯಾರ್ಥಿಗಳು ಸಾಧನೆಗಳ ಮೆಟ್ಟಿಲೇರಬೇಕಾದರೆ ಗುರುಗಳ ಮಾರ್ಗದರ್ಶನದಲ್ಲಿ ಶ್ರದ್ಧಾಭಕ್ತಿಯಿಂದ ಅಭ್ಯಾಸ ಮಾತ್ರ ಗುರಿ ಮುಟ್ಟಲು ಸಾಧ್ಯ. ಈ ರೀತಿಯಲ್ಲಿ ಹೆಚ್ಚಿನ ಅಂಕ ಪಡೆದು ವಿದ್ಯಾರ್ಥಿಗಳು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಸಂಸ್ಥೆಯ ಕಾರ್ಯದರ್ಶಿ ಎಂ.ಎಂ.ಹಂಗರಗಿ ಹೇಳಿದರು.

ತಾಲೂಕಿನ ಯರಗಲ್ಲ ಗ್ರಾಮದ ಶ್ರೀ ಸಿದ್ಧಶಂಕರಾನಂದ ಸ್ವಾಮೀಜಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ನಗದು ರೂಪದಲ್ಲಿ ಪ್ರೋತ್ಸಾಹಧನ ನೀಡಿ ಮಾತನಾಡಿ, ಈ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ಮಕ್ಕಳು ಮುಂದಿನ ಶಿಕ್ಷಣದಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿ ಗ್ರಾಮದ ಹೆಸರು ಹಾಗೂ ಸಂಸ್ಥೆ ಹೆಸರು ತರುವುದರ ಜೊತೆಗೆ ತಂದೆ-ತಾಯಿಗಳ ಕನಸನ್ನು ನನಸು ಮಾಡಬೇಕು. ನಿಮ್ಮ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸಿದರು.

ಈ ವೇಳೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಮದು, ಕಲಾವತಿ, ಪ್ರಿಯಾಂಕಾ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಂಸ್ಥೆ ಆಡಳಿತ ಸದಸ್ಯರಾದ ಎಲ್.ವಿ.ಕುಲಕರ್ಣಿ. ಭೀಮಣ್ಣ ಹೇರೂರ, ಅಲ್ಲಿಸಾಬ ಬಂಕಲಗಿ, ಡಾ.ಸಂಗು ಅಗಸರ, ಶಾಂತು ಮರಡಿ, ಗುರುರಾಜ ಕುಲಕರ್ಣಿ, ಕಾಳಪ್ಪ ಅಗಸರ, ರಾಮಣ್ಣ ಬಲುಂಡಗಿ, ಮುಖ್ಯಗುರು ಅರುಣ ನಾಯ್ಕೋಡಿ, ದಾನಮ್ಮ ಶಿಂಪಿ, ರಾಜು ಯಡ್ರಾಮಿ, ಅಶ್ವಿನಿ ಲಮಾಣಿ ಸೇರಿದಂತೆ ಪಾಲಕರು ಇದ್ದರು.

ಸ್ವಗ್ರಾಮಕ್ಕೆ ಆಗಮಿಸಿದ ಯೋಧ ಶ್ರೀಶೈಲಗೆ ಅದ್ದೂರಿ ಸ್ವಾಗತ



ಬಸವನಬಾಗೇವಾಡಿ: ತಾಲೂಕಿನ ಮಸಬಿನಾಳ ಗ್ರಾಮದ ವೀರಯೋಧ ಶ್ರೀಶೈಲ ವೀರಪ್ಪ ಹಡಪದ ಅವರು ಸತತ 38 ವರ್ಷಗಳ ಸುದೀರ್ಘ ಕಾಲ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ತಾಯ್ನಾಡಿಗೆ ಆಗಮಿಸಿದ ಹಿನ್ನಲೆಯಲ್ಲಿ ವೀರಯೋಧನ ಬಾಲ್ಯದ ಸ್ನೇಹಿತರು ಮಾಜಿ ಸೈನಿಕರು ಗ್ರಾಮದ ಜನರು ಶೃಂಗಾರಿಸಿದ ತೆರೆದ ಟ್ರ್ಯಾಕ್ಟರ್ ವಾಹನದಲ್ಲಿ ಯೋಧ ದಂಪತಿಗಳನ್ನು ಕುಳಿರಿಸಿ ಧ್ವನಿ ವರ್ಧಕ ಹಚ್ಚಿ ಸುಮಂಗಲೇಯರು ಆರತಿಯನ್ನು ಬೆಳಗಿ ಹೂಮಳೆ ಸುರಿಸಿ, ಶಾಲು ಹೊದಿಸಿ ಸನ್ಮಾನಿಸಿ ಜೈಘೋಷದೊಂದಿಗೆ ಅದ್ದೂರಿಯಾಗಿ ಸ್ವಾಗತಿಸಿದರು.

ನಂತರ ಗ್ರಾಮದ ಸರಕಾರಿ ಶಾಲೆಯಿಂದ ಗ್ರಾಮ ಪಂಚಾಯತಿ ಮುಂಭಾಗ ಬಸ್ ನಿಲ್ದಾಣ, ಅಗಸಿಯ ಮಾರ್ಗವಾಗಿ ಗೌರಿ ಶಂಕರ ದೇವಾಲಯಕ್ಕೆ ಆಗಮಿಸಿ ನಂತರ ಸಭೆ ಸೇರಿ ಸನ್ಮಾನಗೈದರು.

ವಿರಕ್ತಮಠ ಸಿದ್ದರಾಮ ಸ್ವಾಮೀಜಿ ದಿವ್ಯಸಾನಿಧ್ಯ ವಹಿಸಿ ಮಾತನಾಡಿದ ಅವರು ಯೋಧರು ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಗಾಳಿ, ಬಿಸಿಲು, ಮಳೆ ಎನ್ನದೆ ದೇಶಕ್ಕಾಗಿ ಶ್ರಮ ವಹಿಸುತ್ತಾರೆ. ಗಡಿಯಲ್ಲಿ ನಮ್ಮನ್ನು ಕಾಯ್ದು ನಿವೃತ್ತಿ ಹೊಂದಿ ಸಾಮಾಜಿಕ ಜೀವನದಲ್ಲಿ ಭಾಗವಹಿಸುತ್ತಾರೆ. ಅವರ ನಿವೃತ್ತ ಜೀವನ ಸುಖಕರವಾಗಿರಲಿ. ಸಾರ್ವಜನಿಕರು ಹಾಗೂ ದೇಶಭಕ್ತರು ಅವರ ಜೊತೆ ಉತ್ತಮ ಬಾಂದವ್ಯ ಹೊಂದಬೇಕು ಎಂದು ಹೇಳಿದರು.

ಶ್ರೀಶೈಲ ಈರಪ್ಪ ಹಡಪದ ಮುಖಂಡರಾದ ಟಿ.ಸಿ. ಯಳಮೇಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದರು, ಸುರೇಶ ಬಿರಾದಾರ, ರಾಜುಗೌಡ ಪಾಟೀಲ, ಬಿ.ಬಿ.ಬಿರಾದಾರ, ಮಾಜಿ ಸೈನಿಕರಾದ ಆರ್.ಆಯ್. ಬಿರಾದಾರ, ಊರಿನ ಪ್ರಮುಖ ಗಣ್ಯರು ಭಾಗವಹಿಸಿದ್ದರು.

ಮೂಲ ದಾವಾ ನಂ:-120/2024

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು, ಹಾನಗಲ್ಲ ಇವರ ನ್ಯಾಯಾಲಯದಲ್ಲಿ

ವಾದಿ:ಈಶ್ವರಪ್ಪ ಮಲ್ಲೇಶಪ್ಪ ಕಜ್ಜೇರ.ವಯಸ್ಸು-75 ವರ್ಷ.ಉದ್ಯೋಗ-ಒಕ್ಕಲುತನ.ಮೂಡಿ-ಗ್ರಾಮ. ಸೊರಬ ತಾಲೂಕ ಶಿವಮೊಗ್ಗ ಜಿಲ್ಲೆ

ವಿರುದ್ಧ

ಪ್ರತಿವಾದಿಯರು: ಗಣೇಶಪ್ಪ ಅಜ್ಜಪ್ಪ, ಕಜ್ಜೇರ, ವಯಸ್ಸು-75ವರ್ಷ, ಉದ್ಯೋಗ-ಒಕ್ಕಲುತನ, ಮೂಡಿ-ಗ್ರಾಮ, ಸೊರಬ-ತಾಲೂಕ, ಶಿವಮೊಗ್ಗ-ಜಿಲ್ಲೆ ಮತ್ತು ಇತರರು.

ನಾಗರೀಕ ಪ್ರಕ್ರಿಯಾ ಸಂಹಿತೆಯ ಆದೇಶ 5 ನಿಯಮ 20(1)(ಎ)ನೇದ್ದರ ಕೆಳಗೆ ಪ್ರಕಟಿಸುವ ದಾವಾ ಸಮನ್ಸ

ವಾದಿಯು:9ನೇ ಪ್ರತಿವಾದಿಯಾದ, ಶ್ರೀಮತಿ ಸೋಮಕ್ಕ@ಸೋಮವ್ವ ಕೋಂ ಬಸವರಾಜ ಕಜ್ಜೇರವಯಸ್ಸು-67 ವರ್ಷ.ಉದ್ಯೋಗ-ಕೃಷಿಕಳು ವ ಮನೆಕೆಲಸ. "Candor Law" ನಂ-212, 1ನೇ ಮಹಡಿ, ಸಂಜಯ ಮ್ಯಾನ್ಷನ್, 28ನೇ ಅಡ್ಡರಸ್ತೆ, 2ನೇಬ್ಲಾಕ, ರಾಜಾಜಿನಗರ.ಬೆಂಗಳೂರ. 11ನೇ ಪ್ರತಿವಾದಿಯಾದ ಸತೀಶ.ಎಮ್.ಕೆ. ತಂದೆ ಬಸವರಾಜ ಕಜ್ಜೇರ,ವಯಸ್ಸು-67ವರ್ಷ. ಉದ್ಯೋಗ -ಕೃಷಿಕ, ವ ನ್ಯಾಯವಾದಿ, "Candor Law" ನಂ-212, 1ನೇ ಮಹಡಿ, ಸಂಜಯ ಮ್ಯಾನ್ಷನ್, 28ನೇ ಅಡ್ಡರಸ್ತೆ, 2ನೇ ಬ್ಲಾಕ ರಾಜಾಜಿ ನಗರ, ಬೆಂಗಳೂರ. 13ನೇ ಪ್ರತಿವಾದಿಯಾದ, ಶ್ರೀಮತಿ ನಿವೇಧಿತಾ ಗಂಡ ಪರಮೇಶ.ಪಿ.ಕೆ.ವಯಸ್ಸು 35 ವರ್ಷ, ಉದ್ಯೋಗ:ಕೃಷಿಕಳು 2ನೇಅಡ್ಡರಸ್ತೆ, ನೆಹರುನಗರ, ಆನವಟ್ಟಿ, ಸೊರಬ-ತಾಲೂಕ ಶಿವಮೊಗ್ಗ ಜಿಲ್ಲೆ 15ನೇ ಪ್ರತಿವಾದಿಯಾದ, ಶ್ರೀಮತಿ ಅಕ್ಷತಾ ಕೋಂ ನಿರಂಜನ, ತಂದೆ ಸುರೇಶ ಕಜ್ಜೇರ ವಯಸ್ಸು-33 ವರ್ಷ ಉದ್ಯೋಗ- ಕೃಷಿಗಳು 2ನೇ ಅಡ್ಡರಸ್ತೆ, ನೆಹರು ನಗರ, ಆನವಟ್ಟಿ, ಸೊರಬ-ತಾಲೂಕ ಶಿವಮೊಗ್ಗ-ಜಿಲ್ಲೆ 16ನೇ ಪ್ರತಿವಾದಿಯಾದ ಅರ್ಚನಾ ತಂದೆ ಸುರೇಶ ಕಜ್ಜೇರ.ವಯಸ್ಸು-28 ವರ್ಷ.ಉದ್ಯೋಗ -ಕೃಷಿಕಳು, 2ನೇ ಅಡ್ಡರಸ್ತೆ, ನೆಹರು ನಗರ, ಆನವಟ್ಟಿ, ಸೊರಬ-ತಾಲೂಕ, ಶಿವಮೊಗ, ಜಿಲ್ಲೆ

ಅದ ನಿಮ್ಮ ವಿರುದ್ಧ ಈ ದಾವೆಯನ್ನು ದಾಖಲಿಸಿದ್ದು,ನೀವು, ದಿನಾಂಕ 13-07-2026 ರಂದು ಮುಂಜಾನೆ 11ಘಂಟೆಗೆ ವಾದಿಯಕೋರಿಕೆ /ಮಾಗಣೆಗೆ ಉತ್ತರಿಸುವದಕ್ಕಾಗಿ ಖುದ್ದಾಗಿ ಅಥವಾ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಈ ಮೂಲಕ ಸಮನ್ಸನ್ನು ಹೊರಡಿಸಲಾಗಿರುತ್ತದೆ.

ಈ ಮೇಲೆ ನಮೂದಿಸಿದ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಹಾಜರಾಗಲು ನೀವು ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ದಾವೆಯ ಸುನಾವಣೆಯನ್ನು ಮಾಡಿ, ತೀರ್ಮಾನಿಸಲಾಗುವದು.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ 2026 ನೇ ಜೂನ 9ನೇ ದಿನದಂದು ಇದನ್ನು ಕೊಡಲಾಯಿತು.

ಶ್ರೀಎ.ಆರ್.ಜೋಗಣ್ಣನವರ
ಸಹಿ/-ಶಿರಸದಾರರು.
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾದೀಶರ ನ್ಯಾಯಾಲಯ, ಹಾನಗಲ್ಲ.
ಸಹಿ/-ದಳವಾಯಿ.ವಾದಿ ಪರ ವಕೀಲರು.

ಕ್ರಿಮಿನಲ್ ಮಿಸ್ ನಂ: 161/2026

ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಶಿಗ್ಗಾಂವ ಇವರ ನ್ಯಾಯಾಲಯಕ್ಕೆ ಸಾ॥ ಶಿಗ್ಗಾಂವ

ಅರ್ಜಿದಾರ :1)ಶ್ರೀ ಬಸವರಾಜ ತಂದೆ ಚನ್ನಪ್ಪ ಜಾಡರ ಮತ್ತು ಇತರರು

ವಿರುದ್ಧ

ಎದುರುಗಾರರು :ಮಾ॥ ಉಪ-ತಹಶೀಲ್ದಾರ ನಾಡಕಚೇರಿ ಬಂಕಾಪುರ

ಪತ್ರಿಕಾ ಪ್ರಕಟಣೆ

ಇದರಲ್ಲಿ ಅರ್ಜಿದಾರನ ತಂದೆಯಾದ ಚನಬಸಪ್ಪ ತಂದೆ ಮಳಪ್ಪ ಜಾಡರ ಇವರು ದಿನಾಂಕ: 22/06/1980 ರಲ್ಲಿ ಶಿಗ್ಗಾಂವ ತಾಲೂಕ ಕುಂದೂರ ಗ್ರಾಮದ ಮನೆಯಲ್ಲಿ ಮರಣ ವಾಗಿರುತ್ತಾರೆ. ಹಾಗೂ ಆ ಕುರಿತು ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ

ಸದರಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು, ಆ ಕುರಿತು ಈ ನ್ಯಾಯಾಲಯದವರು ದಿನಾಂಕ: 17-07-2026 ರಂದು ಮುದ್ದತ್ತು ನೇಮಿಸಿದ್ದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು ಮೇಲಿನ ದಿನಾಂಕದಂದು ಈ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು ತಪ್ಪಿದ್ದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.

ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ಹೊರಡಿಸಲಾಗಿತು.
ಶಿಗ್ಗಾಂವ
ದಿನಾಂಕ : 05-06-2026
(ಇಮಾಮ ಅ ಲಿಂಗದಹಳ್ಳಿ) ಶಿರಸ್ತೆದಾರ
ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ,
ಶ್ರೀ ಎನ್.ವಿ ಮುದಕಣ್ಣನವರ
ಅರ್ಜಿದಾರರ ಪರ ವಕೀಲರು ಶಿಗ್ಗಾಂವ

CHANGE OF NAME

I, **MAHABOOB RAJESAB MULLA (Old Name)** have changed my name to **MEHBOOB RAJESAB MULLA (New Name)** vide affidavit before - V H Patil - Notary Public- Hubli dated 09.06.2026

CHANGE OF NAME

I, **SAYED MOHAMAD JAFER SAYED NASIRUDDIN INAMDAR** (Old Name) R/o. 516 Near Govt Urdu Primary School Bobruwada Ankola 581314, have changed my name as **SAYED MOHAMAD JAFER INAMDAR** (New Name) henceforth I will be called and recognized by new name for all future purposes, dated: 09/06/2026.

CHANGE OF NAME

I, **SYED AHAMAD** (Old Name) Resident of H No: 137 Kote Ayanur, Dist: Shimoga - 577211, have changed my name as **SYED AHAMED** (New Name) henceforth I will be called and recognized by new name for all future purposes, dated: 09/06/2026.

CHANGE OF NAME

I, **DEEPA HIREMATH** (Old Name) Resident of 194, Kasaba Oni Naragund Nargund, Gadag Karnataka - 582207, have changed my name as **SHRADDHA HIREMATH** (New Name) henceforth I will be called and recognized by new name for all future purposes, dated: 09/06/2026.

CHANGE OF NAME

I, **RAVI KADHIRVELU** (Old Name) Resident of Flat No 106, 2nd Floor, 9th Ward, Shree Sai Green Apartment, M P Prakash Nagar, Hospet, Ballari, Karataka, Pin Code: 583201, have changed my name as **RAVI KADHIRVELU BOND** (New Name) henceforth I will be called and recognized by new name for all future purposes, dated: 09/06/2026.

CHANGE OF NAME

I, **MOHAMMAD KHASIM** (Old Name) Resident of Islampur Galli, Ranebennur, Haveri, Karnataka, Pin Code: 581115, have changed my name as **MOHAMMAD KHASIM MULLA** (New Name) henceforth I will be called and recognized by new name for all future purposes, dated: 09/06/2026.

ಕ್ರಿಮಿನಲ್ ಮಿಸಲೇನಿಯಸ್ ನಂ. 161/2026

ಮಾನ್ಯ ಜೆ.ಎಂ.ಎಫ್.ಸಿ. ನರಗುಂದ ಇವರ ನ್ಯಾಯಾಲಯ

ಅರ್ಜಿದಾರರು: 1)ರಾಜೇಸಾಬ ತಂದೆ ಲಾಡಸಾಬ ಹೆಬಸೂರ ಮತ್ತು ಇತರರು

ವಿರುದ್ಧ

ಎದುರದಾರರು: ಜನನ-ಮರಣ ನೋಂದಣಾಧಿಕಾರಿಗಳು, ಪುರಸಭೆ ನರಗುಂದ ಮತ್ತು ಇತರರು

ಸಾರ್ವಜನಿಕ ತಿಳುವಳಿಕೆ ನೋಟಿಸು

ಸದರ ಪ್ರಕರಣದಲ್ಲಿ ನನ್ನ ಮಾವನ ತಾಯಿಯಾ ದ ಹಾಸಿಂಬಿ ಕೋಂ ಲಾಡಸಾಬ ಹೆಬಸೂರ ಇವರು ನರಗುಂದ ನಗರದ ಮೆಣಸಿನಕಾಯಿ ಓಣಿಯ ನಮ್ಮ ಮನೆಯಲ್ಲಿ ದಿನಾಂಕ :01-02-1990ರಂದು ನಿಧನರಾಗಿದ್ದು,ಸದರ ದಿನಾಂಕವನ್ನು ಎದರುದಾರನಲ್ಲಿ ದಾಖಲಿಸಿಕೊಳ್ಳುವಂತೆ ಆದೇಶ ಕೋರಿ ಅರ್ಜಿ ನೀಡಿರುತ್ತಾರೆ.

ಸದರ ಪ್ರಕರಣವು ದಿನಾಂಕ:23-07-2026 ರಂದು ಇದ್ದು,ಮೇಲ್ಕಂಡ ಪ್ರಕರಣದಲ್ಲಿ ಯಾರಿಗಾದರು ಹಕ್ಕು ಹಿತಾಸಕ್ತಿ ಇದ್ದಲ್ಲಿ ತಕರಾರು ಇದ್ದಲ್ಲಿ ಮಾನ್ಯ ನ್ಯಾಯಾಲಯವು ನಿಗದಿಪಡಿಸಿದ ದಿನದಂದು ಅಂದರೆ ದಿನಾಂಕ: 23-07-2026 ರಂದು ಬೆಳಿಗ್ಗೆ 10-30ಘಂಟೆಗೆ ಸ್ವತಃ ನೀವಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು. ಇಲ್ಲದಿದ್ದರೆ ನಿಮ್ಮ ಗೈರು ಹಾಜರಾತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ಮಾನ್ಯ ನ್ಯಾಯಾಲಯವು ಕಾನೂನಿನ ಪ್ರಕಾರ ಮುಂದಿನ ಆದೇಶ ಮಾಡುತ್ತದೆ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಈ ದಿವಸ ದಿ:09-06-2026ರಂದು ಕೋರ್ಟಿನ ಮೊಹರಿನೊಂದಿಗೆ ಕೊಡಲಾಗಿದೆ.
ನರಗುಂದ
ಸಹಿ/-ಶಿರಸ್ತೇದಾರರು ಜೆ.ಎಮ್.ಎಫ್.ಸಿ
ನ್ಯಾಯಾಲಯ ನರಗುಂದ
ಸಹಿ/-ಕೆ.ಎಸ್.ದೇವರಮನಿ
ಅರ್ಜಿದಾರರ ಪರ ವಕೀಲರು ನರಗುಂದ.

ಕ್ರಿಮಿನಲ್ ಮಿಸಲೇನಿಯಸ್ ನಂ.162/2026

ಮಾನ್ಯ ಜೆ.ಎಂ.ಎಫ್.ಸಿ. ನರಗುಂದ ಇವರ ನ್ಯಾಯಾಲಯ

ಅರ್ಜಿದಾರರು:1) ರಾಜೇಸಾಬ ತಂದೆ ಲಾಡಸಾಬ ಹೆಬಸೂರ ಮತ್ತು ಇತರರು

ವಿರುದ್ಧ

ಎದುರದಾರರು: ಜನನ-ಮರಣ ನೋಂದಣಾಧಿಕಾರಿಗಳು, ಪುರಸಭೆ ನರಗುಂದ ಮತ್ತು ಇತರರು

ಸಾರ್ವಜನಿಕ ತಿಳುವಳಿಕೆ ನೋಟಿಸು

ಸದರ ಪ್ರಕರಣದಲ್ಲಿ ನನ್ನ ಮಾವನ ತಂದೆಯಾದ ಲಾಡಸಾಬ ತಂದೆ ರಾಯೇಸಾಬ ಹೆಬಸೂರ ಇವರು ನರಗುಂದ ನಗರದ ಮೆಣಸಿನ ಕಾಯಿ ಓಣಿಯ ನಮ್ಮ ಮನೆಯಲ್ಲಿ ದಿನಾಂಕ: 07-03-1992ರಂದು ನಿಧನರಾಗಿದ್ದು, ಸದರ ದಿನಾಂಕವನ್ನು ಎದರುದಾರನಲ್ಲಿ ದಾಖಲಿಸಿಕೊಳ್ಳುವಂತೆ ಆದೇಶ ಕೋರಿ ಅರ್ಜಿ ನೀಡಿರುತ್ತಾರೆ.

ಸದರ ಪ್ರಕರಣವು ದಿನಾಂಕ :23-07-2026 ರಂದು ಇದ್ದು, ಮೇಲ್ಕಂಡ ಪ್ರಕರಣದಲ್ಲಿ ಯಾರಿಗಾದರು ಹಕ್ಕು ಹಿತಾಸಕ್ತಿ ಇದ್ದಲ್ಲಿ ತಕರಾರುಇದ್ದಲ್ಲಿ ಮಾನ್ಯ ನ್ಯಾಯಾಲಯವು ನಿಗದಿಪಡಿಸಿದ ದಿನದಂದು ಅಂದರೆ ದಿನಾಂಕ: 23-07-2026 ರಂದು ಬೆಳಿಗ್ಗೆ 10-30ಘಂಟೆಗೆ ಸ್ವತಃ ನೀವಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು. ಇಲ್ಲದಿದ್ದರೆ ನಿಮ್ಮ ಗೈರು ಹಾಜರಾತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ಮಾನ್ಯ ನ್ಯಾಯಾಲಯವು ಕಾನೂನಿನ ಪ್ರಕಾರ ಮುಂದಿನ ಆದೇಶ ಮಾಡುತ್ತದೆ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಈ ದಿವಸ ದಿ:09-06-2026 ರಂದು ಕೋರ್ಟಿನ ಮೊಹರಿನೊಂದಿಗೆ ಕೊಡಲಾಗಿದೆ.
ನರಗುಂದ
ಸಹಿ/-ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ನರಗುಂದ
ಸಹಿ/-ಕೆ.ಎಸ್.ದೇವರಮನಿ
ವಕೀಲರು ನರಗುಂದ.

CHANGE OF NAME

I, **ASHOK KAMALAKAR VERNEKAR** (Old Name) Resident of #09, KHB Colony SubashNagar Keshwapur, Hubli, Dharwad, Karnataka, Pin Code: 580023, have changed my name as **ASHOK VERNEKAR** (New Name) henceforth I will be called and recognized by new name for all future purposes, dated: 09/06/2026.

CHANGE OF NAME

I, **SYEDA NAYEEMUNNISA** (Old Name) R/o. 516 Near Govt Urdu Primary School Bobruwada Ankola 581314, have changed my name as **SAYEDA NAYEEMUNNISA INAMDAR** (New Name) henceforth I will be called and recognized by new name for all future purposes, dated: 09/06/2026.

CHANGE OF NAME

I, **AFSHEEN JAHAN** (Old Name) Resident of Dasanakoppa, Banavasi, Taluk: Sirsi, Dist.: Uttara Kannada, Karnataka State, Pin code: 581318, India, have changed my name as **AFSHEEN JAHAN SHAIKH** (New Name) for all purposes affidavit Dtd.: 09-06-2026 sworn before notary **S. G. Hedge.**

CHANGE OF NAME

I, **SIMRAN** (Old Name) Resident of Nagarabastikeri, Taluk: Honnavar, Dist.: Uttara Kannada, Karnataka State, Pin code : 581384, India, have changed my name as **SIMRAN ABDUL HAMID SAB** (New Name) for all purposes affidavit Dtd.: 09-06-2026 sworn before notary **S. G. Hedge.**

CHANGE OF NAME

I, **NUZEEFA AHMED BASHA DAWOOD** (Old Name) Resident of Muslima Keri, Herangadi, Taluk: Honnavar, Dist.: Uttara Kannada, Karnataka Stato, Pin code: 581334, India, have changed my name as **NUZIFA MOHAMMED ZAHID KATTEMANE** (New Name) for all purposes affidavit Dtd.:09-06-2026 sworn before notary **S. G. Hedge.**

CHANGE OF NAME

I, **MOHAMMED AYYAN ABDUL GANI NADAF** (Old Name) Resident of #Basaveshwar Nagar, Gokul Road, Hubli 580030 (address), have changed my name as **MOHAMMAD AYYAN NADAF** (New Name) henceforth I will be called and recognized by new name for all future purposes, dated: 09/06/2026.

CHANGE OF NAME

I, **ANNAPOORNESHWARI S** my father name mentioned in my documents Passport as **SUDARSHAN RAGAVAN CHANDRASENAN** formerly/lately called In Sslc Documents As **SANDEEP S** Cas/doing (give profession/occupation) Self Employed permanent resident o f Yashodha I A 505, Near Csi, Township Dandeli Dist: Uttar Kannada for all purposes affidavit Dtd.: 08-06-2026 sworn before notary **Angadi Akkamahadevi B..**

CHANGE OF NAME

I, **MUSHTAQUE AHMED KUMBI** (Old Name) Resident of Indraprastha Nagar Anand Nagar Road Old Hubli 580024. (address), have changed my name as **MUSHTAQ AHMED KUMBI** (New Name) henceforth I will be called and recognized by new name for all future purposes, dated: 09/06/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

CHANGE OF NAME

I, **YASMEEN BANU JANGLIWALE** (Old Name) Resident of Gavi Oni P B Road Near Kamari Peth Police Station Hubli 580028 (address), have changed my name as **YASMEEN BANU SOUDAGAR** (New Name) henceforth I will be called and recognized by new name for all future purposes, dated: 09/06/2026.

ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ
ಎಪಿಎಂಸಿ ಆವರಣ ಚನ್ನಗಿರಿ, ದಾವಣಗೆರೆ ಜಿಲ್ಲೆ,-577213,
Email:tumcoscng@gmail.com, info@tumcos.com **Mo:7349033006**

TUMCOS/2026-27/268 DATE: 08-06-2026

ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ

ಸಂಘದ ಹೊಳಲ್ಕೆರೆ ಶಾಖೆಯ ಕಚೇರಿ ಸಹಿತ ಗೋದಾಮು ಕಟ್ಟಡ ನಿರ್ಮಾಣ ಕಾಮಗಾರಿ ಮಾಡಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. **ಅಂದಾಜು ಮೊತ್ತ:7,93,98,032/-ರೂ.ಗಳು, ಇ.ಎಂ.ಡಿ.ಮೊತ್ತ:9,10,000/-ರೂ.ಗಳು, ಟೆಂಡರ್ ನಂಬರ್:TUMCOSL/2026-27/OW/WORK_INDENT4, ಟೆಂಡರ್ ಟೈಟಲ್ :PROPOSED COMMERCIAL BUILDING AT TUMCOS LTD, APMC YARD, HOLALKERE, CHITRADURGA DISTRICT..** ಕರ್ನಾಟಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ರಲ್ಲಿ 08/07/2026 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. **ಹೆಚ್ಚಿನ ಮಾಹಿತಿಗೆ ಮೇಲ್ಕಂಡ ಅಂತರ್ಜಾಲ ಅಥವಾ https://www.tumcos.com ಸಂಪರ್ಕಿಸಿ**

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ತುಮ್‌ಕೋಸ್ ಲಿ.,ಚನ್ನಗಿರಿ

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/26096910/877 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್-935/2026-27 ದಿನಾಂಕ: 09.06.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl. No.	Description	Approx. Qty (Kgs.)	EMD (Rs.)
1	Supply of Laminated Film for packing 1kg Chelated Mineral Mixture to KMF Cattle Feed Plants For A Period of Three months	44500 Kgs	1,64,000/-

ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 16.06.2026 ರಂದು 05.15 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಮಂಗಳೂರು ಮಹಾನಗರಪಾಲಿಕೆ

MCC/EE2/TENDER-14/2026-27 ದಿನಾಂಕ: 09-06-2026

ಟೆಂಡರ್ ಪ್ರಕಟಣೆ E-PROCUREMENT OF KARNATAKA

ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ. ನಿಯಮದನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು **ಸಾಮಾನ್ಯ ನಿಧಿಯಲ್ಲಿ** ನಿರ್ವಹಿಸುವ ಬಗ್ಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 13-07-2026.** ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **kppp.karnataka.gov.in** ಹೆಚ್ಚಿನ ವಿವರವನ್ನು ಪಡೆಯಬಹುದು.

ಕ್ರ ಸಂ.	ಕೆಲಸದ ಹೆಸರು	ಅಂದಾಜು ಪಟ್ಟಿ ಮೊತ್ತ ರೂಪಾಯಿ
1	ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಕೊಡಿಯಾಲ್ ಗುತ್ತು ವೆಟ್‌ವೆಲ್‌ನಿಂದ ಕುದ್ರೋಳಿ ವೆಟ್‌ವೆಲ್‌ಗೆ ಸಂಪರ್ಕಿಸುವ ಪಂಪಿಗೆ ಕೊಳವೆಯನ್ನು (450 ಎಂ.ಎಂ. ವ್ಯಾಸ) ಕೊಡಿಯಾಲ್ ಗುತ್ತು ವೆಟ್‌ವೆಲ್‌ನಿಂದ ಹಾಲ್ ಮಾರ್ಕ್ ಅಪಾರ್ಟ್‌ಮೆಂಟ್ ವರೆಗೆ (600 ಎಂ.ಎಂ. ವ್ಯಾಸ) ಕೊಳವೆಯನ್ನು ಬದಲಾಯಿಸುವ ಕಾಮಗಾರಿ. **(Indent No. 55424/Call-2)**	**3,42,00,000.00**

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು

DIPR/DK/KSMCA/338/26-27 dt 09.06.2026

ಕರ್ನಾಟಕ-ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ
ಅಥಣಿ ಬೆಳಗಾವಿ ಜಿಲ್ಲೆ
ದೂರವಾಣಿಸಂ:08289-295328 ಮಿಂಚಂಚೆ: cmoghathani@gmail.com

ಸಂ:ಇ-ಟೆಂಡರ್/02/2026-27 ದಿನಾಂಕ:08.06.2025

ಇ-ಟೆಂಡರ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ಅಥಣಿ ಇಲ್ಲಿಗೆ ಸನ್ 2026-27 ನೇ ಸಾಲಿಗಾಗಿ ಹೊರಗುತ್ತಿಗೆ ಗ್ರೂಪ್ 'ಡಿ' ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಒಪ್ಪಂದದ ಮೇಲೆ ಒದಗಿಸಲು ನೊಂದಾಯಿತ ಸಂಸ್ಥೆಗಳಿಂದ ಇ-ಪ್ರೊಕ್ಯೂರಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ ಆಹ್ವಾನಿಸಲಾಗಿದೆ.

ಟೆಂಡರ್ ನಿಗದಿ ಪಡಿಸಿದ ಮೊತ್ತ ರೂ, 37.09 ಲಕ್ಷದ ಟೆಂಡರ ಫಾರ್ಮಗಳನ್ನು ಹಾಗೂ ನಿಬಂಧನೆಗಳನ್ನೊಳಗೊಂಡ ಟೆಂಡರ ಪುಸ್ತಕವನ್ನು ದಿ:08.06.2026 ರಿಂದ 17.06.2026 ಸಾಯಂಕಾಲ 5.00 ಗಂಟೆಯೊಳಗೆ ಇ-ಪ್ರೊಕ್ಯೂರಮೆಂಟ್ ವೆಬ್‌ಸೈಟ್ WWW.eproc.karnataka.gov.inದಲ್ಲಿ ಇಪೋರ್ಟಲ್ ನಿಗಧಿಪಡಿಸಿದ ಶುಲ್ಕದೊಂದಿಗೆ ಪಡೆಯಬಹುದು. ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ದಿ:.18.06.2026 ಸಾಯಂಕಾಲ 4.00 ಗಂಟೆಯವರೆಗೆ ಇಪೋರ್ಟದಲ್ಲಿ ಅಪ್‌ಲೋಡ್ ಮಾಡಬಹುದು.

ಸ್ವೀಕರಿಸಿದ ಟೆಂಡರನ ತಾಂತ್ರಿಕ ಬಿಡ್‌ನ್ನು ದಿನಾಂಕ:.19.06.2026 ಮ 4.30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ ಅಥಣಿ ಇವರಲ್ಲಿ ಕೆಲಸದ ದಿನಗಳಂದು ಪಡೆಯಬಹುದು.

ಸಹಿ/-ಮುಖ್ಯ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ ಅಥಣಿ

DIPR/BGM/RO-NO-389/KSMCA/2026-27

ಕರ್ನಾಟಕ-ಸರ್ಕಾರ
ತಾಲೂಕಾ ಸಾರ್ವಜನಿಕ ಆಸ್ಪತ್ರೆ ಅಥಣಿ
ದೂರವಾಣಿಸಂ:08289-295328 ಮಿಂಚಂಚೆ: cmoghathani@gmail.com

ಸಂಖ್ಯೆ:ಸಾಆಅ/ಟೆಂಡರು/ಪಥ್ಯಾಹಾರ/2026-27 ದಿನಾಂಕ:08/06/2026

:: ಟೆಂಡರ್ ಪ್ರಕಟಣೆ ::

ಸಾರ್ವಜನಿಕ ಆಸ್ಪತ್ರೆ ಅಥಣಿಯ 2026-27 ನೇ ಸಾಲಿನ ಒಳರೋಗಿಗಳಿಗೆ ಉಪಹಾರ, ಸಿದ್ಧಪಡಿಸಿದ ಉತ್ತಮ ದರ್ಜೆಯ ಆಹಾರ (ಪಥ್ಯಾಹಾರ) ಹಾಗೂ ಬಾಳೆಹಣ್ಣು, ಕೋಳಿ ಮೊಟ್ಟೆ ಹಾಗೂ ಕಾಫಿ/ಟೀ ಸರಬರಾಜು ಮಾಡಲು ಹಾಗೂ ಉತ್ತಮ ದರ್ಜೆಯ ಬ್ರೆಡ್ ಪೂರೈಸಲು ಈ -ಪ್ರೋಕ್ಯೂರ್ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ 31-03-2027 ರ ವರೆಗೆ ಮಾತ್ರ ಇರುತ್ತದೆ. ಒಟ್ಟು ಟೆಂಡರಿನ ಅಂದಾಜು ಮೌಲ್ಯ ವರ್ಷಕ್ಕೆ ರೂ. 39,00,000/- ಗಳ ಟೆಂಡರು ವಿವರಗಳ ಈ ಕೆಳಗಿನಂತಿರುತ್ತದೆ.

ಟೆಂಡರ್ ವಿವರಗಳು

Tender No : DHFWS/2026-27/SE, Group A : TIFFIN , READY FOOD, Group B : BREAD FIRST CLASS , E.M.D amount Rs. 97,500/- (2.5%), Commencement of downloading of e-tender forms from website http://kppp.karnataka.gov.in Date : 08/06/2026, Last Date for Food Sample Verification Date : 15/06/2026 from 11.00 am to 4.00 pm At GH Athani Office, Last Date for seeking clarification and purchasing Tender Form Date: 17/06/2026 up to 16:00:00, Last date for uploading of Tender in e-procurement platform Date: 18/06/2026 up to 16:00:00, Date & Time for Opening of Tenders Date : 19/06/2026 at 4:30 at Office of the Chief Medical Officer General Hospital, Athani.

ಇ-ಪ್ರೊಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ ಮೊತ್ತ, ಟೆಂಡರು ಪ್ರಕ್ರೀಯೆ ದಿನಾಂಕಗಳು ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಮುಖ್ಯ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ, ಅಥಣಿ.

DIPR/BGM/RO-NO-387/KSMCA/2026-27

ಕರ್ನಾಟಕ ಸರ್ಕಾರ
ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ
ಕಮಲಾಪುರ. ದೂರವಾಣಿ: 08394-241661
e-mail ID: hwhama@gmail.com

ಸಂಖ್ಯೆ:ಹವಿಪಪ್ರನಿಪ್ರಾ/ಕ/scrap/2025-26 ದಿನಾಂಕ:08-06-2026

ಇ-ಹರಾಜು ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಆದೇಶ 1999-2000ರನ್ವಯ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದಲ್ಲಿರುವ ನಿರುಪಯುಕ್ತ ವಸ್ತುಗಳನ್ನು ಇ-ಪೋರ್ಟಲ್ ಮೂಲಕ ಇ-ಹರಾಜು ಮಾಡುವ ಸಂಬಂಧ ಈ ಪ್ರಕಟಣೆ.

Indent No: HWHAMA/2026-27/AUCTION10

ಹಂಪಿ ಪ್ರಾಧಿಕಾರದಲ್ಲಿರು ನಿರುಪಯುಕ್ತ ವಸ್ತುಗಳ **ಈ-ಹರಾಜು ಪ್ರಕಟಣೆ**
ಇಎಂಡಿ ಮೊತ್ತ : **ರೂ.20,000/-**
ಇ-ಹರಾಜಿನ ವಿವರ ಈ ಕೆಳಗಿನಂತೆ:

- ಟೆಂಡರ್ ವಿಧಾನ : ಇ-ಹರಾಜು (Web Site: https://kppp.karnataka.gov.in/#/portal/portal-home).
- ಇ-ಹರಾಜಿನ ಪ್ರಾರಂಭಿಕ ದಿನಾಂಕ: 08.06.2026 11.53 AM
- ಇ-ಹರಾಜಿಗೆ ದಾಖಲೆ ಸಲ್ಲಿಸಲು ಅಂತಿಮ ದಿನಾಂಕ:15.06.2026 5.00 PM
- ಇ-ಹರಾಜಿಗೆ ಸಲ್ಲಿಸಿದ ದಾಖಲೆಗಳ ಪರಿಶೀಲನೆ ದಿನಾಂಕ: 16.06.2026
- ಇ-ಹರಾಜಿನ ದಿನಾಂಕ: 17.06.2026 10.30 AM - 4.00 PM
- ಹೆಚ್ಚಿನ ಮಾಹಿತಿಗಾಗಿ ಸಂಪರ್ಕ: ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಕಮಲಾಪುರ ಜಿಲ್ಲೆ: ವಿಜಯನಗರ ದೂರವಾಣಿ:08394-241661, ಇಮೇಲ್: **hwhama@gmail.com** ಈ ಹರಾಜಿನಲ್ಲಿ ಭಾಗವಹಿಸಲು ಹಾಗು ಹೆಚ್ಚಿನ ಮಾಹಿತಿಗಾಗಿ ಕೆಲಸದ ವೇಳೆಯಲ್ಲಿ ಪ್ರಾಧಿಕಾರದ ಕಾರ್ಯಲಯಕ್ಕೆ ಹಾಜರಾಗಿ ಹೆಚ್ಚಿನ ಮಾಹಿತಿ ಪಡೆಯ ತಕ್ಕದ್ದು ಹಾಗು ಸ್ಥಳ ಪರಿಶಿಲಿಸ ಬಹುದಾಗಿದೆ.

ಸಹಿ/-ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ
ನಿರ್ವಹಣಾ ಪ್ರಾಧಿಕಾರ ಕಮಲಾಪುರ

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/123

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಗದಗ ವಿಭಾಗ, ಗದಗ
ದೂರವಾಣಿ : 08372-238782, ಇಮೇಲ್ : eepwdgad@gmail.com

ಸಂಖ್ಯೆ : ಕಾ.ನಿ.ಇಂ.ಗ./ಲೋ.ಇ./ಪಿಬಿ-1, 5/ವಿವಿಧ/2026-27/817
ದಿನಾಂಕ : 09-06-2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು 848.00 ಲಕ್ಷ ಮೊತ್ತದಲ್ಲಿ ಒಟ್ಟು 08 ಕಾಮಗಾರಿಗೆ (ಕನಿಷ್ಠ ಮೊತ್ತ ರೂ. 2.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 250.00 ಲಕ್ಷ) ಕೆ.ಪಿ.ಪಿ.ಪಿ.ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ. ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ. - 1, 2, 3 ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.karnataka.gov.in ದಲ್ಲಿ ನೋಡಿ ಕೊಳ್ಳಬಹುದು.

Work Indent No. : Part-1, 27553/Call-2.

ಮೇಲಿನ ಕಾಮಗಾರಿಗಳ ಪ್ರಶ್ನೋತ್ತರ ದಿನಾಂಕ : 22-06-2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 23-06-2026 ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 24-06-2026. ಆರ್ಥಿಕ ಬಿಡ್ ತೆರೆಯುವ ದಿನಾಂಕ : 25-06-2026.

Work Indent No. : Part-2, 32764/Call-3, 32781/Call-3, 32783-SC/Call-2, 35125.

ಮೇಲಿನ ಕಾಮಗಾರಿಯ ಟೆಂಡರ್ ವಿವರ : ಪ್ರಶ್ನೋತ್ತರ ದಿನಾಂಕ : 16-06-2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 17-06-2026 ರ ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18-06-2026. ಆರ್ಥಿಕ ಬಿಡ್ ತೆರೆಯುವ ದಿನಾಂಕ : 19-06-2026.

Work Indent No. : Part-3, 33451, 33444, 36229.

ಮೇಲಿನ ಕಾಮಗಾರಿಗಳ ಟೆಂಡರ್ ವಿವರ : ಪ್ರಶ್ನೋತ್ತರ ದಿನಾಂಕ : 30-06-2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 01-07-2026 ರ ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ / ಆರ್ಥಿಕ ಬಿಡ್ ತೆರೆಯುವ ದಿನಾಂಕ : 02-07-2026.

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-1 ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಗದಗ ವಿಭಾಗ,
ಗದಗ.

ಡಿಐಪಿಆರ್/ಗದಗ/115/ಮಣಿಪಾಲ್/2026-27

ಕ್ರಿಮಿನಲ್ ಮಿಸಲೇನಿಯಸ ನಂ: 90/2025

ಕಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ಶಿಗ್ಗಾಂವ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು: ಶ್ರೀ ಮಂಜುನಾಥ ತಂದೆ ಗಣಪತೆಪ್ಪ ಕೊಲ್ಲಾಪೂರ

ವಿರುದ್ಧ

ಎದುರುಗಾರರು :ಉಪ-ತಹಶೀಲ್ದಾರ ನಾಡ ಕಚೇರಿ ಜನನ-ಮರಣ ನೋಂದಣಾಧಿಕಾರಿಗಳು ಬಂಕಾಪೂರ ತಾ॥ ಶಿಗ್ಗಾಂವ ಜಿ॥ ಹಾವೇರಿ

ಪತ್ರಿಕಾ ಪ್ರಕಟಣೆ

ಇದರಲ್ಲಿ ಅರ್ಜಿದಾರನ ಕುಟುಂಬದ ಸದಸ್ಯಳಾದ (ಅಜ್ಜಿಯಾದ)ಶ್ರೀಮತಿ ಮಲ್ಲಮ್ಮ ಕೋಂ ಗಂಗಣ್ಣ ಕೊಲ್ಲಾಪೂರ ಸಾ॥ಬಂಕಾಪೂರ ತಾ॥ಶಿಗ್ಗಾಂವ ಜಿ॥ ಹಾವೇರಿ ಇವರು ದಿನಾಂಕ:10-02-1984 ಬಂಕಾಪೂರ ಗ್ರಾಮದಲ್ಲಿ ಮರಣಹೊಂದಿರುತ್ತಾರೆ.

ಸದರಿ ಪೋತಿಗೆ ಅರ್ಜಿದಾರನು ವಾರಸುದಾರನು ಇದ್ದು, ಅರ್ಜಿದಾರನಿಗೆ ಈಗ ವಾರಸಾ ಪ್ರಮಾಣ ಪತ್ರ ಪಡೆಯಲು ಮತ್ತು ಸರಕಾರಿ ಸೌಲಭ್ಯ ಪಡೆಯುವ ಸಲುವಾಗಿ ಈ ನ್ಯಾಯಾಲ ಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು, ದಿನಾಂಕ :10-07-2026 ರಂದು ಮುದ್ದತ್ತು ನೇಮಿಸಿದ್ದು ಇದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರೂ ಮೇಲಿನ ದಿನಾಂಕದಂದು ಈ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾ ರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡ ಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.

ನ್ಯಾಯಾಲಯದ ಆದೇಶ ಹಾಗೂ ಮೊಹರನೊಂದಿಗೆ ಹೊರಡಿಸಲಾಗಿತು.
ಶಿಗ್ಗಾಂವ
ದಿನಾಂಕ: 06-06-2026
ಸಹಿ/-ಶಿರಸ್ತೇದಾರ ಕಿರಿಯ ದಿವಾಣಿ ನ್ಯಾಯಾಧೀಶರು ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ
ಸಹಿ/-ಶ್ರೀ ಎಸ್.ವ್ಹಿ.ಕಟಿ
ಅರ್ಜಿದಾರರ ಪರ ವಕೀಲರು ಶಿಗ್ಗಾಂವ

ಕ್ರಿ.ಮಿ. ನಂ .601/2026

ರಾಣೇಬೆನ್ನೂರು 2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಮ್ ಎಫ್ ಸಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು:1)ಶ್ರೀಮತಿ ಕನ್ನವ್ವ ಕೋಂ ಮಹೇಶಪ್ಪ ಮಾಯಣ್ಣನವರ ಹಾಗೂ ಇತರರು

ವಿರುದ್ಧ

ಎದಿರುಗಾರರು:ಜನನ ಮತ್ತು ಮರಣ ನೊಂದಣಾಅಧಿಕಾರಿಗಳು, ನಗರಸಭೆ (ಸಿ.ಎಮ್.ಸಿ) ರಾಣೇಬೆನ್ನೂರು

ಇಸ್ತಿಯಾರ ನಾಮೆ

ಸದರ ಪ್ರಕರಣದ 1ನೇ ಅರ್ಜಿದಾರಳಗಂಡ ಹಾಗೂ 2 ರಿಂದ 4ನೇ ಅರ್ಜಿದಾರರ ತಂದೆ ಯಾದಶ್ರೀ ಮಹೇಶಪ್ಪ ಮರಡೆಪ್ಪ ಮಾಯಣ್ಣನವರ ಈತನು ದಿನಾಂಕ07/10/2022 ರಂದು ರಾಣೇಬೆನ್ನೂರ ತಾಲ್ಲೂಕ ರಾಣೇಬೆನ್ನೂರು ಗ್ರಾಮದಲ್ಲಿ ಮೃತನಾಗಿರುತ್ತಾನೆ ಅಂತಾ ಎದುರುಗಾರರು ತಮ್ಮ ಮರಣ ರಜಿಸ್ಟರ್‌ನಲ್ಲಿಎಂಟ್ರಿ ಮಾಡಿಕೊಳ್ಳುವ ಕುರಿತು ನಿರ್ದೇಶಿತ ಹುಕುಂಗಾಗಿ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಇರುತ್ತದೆ.

ಕಾರಣ ಇದಕ್ಕೆ ಯಾರದಾದರು ತಂಟೆ ತಕರಾರು ಇದ್ದಲ್ಲಿ ದಿನಾಂಕ: 12-08-2026 ರಂದು ಮುಂಜಾನೆ 11.00 ಘಂಟೆಗೆ ಮಾನ್ಯ ನ್ಯಾಯಾಲ ಯದಲ್ಲಿ ಖುದ್ದು ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯವು ಏಕತರ್ಫಿ ಆದೇಶ ಮಾಡುವುದು ತಿಳಿಯಿರಿ ಅಂತಾ ಕೊಡಲ್ಪಟ್ಟ ಸಾರ್ವಜನಿಕ ತಿಳುವಳಿಕೆ ನೋಟಿಸ್.

ಈ ಹೊತ್ತು ಕೋರ್ಟಿನ ಸೀಲು ವ ಮೊಹರು ಹಾಕಿ ದಿ:08-06-2026 ರಂದು ಕೊಡಲ್ಪಟ್ಟಿದೆ.
ಸ್ಥಳರಾಣೇಬೆನ್ನೂರ
ದಿನಾಂಕ :08-06-2026
ಕೋರ್ಟಿನ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು
ರಾಣೇಬೆನ್ನೂರ 2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ, ಇವರ ನ್ಯಾಯಾಲಯದಲ್ಲಿ
ಸಹಿ/-(ಶ್ರೀ ಎಲ್.ಎಮ್ ಕಂಬಳಿ)
ಅರ್ಜಿದಾರರ ಪರ ವಕೀಲರು

ಕರ್ನಾಟಕ ಸರ್ಕಾರ
ಬೀದರ ಮಾಹಾನಗರ ಪಾಲಿಕೆ ಬೀದರ
ದೂರವಾಣಿ: 08482-240432 ಫ್ಯಾಕ್ಸ ನಂ: 08482-240432 Web Site:www.bidarcity.mrc.gov.in
E-mail ID:itstaff_ulb-bidar@yahoo.com, ka.bidar.cmc@gmail.com

ಸಂ:ಬೀಮಪಾ/ಆರೋಗ್ಯ/ಸಿಆರ್- /2025-26 ದಿನಾಂಕ: 06-06-2026

- : ಇ-ಪ್ರಕ್ಯೂರ್‌ಮೆಂಟ್ ಪ್ರಕಟಣೆ (ದರ ಅಹ್ವಾನಕ್ಕಾಗಿ): -

1) ಕಾಮಗಾರಿ/ಸರಕು/ಸೇವೆಯ ವಿವರ {DMA/2026-27/OW/WORK_INDENT59474}:- hiring of power screen warrior 1200 and trommel machine on hourly basis for processing of municipal solid (for preparation of estimate), 2) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ KPPP-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ KPPP-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ KPPP-portal ನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು **16-06-2026 upto 04.00 PM,** 6) ಟೆಂಡರ ತೆರೆಯುವ **ದಿನಾಂಕ 17-06-2026 at 04.30 PM,** 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಆಯುಕ್ತರು ಮಹಾನಗರ ಪಾಲಿಕೆ ಬೀದರ ಇ-ಮೇಲ್: ka.bidar.cmc@gmail.com 08482-240432, 8) ಅಂತರಜಾಲ ತಾಣದ ವಿಳಾಸ https://kppp.karnataka.gov.in/

ಸಹಿ/-ಆಯುಕ್ತರು,
ಬೀದರ ಮಾಹಾನಗರ ಪಾಲಿಕೆ ಬೀದರ

ವಾ.ಸಾ.ಸಂ.ಇ/ಬೀದರ/54/ಕೆ.ಎಸ್.ಎಂ.ಸಿ.&ಎ/2026-27

ನಗರಸಭಾ ಕಾರ್ಯಾಲಯ ರಾಬರ್ಟ್‌ಸನ್‌ಪೇಟೆ ಕೆ.ಜಿ.ಎಫ್-563122 CITY MUNICIPAL COUNCIL ROBERTSONPET KOLAR GOLD FIELDS - 563122
Website: www.robertsonpetcity.mrcgov.in, E mail: itstaff_ ulb_robertsonpet@yahoo.com
Phone No:08153-260256

ಸಂಖ್ಯೆ:ನಸರಾ/ತಾಶಾ/ಸ.ಅ/ಇ-ಪ್ರೊಕ್/ಸಿಆರ್/04/2026-27 ದಿನಾಂಕ:06.06.2026

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ದ್ವಿ-ಲಕೋಟೆ ಪದ್ಧತಿ)

ರಾಬರ್ಟ್‌ಸನ್‌ಪೇಟೆ ನಗರಸಭೆ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ ಯೋಜನೆ ಮತ್ತು ನಗರಸಭೆ ನಿಧಿ ಅನುದಾನದ ಅಡಿಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ನೊಂದಾಯಿತ ಗುತ್ತಿಗೆದಾರರುಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ-1999 ನಿಯಮಗಳು 2000) ಅನ್ವಯ ಐಟಂವಾರು ದರಗಳ ದ್ವಿ-ಲಕೋಟೆ ಪದ್ಧತಿ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

Sl no	Name of work	Estcost (Rs.In Lakhs)	Category
1	DMA/2025-26/Ws/WORK_INDENT59124	2.91	Others
2	DMA/2025-26/OW/WORK_INDENT59128	1.675	SC
3	DMA/2025-26/OW/WORK_INDENT59130	15.00	ST
4	DMA/2025-26/OW/WORK_INDENT59131	6.04	Others
5	DMA/2025-26/RD/WORK_INDENT59132	18.00	Others
6	DMA/2025-26/RD/WORK_INDENT59136	3.52	Others
7	DMA/2025-26/WS/WORK_INDENT59138	1.6	Cat-II(A)
8	DMA/2025-26/OW/WORK_INDENT59140	3.75	Cat-II(A)
9	DMA/2025-26/OW/WORK_INDENT59146	9.32	Others
10	DMA/2025-26/OW/WORK_INDENT59147	8.4	Others
11	DMA/2025-26/OW/WORK_INDENT59460	13.94	Others
12	DMA/2025-26/SE7012/CALL-3		

ಆಯಾ ಕಾಮಗಾರಿಗಳಿಗೆ ಅನ್ವಯಿಸುವ ಟೆಂಡರ್ ದಾಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ತಾಂತ್ರಿಕ ಶಾಖೆ ನಗರಸಭೆ ರಾಬರ್ಟ್‌ಸನ್‌ಪೇಟೆ ರವರನ್ನು ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08153-260256.

ಸಹಿ/-
ಡಾ॥ಎಂ.ಆರ್ ರವಿ
ಆಡಳಿತಾಧಿಕಾರಿಗಳು, ನಗರಸಭೆ, ಕೆಜಿಎಫ್
ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ

ಸಹಿ/-
ಶ್ರೀಧರ್ ವಿ
ಪೌರಾಯುಕ್ತರು
ನಗರಸಭೆ, ಕೆಜಿಎಫ್

ವಾಸಾಸಂಇ/ ಕೋಲಾರ/ ಆರ್.ಓ.ಸಂಖ್ಯೆ:104/ಕೆಎಸ್‌ಎಂಸಿಎ/ 2026-27

ಕಿರುಸುದ್ದಿ

ಕರುವಿನ ಮೇಲೆ ಮೊಸಳೆ ದಾಳಿ

ದಾಂಡೇಲಿ: ನೀರು ಕುಡಿಯಲೆಂದು ನದಿಗಿಳಿದಿದ್ದ ಕರುವಿನ ಮೇಲೆ ಮೊಸಳೆಯೊಂದು ದಾಳಿ ನಡೆಸಿ ಗಂಭೀರ ಗಾಯಗೊಳಿಸಿದ ಘಟನೆ ನಗರದ ಸಮೀಪದಲ್ಲಿರುವ ಹಾಲಮಡ್ಡಿಯಲ್ಲಿ ಮಂಗಳವಾರ ಸಂಜೆ ನಡೆದಿದೆ.



ಹಾಲಮಡ್ಡಿಯಲ್ಲಿ ನೀರು ಕುಡಿಯಲೆಂದು ನದಿಗಿಳಿದಿದ್ದ ಕರುವಿನ ಮೇಲೆ ಮೊಸಳೆ ಏಕಾಏಕಿ ದಾಳಿ ಮಾಡಿದೆ. ದಾಳಿಯಿಂದಾಗಿ ಕರುವಿನ ಕೈ ಮತ್ತು ಕಾಲಿಗೆ ಗಂಭೀರ ಗಾಯವಾಗಿದೆ. ಸ್ಥಳೀಯರು ತಕ್ಷಣವೆ ಕರುವನ್ನು ರಕ್ಷಣೆ ಮಾಡಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆಯ ಚಂದ್ರಕಾಂತ ಮಿರಾಶಿ ಮತ್ತು ಪಶುವೈದ್ಯ ಇಲಾಖೆಯ ಲವ ಶೆಟ್ಟಪ್ಪನವರ ಭೇಟಿ ನೀಡಿದ್ದಾರೆ. ಲವ ಶೆಟ್ಟಪ್ಪನವರ ಕರುವಿಗೆ ಪ್ರಾಥಮಿಕ ಚಿಕಿತ್ಸೆಯನ್ನು ನೀಡಿದ್ದಾರೆ. ಸ್ಥಳಕ್ಕೆ ಮಾಜಿ ಗ್ರಾಪಂ ಸದಸ್ಯ ಸುಭಾಷ ಬೋವಿವಡ್ಡರ ಅವರು ಭೇಟಿ ನೀಡಿದ್ದಾರೆ.

ಸೇತುವೆ ಕುಸಿತ: ತಪ್ಪಿದ ಭಾರೀ ಅನಾಹುತ



ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಂಗಾರು ಆರಂಭವಾಗಿದ್ದು ಕೆಲವು ಕಡೆಗಳಲ್ಲಿ ತೀವ್ರ ಮಳೆ ಸುರಿದಿದೆ. ಕಾರವಾರದ ಕಡವಾಡ ಗ್ರಾಮದಲ್ಲಿ ಕಾಳಿ ನದಿಗೆ ನಿರ್ಮಿಸಲಾಗಿದ್ದ ಸುಮಾರು 60 ವರ್ಷಗಳ ಹಿಂದೆ ನಿರ್ಮಾಣ ಮಾಡಲಾಗಿದ್ದ ಸೇತುವೆ ಕುಸಿದು ಬಿದ್ದಿದೆ.

ಸೇತುವೆ ಶಿಥಿಲಾವಸ್ಥೆಗೆ ತಲುಪಿರುವ ಕಾರಣ ಹೊಸ ಸೇತುವೆ ನಿರ್ಮಾಣ ಮಾಡಿ ಸಾರ್ವಜನಿಕರ ಬಳಕೆಗೆ ಲಭ್ಯವಾಗಿದ್ದರೂ ಹಳೆಯ ಸೇತುವೆಯ ಮೇಲೆ ನಿಂತು ಸುತ್ತ ಮುತ್ತಲಿನ ಜನರು, ಮೀನುಗಾರರು ಮೀನು ಹಿಡಿಯುತ್ತಿದ್ದರು. ಮಂಗಳವಾರ ನಸುಕಿನ ಜಾವ ಮಳೆ ಗಾಳಿಯಿಂದ ಸೇತುವೆ ಮಧ್ಯಭಾಗ ಕುಸಿದು ಕೊಚ್ಚಿ ಹೋಗಿದ್ದು ಸೇತುವೆಯ ಮೇಲೆ ಯಾರೂ ಇಲ್ಲದ ಕಾರಣ ಹೆಚ್ಚಿನ ಅನಾಹುತ ಸಂಭವಿಸಿಲ್ಲ. ಸ್ಥಳಕ್ಕೆ ತಾಲೂಕು ಆಡಳಿತದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಭಟ್ಕಳ ತಾಲೂಕಿನಲ್ಲಿ ಸೋಮವಾರ ಭಾರಿ ಮಳೆ ಸುರಿದು ಜನಜೀವನ ಅಸ್ತವ್ಯಸ್ತಗೊಂಡಿದ್ದು, ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ನೀರು ತುಂಬಿ ಹರಿದಿದೆ, ಕೆಲವು ಮನೆಗಳಿಗೂ ಮಳೆ ನೀರು ಪ್ರವೇಶಿಸಿ ಮನೆಗಳ ನಿವಾಸಿಗಳು ಪರಾಡುವಂತಾಗಿದೆ.

ಗರಗ ಠಾಣೆ ಪೊಲೀಸರ ನಿರ್ಲಕ್ಷ್ಯ | ಕಾರ್ಯದರ್ಶಿ ಹೇಮಾವತಿ ಆರೋಪ

ಲವ್ ಜಿಹಾದ್‌ಗೆ ಬಲಿಯಾದ ಅಪ್ರಾಪ್ತೆ

ಧಾರವಾಡ: ಲವ್ ಜಿಹಾದ್ ಜಾಲಕ್ಕೆ ಸಿಲುಕಿ ಗರಗ ಗ್ರಾಮದ ಪೂರ್ಣಿಮಾ ವಡ್ಡರ ಎಂಬ ಅಪ್ರಾಪ್ತ ಬಾಲಕಿ ಬಲಿಯಾದರೂ, ಪೊಲೀಸರು ಕ್ರಮ ಕೈಗೊಂಡಿಲ್ಲ ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಕಾರ್ಯದರ್ಶಿ ಹೇಮಾವತಿ ಆರೋಪಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಬಾಲಕಿ ಪೂರ್ಣಿಮಾಳ ಸಾವಿಗೆ ಉಪ್ಪಿನಬೆಟಗೇರಿ ನಯೀಂಬೇಗ್ ಜೋರಮ್ಮನವರ ಕಾರಣ. ಈ ಕುರಿತು ಮೊಬೈಲ್ ದಾಖಲೆಗಳಿದ್ದರೂ, ಕ್ರಮ ಕೈಗೊಳ್ಳದ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿಗೆ ಸೇರಿದಂತೆ ಪೂರ್ಣಿಮಾಳ ಜೊತೆಗೆ ಮುಸ್ಲಿಂ ಸಮುದಾಯದ ನಯೀಮ್‌ಬೇಗ್ ಪ್ರೀತಿ ನಾಟಕವಾಡಿ, ಅವಳಿಗೆ ಬುರ್ಖಾ, ಹಿಜಾಬ್, ನಿಖಾಬ್ ತೊಡಿಸಿ ಜಿಹಾದಿ ಮಾಡಿ, ಅವಳನ್ನು ದೈಹಿಕವಾಗಿ ಬಳಸಿಕೊಂಡಿದ್ದಾಗಿ ಆರೋಪ ಮಾಡಿದರು.

ಅವಳನ್ನು ಇಬ್ಬರು ದೈಹಿಕವಾಗಿ ಬಳಸಿಕೊಂಡ ಶಂಕೆ ವ್ಯಕ್ತಪಡಿಸಿದ ಹೇಮಾವತಿ, ಆಕೆಯೊಂದಿಗೆ ಇರುವ ಅಶ್ಲೀಲ ಫೋಟೋ ಸಾಮಾಜಿಕ ಜಾಲತಾಣದಲ್ಲೂ ಸಹ ಹಾಕಿ, ಅವಳಿಗೆ ಮಾನಸಿಕ ಕಿರುಕುಳ ನೀಡಿ, ಅವಳ ಸಾವಿಗೆ ಕಾರಣನಾಗಿದ್ದಾಗಿ ದೂರಿದರು.

ನಯೀಮ್ ಬೇಗ್‌ನ ಕಿರುಕುಳ ತಾಳದ ಪೂರ್ಣಿಮಾ ಮೇ 8ರಂದು ಆತ್ಮಹತ್ಯೆಗೆಯತ್ನಿಸಿ, ಚಿಕಿತ್ಸೆಗೆ ಹುಬ್ಬಳ್ಳಿಯ



ಕಿಮ್ಸ್‌ಗೆ ದಾಖಲಿಸಿತ್ತು. ಆದರೆ, ಚಿಕಿತ್ಸೆ ಫಲಿಸದೆ, ಮೇ 9ರಂದು ಮೃತಪಟ್ಟಿದ್ದಾಳೆ. ಆದರೆ, ಪೊಲೀಸರು ದೂರು ದಾಖಲಿಸಿಕೊಂಡಿಲ್ಲ ಎಂದರು.

ಘಟನೆ ನಡೆದು 20 ದಿನಗಳು ಗತಿಸಿದರೂ, ಯಾವುದೇ ಕ್ರಮ ಕೈಗೊಳ್ಳದ ಗರಗ ಪೊಲೀಸರು, ತದನಂತರ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಟ್ಟನಿಟ್ಟಿನ ಸೂಚನೆಯ ಮೇರೆಗೆ ಮೇ 20ರಂದು ಪ್ರಕರಣ ದಾಖಲಿಸಿಕೊಂಡರೂ ತನಿಖೆ ನಡೆಸಿಲ್ಲ ಎಂದು ದೂರಿದರು.

ಆರೋಪಿ ಬಂಧಿಸಿದ ಗರಗ ಪೊಲೀಸರು, ಪ್ರಕರಣ ಮುಚ್ಚಿಹಾಕಲು ಯತ್ನಿಸಿದ್ದು, ಎರಡು ಕುಟುಂಬ ಮಧ್ಯ ರಾಜಿ ಸಂಧಾನ ಮಾಡಿಸಿ, ಪೂರ್ಣಿಮಾಳ ಸಾವಿಗೆ ರೂ.50 ಸಾವಿರ ಪರಿಹಾರ ಕೊಡಿಸುವುದಾಗಿ ಹೇಳಿರುವುದು ಸರಿಯೇ? ಎಂದು ಪ್ರಶ್ನಿಸಿದರು.

ದಲಿತ ಸಮುದಾಯದ ಅಪ್ರಾಪ್ತ ಬಾಲಕಿಯ ಸಾವಿಗೆ ಕಾರಣನಾದ ಆರೋಪಿಯನ್ನು ಬಂಧಿಸಿ, ಕಠಿಣ ಶಿಕ್ಷೆಗೆ ಗುರಿ ಪಡಿಸಬೇಕು. ಕರ್ತವ್ಯ ಲೋಪ ಎಸಗಿದ ಗರಗ ಠಾಣೆ ಅಧಿಕಾರಿಗಳ ವಿರುದ್ಧವೂ ಕೂಡ ಸೂಕ್ತ ಕ್ರಮ ಕೈಗೊಳ್ಳುವಂತೆ ಹೇಮಾವತಿ ಆಗ್ರಹಿಸಿದರು.

ಬಾಲಕಿಯ ಸಾವಿಗೆ ನ್ಯಾಯ ಸಿಗದೇ ಹೋದರೆ, ಮುಂಬರುವ ದಿನಗಳಲ್ಲಿ ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಉಗ್ರ ಹೋರಾಟ ರೂಪಿಸುವುದಾಗಿ ಕೂಡ ರಾಜ್ಯ ಸರ್ಕಾರಕ್ಕೂ ಮತ್ತು ಪೊಲೀಸ್ ಇಲಾಖೆಗೂ ಕೂಡ ಹೇಮಾವತಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಸಂಘರ್ಷ ಸಮಿತಿ ಮುಖಂಡ ವಿಜಯ ಮಾದರ, ಬಾಲಕಿ ತಂದೆ ಶಿವಪ್ಪ ಒಡ್ಡರ, ರಾಮಣ್ಣ ವಡ್ಡರ ಇದ್ದರು.

ಆರೋಪಿ ಇಸ್ಮಾಯಿಲ್ ಬಂಧನಕ್ಕೆ ಆಗ್ರಹ ಫೈರೋಜ್ ಹತ್ಯೆ ಪ್ರಕರಣ ಸಿಬಿಐಗೆ ವಹಿಸಲಿ

ಧಾರವಾಡ: ಫೈರೋಜ್ ಪಠಾಣ ಹತ್ಯೆಯಾಗಿ ಎರಡು ತಿಂಗಳಾದರೂ ಪ್ರಮುಖ ಆರೋಪಿ ಇಸ್ಮಾಯಿಲ್ ತಮಟಗಾರ ಬಂಧಿಸಿಲ್ಲ, ಪೊಲೀಸ ಇಲಾಖೆಯು ಪ್ರಕರಣ ಗಂಭೀರ ಪರಿಗಣಿಸಿಲ್ಲ, ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲು ಫೈರೋಜ್ ಪಠಾಣ ಸಹೋದರ ಪರ್ವೇಜ್ ಪಠಾಣ ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸರ ನಿಷ್ಕಾಳಜಿಯಿಂದ ಬಂಧನದ ಭೀತಿಯಿಂದ ತಮಟಗಾರ ದೇಶ ಬಿಟ್ಟು ಹೋಗಿದ್ದಾರೆ. ಇಲಾಖೆ ನೆಪಕ್ಕಾಗಿ ನೋಟಿಸ್ ನೀಡಿದೆಯಾದರೂ ಅವರನ್ನು ಬಂಧಿಸಲು ಪ್ರಯತ್ನಗಳನ್ನು ಮಾಡುತ್ತಿಲ್ಲ. ಪ್ರಭಾವಿ ಮಾಜಿ ಸಚಿವರೊಬ್ಬರು ಪ್ರಭಾವದಿಂದಾಗಿ ಪೊಲೀಸ್ ಆಯುಕ್ತರು ಪ್ರಕರಣಕ್ಕೆ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು. ಈ ಹತ್ಯೆ ಪ್ರಕರಣದಲ್ಲಿ ಬಂಧಿತನಾದ ಮೈನುದ್ದೀನ ಅನಾರೋಗ್ಯದ ನೆಪದಲ್ಲಿ ಆಸ್ಪತ್ರೆಯಲ್ಲಿದ್ದು, ಆತನಿಗೆ ಪೊಲೀಸರು ಮೊಬೈಲ್, ಎಲ್ಲ ರೀತಿಯ ಸೌಲಭ್ಯಗಳನ್ನು ಕೊಡುತ್ತಿದ್ದಾರೆ. ಸಾಕ್ಷ್ಯ ನಾಶ ಮಾಡಲು ಆತನಿಗೆ ಎಲ್ಲ ಸಹಕಾರ ಸಿಗುತ್ತಿದೆ. ಇದರೊಂದಿಗೆ ಇಸ್ಮಾಯಿಲ್ ತಮಟಗಾರ ಹಾಗೂ ಬಂಧಿತ ಆರೋಪಿಗಳು ಜಾಮೀನಿಗೆ ಅರ್ಜಿ ಹಾಕಿದ್ದು, ನ್ಯಾಯಾಲಯ ಜಾಮೀನು ನೀಡಬಾರದು ಎಂದು ಕೋರಿದರು.

ನಮ್ಮ ಮನೆಯಲ್ಲಿ ತಾಯಿ ಹಾಗೂ ಸಹೋದರಿ ಮಾತ್ರ ಇದ್ದು, ತಮಗೆ ಜೀವ ಭಯ ಇದೆ. ಒಂದು ವೇಳೆ ಜಾಮೀನು ಸಿಕ್ಕರೆ, ಆರೋಪಿಗಳು ನಮ್ಮನ್ನು ಸಹ ಮುಗಿಸಬಹುದು. ಪೊಲೀಸರು ಭದ್ರತೆ ನೀಡಬೇಕೆಂದು ಆಗ್ರಹಿಸಿದರು.

ಅಂಜುಮನ್ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಕಾಂಗ್ರೆಸ್ ಮುಖಂಡ ದೀಪಕ ಚಿಂಚೋರೆ ಅವರು ಪತ್ರಿಕಾಗೋಷ್ಠಿ ನಡೆಸಿ ಈ ಕೊಲೆಯಲ್ಲಿ ಅಂಜುಮನ್ ಸಂಸ್ಥೆ ಎಳೆದು ತರಬೇಡಿ ಎಂದು ಹೇಳಿದ್ದಾರೆ. ಆದರೆ, ಫೈರೋಜ್ ಪಠಾಣ ಪ್ರಕರಣದಲ್ಲಿ ತಾವೆಲ್ಲೂ ಅಂಜುಮನ್ ಇಸ್ಲಾಂ ಸಂಸ್ಥೆ ಬಗ್ಗೆ ಆರೋಪ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು. ಹತ್ಯೆಯಾದ ಫೈರೋಜ್ ಮದುವೆ ಸಮಯದಲ್ಲಿಯೇ ತಮಟಗಾರ ಅವರೊಂದಿಗೆ ಮಾತನಾಡಿದ ದೂರವಾಣಿ ಕರೆಯ ಸಾಕ್ಷಿ ಎಲ್ಲರ ಕಣ್ಮುಂದೆ ಇದೆ. ಇಷ್ಟಾಗಿಯೂ ಈ ಪ್ರಕರಣದಲ್ಲಿ ತಮಟಗಾರ ಬಂಧಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಪರ್ವೇಜ್ ಪಠಾಣ ಮತ್ತೊಮ್ಮೆ ಆಗ್ರಹಿಸಿದರು.

ಕಾರವಾರದಲ್ಲಿ ಆರೋಪಿ ಬಂಧನ

ಅಂಕೋಲಾ: ದೇವಾಲಯಗಳಲ್ಲಿ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿಯೋರ್ವನನ್ನು ಕಾರವಾರದಲ್ಲಿ ಬಂಧಿಸಲಾಗಿದ್ದು, ಕಳ್ಳತನದ ಸಾಮಗ್ರಿಗಳನ್ನು ಖರೀದಿಸಿದ್ದಾರೆ ಎನ್ನುವ ಮಾಹಿತಿಯ ಮೇರೆಗೆ ತಾಲೂಕಿನಲ್ಲಿ ಪೊಲೀಸರಿಂದ ಕೆಲವರ ವಿಚಾರಣೆ ನಡೆದಿರುವುದಾಗಿ ತಿಳಿದು ಬಂದಿದೆ.

ದೇವಾಲಯಗಳಲ್ಲಿ ಕಳ್ಳತನ ಪ್ರಕರಣ

ಕಾರವಾರದ ನಗರ, ಗ್ರಾಮೀಣ ಮತ್ತು ಚಿತ್ತಾಕುಲ ಪೊಲೀಸ್ ಠಾಣೆಗಳ ವ್ಯಾಪ್ತಿಯ ಐದು ದೇವಾಲಯಗಳಲ್ಲಿ ಕಳ್ಳತನ ಕೃತ್ಯ ನಡೆಸಿರುವ ಆರೋಪಿ ಅಂಕೋಲಾ ಪಟ್ಟಣದ ಕೆಲವು ಪಾತ್ರೆ ವ್ಯಾಪಾರಿಗಳಿಗೆ ಕದ್ದ ಸಾಮಗ್ರಿಗಳ ಮಾರಾಟ ಮಾಡಿರುವುದಾಗಿ ತನಿಖೆಯಿಂದ ತಿಳಿದು ಬಂದಿರುವ ಹಿನ್ನೆಲೆಯಲ್ಲಿ ವಿಚಾರಣೆ ನಡೆದಿದೆ ಎನ್ನಲಾಗುತ್ತಿದೆ. ಕೆಲವು ಪಾತ್ರೆ ಅಂಗಡಿಗಳ ವ್ಯಾಪಾರಿಗಳು ಹಳೆಯ ತಾಮ್ರ ಮತ್ತು ಹಿತ್ತಾಳೆಯ ಸಾಮಗ್ರಿಗಳನ್ನು ಖರೀದಿಸಿ ಹಣ ನೀಡುವ ವ್ಯವಹಾರವನ್ನೂ ನಡೆಸುತ್ತಿದ್ದು, ದೇವಾಲಯದಲ್ಲಿ ಕಳ್ಳತನ ನಡೆಸಿರುವ ಸಾಮಗ್ರಿಗಳನ್ನು ಖರೀದಿಸಿದ್ದರೇ ಎನ್ನುವ ಕುರಿತಂತೆ ಪೊಲೀಸರಿಂದ ಅಂಗಡಿಕಾರರ ತೀವ್ರ ವಿಚಾರಣೆ ನಡೆಸಲಾಗಿದೆ ಎನ್ನಲಾಗುತ್ತಿದೆ.

ಕಾರವಾರ ತಾಲೂಕಿನ ಐದು ದೇವಾಲಯಗಳಲ್ಲಿ ಗಂಟೆ, ದೀಪದ ಸಮೆ, ಆರತಿ ತಾಟುಗಳು ಕಳ್ಳತನ ಮಾಡಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೊಲೀಸರು ಗಿಂಡಿವಾಡ ಬಾಡದ ನಿವಾಸಿ ಆಟೋ ಚಾಲಕ ವಿನಯ ಯಾನೆ ವಿನಾಯಕ ದಯಾನಂದ ಗಾಂವಕರ(40) ಎಂಬಾತನನ್ನು ಬಂಧಿಸಿ ಕಳ್ಳತನ ಮಾಡಿರುವ ಸುಮಾರು 87 ಸಾವಿರ ರೂಪಾಯಿ ಮೌಲ್ಯದ 174 ಕೆಜಿ ತೂಕದ ತಾಮ್ರ ಮತ್ತು ಹಿತ್ತಾಳೆಯ ಪರಿಕರಗಳನ್ನು ವಶಕ್ಕೆ ಪಡೆದಿದ್ದರು. ಬಂಧಿತ ಆರೋಪಿತನ ವಿಚಾರಣೆ ನಡೆಸಿರುವ ಪೊಲೀಸರು ಆತ ಮಾರಾಟ ಮಾಡಿರುವ ವಸ್ತುಗಳ ಕುರಿತಂತೆ ತನಿಖೆ ನಡೆಸುತ್ತಿರುವುದಾಗಿ ತಿಳಿದು ಬಂದಿದೆ.



ಸರ್ಕಾರಿ ಗೌರವಗಳೊಂದಿಗೆ ಯೋಧನ ಅಂತ್ಯಕ್ರಿಯೆ

ಬೈಲಹೊಂಗಲ: ಭಾರತೀಯ ಸೇನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಿಆರ್‌ಪಿಎಫ್ ಯೋಧ ಸಚಿನ್ ಕರಡಿ (31) ಅವರ ಅಕಾಲಿಕ ನಿಧನ ಬೈಲಹೊಂಗಲ ತಾಲೂಕಿನ ನೇಗಿನಹಾಳ ಗ್ರಾಮವನ್ನು ಶೋಕ ಸಾಗರದಲ್ಲಿ ಮುಳುಗಿಸಿದೆ.

ಬೆಂಗಳೂರಿನ ರೈಲ್ವೆ ನಿಲ್ದಾಣದಲ್ಲಿ ರೈಲಿನಿಂದಕೆಳಗಿಳಿಯುವಸಂದರ್ಭದಲ್ಲಿ ಸಂಭವಿಸಿದ ದುರ್ಘಟನೆಯಲ್ಲಿ ಮೃತಪಟ್ಟಿದ್ದ ಸಚಿನ್ ಅವರ ಅಂತ್ಯಕ್ರಿಯೆಯನ್ನು ಮಂಗಳವಾರ ಸ್ವಗ್ರಾಮ ನೇಗಿನಹಾಳದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಯಿತು. ಯೋಧನ ಪಾರ್ಥಿವ ಶರೀರ ಗ್ರಾಮಕ್ಕೆ ಆಗಮಿಸುತ್ತಿದ್ದಂತೆಯೇ ನೂರಾರು ಜನರು ಕಣ್ಣೀರಿನ ನಮನ ಸಲ್ಲಿಸಿದರು. ಗ್ರಾಮದ ಪ್ರಮುಖ ಬೀದಿಗಳ ಮೂಲಕ ಪಾರ್ಥಿವ ಶರೀರದ ಮೆರವಣಿಗೆ ಜೈ



ಘೋಷಗಳ ನಡುವೆ ನಡೆಸಲಾಯಿತು.

ಸಚಿನ್ ಕರಡಿ ಅವರು 2017ರಲ್ಲಿ ಸೇನೆಗೆ ಸೇರಿ 9 ವರ್ಷ ಸೇವೆ ಸಲ್ಲಿಸಿ, ಕೊಯಿಮತ್ತೂರನಲ್ಲಿ ಸೇವೆ ನಿರ್ವಹಿಸುತ್ತಿದ್ದರು. ಕೆಲವೇ ತಿಂಗಳ ಹಿಂದೆ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದರು. ಬದುಕಿನ ಹೊಸ ಕನಸುಗಳನ್ನು ಕಟ್ಟಿಕೊಳ್ಳುತ್ತಿದ್ದ ಯುವ ದಂಪತಿಯ ಬದುಕಿನಲ್ಲಿ ವಿಧಿಯಾಟ ಕರಾಳ ತಿರುವು ಪಡೆದುಕೊಂಡಿದೆ. ಪತಿಯ ಪಾರ್ಥಿವ ಶರೀರವನ್ನು ಕಂಡ ಪತ್ನಿಯ ರೋಧನ ಎಲ್ಲರ ಹೃದಯವನ್ನೂ ಕರಗಿಸುವಂತಿತ್ತು.

ಅಂತಿಮ ವಿಧಿವಿಧಾನಗಳ ವೇಳೆ ಖಾನಾಪುರ ಕೋಬ್ರಾ ಸಿಐಎಸ್ ಜೆ ಡಬ್ಲ್ಯೂ ಟಿಯ ಸಿ ಆರ್‌ಪಿಎಫ್ ಟ್ರೇನಿಂಗ್ ಸ್ಕೂಲ್ ಯೋಧರು ಗೌರವ ಸೂಚಕವಾಗಿ ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ವೀರ ಯೋಧನಿಗೆ ಅಂತಿಮ ನಮನ ಸಲ್ಲಿಸಿದರು. ಬಳಿಕ ರಾಷ್ಟ್ರಧ್ವಜವನ್ನೂ ಅವರ ಪತ್ನಿಗೆ ಹಸ್ತಾಂತರಿಸಲಾಯಿತು. ಅಂತಿಮ ದರ್ಶನ ಪಡೆಯಲು ನೂರಾರು ಸಂಖ್ಯೆಯಲ್ಲಿ ಯುವಕರು, ಹಿರಿಯರು, ಮಹಿಳೆಯರು, ಮಾಜಿ ಸೈನಿಕರು, ಪೊಲೀಸ್ ಸಿಬ್ಬಂದಿ, ಶಾಲಾ ಮಕ್ಕಳು ಹಾಗೂ ಶಿಕ್ಷಕರು ಆಗಮಿಸಿದ್ದರು.

ಶಾಸಕ ಬಾಬಾಸಾಹೇಬ ಪಾಟೀಲ, ತಹಶೀಲ್ದಾರ ಸದಾಶಿವ ಮಕ್ಕೋಜಿ, ಗ್ರೇಡ್-2 ತಹಶೀಲ್ದಾರ್ ಸುಧಾಕರ ದೊಡಮನಿ, ಬಸವರಾಜ ಕೆರಕನವರ, ಸಿಪಿಐ ಪ್ರಮೋದ ಯಲಿಗಾರ, ಪಿಡಿಒ ಬಿ.ವಿ.ಬಳಿಗಾರ, ಗ್ರಾಮಲೆಕ್ಕಾಧಿಕಾರಿ ಬಸವರಾಜ ಪೂಜೇರ, ವಿವಿಧ ಇಲಾಖೆಗಳ ಅಧಿಕಾರಿಗಳು, ಮಾಜಿ ಯೋಧರು ಹಾಗೂ ಗ್ರಾಮಸ್ಥರು ಅಂತಿಮ ನಮನ ಸಲ್ಲಿಸಿದರು.

ರಸ್ತೆ ಅಪಘಾತದಲ್ಲಿ ಯೋಧ ಸಾವು

ಜಮಖಂಡಿ: ತಾಲೂಕಿನ ಗದ್ಯಾಳ ಗ್ರಾಮದ ಗಡಿ ಭದ್ರತಾ ಪಡೆಯ ಯೋಧ ಮಹದೇವ್ ಡಪಳಪುರ ರಜೆ ಮೇಲೆ ಗ್ರಾಮಕ್ಕೆ ಬಂದಾಗ ದೇವಸ್ಥಾನಕ್ಕೆ ಹೋಗಿ ಮರಳಿ ಬರುವಾಗ ವಿಜಯಪುರ ನಗರದ ಹೊರವಲಯದಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಯೋಧ ಮೃತಪಟ್ಟಿದ್ದಾರೆ.

ಯೋಧ ಮೂಲತಃ ಗಡಿ ಭದ್ರತಾ ಪಡೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ವರ್ಗಾವಣೆಯ ಹಿನ್ನೆಲೆಯಲ್ಲಿ ರಜೆಯ ಮೇಲೆ ಬಂದಾಗ ದೇವಸ್ಥಾನಕ್ಕೆ ಹೋಗಿ ಗ್ರಾಮಕ್ಕೆ ಮರಳುವಾಗ ಈ ಅಪಘಾತ ಸಂಭವಿಸಿದೆ.

ಮೃತ ಯೋಧನ ಅಂತ್ಯಕ್ರಿಯೆಯನ್ನು ಗ್ರಾಮದ ಸರ್ಕಾರಿ ಶಾಲೆಯಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಕುಟುಂಬದ ಸಮ್ಮುಖದಲ್ಲಿ ನೆರವೇರಿಸಲಾಯಿತು.

ಅಂತ್ಯಕ್ರಿಯೆಯಲ್ಲಿ ಶಾಸಕ ಜಗದೀಶ ಗುಡಗುಂಟಿ, ಎಸಿ ಶ್ವೇತಾ ಬೀಡಿಕರ್, ತಹಶೀಲ್ದಾರ್ ಅನಿಲ್ ಬಡಿಗೇರ್, ಉಪತಶೀಲ್ದಾರ ಯಾಸಿನ್ ದ್ರಾಕ್ಷಿ, ಶಿವಾನಂದ ಪಾಟೀಲ್, ಅರ್ಜುನ್ ತಳವಾಯಿ, ಶಿಖರೆಪ್ಪ ಸಣಸಿದ್ದ, ಸೇರಿದಂತೆ ಮಾಜಿ ಸೈನಿಕರು ಇದ್ದರು.



ಅಗ್ನಿವೀರ ಹುದ್ದೆಗೆ ಆಯ್ಕೆಯಾದ ಡಿಪಿಐಟಿಐ ವಿದ್ಯಾರ್ಥಿ

ಹಳಿಯಾಳ: ದೇಶಪಾಂಡೆ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಯ ಜೋಡಣೆ ವೃತ್ತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಸಂತೋಷ ಗಣಪತಿ ಪಾಟೀಲ ಅವರು ಭಾರತೀಯ ಸೇನೆಯ ಅಗ್ನಿವೀರ ಹುದ್ದೆಗೆ ಆಯ್ಕೆಯಾಗುವ ಮೂಲಕ ಸಂಸ್ಥೆ ಹಾಗೂ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಹಳಿಯಾಳ ತಾಲೂಕಿನ ಮುರ್ಕವಾಡ ಗ್ರಾಮದ ಕೃಷಿಕ ಕುಟುಂಬದವನಾದ ಈತನು ಫೆಬ್ರುವರಿ ತಿಂಗಳಲ್ಲಿ ಮಂಗಳೂರಿನಲ್ಲಿ ನಡೆದ ದೈಹಿಕ ಸಾಮರ್ಥ್ಯ ಪರೀಕ್ಷೆ ಹಾಗೂ ವೈದ್ಯಕೀಯ ಪರೀಕ್ಷೆಗಳಲ್ಲಿ ಯಶಸ್ವಿಯಾಗಿಉತ್ತೀರ್ಣರಾಗಿಇದೇ ತಿಂಗಳ 19ರಂದು ಮಧ್ಯಪ್ರದೇಶದ ಸಗುರನಲ್ಲಿ ಭಾರತೀಯ ಸೇನೆಗೆ ಸೇರ್ಪಡೆಗೊಂಡು ದೇಶಸೇವೆಗೆ



ಅಣಿಯಾಗಲಿದ್ದಾನೆ.


ವಿದ್ಯಾರ್ಥಿಯ ಸಾಧನೆಗಾಗಿ ವಿ.ಆರ್.ದೇಶಪಾಂಡೆ ಸ್ಮಾರಕ ಟ್ರಸ್ಟ್‌ನ ಆಡಳಿತಾಧಿಕಾರಿ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಯನ್ನು ಅಭಿನಂದಿಸಿ, ಶುಭ ಹಾರೈಸಿದ್ದಾರೆ.

ಮನೆಗೆ ಆಕಸ್ಮಿಕ ಬೆಂಕಿ: ಹಾನಿ

ಕಲಬುರಗಿ: ಜಿಲ್ಲೆಯ ಚಿತ್ತಾಪುರ ತಾಲೂಕಿನ ಸಾತನೂರು ಗ್ರಾಮದಲ್ಲಿ ಮನೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಸುಟ್ಟು ಕರಕಲಾದ ಘಟನೆ ನಡೆದಿದೆ. ಸಾತನೂರು ಗ್ರಾಮದ ನಿವಾಸಿ ಈರಣ್ಣ ವಿಶ್ವಕರ್ಮ ಅವರಿಗೆ ಸೇರಿದ ಮನೆಯಲ್ಲಿ ಈ ಅವಘಡ ಸಂಭವಿಸಿದೆ. ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ. ಬೆಂಕಿಯ ಕೆನ್ನಾಲಿಗೆಗೆ ಮನೆಯಲ್ಲಿದ್ದ ನಗದು ಹಣ ಸೇರಿದಂತೆ ಲಕ್ಷಾಂತರ ರೂಪಾಯಿ ಮೌಲ್ಯದ ಗೃಹೋಪಯೋಗಿ ವಸ್ತುಗಳು, ಪೀಠೋಪಕರಣಗಳು ಹಾಗೂ ಇತರೆ ಸಾಮಗ್ರಿಗಳು ಹಾನಿಗೊಳಗಾಗಿವೆ. ಘಟನೆಯಿಂದ ಕುಟುಂಬಸ್ಥರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳೀಯರು ಹಾಗೂ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವ ಕಾರ್ಯ ಕೈಗೊಂಡರು. ಘಟನೆಯ ನಿಖರ ಕಾರಣ ಹಾಗೂ ಹಾನಿಯ ಪ್ರಮಾಣ ಕುರಿತು ಪರಿಶೀಲನೆ ನಡೆಯುತ್ತಿದೆ. ಚಿತ್ತಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ದಾಖಲಾಗಿದ್ದು, ಹೆಚ್ಚಿನ ತನಿಖೆ ಮುಂದುವರಿದಿದೆ.

ಸಂಡೂರು ಘೋರ್ಪಡೆ ರಾಜವಂಶಸ್ಥ ಕಾರ್ತಿಕೇಯ ಘೋರ್ಪಡೆ ನಿಧನ

ಸಂಡೂರು: ಇಲ್ಲಿನ ಬಿಜೆಪಿ ಹಿರಿಯ ಮುಖಂಡ, ಸಂಡೂರು ಘೋರ್ಪಡೆ ರಾಜವಂಶಸ್ಥರಾದ ಕಾರ್ತಿಕೇಯ ಮುರಾರಿರಾವ್ ಘೋರ್ಪಡೆ(66) ಅವರು ಮಂಗಳವಾರ ಬೆಳಗ್ಗೆ ನಿಧನರಾದರು.



ಮೃತರಿಗೆ ಪತ್ನಿ ಸೇರಿದಂತೆ ಇಬ್ಬರು ಪುತ್ರಿಯರಿದ್ದು, ಅನೇಕ ಬಂಧು ಬಳಗವನ್ನು ಅಗಲಿದ್ದಾರೆ. ಇಡೀ ರಾಜ್ಯದ ಗಮನ ಸೆಳೆದ ಮಾಜಿ ಸಚಿವ ಸಂಡೂರಿನ ಮಹಾರಾಜ ಎಂ.ವೈ.ಘೋರ್ಪಡೆ ಅವರ 3ನೇ ಮಗ ಇವರಾಗಿದ್ದಾರೆ. ನಿಧನರಾದ ಸುದ್ದಿ ತಿಳಿಯುತ್ತಿದ್ದಂತೆಅಂತಿಮ ದರ್ಶನ ಪಡೆಯಲು ಅಭಿಮಾನಿಗಳು, ಬೆಂಬಲಿಗರು, ಬಿಜೆಪಿ ಕಾರ್ಯಕರ್ತರು ತಂಡೋಪತಂಡವಾಗಿ ಆಗಮಿಸಿದರು. ಜಿಲ್ಲೆ ಹಾಗೂ ರಾಜ್ಯ ರಾಜಕಾರಣದಲ್ಲಿ ಹೆಸರು ಮಾಡಿದ್ದರು. ಬಿಜೆಪಿ ಪ್ರಭಾವಿ ನಾಯಕರಾಗಿ ಹೊರಹೊಮ್ಮಿದ್ದು, ವಿವಿಧ ಚುನಾವಣೆಗಳನ್ನು ಸಮರ್ಥವಾಗಿ ಎದುರಿಸಿದ್ದರು. ಸದಾ ಜನರೊಂದಿಗೆ ಬೆರೆತು ಬದುಕಿದ ನಾಯಕ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ರಾಜಮನೆತನದ ಹಿನ್ನೆಲೆ ಇದ್ದರೂ ಎಲ್ಲರೊಂದಿಗೆ ಬೆರೆತು ಬಡವರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುತ್ತಿದ್ದರು. ಶೇಷವಾಗಿ ಸಂಡೂರಿನ ಜನರೆಂದರೆ ಅವರಿಗೆ ಪಂಚ ಪ್ರಾಣ, ತವರೂರಿನ ಜನರಿಗಾಗಿ, ನಿತ್ಯ ಶ್ರಮಿಸುತ್ತಿದ್ದರು. ಇದರೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನೇ ಮಾಡಿಸಿದ್ದರು. ಸಂಡೂರಿನ ಕ್ಷೇತ್ರಕ್ಕೆ ಅವರ ಕೊಡುಗೆ ಸಾಕಷ್ಟಿದೆ ಎಂದು ಅಭಿಮಾನಿಗಳು, ಬೆಂಬಲಿಗರು, ಕಾರ್ಯಕರ್ತರು ಕಣ್ಣೀರಿಟ್ಟರು. ಗಣ್ಯರ ಕಂಬನಿ: ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ, ನಗರ ಕ್ಷೇತ್ರದ ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ, ಎಮ್ಮೆಲ್ಸಿ ವೈ.ಎಂ.ಸತೀಶ್, ಮಾಜಿ ಸಚಿವ ಬಿ.ಶ್ರೀರಾಮುಲು, ಮಾಜಿ ಸಂಸದ ಸಣ್ಣ ಫಕೀರಪ್ಪ, ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಜಿ.ಟಿ.ಪಂಪಾಪತಿ, ಮಾಜಿ ಶಾಸಕರಾದ ಎಂ.ಎಸ್.ಸೋಮಲಿಂಗಪ್ಪ, ಟಿ.ಎಚ್.ಸುರೇಶ್ ಬಾಬು ಸೇರಿದಂತೆ ಸಂಡೂರಿನ ಕಾರ್ತಿಕ್ ಕಾಳೆ, ಸಂಡೂರು ರಮೇಶ್ ಅನೇಕ ಗಣ್ಯರು, ಸ್ಮಯರ್ ಉಕ್ಕು ಕಾರ್ಖಾನೆ ಎಲ್ಲ ಸಿಬ್ಬಂದಿ, ಶಿಕ್ಷಣ ಸಂಸ್ಥೆಯ ಎಲ್ಲ ಸಿಬ್ಬಂದಿಗಳು, ಸಂತಾಪ ಸೂಚಿಸಿದ್ದಾರೆ.

ಪಿ.ಕಿ.ಎಸ್.ಸಿ. ನಂ. 03/2026
ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಅಥಣಿ ಸ್ಥಳ : ಅಥಣಿ.
ಶ್ರೀಮತಿ ಶೋಭಾ ಕೊಂ. ಸದಾಶಿವ ನಿಡೋಣಿ .....ಅರ್ಜಿದಾರಳು
ವಿರುದ್ಧ
1. ಶ್ರೀಮತಿ, ಮಂಗಲ ತನ್ನನ್ನು ತಾನು ಕೊಂ. ಸದಾಶಿವ ನಿಡೋಣಿ ಮತ್ತು ಇತರರು .....ಎದುರುದಾರರು
ಜಾಹೀರಾತು
ಅರ್ಜಿದಾರಳು ಭಾರತೀಯ ಉತ್ತರಾಧಿಕಾರ ಅಧಿನಿಯಮ 1925ರ ಕಲಂ 276ರ ಅನ್ವಯ, ಅರ್ಜಿದಾರಳ ಗಂಡನಾದ ಮೃತ ಶ್ರೀ ಸದಾಶಿವ ಸಂತಪ್ಪಾ @ ಸಂತ್ರಾಮ ನಿಡೋಣಿ ಇವರು ದಿನಾಂಕ : 27-10-2023 ರಂದು ಅನ್ನಪೂರ್ಣ ಮಲ್ಟಿ ಸ್ಪೇಶಾಲಿಟಿ ಆಸ್ಪತ್ರೆ ಅಥಣಿಯಲ್ಲಿ ಮೃತ ಆಗಿರುತ್ತಾನೆ. ಸದರಿಯವನಿಗೆ ಅರ್ಜಿದಾರಳು ಮಾತ್ರ ವಾರಸುದಾರು ಇರುತ್ತಾಳೆ ಅಂತಾ ಉತ್ತರ ಜೀವಿತ ಪ್ರಮಾಣ ಪತ್ರ ಪಡೆದುಕೊಳ್ಳು ಸಲುವಾಗಿ, ನ್ಯಾಯಾಲಯಕ್ಕೆ ಉತ್ತರಾಧಿಕಾರ ಪ್ರಮಾಣ ಪತ್ರ (ಸಕ್ಸೇಶನ ಸರ್ಟಿಫಿಕೆಟ್) ಕೊಡುವ ಕುರಿತು. ಅರ್ಜಿಯನ್ನು ಮಾಡಿದ್ದು ಇರುತ್ತದೆ. ಸದರಿ ಪ್ರಕರಣವು ದಿನಾಂಕ : 14-7-2026 ರಂದು ನಿಗದಿಪಟ್ಟಿದ್ದು, ಇದಕ್ಕೆ ಯಾರದಾದರೂ ತಕರಾರು ವ ಹಿತಾಸಕ್ತಿ ಇದ್ದಲ್ಲಿ ಮುಂಜಾನೆ 11-00 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ವ ವಕೀಲರ ಮುಖಾಂತರ ಹಾಜರಾಗಿ ತಕರಾರುಗಳನ್ನು ಸಲ್ಲಿಸಬೇಕು. ತಪ್ಪಿದಲ್ಲಿ ಸದರ ಅರ್ಜಿಯನ್ನು ಏಕ ಪಕ್ಷೀಯವಾಗಿ ತಿರ್ಮಾನಿಸಲಾಗುವುದು. ಈ ದಿವಸ ದಿನಾಂಕ : 08/06/2026 ರಂದು ನ್ಯಾಯಾಲಯದ ಮೊಹರು ಮತ್ತು ಸಹಿ ಮಾಡಿ ಕೊಡಲಾಯಿತು.
ಸ್ಥಳ : ಅಥಣಿ
ದಿನಾಂಕ : 8-6-2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು,
ನ್ಯಾಯಾಲಯ ಪ್ರಧಾನ ಹಿರಿಯ ನ್ಯಾಯಾಧೀಶರ ನ್ಯಾಯಾಲಯ ಅಥಣಿ
ಸಹಿ/- ಶ್ರೀ ಆರ್. ಪಿ. ಪೂಜಾರಿ
ನ್ಯಾಯವಾದಿಗಳು, ಅಥಣಿ

BEFORE THE MOTOR ACCIDENT CLAIMS TRIBUNAL AT BENAGALURE (SCCH-18)
M.V.C. No:432/2026
BETWEEEN: SRI. HEMANTH KUMAR S.R ...PETITIONER
AND: SRI. GUDALA ADIBASAVANNA AND ANOTHER ...RESPONDENTS
NOTICE TO RESPONDENT NO.1
SRI. GUDALA ADIBASAVANNA, S/o. Sri. G. Srinivas, Major in Age, R/at: Ward No.11, C B S Nagara, Karatagi Taluk, Koppal District- 583 229. (RC Owner of Motorcycle bearing Reg.No.KA-37-ER-1754)
WHEREAS, The petitioner has instituted the above case against the Respondent No.1 & 2, claiming compensation of Rs,30,00,000/-(Rupees Thirty Lakhs Only) for the injuries occurred in a Road Traffic Accident, which took place on 13-01-2026 at around 03:45 to 3:50 PM, Near Railway Bridge Down Ramp, New BEL Road, Bengaluru, involved Himalaya Motorcycle bearing Reg. No.KA-37-ER-1754, which is belongs to you and you made party to the proceedings as Respondent No.1. You are hereby summoned to appear this Hon'ble court in person or through advocate on 13/07/2026 at 11.00 AM, before Small Cause Court Hall No.18, Bengaluru, failing which the case will be disposed off Ex-parte.
Given under my Hand and Seal of the court on this 08/06/2026
By order of the Court, Assistant Registrar, Court of Small Causes, Bengaluru
KN Channappa Gowda, Advocate
No.118/8, 1st Floor, Varalakshmi Bhavan, Near BMTC Bus Stop, Kurubarahalli, Bangalore- 560 086

IN THE COURT OF THE J.M.F.C. NARGUND
Cr.misc.No.164/2026
Petitioner:Smt. Rajeshwari W/o AnandappaMullur
V/S
Respondent :The Registrar Birth and Death The Tahashildar Nargund.
PUBLIC NOTICE
Hereby issued notice to public at large that, The petitioner in above case have filed above case for seek ing order against respondent to regis ter inrespect of death of Megundapp a S/o Rachappa Gundlur who is died on 18-10-1993.
That, the above said case is post ed on 23-07-2026 as such any persons interested or having any claim or objections shall app ear in person or through pleader duly engaged, if fail to so, this Hon'ble Court will proceed the case in your absence and passe d appropriate orders if any in interest of justice.
Nargund
Date:9/06/2026
By order of Hon'ble Court
Sd/-Sheristedar,Civil Judge Nargund and J.M.F.C.Nargund
Sd\- Advocate for Petitioner
(K.S.Hooli) Advocate Nargund

ಸಾರ್ವಜನಿಕ ನೋಟೀಸು

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವ ದೇನೆಂದರೆ,
ಧಾರವಾಡ ಜಿಲ್ಲಾ ಕಲಘಟಗಿ ತಾಲೂಕಿನ ಹುಲ್ಲಂಬಿ ಗ್ರಾಮದ ರಿ.ಸ.ನಂ. 10* ವಿಸ್ತೀರ್ಣ 03 ಎಕರೆ 35 ಗುಂಟೆ ಈ ಜಮೀನನ್ನು ಇದರ ಮಾಲಿಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ಇವರಿಂದ ಖರೀದಿಸುವ ಕುರಿತು ನಾವು ಮಾತುಕತೆ ಮುಗಿಸಿಕೊಂಡಿದ್ದು, ಕಾರಣ ಯಾರಿಗಾದರೂ ಈ ವ್ಯವಹಾರದ ಕುರಿತು ಅಥವಾ ಈ ಹೊಲದ ಕುರಿತು ಯಾವುದೇ ಹಕ್ಕು, ಹಿತಾಸಕ್ತಿ, ಆಕ್ಷೇಪಣೆಗಳು ಇದ್ದಲ್ಲಿ ದಾಖಲೆ ಸಮೇತ ಅವನ್ನು ಇಂದಿನಿಂದ 07 ದಿನದೊಳಗಾಗಿ ಈ ಕೆಳಕಾಣಿಸಿದ ವಿಳಾಸಕ್ಕೆ ತಿಳಿಸತಕ್ಕದ್ದು, ಅವಧಿಯ ನಂತರ ನಾವು ಸದರ ಹೊಲದ ಖರೀದಿ ಮಾಡಿಕೊಳ್ಳುವವರಿದ್ದು ನಂತರದ ಆಕ್ಷೇಪಣೆಗಳು ನಮಗೆ ಬಂಧನಕಾರಿ ಯಾಗುವುದಿಲ್ಲ ತಿಳಿಯಿರಿ.
ಕೃಷ್ಣಾ ಹೆಚ್. ಹೆಗಡೆ, ವಕೀಲರು,
ಹುಬ್ಬಳ್ಳಿ ನಂ. 12/ಎಫ್‌ಎಫ್/ಸಿ-ಬ್ಲಾಕ, ರೇವಣಕರ ಕಾಂಪ್ಲೆಕ್ಸ್, ಹುಬ್ಬಳ್ಳಿ, ಮೊ : 9448326823
09-06-2026

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ
ನಂ.ಕಾ.ನಿ.ಅ/ಗ್ರಾ.ಕು.ನೀ&ನೈ/ಬೆಳಗಾವಿ/ಪಿಬಿ-2/ಕು.ನೀ.ಸ.ಯೋ/ಕೆಡಬ್ಲ್ಯು-3/ ಟೆಂಡರ್-2/2026-27/389 ದಿ:08-06-2026

ಇ-ಪ್ರೊಕ್ಯೂರಮೆಂಟ್‌ರೀತ್ಯಾ ಏಕಲಕೋಟೆ &ದ್ವಿ-ಲಕೋಟೆ ಮಾದರಿಯ ಹೊಸ ಟೆಂಡರ್ ಪ್ರಕಟಣೆ ಸಂಖ್ಯೆ :2/2026-27

ಈ ಕೆಳಕಂಡ ಹೊಸ ಕಾಮಗಾರಿಗಳು Standard Tender Document KW-1,2&3 ರ ನಿಬಂಧನೆಗೊಳಪಟ್ಟಂತೆ ಏಕಲಕೋಟೆ & ದ್ವಿ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀಆಧಾರದ ಮೇಲೆ ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರಿನಲ್ಲಿ ಇ-ಪ್ರೊಕ್ಯೂರಮೆಂಟ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಟೆಂಡರ ತೆರೆಯುವ ದಿನಾಂಕಗಳು ಈ ಕೆಳಗಿನಂತಿದೆ.
ಅನುಸೂಚಿತ ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:-, ಅನುಸೂಚಿತ ಪರಿಶಿಷ್ಟ ಜಾತಿಗೆ ಮೀಸಲಿಟ್ಟ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:-, ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:9773 Call-3, 9816/CALL-5, 9782/CALL-6. CAT-II(A), ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:-, CAT-I ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:-
1)ಇ-ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:17-06-2026 ಸಾಯಂಕಾಲ 17:00 ಘಂಟೆವರೆಗೆ 2)ಇ-ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:18-06-2026 ಸಾಯಂಕಾಲ 17:30 ಘಂಟೆ ನಂತರ 3)ಭರ್ತಿ ಮಾಡಿದ ಇ-ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ:ತಾಂತ್ರಿಕ ಬಿಡ್ ಅನುಮೋದಿಸಿದ ನಂತರ, ಕಾಮಗಾರಿ ಮುಕ್ತಾಯಗೊಳಿಸಬೇಕಾದ ಅವಧಿಯು ಮಳೆಗಾಲವನ್ನು ಒಳಗೊಂಡಿರುತ್ತದೆ.
ಸೂಚನೆ:-ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.
ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ. ಕು. ನೀ. & ನೈ. ವಿಭಾಗ, ಬೆಳಗಾವಿ.
DIPR/BGM/RO-NO-393/KSMCA/2026-27

ಪಿ. & ಎಸ್. ಸಿ. ನಂ. 13/2026
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾವೇರಿ, ಇವರ ನ್ಯಾಯಾಲಯದಲ್ಲಿ,
ಅರ್ಜಿದಾರ:ಚನ್ನವೀರಗೌಡ ತಂದೆ ಯಲ್ಲಪ್ಪಗೌಡ ಎಗನಗೌಡ್ರ ಸಾ:ಚಿಕ್ಕಮಲ್ಲೂರ, ತಾ: ಶಿಗ್ಗಾಂವ ಇವರ ಅಲ್ಪವಹಿ ಸಂರಕ್ಷಣಾಧಾರಳು ಆತನ ತಾಯಿಶ್ರೀಮತಿ, ನೇತ್ರಾ ಕೋಂ. ಯಲ್ಲಪ್ಪಗೌಡ ಎಗನಗೌಡ,ಸಾ: ಚಿಕ್ಕಮಲ್ಲೂರ, ತಾ॥ ಶಿಗ್ಗಾಂವ,
ವಿರುದ್ಧ
ಎದುರುದಾರರು: ಯಾರು ಇರುವುದಿಲ್ಲಾ.
ಇಸ್ತಿಹಾರ
ಮೇಲ್ಕಾಣಿಸಿದ ಅರ್ಜಿದಾರನು ಮಾನ್ಯ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಹಾವೇರಿ ಇವರ ನ್ಯಾಯಾಲಯದಲ್ಲಿ, ಹಾವೇರಿ, ತಾಲೂಕ ಕಬ್ಬೂರ ಗ್ರಾಮದ ಒಬ್ಬ ಶ್ರೀಮತಿ ಹಿರಿಯವ್ವ ಕೋಂ, ನಿಂಗಯ್ಯಾ ಮತ್ತಿಹಳ್ಳಿ ಇವರು ಕಬ್ಬೂರ ಗ್ರಾಮದ ರಿ.ಸ.ನಂ. 121/1+2+3+5+6/ಎ+ಬಿ/1 ಕ್ಷೇತ್ರ 05 ಎಕರೆ 34 ಗುಂಟೆ ಪೈಕಿ 01 ಎಕರೆ 37ಗುಂಟೆ, ಆಸ್ತಿಯು ತನ್ನ ಮರಣದ ನಂತರ ಅರ್ಜಿದಾರನಿಗೆ ಸೇರಬೇಕು ಅಂತಾ ಮೃತ್ಯುಪತ್ರ ಬರೆಯಿಸಿ ದಿನಾಂಕ: 24-05-2022 ರಂದು ನೋಂದಾಯಿಸಿ ಕೊಟ್ಟದ್ದರ ಮೇಲಿಂದ ಪ್ರೋಬೇಟ್ ಪಡೆಯುವ ಕುರಿತು ಮೇಲ್ಕಾಣಿಸಿದ ಪ್ರಕರಣವನ್ನು ದಾಖಲಿಸಿರುತ್ತಾನೆ.
ಆ ಕಾರಣ ಸದರಿ ಪ್ರಕರಣದ ಬಗ್ಗೆ ಈ ನೋಟೀಸನ್ನು ಈ ದಿನಪತ್ರಿಕೆಯ ಮುಖಾಂತರ ಪ್ರಕಟಿಸಿದ್ದು, ಮೇಲ್ಕಾಣಿಸಿದ ಅರ್ಜಿದಾರನ ಪರವಾಗಿ ಪ್ರೋಬೇಟ್ ನೀಡಲು ಯಾರದಾದರು ತಕರಾರು, ಹಕ್ಕು, ಹಿತಾಸಕ್ತಿ, ಸಂಬಂಧ, ವಗೈರೆ ಇದ್ದಲ್ಲಿ ಅಂತಹವರು ದಿನಾಂಕ: 09-07-2026 ರಂದು ಖುದ್ದಾಗಿ ಆಗಲಿ ಅಥವಾ ತಮ್ಮಿಂದ ಅಧಿಕಾರ ಪಡೆದಂತಹ ನ್ಯಾಯವಾದಿಗಳ ಮುಖಾಂತರವಾಗಲಿ ಆ ದಿವಸ ಮುಂಜಾನೆ 11-00 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರ ಇರತಕ್ಕದ್ದು, ಒಂದು ವೇಳೆ ಹಾಜರಾಗದೇ ಇದ್ದಲ್ಲಿ ಪ್ರಕರಣವನ್ನು ಏಕತರ್ಫಿಯಿಂದ ನಿರ್ಧರಿಸಲಾಗುವದು.
ಸ್ಥಳ: ಹಾವೇರಿ
ದಿನಾಂಕ :6-06-2026
ಸಹಿ/-ಮುಖ್ಯ ಆಡಳಿತಧಿಕಾರಿಗಳು ಹಾವೇರಿ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-(ಸಿ. ಎಚ್. ಗುಡಗೂರ)
ಅರ್ಜಿದಾರನ ಪರ ವಕೀಲರು.

ಪಿ.&ಎಸ್.ಸಿ. ನಂ.14/2026
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾವೇರಿ, ಇವರ ನ್ಯಾಯಾಲಯದಲ್ಲಿ,
ಅರ್ಜಿದಾರ: ಪುಟ್ಟಯ್ಯಾ ತಂದೆ ಗುರುಪಾದಯ್ಯಾ ಮತ್ತಿಹಳ್ಳಿ,ಸಾ॥ ಕಬ್ಬೂರ, ತಾ॥ ಹಾವೇರಿ.
ವಿರುದ್ಧ
ಎದುರುದಾರರು:ಯಾರು ಇರುವುದಿಲ್ಲಾ.
ಇಸ್ತಿಹಾರ
ಮೇಲ್ಕಾಣಿಸಿದ ಅರ್ಜಿದಾರನು ಮಾನ್ಯ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಹಾವೇರಿ ಇವರ ನ್ಯಾಯಾಲಯದಲ್ಲಿ, ಹಾವೇರಿ ತಾಲೂಕ ಕಬ್ಬೂರ ಗ್ರಾಮದ ಒಬ್ಬ ಶ್ರೀಮತಿ ಹಿರಿಯವ್ವ ಕೋಂ. ನಿಂಗಯ್ಯಾ ಮತ್ತಿಹಳ್ಳಿ ಇವರು ಕಬ್ಬೂರ ಗ್ರಾಮದ ರಿ.ಸ.ನಂ.120/1ಕ ಕ್ಷೇತ್ರ 02 ಎಕರೆ 24 ಗುಂಟೆ , ರಿ.ಸ. ನಂ.121/1+2+3+5+6ಸಿ/2 ಕ್ಷೇತ್ರ 01 ಎಕರೆ 23 ಗುಂಟೆ, ರಿ.ಸ.ನಂ. 121/1+2+3+5+6ಸಿ/3 ಕ್ಷೇತ್ರ 04-00 ಗುಂಟೆ ಮತ್ತು ರಿ. ಸ. ನಂ. 121/1+2+3+5+6ಸಿ/1 ಕ್ಷೇತ್ರ 26-00ಗುಂಟೆ ಆಸ್ತಿಗಳು ತನ್ನ ಮರಣದ ನಂತರ ಅರ್ಜಿ ದಾರನಿಗೆ ಸೇರಬೇಕು ಅಂತಾ ಮೃತ್ಯುಪತ್ರ ಬರೆ ಯಿಸಿ ದಿನಾಂಕ: 24-05-2022 ರಂದು ನೋಂದಾಯಿಸಿ ಕೊಟ್ಟದ್ದರ ಮೇಲಿಂದ ಪ್ರೋಬೇಟ್ ಪಡೆಯುವ ಕುರಿತು ಮೇಲ್ಕಾಣಿಸಿದ ಪ್ರಕರಣವನ್ನು ದಾಖಲಿಸಿರುತ್ತಾನೆ.
ಆ ಕಾರಣ ಸದರಿ ಪ್ರಕರಣದ ಬಗ್ಗೆ ಈ ನೊಟೀಸನ್ನು ಈ ದಿನಪತ್ರಿಕೆಯ ಮುಖಾಂತರ ಪ್ರಕಟಿಸಿದ್ದು, ಮೇಲ್ಕಾಣಿಸಿದ ಅರ್ಜಿದಾರನ ಪರವಾಗಿ ಪ್ರೋಬೇಟ್ ನೀಡಲು ಯಾರದಾದರು ತಕರಾರು, ಹಕ್ಕು, ಹಿತಾಸಕ್ತಿ, ಸಂಬಂಧ, ವಗೈರೆ ಇದ್ದಲ್ಲಿ ಅಂತಹವರು ದಿನಾಂಕ: 09-07-2026 ರಂದು ಖುದ್ದಾಗಿ ಆಗಲಿ ಅಥವಾ ತಮ್ಮಿಂದ ಅಧಿಕಾರ ಪಡೆದಂತಹ ನ್ಯಾಯವಾದಿಗಳ ಮುಖಾಂತರವಾಗಲಿ ಆ ದಿವಸ ಮುಂಜಾನೆ 11-00ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರ ಇರತಕ್ಕದ್ದು, ಒಂದು ವೇಳೆ ಹಾಜರಾಗದೇ ಇದ್ದಲ್ಲಿ ಪ್ರಕರಣವನ್ನು ಏಕತರ್ಫಿಯಿಂದ ನಿರ್ಧರಿಸಲಾಗುವದು.
ಸ್ಥಳ: ಹಾವೇರಿ
ದಿನಾಂಕ : 06-06-2026
ಸಹಿ/-ಮುಖ್ಯ ಆಡಳಿತಧಿಕಾರಿಗಳು ಹಾವೇರಿ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-(ಸಿ. ಎಚ್. ಗುಡಗೂರ)
ಅರ್ಜಿದಾರನ ಪರ ವಕೀಲರು.

ಮಾನ್ಯ ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಮುಧೋಳ ಇವರ ನ್ಯಾಯಾಲಯದಲ್ಲಿ..
ಅಪರಾಧಿಕ ಸಂಕೀರ್ಣ ಸಂಖ್ಯೆ 155/2026
1.ಬಸಪ್ಪ ತಂದೆ. ಮುತ್ತಪ್ಪ ಹೊಳೆಪ್ಪನವರ, ವಯಾ: 49ವರ್ಷ, ಉದ್ಯೋಗ:ಒಕ್ಕಲುತನವ ಖಾಸಗಿ ನೌಕರಿ,
2.ಲಕ್ಷ್ಮಣ ತಂದೆ. ಮುತ್ತಪ್ಪ ಹೊಳೆಪ್ಪನವರ, ವಯಾ: 46 ವರ್ಷ,ಉದ್ಯೋಗ:ಸೈನಿಕ ಸೇವೆ,
3.ಶ್ರೀಮತಿ.ಯಲ್ಲವ್ವ ಗಂಡ. ಗೋವಿಂದ ಸತ್ತಿಗೇರಿ, ವಯಾ:41 ವರ್ಷ, ಉದ್ಯೋಗ: ಸೈನಿಕ ಸೇವೆ.
ಮೂವರೂ ಸಾಕಿನ:ಗುಲಗಾಲಜಂಬಗಿ-587313, ತಾ: ಮುಧೋಳ, ಜಿ:ಬಾಗಲಕೋಟೆ.- .....ಅರ್ಜಿದಾರರು.
ವಿರುದ್ಧ:
1.ತಹಸೀಲ್ದಾರ, ಮುಧೋಳ, ಜಿ: ಬಾಗಲಕೋಟೆ.
2.ಗ್ರಾಮ ಆಡಳಿತಾಧಿಕಾರಿಗಳು,ಗುಲಗಾಲಜಂಬಗಿ, ತಾ:: ಮುಧೋಳ,ಜಿ:: ಬಾಗಲಕೋಟೆ. - ....ಎದುರುದಾರರು.
ಜಾಹಿರನಾಮೆ
ಪ್ರಸ್ತುತ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರರ ತಾಯಿಯಾದ-ಶ್ರೀಮತಿ. ಪದ್ಮವ್ವ ಗಂಡ. ಮುತ್ತಪ್ಪ ಹೊಳೆಪ್ಪನವರ,ಇವಳು ದಿನಾಂಕ: 05-07-2000ರಂದು ಮುಧೋಳ ತಾಲೂಕಿನ ಗುಲಗಾಲಜಂಬಗಿ ಗ್ರಾಮದಲ್ಲಿ ಮರಣ ಹೊಂದಿದ್ದು, ಆ ಬಗ್ಗೆ ಎದುರುದಾರರು ತಮ್ಮ ಕಾರ್ಯಾಲಯದ ಮರಣ ರಜಿಸ್ಟರದಲ್ಲಿ ದಾಖಲ ಮಾಡಿಕೊಳ್ಳಬೇಕೆಂದು ಆದೇಶ ಕೋರಿ ಈ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಇರುತ್ತದೆ.
ಕಾರಣ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಪ್ರಸ್ತುತ ಕೇಸಿನಲ್ಲಿ ಯಾರದಾದರೂ ಹಕ್ಕು ವ ಹಿತಾಸಕ್ತಿ ಇದ್ದಲ್ಲಿ ಪ್ರಸ್ತುತ ಕೇಸಿನಲ್ಲಿ ದಿನಾಂಕ:10-07-2026ರಂದು ಮುಂಜಾನೆ 10-30ಘಂಟೆಗೆ ನ್ಯಾಯಾಲಯದಲ್ಲಿ ಹಾಜರ ಇದ್ದು, ತಮ್ಮ ತಕರಾರ ವಗೈರೆ ಸಲ್ಲಿಸಬಹುದು. ಒಂದು ವೇಳೆ ಯಾವುದೇ ತಕರಾರ ಬಾರದಿದ್ದಲ್ಲಿ ಅರ್ಜಿದಾರರ ಮಾಂಗಣಿ ಪ್ರಕಾರ ಆದೇಶ ಮಾಡಲಾಗುವುದು ತಿಳಿಯಿರಿ ಅಂತಾ ಕೊಟ್ಟ ಜಾಹೀರನಾಮೆ.
ಮುಧೋಳ
ತಾ::05/06/2026
ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/-ಶಿರಸ್ತೆದಾರರು
ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಮುಧೋಳ ಇವರ ನ್ಯಾಯಾಲಯ
ಸಹಿ/-(ಬಿ.ಬಿ.ಬಟಕುರ್ಕಿ)
ಅರ್ಜಿದಾರರ ಪರ ವಕೀಲರು

ಕ್ರಿಮಿನಲ್ ಮಿಸಲೇನಿಯಸ ಸಂ:91/2025
ಕಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ಶಿಗ್ಗಾಂವ ಇವರ ನ್ಯಾಯಾಲಯಕ್ಕೆ
ಅರ್ಜಿದಾರರು :ಶ್ರೀ ಮಂಜುನಾಥ ತಂದೆ ಗಣಪತೆಪ್ಪ ಕೊಲ್ಲಾಪೂರ
ವಿರುದ್ಧ
ಎದುರುಗಾರರು: ಉಪ-ತಹಶೀಲ್ದಾರ ನಾಡ ಕಚೇರಿ ಜನನ-ಮರಣ ನೋಂದಣಾಧಿಕಾರಿಗಳು ಬಂಕಾಪೂರ ತಾ॥ ಶಿಗ್ಗಾಂವ ಜಿ॥ ಹಾವೇರಿ
ಪತ್ರಿಕಾ ಪ್ರಕಟಣೆ
ಇವರಲ್ಲಿ ಅರ್ಜಿದಾರನ ಕುಟುಂಬದ ಸದಸ್ಯನಾದ (ಅಜ್ಜನಾದ) ಶ್ರೀ ಗಂಗಣ್ಣ ತಂದೆ ರಾಣಪ್ಪ ಕೊಲ್ಲಾಪೂರ ಸಾ॥ ಬಂಕಾಪೂರ ತಾ॥ ಶಿಗ್ಗಾಂವ ಜಿ॥ ಹಾವೇರಿ ಇವರು ದಿನಾಂಕ:12-03-1974 ಇಸ್ವಿ ಯಂದು ಶಿಗ್ಗಾಂವ ತಾಲೂಕ ಬಂಕಾಪೂರ ಗ್ರಾಮದಲ್ಲಿ ಮರಣಹೊಂದಿರುತ್ತಾರೆ.
ಸದರಿ ಮೋತಿಗೆ ಅರ್ಜಿದಾರ ವಾರಸುದಾರನು ಇದ್ದು, ಅರ್ಜಿದಾರನಿಗೆ ಈಗ ವಾರಸಾ ಪ್ರಮಾಣ ಪತ್ರ ಪಡೆಯಲು ಮತ್ತು ಸರಕಾರಿ ಸೌಲಭ್ಯ ಪಡೆಯುವ ಸಲುವಾಗಿ ಈ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು, ದಿನಾಂಕ:09-07 -2026 ರಂದು ಮುದ್ದತ್ತು ನೇಮಿಸಿದ್ದು ಇದ್ದು, ವ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾ ದರೂ ಆಸಕ್ತಿಯುಳ್ಳವರೂ ಮೇಲಿನ ದಿನಾಂಕ ದಂದು ಈ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.
ನ್ಯಾಯಾಲಯದ ಆದೇಶ ಹಾಗೂ ಮೊಹರನೊಂದಿಗೆ ಹೊರಡಿಸಲಾಗಿತು.
ಶಿಗ್ಗಾಂವ
ದಿನಾಂಕ:06-06-2026
ಸಹಿ\-ಶಿರಸ್ತೇದಾರ
ಕಿರಿಯ ದಿವಾಣಿ ನ್ಯಾಯಾಧೀಶರು ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ
ಸಹಿ/- ಶ್ರೀ ಎಸ್.ವ್ಹಿ.ಕಟ್ಟಿ ಶಿಗ್ಗಾಂವ
ಅರ್ಜಿದಾರರ ಪರ ವಕೀಲರು,

ಕಿರುಸುದ್ದಿ

ಇರಾನ್ ಅಭಿಮಾನಿಗಳಿಗಿಲ್ಲ ಫಿಫಾ ನೋಡುವ ಭಾಗ್ಯ

ಹೊಸದಿಲ್ಲಿ: ವಿಶ್ವಕಪ್ ಆರಂಭವಾಗುವ ಕೆಲವೇ ದಿನಗಳ ಮೊದಲು ಇರಾನಿ ಅಭಿಮಾನಿಗಳ ಟಿಕೆಟ್ ಹಂಚಿಕೆಯನ್ನು ರದ್ದುಗೊಳಿಸಲಾಗಿದೆ ಎಂದು ಇರಾನ್ ಫುಟ್‌ಬಾಲ್ ಫೆಡರೇಶನ್ ಮಂಗಳವಾರ ತಿಳಿಸಿದೆ. ಇದರಿಂದಾಗಿ ಈಗಾಗಲೇ ಪ್ರಯಾಣ ಯೋಜನೆಗಳನ್ನು ಮಾಡಿಕೊಂಡಿದ್ದ ಬೆಂಬಲಿಗರು ತಮ್ಮ ತಂಡದ ಪಂದ್ಯಗಳಿಗೆ ಹಾಜರಾಗಲು ಸಾಧ್ಯವಾಗಲಿಲ್ಲ.ವಿಶ್ವಕಪ್ ಶುಕ್ರವಾರ ಆರಂಭವಾಗಲಿದ್ದು, ಇರಾನ್ ತನ್ನ ಮೊದಲ ಎರಡು ಗ್ರೂಪ್ ಜಿ ಪಂದ್ಯಗಳನ್ನು ಲಾಸ್ ಏಂಜಲೀಸ್‌ನಲ್ಲಿ ಜೂನ್ 15 ರಂದು ನ್ಯೂಜಿಲೆಂಡ್ ವಿರುದ್ಧ ಮತ್ತು ಜೂನ್ 21 ರಂದು ಬೆಲ್ಜಿಯಂ ವಿರುದ್ಧ ಆಡಲಿದೆ ಮತ್ತು ನಂತರ ಜೂನ್ 26 ರಂದು ಸಿಯಾಟಲ್‌ನಲ್ಲಿ ಈಜಿಪ್ಟ್ ವಿರುದ್ಧ ಆಡಲಿದೆ.ಇರಾನ್ ಫೆಡರೇಶನ್ ಪಂದ್ಯಗಳಿಗೆ ಟಿಕೆಟ್ ಮಾರಾಟ ಪ್ರಕ್ರಿಯೆಯನ್ನು ಈಗಾಗಲೇ ಪ್ರಾರಂಭಿಸಿದೆ, ಆದರೆ ಇನ್ನು ಮುಂದೆ ಅಭಿಮಾನಿಗಳಿಗೆ ಅವುಗಳನ್ನು ಒದಗಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ಅಧಿಕೃತವಾಗಿ ಘೋಷಿಸಲಾದ ಪ್ರಕ್ರಿಯೆಯನ್ನು ಅವಲಂಬಿಸಿ, ಅನೇಕ ಇರಾನಿನ ಫುಟ್‌ಬಾಲ್ ಅಭಿಮಾನಿಗಳು ಪಂದ್ಯಗಳಿಗೆ ಹಾಜರಾಗಲು ಅಗತ್ಯ ಯೋಜನೆಗಳನ್ನು ಈಗಾಗಲೇ ಮಾಡಿಕೊಂಡಿದ್ದರೂ ಸಹ ಇದು ಸಂಭವಿಸಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಹರಿಹರನ್-ಅರ್ಜುನ್ ಶುಭಾರಂಭ

ಸಿಡ್ನಿ(ಆಸ್ಟ್ರೇಲಿಯಾ): ಮಂಗಳವಾರ ಸಿಡ್ನಿಯಲ್ಲಿ ನಡೆದ 32ನೇ ಸುತ್ತಿನ ಪಂದ್ಯದಲ್ಲಿ ಅಮೆರಿಕದ ಜೋಡಿಯಾದ ಆರ್ಡೆನ್ ಕ್ವಾನ್ ಲೀ ಮತ್ತು ಸ್ಟಾನ್ಲಿ ಕ್ಲಿಂಗ್ ಅವರನ್ನು ಸೋಲಿಸಿ, ಆಸ್ಟ್ರೇಲಿಯನ್ ಓಪನ್‌ನಲ್ಲಿ ಭಾರತದ ಪುರುಷರ ಡಬಲ್ಸ್ ಜೋಡಿ ಹರಿಹರನ್ ಅಂಶಕರುಣನ್ ಮತ್ತು ಎಂ.ಆರ್. ಅರ್ಜುನ್ ಎರಡನೇ ಸುತ್ತಿಗೆ ಪ್ರವೇಶಿಸಿದರು. ಬಿಡಬ್ಲ್ಯುಎಫ್ ಸರ್ಕ್ಯೂಟ್‌ನಲ್ಲಿ ಉನ್ನತ ಶ್ರೇಯಾಂಕ ಹೊಂದಿರುವ ಭಾರತೀಯ ಜೋಡಿ, ಇತ್ತೀಚೆಗೆ ಮುಕ್ತಾಯಗೊಂಡ ಇಂಡೋನೇಷ್ಯಾ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ ನಂತರ ಲೀ ಮತ್ತು ಕ್ಲಿಂಗ್ ವಿರುದ್ಧ 21-13, 21-13 ಅಂತರದ ಆತ್ಮವಿಶ್ವಾಸದ ಜಯದೊಂದಿಗೆ ತನ್ನ ಪುರುಷರ ಡಬಲ್ಸ್ ಅಭಿಯಾನವನ್ನು ಪ್ರಾರಂಭಿಸಿತು. ಇತ್ತ ಅಮ್ಸಕರುಣನ್ -ಅರ್ಜುನ್ ಅವರಂತಹ ಸ್ಥಾಪಿತ ಜೋಡಿಗಳು ಮುಖ್ಯ ಡ್ರಾದಲ್ಲಿ ಮಿಂಚಿದರೆ, ಅತ್ತ ಭಾರತದ ಸನೀತ್ ದಯಾನಂದ್ ತಮ್ಮ ಅರ್ಹತಾ ಪಂದ್ಯಗಳನ್ನು ಗೆದ್ದ ನಂತರ ಪಂದ್ಯಾವಳಿಯ ಪುರುಷರ ಸಿಂಗಲ್ಸ್ ಮುಖ್ಯ ಡ್ರಾಗೆ ಮುನ್ನಡೆದರು. ಅರ್ಹತಾ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕಿತ ದಯಾನಂದ್, ಮೊದಲು ಸ್ಥಳೀಯ ಭರವಸೆಯ ಕರೋನೊ ಅವರನ್ನು 21-17, 21-15 ಅಂತರದಿಂದ ಸೋಲಿಸಿ, ನಂತರ ಮಲೇಷ್ಯಾದ ಮಿಂಗ್ ಹಾಂಗ್ ಲಿಮ್ ವಿರುದ್ಧ 21-9, 21-16 ಅಂತರದಿಂದ ಜಯಗಳಿಸಿ ಅರ್ಹತೆ ಪಡೆದರು. ಅವರು ತಮ್ಮ ಮೊದಲ ಮುಖ್ಯ ಡ್ರಾ ಪಂದ್ಯದಲ್ಲಿ ಚೀನಾದ ಹು ಝೆ ಆನ್ ಅವರನ್ನು ಎದುರಿಸಲಿದ್ದಾರೆ.

ಸಿರಾಜ್‌ಗೆ ವಿಶ್ರಾಂತಿ, ಪ್ರಸಿದ್ಧ ಕೃಷ್ಣಗೆ ಬುಲಾವ್

ಮುಂಬೈ: ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಐರ್ಲೆಂಡ್ ಮತ್ತು ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗಳಿಗಾಗಿ ಭಾರತ ತಂಡದಲ್ಲಿ ಪ್ರಸಿದ್ಧ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದ್ದು, ವೇಗಿ ಮೊಹಮ್ಮದ್ ಸಿರಾಜ್‌ಗೆ ವಿಶ್ರಾಂತಿ ನೀಡಲು ಆಜ್ಞೆ ನೀಡಲಾಗಿದೆ. ಜೂನ್ ಅಂತ್ಯ ಮತ್ತು ಜುಲೈನಲ್ಲಿ ನಡೆಯಲಿರುವ ಐರ್ಲೆಂಡ್ ಹಾಗೂ ಇಂಗ್ಲೆಂಡ್ ನೊಂದಿಗೆ ಟಿ20 ಪಂದ್ಯಗಳಿಗೆ ತಂಡ ಬಿಡುಗಡೆ ಈ ಹಿಂದೆ ಮಾಡಲಾಗಿದೆ. ಟಿ20 ವಿಭಾಗದಲ್ಲಿ ಬಹು ದಿನಗಳ ನಂತರ ಮೊಹಮ್ಮದ್ ಸಿರಾಜ್ ಅವರನ್ನು ಆಯ್ಕೆ ಮಾಡಲಾಗಿತ್ತು. ಆದರೆ ಬಿಸಿಸಿಐ ಈ ಬಗ್ಗೆ ಮರುಪರಿಶೀಲನೆ ನಡೆಸಿದೆ. ಮೆಡಿಕಲ್ ತಂಡದೊಂದಿಗೆ ಚರ್ಚೆಗಳನ್ನು ಮಾಡಿದ ನಂತರ ಅವರಿಗೆ ವಿರಾಮ ನೀಡಲಾಗಿದ್ದು, ಅವರ ಬದಲಿಗೆ ಪ್ರಸಿದ್ಧ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಬಿಸಿಸಿಐ ಪ್ರಕಟಣೆ ಹೊರಡಿಸಿದೆ. ವೈದ್ಯರೊಂದಿಗೆ ಮತ್ತು ಮ್ಯಾನೇಜ್ಮೆಂಟ್‌ನೊಂದಿಗೆ ಈ ಕುರಿತು ಚರ್ಚಿಸಲಾಗಿದೆ. ಐಪಿಎಲ್‌ನಲ್ಲಿ ಆಡಿದ್ದ ಸಿರಾಜ್ ನಂತರ ಅಫ್ಘಾನಿಸ್ತಾನದೊಂದಿಗೆ ಟೆಸ್ಟ್ ಪಂದ್ಯವನ್ನೂ ಆಡಿದ್ದಾರೆ. ಹೀಗಾಗಿ ಅವರ ವರ್ಕ್ ಲೋಡ್ ಹೆಚ್ಚಾಗಿದ್ದು, ಅವರಿಗೆ ವಿಶ್ರಾಂತಿಯ ಅವಶ್ಯವಿದೆ. ಅವರ ಬದಲಿಗೆ ಪ್ರಸಿದ್ಧ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಬಿಸಿಸಿಐ ಹೇಳಿಕೆಯಲ್ಲಿ ತಿಳಿಸಿದೆ.

ಏಕದಿನಕ್ಕೆ ರೋಹಿತ್, ಪಾಂಡ್ಯ ಲಭ್ಯ

ಮುಂಬೈ: ಅನುಭವಿ ಬ್ಯಾಟರ್ ರೋಹಿತ್ ಶರ್ಮ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಏಕದಿನ ಪಂದ್ಯವಾಡಲು ಸಿದ್ಧವಾಗಿದ್ದು, ಬಿಸಿಸಿಐನ ಶ್ರೇಷ್ಠತಾ ಕೇಂದ್ರದಿಂದ ಗ್ರೀನ್ ಸಿಗ್ನಲ್ ಪಡೆದಿದ್ದಾರೆ. ಭಾನುವಾರದಿಂದ ಭಾರತ ಹಾಗೂ ಅಫ್ಘಾನಿಸ್ತಾನ ನಡುವೆ ಏಕದಿನ ಸರಣಿ ಶುರುವಾಗಲಿದೆ. ಐಪಿಎಲ್ ವೇಳೆ ಗಾಯಗೊಂಡಿದ್ದ ರೋಹಿತ್ ಶರ್ಮ ಮತ್ತು ಹಾರ್ದಿಕ್ ಪಾಂಡ್ಯ ಅವರು ಈ ಸರಣಿಯಲ್ಲಿ ಭಾಗವಹಿಸಲು ಸಿದ್ಧವಾಗಿದ್ದರೂ ಬಿಸಿಸಿಐನ ಕ್ರೀಡಾ ವಿಜ್ಞಾನ ವಿಭಾಗದಿಂದ ಫಿಟ್ನೆಸ್ ಪರೀಕ್ಷೆಯಲ್ಲಿ ಪಾಸಾಗಬೇಕಿತ್ತು. ಈ ನಡುವೆ ಮಂಗಳವಾರದಂದು ಶ್ರೇಷ್ಠತಾ ಕೇಂದ್ರ ರೋಹಿತ್ ಹಾಗೂ ಹಾರ್ದಿಕ್ ಪಾಂಡ್ಯ ಅವರಿಗೆ ಅನುಮತಿ ನೀಡಿದೆ. ಜೂನ್ 2ರಂದು ಹಾರ್ದಿಕ್ ಪರೀಕ್ಷೆ ನಡೆದಿದ್ದರೆ, ಈ ಮೊದಲೇ ರೋಹಿತ್ ಪಾಸಾಗಿದ್ದಾರೆಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ. ಏಕದಿನ ತಂಡ ಇನ್ನೂ ಪ್ರಕಟವಾಗಬೇಕಿದೆ.

ಭಾರತ ಪ್ರತಿನಿಧಿಸಿದ ವೈಭವ್ ಸೂರ್ಯವಂಶಿ

ಮುಂಬೈ: ಭಾರತ ಎ ಹಾಗೂ ಶ್ರೀಲಂಕಾ ಎ ತಂಡದ ನಡುವೆ ನಡೆದ ಏಕದಿನ ಪಂದ್ಯದಲ್ಲಿ 15 ವರ್ಷದ ವೈಭವ್ ಸೂರ್ಯವಂಶಿ ಕಣಕ್ಕಿಳಿಯುವುದರೊಂದಿಗೆ ದಾಖಲೆ ಬರೆದರು. ಐಪಿಎಲ್‌ನಲ್ಲಿ 700ಕ್ಕೂ ಹೆಚ್ಚು ರನ್ ಬಾರಿಸಿದ ವೈಭವ್ ಸೂರ್ಯವಂಶಿ ಇದೇ ಮೊದಲ ಬಾರಿಗೆ ಭಾರತ ಎ ತಂಡಕ್ಕೆ ಆಯ್ಕೆಯಾದ್ದರು. ಶ್ರೀಲಂಕಾ, ಅಫ್ಘಾನಿಸ್ತಾನದೊಂದಿಗೆ ಭಾರತ ಎ ತಂಡ ತ್ರಿಕೋನ ಸರಣಿಯನ್ನಾಡಲಿದೆ. ಮಂಗಳವಾರ ಶ್ರೀಲಂಕಾ ಎ ಮತ್ತು ಭಾರತ ಎ ತಂಡಗಳ ನಡುವೆ ಮೊದಲ ಪಂದ್ಯ ನಡೆಯಿತು. ಈ ಪಂದ್ಯದಲ್ಲಿ ವೈಭವ್ ಅವರನ್ನು ಭಾರತದ ಆಡುವ 11ರ ಬಳಗದಲ್ಲಿ ಸೇರಿಸಲಾಗಿತ್ತು. ಹೆಚ್ಚಿನ ಕೊಡುಗೆ ನೀಡಿಲ್ಲವಾದರೂ ವೈಭವ್ ಸೂರ್ಯವಂಶಿ ಭಾರತ ಎ ತಂಡವನ್ನು ಪ್ರತಿನಿಧಿಸಿದ ಅತಿ ಕಿರಿಯ ಆಟಗಾರ ಅನಿಸಿಕೊಂಡು ದಾಖಲೆ ಮಾಡಿದ್ದಾರೆ.

ಇನ್ನು ಫುಟ್‌ಬಾಲ್ ಕಿಕ್

ಫಿಫಾ ವಿಶ್ವಕಪ್‌ಗೆ ಕಣ ಸಿದ್ಧ | ಪ್ರಚಲಿತ ಫೇವರಿಟ್ ಕ್ರೀಡೆ ಶುರುವಿಗೆ ಕ್ಷಣಗಣನೆ

ವಿಶ್ವಾದ್ಯಂತ ಕ್ರೀಡಾಭಿಮಾನಿಗಳಿಗೆ ಇನ್ನು ಮುಂದೆ ಫುಟ್‌ಬಾಲ್ ಕಿಕ್. ನೆಚ್ಚಿನ ತಂಡವನ್ನು ಬೆಂಬಲಿಸುವ ಉತ್ಸಾಹ. ಪಂದ್ಯಗಳ ರೋಚಕತೆ ಮತ್ತು ಕೊನೆ ಕ್ಷಣದ ಆತಂಕ. ಪಿಲೆಯ ಮಾಯೆ, ಮರಡೋನಾದ ಸಾಹಸ, ಜರ್ಮನಿಯ ಆಧಿಪತ್ಯ, ಮೆಸ್ಸಿಯ ಕನಸು ಮತ್ತು ವಿಶ್ವದ ಕೋಟ್ಯಂತರ ಕ್ರೀಡಾಭಿಮಾನಿಗಳ ಭಾವನೆ ಹೊತ್ತ ಕೂಟ ಫಿಫಾ ಫುಟ್‌ಬಾಲ್ ವಿಶ್ವಕಪ್ ಶುಕ್ರವಾರದಿಂದ ಶುರುವಾಗಲಿದೆ. ಆಟಕ್ಕೆ ಮೈದಾನ, ಕಾದಟಕ್ಕೆ ಆಟಗಾರರು ಮತ್ತು ವೀಕ್ಷಣೆಗೆ ಕೈಯಲ್ಲಿ ಸಂಜೆಯ ಸ್ನ್ಯಾಕ್ಸ್ ಹಿಡಿದುಕೊಂಡು ಕೂಡಲು ಅಭಿಮಾನಿಗಳು ಅಣಿಯಾಗಿದ್ದಾರೆ. ಆಟದ ಮರ್ಮ ಮತ್ತು ಶೈಲಿಯ ಕ್ರೇಜ್‌ನೊಂದಿಗೆ ಇತಿಹಾಸ ತಿಳಿದುಕೊಳ್ಳುವ ತವಕ ಜನರಲ್ಲಿದೆ. ಫಿಫಾ ವಿಶ್ವಕಪ್ ಇತಿಹಾಸ ಕೂಡ ತವಕದಿಂದಲೇ ಕೇಳುವಷ್ಟು ರೋಚಕವಾಗಿದೆ ಮತ್ತು ಹುಬ್ಬೇರಿಸುವಷ್ಟು ಕುತೂಹಲಕಾರಿಯಾಗಿದೆ. ಹಾಗಿದ್ದರೆ ಇತಿಹಾಸವೇನು? ಮಾಹಿತಿ ಇಲ್ಲಿದೆ.





ಫಿಫಾ ವಿಶ್ವಕಪ್ ಅಂದರೇನು?

ಫಿಫಾ ವಿಶ್ವಕಪ್ ವಿಶ್ವದ ಅತ್ಯಂತ ಪ್ರತಿಷ್ಠಿತ ಫುಟ್‌ಬಾಲ್ ಟೂರ್ನಿ. 1930ರಲ್ಲಿ ಆರಂಭವಾದ ಈ ಟೂರ್ನಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತದೆ. 1942 ಮತ್ತು 1946ರಲ್ಲಿ ದ್ವಿತೀಯ ವಿಶ್ವಯುದ್ಧದ ಕಾರಣ ಟೂರ್ನಿ ನಡೆದಿರಲಿಲ್ಲ. ವಿಶ್ವದ ಪ್ರತಿಷ್ಠಿತ ತಂಡಗಳು ಇದರಲ್ಲಿ ಭಾಗವಹಿಸುತ್ತವೆ. 2026ರಿಂದ 48 ತಂಡಗಳು ಭಾಗವಹಿಸುತ್ತಿವೆ.

13 ತಂಡಗಳಿಂದ ಆರಂಭ

ಮೊದಲ ವಿಶ್ವಕಪ್‌ಗೆ ಕೇವಲ 13 ತಂಡಗಳು ಭಾಗವಹಿಸಿದ್ದವು. ದಕ್ಷಿಣ ಅಮೆರಿಕದ ಉರುಗ್ವೆ ಆತಿಥ್ಯ ವಹಿಸಿತ್ತು. ಫೈನಲ್‌ನಲ್ಲಿ ಆತಿಥೇಯ ಉರುಗ್ವೆ, ಅರ್ಜೆಂಟಿನಾ ತಂಡವನ್ನು 4-2 ಗೋಲುಗಳಿಂದ ಸೋಲಿಸಿ ಮೊದಲ ವಿಶ್ವ ಚಾಂಪಿಯನ್ ಆಯಿತು.

ಆರಂಭ ಹೇಗಾಯಿತು?

1890ರ ಆಸುಪಾಸಿನಲ್ಲಿ ಫುಟ್‌ಬಾಲ್ ಕ್ರೇಜ್ ವಿಶ್ವಾದ್ಯಂತ ಜನರ ಮನದಲ್ಲಿ ಮನೆ ಮಾಡಿತ್ತು. ಸಾಮಾನ್ಯ ಜನರಲ್ಲಿ ಆಟದ ಬಗ್ಗೆ ಕ್ರೇಜ್. ಹಲವು ವರ್ಷಗಳ ನಂತರ 1904ರಲ್ಲಿ ಫಿಫಾ(ಫೆಡರೇಶನ್ ಇಂಟರ್‌ನ್ಯಾಷನಲ್ ಡೆ ಫುಟ್‌ಬಾಲ್ ಅಸೋಶಿಯೇಷನ್) ಎಂಬ ಸಂಸ್ಥೆ ಹುಟ್ಟಿಕೊಂಡಿತು. ಹೆಚ್ಚುತ್ತಿದ್ದ ಆಟಗಾರರ ಸಂಖ್ಯೆಯನ್ನು ಗಮನಿಸಿದ ಫಿಫಾ 1928ರಲ್ಲಿ ಪ್ರತ್ಯೇಕ ವಿಶ್ವ ಚಾಂಪಿಯನ್‌ಶಿಪ್ ಆಯೋಜಿಸಲು ನಿರ್ಧರಿಸಿತು. ಅದರ ಫಲವಾಗಿ 1930ರಲ್ಲಿ ಮೊದಲ ಫಿಫಾ ವಿಶ್ವಕಪ್ ನಡೆಯಿತು.



ಮರಕನಾಜೊ ಆಘಾತ

ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಮರಕನಾಜೊ ಆಘಾತ ಅಚಲವಾಗಿದೆ. 1950ರ ವಿಶ್ವಕಪ್‌ನಲ್ಲಿ ಬ್ರೆಜಿಲ್ ಚಾಂಪಿಯನ್ ಆಗುವುದು ಬಹುತೇಕ ಖಚಿತ ಎನ್ನಲಾಗುತ್ತಿತ್ತು. ರಿಯೊ ಡಿ ಜನೈರೊದ ಪ್ರಸಿದ್ಧ ಮರಕನಾ ಕ್ರೀಡಾಂಗಣದಲ್ಲಿ ಸುಮಾರು ಎರಡು ಲಕ್ಷ ಅಭಿಮಾನಿಗಳು ಬ್ರೆಜಿಲ್ ವಿಜಯೋತ್ಸವಕ್ಕೆ ಸಿದ್ಧರಾಗಿದ್ದರು. ಆದರೆ ಉರುಗ್ವೆ 2-1 ಅಂತರದಲ್ಲಿ ಬ್ರೆಜಿಲ್‌ನ್ನು ಸೋಲಿಸಿ ಇತಿಹಾಸ ನಿರ್ಮಿಸಿತು. ಈ ಘಟನೆಯನ್ನು ಮರಕನಾಜೊ ಎಂದು ಕರೆಯಲಾಗುತ್ತದೆ. ಫುಟ್‌ಬಾಲ್ ಇತಿಹಾಸದ ಅತಿದೊಡ್ಡ ಆಘಾತಗಳಲ್ಲಿ ಇದು ಒಂದು.

ವಿಶ್ವಯುದ್ಧದ ಪರಿಣಾಮ

ವಿಶ್ವಕಪ್‌ನ ರೋಚಕತೆ ಮತ್ತು ಆಟಗಾರರ ನಡುವಿದ್ದ ಅಬ್ಬರ ವಿಶ್ವಾದ್ಯಂತ ಅಭಿಮಾನಿಗಳನ್ನು ಸೆಳೆದಿತ್ತು. ಅಂದಿನ ದಿನಗಳಲ್ಲಿ ಫಿಫಾ ವಿಶ್ವಕಪ್‌ಗಾಗಿ ಜನರು ಕಾಯುತ್ತಿದ್ದರು. ಆದರೆ 1934 ಮತ್ತು 1938ರ ವಿಶ್ವಕಪ್‌ಗಳನ್ನು ಇಟಲಿ ಗೆದ್ದಿತು. ಈ ಮೂಲಕ ಸತತ ಎರಡು ವಿಶ್ವಕಪ್ ಗೆದ್ದ ಮೊದಲ ರಾಷ್ಟ್ರವಾಯಿತು. ನಂತರದ ಅವಧಿಯಲ್ಲಿ ಜಗತ್ತನ್ನು ಎರಡನೇ ಮಹಾಯುದ್ಧ ಆವರಿಸಿತು. ಪರಿಣಾಮವಾಗಿ 1942 ಮತ್ತು 1946ರ ವಿಶ್ವಕಪ್‌ಗಳನ್ನು ರದ್ದುಗೊಳಿಸಲಾಯಿತು. ಎಂಟು ವರ್ಷಗಳ ವಿರಾಮದ ಬಳಿಕ 1950ರಲ್ಲಿ ವಿಶ್ವಕಪ್ ಮತ್ತೆ ಆರಂಭವಾಯಿತು.



ಮೆಸ್ಸಿಯ ಕನಸಿನ ಸಾಕಾರ

ಫುಟ್‌ಬಾಲ್ ದಂತಕಥೆ ಲಿಯೋನಲ್ ಮೆಸ್ಸಿ ಅವರ ವೃತ್ತಿಜೀವನದಲ್ಲಿ ಉಳಿದಿದ್ದ ಏಕೈಕ ಪ್ರಮುಖ ಟ್ರೋಫಿ ವಿಶ್ವಕಪ್ ಆಗಿತ್ತು. ಕತಾರ್‌ನಲ್ಲಿ ನಡೆದ 2022ರ ವಿಶ್ವಕಪ್‌ನಲ್ಲಿ ಅರ್ಜೆಂಟೀನಾ ಫ್ರಾನ್ಸ್ ವಿರುದ್ಧದ ರೋಚಕ ಫೈನಲ್‌ನಲ್ಲಿ ಜಯ ಸಾಧಿಸಿತು. ಮೆಸ್ಸಿ ವಿಶ್ವಕಪ್ ಎತ್ತಿಹಿಡಿದ ಕ್ಷಣವನ್ನು ಫುಟ್ಬಾಲ್ ಇತಿಹಾಸದ ಅತ್ಯಂತ ಭಾವನಾತ್ಮಕ ಕ್ಷಣಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ.



ಪಿಲೆ ಯುಗ (1958-1970)

ಪಿಲೆ ಎಂಬ 17 ವರ್ಷದ ಯುವ ಆಟಗಾರ 1958ರ ವಿಶ್ವಕಪ್‌ನಲ್ಲಿ ಮಿಂಚಿದರು. ಅವರ ಅದ್ಭುತ ಪ್ರದರ್ಶನ ದಿಂದ ಬ್ರೆಜಿಲ್ ಮೊದಲ ಬಾರಿಗೆ ವಿಶ್ವಕಪ್ ಗೆದ್ದಿತು. 1962 ಮತ್ತು 1970ರಲ್ಲೂ ಬ್ರೆಜಿಲ್ ಪ್ರಶಸ್ತಿ ಗೆದ್ದು ಆಧುನಿಕ ಫುಟ್‌ಬಾಲ್‌ನ ಮಹಾಶಕ್ತಿಯಾಯಿತು. ಪಿಲೆ ಮೂರು ವಿಶ್ವಕಪ್ ಗೆದ್ದ ಏಕೈಕ ಆಟಗಾರ ಎಂಬ ದಾಖಲೆ ಇಂದಿಗೂ ಅಚಲವಾಗಿದೆ.



ಮಾಂತ್ರಿಕ ಮರಡೋನಾ

ಡಿಯೇಗೊ ಮರಡೋನಾ ಅವರ ಹೆಸರಿಲ್ಲದೆ ಫಿಫಾ ವಿಶ್ವಕಪ್ ಇತಿಹಾಸ ಅಪೂರ್ಣ. 1986ರ ಮೆಕ್ಸಿಕೋ ವಿಶ್ವಕಪ್‌ನಲ್ಲಿ ಅವರು ಅರ್ಜೆಂಟೀನಾವನ್ನು ತಂಡವನ್ನು ಗಟ್ಟಿಗೊಳಿಸಿದ್ದಲ್ಲದೆ ಚಾಂಪಿಯನ್ ಪಟ್ಟಕ್ಕೇರಿಸಿದರು. ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಅವರು ಗಳಿಸಿದ ಹ್ಯಾಂಡ್ ಆಫ್ ಗಾಡ್ ಗೋಲು ಮತ್ತು ಗೋಲ್ ಆಫ್ ದ ಸೆಂಚುರಿ ವಿಶ್ವಕಪ್ ಇತಿಹಾಸದ ಅತ್ಯಂತ ಪ್ರಸಿದ್ಧ ಕ್ಷಣಗಳಾಗಿವೆ.

ಯುರೋಪಿನ ಪ್ರಾಬಲ್ಯ (1974-1990)

ಫಿಫಾ ಫುಟ್‌ಬಾಲ್ ಇತಿಹಾಸದಲ್ಲಿ ಅವಧಿಯಲ್ಲಿ ಜರ್ಮನಿ ಮತ್ತು ಇಟಲಿ ತಂಡಗಳು ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದವು. 1974ರಲ್ಲಿ ಪಶ್ಚಿಮ ಜರ್ಮನಿ, 1982ರಲ್ಲಿ ಇಟಲಿ ಮತ್ತು 1990ರಲ್ಲಿ ಮತ್ತೆ ಜರ್ಮನಿ ಚಾಂಪಿಯನ್ ಆದವು. ಇದೇ ಸಮಯದಲ್ಲಿ ಫುಟ್‌ಬಾಲ್ ಹೆಚ್ಚು ವೃತ್ತಿಪರ ಮತ್ತು ತಾಂತ್ರಿಕ ಆಟವಾಗಿ ಬೆಳೆಯಿತು.



ಬ್ರೆಜಿಲ್‌ಗೆ ಐತಿಹಾಸಿಕ ಸೋಲಿನ ಆಘಾತ

2014ರ ವಿಶ್ವಕಪ್‌ಗೆ ಬ್ರೆಜಿಲ್ ಆತಿಥ್ಯ ವಹಿಸಿತ್ತು. ಸೆಮಿಫೈನಲ್‌ನಲ್ಲಿ ಜರ್ಮನಿ ವಿರುದ್ಧ ಬ್ರೆಜಿಲ್ ಆಡಿದ ಪಂದ್ಯ ಫುಟ್‌ಬಾಲ್ ಇತಿಹಾಸದ ಅತ್ಯಂತ ಆಘಾತಕಾರಿ ಫಲಿತಾಂಶಗಳಲ್ಲಿ ಒಂದು. ಜರ್ಮನಿ 7-1 ಅಂತರದಲ್ಲಿ ಬ್ರೆಜಿಲ್‌ನ್ನು ಸೋಲಿಸಿತು. ಈ ಸೋಲು ಬ್ರೆಜಿಲ್ ಅಭಿಮಾನಿಗಳಿಗೆ ಇಂದಿಗೂ ನೋವಿನ ನೆನಪು.

ಹೊಸ ಚಾಂಪಿಯನ್ಸ್ (1998-2010)

1998ರಲ್ಲಿ ಫ್ರಾನ್ಸ್ ತನ್ನ ಮೊದಲ ವಿಶ್ವಕಪ್ ಗೆದ್ದಿತು. 2002ರಲ್ಲಿ ಬ್ರೆಜಿಲ್ ಐದನೇ ಬಾರಿ ಚಾಂಪಿಯನ್ ಆಯಿತು. ಇದು ಇಂದಿಗೂ ದಾಖಲೆಯಾಗಿದೆ. 2006ರಲ್ಲಿ ಇಟಲಿ, 2010ರಲ್ಲಿ ಸ್ಪೇನ್ ಪ್ರಶಸ್ತಿ ಗೆದ್ದವು. ಸ್ಪೇನ್‌ನ 2010ರ ಜಯ ಅವರ ಟಿಕಿ-ಟಾಕಾ ಶೈಲಿಯ ಯಶಸ್ಸಿನ ಸಂಕೇತವಾಗಿತ್ತು.

ಫ್ರಾನ್ಸ್ ಪುನರಾಗಮನ(2018)

ಆಧುನಿಕ ಫುಟ್‌ಬಾಲ್ ತಾರೆಯರಲ್ಲಿ ಒಬ್ಬರಾದ ಕಿಲಿಯನ್ ಎಂಬಾಪ್ಪೆ ಅವರ ಅದ್ಭುತ ಆಟದ ನೆರವಿನಿಂದ ಫ್ರಾನ್ಸ್ 20 ವರ್ಷಗಳ ಬಳಿಕ ಎರಡನೇ ವಿಶ್ವಕಪ್ ಗೆದ್ದಿತು. ಇದು ಫ್ರಾನ್ಸ್‌ನ ಪುನರಾಗಮನ ಎನ್ನಲಾಗುತ್ತದೆ. 20 ವರ್ಷದ ಮಟ್ಟಿಗೆ ಹಿನ್ನಡೆ ಅನುಭವಿಸಿದ್ದ ಫ್ರಾನ್ಸ್ ಮತ್ತೊಮ್ಮೆ ವಿಶ್ವಕಪ್ ಗೆದ್ದಿತ್ತು.

ಜೂನ್ 27ರಿಂದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ 2ನೇ ಹಂತದ ಪಂದ್ಯ ಆರಂಭ

ಮಹಾರಾಜ ಟ್ರೋಫಿಗೆ ಹುಬ್ಬಳ್ಳಿ ಸಿದ್ಧ

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಹಸಿರಿನಿಂದ ಕೂಡಿದ ಇಲ್ಲಿನ ನೃಪತುಂಗ ಬೆಟ್ಟದ ತಪ್ಪಲಿನಲ್ಲಿರುವ ರಾಜನಗರದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಕ್ರೀಡಾಂಗಣದಲ್ಲಿ ಮಹಾರಾಜ ಟ್ರೋಫಿ ನಡೆಸಲು ಸಿದ್ಧತೆ ಆರಂಭವಾಗಿದೆ.

ಮಹಾರಾಜ ಟ್ರೋಫಿಯ ಎರಡನೇ ಹಂತದ ಟಿ20 ಪಂದ್ಯಗಳು ಜೂ.27ರಿಂದ ಜುಲೈ 3ರ ವರೆಗೆ ನಡೆಯಲಿವೆ. ಕಳೆದ ನಾಲ್ಕು ತಿಂಗಳ(ಫೆಬ್ರವರಿ) ಹಿಂದೆ ಕರ್ನಾಟಕ ಹಾಗೂ ಜಮ್ಮು ಕಾಶ್ಮೀರ ನಡುವೆ ಫೈನಲ್ ಪಂದ್ಯಕ್ಕೆ ಈ ಮೈದಾನ ವೇದಿಕೆಯಾಗಿತ್ತು. ಅದರಲ್ಲಿ ಜಮ್ಮು-ಕಾಶ್ಮೀರ ಜಯಿಸಿತ್ತು. ಈಗ ಮಹಾರಾಜ ಟ್ರೋಫಿಯ ಒಟ್ಟು 12 ಪಂದ್ಯಗಳು ಇಲ್ಲಿ ನಡೆಯಲಿವೆ.

ಕೆಎಸ್‌ಸಿಎ ವ್ಯವಸ್ಥಾಪನಾ ಸಮಿತಿ ಸದಸ್ಯ ಅವಿನಾಶ ವೈದ್ಯ ಹಾಗೂ ಮಹಾರಾಜ ಟ್ರೋಫಿಯ ಆಡಳಿತ ಮಂಡಳಿ ಸದಸ್ಯ ಎ.ವಿ.ಶಶಿಧರ ಅವರು ಇತ್ತೀಚೆಗೆ ಕ್ರೀಡಾಂಗಣಕ್ಕೆ ಭೇಟಿ ನೀಡಿ, ಸೌಲಭ್ಯಗಳನ್ನು ಪರಿಶೀಲಿಸಿದ್ದಾರೆ. ಪಂದ್ಯಗಳು ನೇರ ಪ್ರಸಾರವಾಗಲಿದ್ದು, ಈ ಹಿನ್ನೆಲೆಯಲ್ಲಿ ಲೈವ್ ಸೋನಿ ನೆಟ್‌ವರ್ಕ್ ಬ್ರಾಡ್‌ಕಾಸ್ಟಿಂಗ್ ತಂಡವೂ ಸಹ ಕ್ರೀಡಾಂಗಣಕ್ಕೆ ಬಂದು ಪರಿಶೀಲಿಸಿದೆ.

8 ಸಾವಿರ ಪ್ರೇಕ್ಷಕರಿಗೆ ಅವಕಾಶ:: ಪಂದ್ಯ ವೀಕ್ಷಣೆಗೆ ಬರುವ ಜನರಿಗೆ 7ರಿಂದ 8 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗುತ್ತಿದೆ. ಗೇಟ್



ಸಂಖ್ಯೆ 1, 3, 4 ಹಾಗೂ 5ರಲ್ಲಿ ಟಿಕೆಟ್ ಪಡೆಯಲು ಅವಕಾಶ ನೀಡಲಾಗುತ್ತದೆ. ಈಗಾಗಲೇ ಸ್ವಚ್ಛತಾ ಕಾರ್ಯ ಮುಗಿದಿದ್ದು, ಸ್ಟ್ಯಾಂಡ್‌ಗಳ ಅಳವಡಿಸುವ ಕಾರ್ಯ ನಡೆಯುತ್ತಿದೆ. ಮೈದಾನದಲ್ಲಿ ಪ್ರಕರವಾದ ಬೆಳಕು ಬೀಳುವ ಉದ್ದೇಶದಿಂದ ಈ ಮೊದಲಿದ್ದ ಹ್ಯಾಲೋಜನ್ ವಿದ್ಯುತ್ ದೀಪಗಳ ಬದಲಿಸಿ ಎಲ್‌ಇಡಿ ದೀಪಗಳ ಅಳವಡಿಸಲಾಗುತ್ತದೆ. ಹ್ಯಾವಲ್ಸ್ ಕಂಪನಿಗೆ ಟೆಂಡರ್ ನೀಡಲಾಗಿದ್ದು, ಇದರಿಂದ ಶೇ.30ರಷ್ಟು ವಿದ್ಯುತ್ ದರ ಉಳಿತಾಯ ಆಗಲಿದೆ. 6 ಕ್ಯಾಮೆರಾ ಅಳವಡಿಸಲಾಗುತ್ತಿದೆ.

ಹುಲ್ಲು ಕತ್ತರಿಸುವ ಯಂತ್ರ ಗ್ರಾಸ್ ಕಟಿಂಗ್, ಲಾನ್ ಮೋವರ್‌ಗಳಿವೆ. ಸೂಪರ್ ಸಾಪರ್ ಒಂದು ಇದ್ದು, ಶಿವಮೊಗ್ಗದಿಂದ ಇನ್ನೊಂದು ಹಾಗೂ ಟಾರ್ಪಲಿನ್ ಗ್ರೌಂಡ್ ಕವರ್ ತರಿಸಿಕೊಳ್ಳಲು ಚಿಂತನೆ ನಡೆಸಲಾಗಿದೆ. ಇದರಿಂದ ಶೇ.70ರಷ್ಟು ಕವರ್ ಮಾಡಬಹುದು. ಸದ್ಯ 10 ಜನ ಗ್ರೌಂಡ್ ಮನ್‌ಗಳಿದ್ದು, 40 ಜನರ ಅವಶ್ಯಕತೆ ಇದೆ.

ಜೂ.27ರಿಂದ ಜುಲೈ 3ರ ವರೆಗೆ ಹುಬ್ಬಳ್ಳಿಯಲ್ಲಿ ಮಹಾರಾಜ ಟ್ರೋಫಿಯ ಪಂದ್ಯಗಳು ನಡೆಯಲಿವೆ. ಈಗಾಗಲೇ ಸಿದ್ಧತೆಗಳು ಆರಂಭಗೊಂಡಿವೆ. ಆಯೋಜನೆಗೆ ಸಂಬಂಧಿಸಿದಂತೆ ಕೆಎಸ್‌ಸಿಎ ವ್ಯವಸ್ಥಾಪನಾ ಸಮಿತಿ ಸದಸ್ಯರ ಸಭೆ ಜೂ.12ರಂದು ನಿಗದಿಯಾಗಿದ್ದು, ಬಳಿಕವೇ ಪೂರ್ಣ ವಿವರಗಳು ಲಭ್ಯವಾಗಲಿವೆ.

■ ವೀರಣ್ಣ ಸವಡಿ, ಸಂಚಾಲಕ, ಕೆಎಸ್‌ಸಿಎ ಧಾರವಾಡ ವಲಯ

2018ರಲ್ಲಿ ಕೆಪಿಎಲ್ ನಡೆದಿತ್ತು: 2018ರಲ್ಲಿ ಹುಬ್ಬಳ್ಳಿಯಲ್ಲಿ ಕರ್ನಾಟಕ ಪ್ರೀಮಿಯರ್ ಲೀಗ್ ನಡೆದಿತ್ತು. ಆದಾದ ಬಳಿಕ ಇಲ್ಲಿ ಟಿ-20 ಪಂದ್ಯಗಳು ನಡೆದಿಲ್ಲ. ಕೆಪಿಎಲ್ ಹೆಸರು ಬದಲಿಸಿ ಮಹರಾಜ ಟ್ರೋಫಿ ಎಂದು ಹೆಸರಿಡಲಾಗಿದ್ದು, ಮತ್ತೆ ಹುಬ್ಬಳ್ಳಿಯಲ್ಲಿ ಪಂದ್ಯ ಆಯೋಜನೆಗೆ ಅವಕಾಶಗಳು ದೊರೆಕಿದೆ. ರಣಜಿ ಅಲ್ಲದೆ ಭಾರತ 'ಎ' ಮತ್ತು ವೆಸ್ಟ್ ಇಂಡಿಸ್ 'ಎ', ಭಾರತ 'ಎ'ಶ್ರೀಲಂಕಾ 'ಎ', ಭಾರತ 'ಎ' ನ್ಯೂಜಿಲೆಂಡ್ 'ಎ' ತಂಡಗಳ ನಡುವಿನ ಪಂದ್ಯಗಳು ಮತ್ತು ಕರ್ನಲ್ ಸಿ.ಕೆ.ನಾಯ್ಡು, 19 ವರ್ಷದೊಳಗಿನವರ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯಗಳು ಸಹ ಇಲ್ಲಿ ನಡೆದಿವೆ.

ಜೂನಿಯರ್ ಟೆನಿಸ್: ಮಹತ್ವದ ಸಾಧನೆ

ಬೆಂಗ್ಳೂರಿನ ಸೃಷ್ಟಿ ಕಿರಣ್ ವಿಶ್ವ ನಂ.1 ಆಟಗಾರ್ತಿ

ಬೆಂಗಳೂರು: ಬೆಂಗಳೂರು ಮೂಲದ 13 ವರ್ಷದ ಟೆನಿಸ್ ಪ್ರತಿಭೆ ಸೃಷ್ಟಿ ಕಿರಣ್ ಜೂನಿಯರ್ ಟೆನಿಸ್ ವಲಯದಲ್ಲಿ ಮತ್ತೊಂದು ಮಹತ್ವದ ಸಾಧನೆ ಮಾಡಿದ್ದಾರೆ. ಅಂಡರ್-13 ವಿಭಾಗದ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿ ವಿಶ್ವ ನಂ.1 ಆಟಗಾರ್ತಿಯಾಗಿ ಹೊರಹೊಮ್ಮಿದ್ದಾರೆ.

ಇತ್ತೀಚಿನ ತಿಂಗಳುಗಳಲ್ಲಿ ಸೃಷ್ಟಿ ಅದ್ಭುತ ಪ್ರದರ್ಶನ ನೀಡಿದ್ದು, ಸತತ ಐದು ಐಟಿಎಫ್ ಜೂನಿಯರ್ ಪ್ರಶಸ್ತಿಗಳನ್ನು ಗೆದ್ದಿದ್ದರು. ಕಳೆದ ವಾರ ನಡೆದ ಗ್ವಾಟೆಮಾಲಾದ ಐಟಿಎಫ್ ವರ್ಲ್ಡ್ ಟೆನಿಸ್ ಟೂರ್ ಜೂನಿಯರ್ಸ್ ಜೆ100 ಟೂರ್ನಿಯಲ್ಲಿ ರನ್ನರ್-ಅಪ್ ಆಗಿದ್ದರು. ಈ ಸಾಧನೆಗಳ ಫಲವಾಗಿ ಅವರು ಐಟಿಎಫ್ ಜೂನಿಯರ್ ರ್‍ಯಾಂಕಿಂಗ್‌ನಲ್ಲಿ 357ನೇ ಸ್ಥಾನಕ್ಕೇರಿದ್ದು, ಅಂಡರ್-13 ವಿಭಾಗದಲ್ಲಿ ವಿಶ್ವದ ಅಗ್ರಸ್ಥಾನಕ್ಕೇರಿದ್ದಾರೆ.

ಈ ಸಾಧನೆಗೆ ಮತ್ತಷ್ಟು ವಿಶೇಷತೆ ತಂದಿರುವ ಸಂಗತಿ ಎಂದರೆ, ಸೃಷ್ಟಿ ಕೇವಲ ಎಂಟು ರ್‍ಯಾಂಕಿಂಗ್ ಟೂರ್ನಿಗಳಲ್ಲಷ್ಟೇ ಪಾಲ್ಗೊಂಡಿದ್ದರು. ಸಾಮಾನ್ಯವಾಗಿ ಗರಿಷ್ಠ ಹತ್ತು ಟೂರ್ನಿಗಳ ಫಲಿತಾಂಶಗಳನ್ನು ಪರಿಗಣಿಸಿ ರ್‍ಯಾಂಕಿಂಗ್ ಲೆಕ್ಕ ಹಾಕಲಾಗುತ್ತದೆ.



ಆರ್ಥಿಕ ಹಾಗೂ ವ್ಯವಸ್ಥಾಪನಾ ಸಮಸ್ಯೆಗಳಿಂದ ಎರಡು ಟೂರ್ನಿಗಳಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೂ, ಉಳಿದ ಟೂರ್ನಿಗಳಲ್ಲಿನ ಅತ್ಯುತ್ತಮ ಪ್ರದರ್ಶನದ ಮೂಲಕ ಅವರು ವಿಶ್ವದ ಅಗ್ರಸ್ಥಾನವನ್ನು ಅಲಂಕರಿಸಿದ್ದಾರೆ.

ಬೆಂಬಲದಿಂದ ಸಾಧ್ಯ: ಸೃಷ್ಟಿ: ನನ್ನ ವಯೋಮಾನದ ವಿಭಾಗದಲ್ಲಿ ವಿಶ್ವ ನಂ.1 ಆಗಿರುವುದು ತುಂಬಾ ಸಂತೋಷದ ವಿಚಾರ. ವರ್ಷದ ಆರಂಭದಲ್ಲಿ ಇದನ್ನು ನಾನು ನಿರೀಕ್ಷಿಸಿರಲಿಲ್ಲ, ನನ್ನ ಕೋಚ್‌ಗಳು, ಕುಟುಂಬ ಹಾಗೂ ಬೆಂಬಲ ತಂಡದ ಶ್ರಮಕ್ಕೆ ಇದು ಫಲವಾಗಿದೆ, ಎಂದು ಸೃಷ್ಟಿ ಸಂತಸ ವ್ಯಕ್ತಪಡಿಸಿದ್ದಾರೆ.

ಭಾರತ ಎ ಶುಭಾರಂಭ

ದಂಬುಲಾ(ಶ್ರೀಲಂಕಾ): ಐಪಿಎಲ್ ವೈಫಲ್ಯದಿಂದ ಕಂಗೆಟ್ಟಿದ್ದ ಬ್ಯಾಟರ್ ರುತುರಾಜ್ ಗಾಯಕ್ವಾಡ್ ನೀಲಿ ಬಣ್ಣದ ಅಂಗಿಯಲ್ಲಿ ಏಕದಿನ ಕಣದಲ್ಲಿಳಿದ ತಕ್ಷಣವೇ ಲಯಕ್ಕೆ ಮರಳಿದರು. ಮಂಗಳವಾರ ಶುರುವಾಗಿರುವ ಶ್ರೀಲಂಕಾ ಎ, ಭಾರತ ಎ ಮತ್ತು ಅಫ್ಘಾನಿಸ್ತಾನ ಎ ನಡುವಿನ ತ್ರಿಕೋನ ಸರಣಿಯ ಮೊದಲ ಪಂದ್ಯದಲ್ಲಿ ಶ್ರೀಲಂಕಾ ಎ ತಂಡದೊಂದಿಗೆ ಭಾರತ 8 ರನ್‌ಗಳ ರೋಚಕ ಗೆಲುವು ಸಾಧಿಸಿದೆ.

ತಮ್ಮ ಸಾಮಾನ್ಯ ಆರಂಭಿಕ ಕ್ರಮಾಂಕವನ್ನು ಬಿಟ್ಟು ಮಧ್ಯಮ ಕ್ರಮಾಂಕದಲ್ಲಿ ಗಟ್ಟಿಯಾಗಿ ನಿಂತುಕೊಂಡ ಗಾಯಕ್ವಾಡ್(101) ಮೊದಲು ಬ್ಯಾಟಿಂಗ್ ಮಾಡಿದ ಭಾರತ ಎ ತಂಡದ ಪರ ಶತಕ ಬಾರಿಸಿದರು. ಅವರ ಆಟಕ್ಕೆ ತಿಲಕ್ ವರ್ಮಾ(60) ಅತ್ಯುತ್ತಮ ಬ್ಯಾಟಿಂಗ್‌ನೊಂದಿಗೆ ಸಾಥ್ ಕೊಟ್ಟ ನಂತರ ಭಾರತ 50 ಓವರುಗಳಲ್ಲಿ 6 ವಿಕೆಟ್ ನಷ್ಟಕ್ಕೆ 277 ರನ್ ಮಾಡಿತು. ಗುರಿ ಬೆನ್ನತ್ತಿದ ಶ್ರೀಲಂಕಾ 269 ರನ್‌ಗಳಿಗೆ ಉರುಳಿತು. ನಿರೋಶನ್(47), ಅವಿಷ್ಕಾ(45) ರನ್‌ನೊಂದಿಗೆ ಉತ್ತಮ ಆರಂಭ ಒದಗಿಸಿದ್ದರು. ಮಧ್ಯಮ ಕ್ರಮಾಂಕದಲ್ಲಿ ಸದೀರ (46), ಸಹನ್ (74) ರನ್‌ನೊಂದಿಗೆ ಮಿಂಚಿದ ನಂತರ ಶ್ರೀಲಂಕಾ ಗೆಲುವಿನ ಕಡೆ ಸಾಗಿತ್ತು. ಆದರೆ ಭಾರತೀಯ ಸಾಂಘಿಕ ಬೌಲಿಂಗ್ ದಾಳಿ ಅದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಅರ್ಷದ್ ಖಾನ್, ಅನುಕುಲ್, ಆಯುಷ್ ಮತ್ತು ವಿಪ್ರಾಜ್ ನಿಗಮ್ ತಲಾ 2 ವಿಕೆಟ್ ಪಡೆದರು. ಅನ್ಶುಲ್ 1 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್

ಭಾರತ ಎ 277/6(50 ಓವರ್): ರುತುರಾಜ್ 101, ತಿಲಕ್ 60; ಶಿರಾಝ್ 67/2, **ಶ್ರೀಲಂಕಾ ಎ 48.5 ಓವರ್‌ಗಳಲ್ಲಿ 269/10:** ಸಹನ್ 74, ಸದೀರ 46; ಅರ್ಷದ್ 24/2

ಪದಬಂಧ

ರಾಜಾ ಸಂಗಮೇಶ ಹಿರೇಮಠ



6010

6009 ಉತ್ತರ

ಎಡದಿಂದ ಬಲಕ್ಕೆ:
1.ದುಮ್ಮಾನ 3.ದಾರಿಹೋಕ
5.ವನೇಚರಿ 6.ಬಿರುಗಾಳಿ
8.ಶವಾಗಾರ 11.ಭದ್ರಗಜ
14.ಅಥರ್ವಣ 15.ರಸಕಸಿ
16.ರಣರಂಗ 17.ವಿಳೇಯ

ಮೇಲಿನಿಂದ ಕೆಳಕ್ಕೆ
:1.ದುರುದ್ದೇಶ
2.ನವರಂಗಾ 3.ದಾರಿಬಿಡು
4.ಕದಳಿ 7.ಗಾರುಡಿಗ
9.ವಾಯುಪಥ
10.ಬಾಣಸಿಗ
12.ವೀರಭದ್ರ
13.ಜಲಾಶಯ 14.ಅಪಾರ

ಎಡದಿಂದ ಬಲಕ್ಕೆ
3.ಹಿಡಿದುಕೊಳ್ಳುವುದನ್ನು ಹೀಗೆನ್ನಬಹುದು (2)
4.ತಾವರೆಯಂಥಹ ವದನ-ಮುಖಕಮಲ (6)
7.ಗಣಿಗಳಿಂದ ದೊರಕುವ ಕಚ್ಚಾ ದ್ರವ್ಯ (3)
8.ವೇದನೆಯಿಂದ ಕೂಗುವಿಕೆ (3)
9.ಇದು ಎಲೆಯಿಂದ ಮಾಡಿದ ಬಟ್ಟಲು (2)
10.ಬೀರುತ್ತಿರುವ ಪ್ರಭೆ (2)
12.ಗಂಡುಕೋತಿಯಿಲ್ಲಿ ತಿರುಗಿ ಕುಳಿತಿದೆ (3)
14.ನರಕಾಧಿಪತಿ ಮೊದಲಿರುವ ಜೋಡಿ (3)
15.ಅಂಧವಿಶ್ವಾಸವನ್ನು ಹೀಗೂ ಹೇಳುತ್ತೇವೆ (6)
18.ಏನನ್ನಾದರೂ ಪಡೆಯಲು ಕೇಳುವುದು (2)

ಮೇಲಿನಿಂದ ಕೆಳಕ್ಕೆ
1.ಆದ್ರ್ರತೆ-ಒದ್ದೆಯಿಂದ ಕೂಡಿದ್ದು (2)
2.ಉತ್ತರಭಾರತದಲ್ಲಿನ ಪರ್ವತಗಳು ಉಲ್ಟಾ ಕಾಣುತ್ತಿವೆ (2)
3.ಜನ ನಡುವೆ ಇಟ್ಟುಕೊಂಡ ಯಕೃತ್ತು (6)
5.ಹಾವಿನಾಕಾರದ ಜಡೆಬಿಲ್ಲೆ (3)
6.ಇದು ದಕ್ಷಿಣ ದೇಶಕ್ಕೆ ಸಂಬಂಧಿಸಿದ್ದು (3)
8.ಹೃದಯದಿಂದ ಮೂಡಿ ಬಂದ ಗೀತೆ (6)
11.ಪ್ರಕಾಶವು ಇಲ್ಲಿ ಬೀರುತ್ತಿದೆ (3)
13.ವಿಷವನ್ನು ಕುಡಿದವ ತಲೆಕೆಳಗಾಗಿದ್ದಾನೆ (3)
16.ಸಂಹಾರಕ ಸ್ವರೂಪನಾದ ದೇವರು (2)
17.ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ (2)

ಕಿರುಸುದ್ದಿ

ಶಾಸಕ ಟೆಂಗಿನಕಾಯಿ ಹರ್ಷ

• **ಹುಬ್ಬಳ್ಳಿ:** ರಾಜ್ಯಸಭೆಗೆ ಎಂ.ನಾಗರಾಜ ಹಾಗೂ ವಿಧಾನ ಪರಿಷತ್ ಚುನಾವಣೆಗೆ ಲಿಂಗರಾಜ ಪಾಟೀಲ ಹಾಗೂ ರಘು ಕೌಟಿಲ್ಯ ಅವರಿಗೆ ಟಿಕೆಟ್ ಘೋಷಿಸಿದ್ದು ಸಂತಸದ ಸಂಗತಿ ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ ಹಲವರು ವರ್ಷದಿಂದ ಪಕ್ಷದಲ್ಲಿ ವಿವಿಧ ಜವಾಬ್ದಾರಿ ಉತ್ತಮವಾಗಿ ನಿಭಾಯಿಸಿದ್ದಾರೆ. ಅದೇ ರೀತಿ ಎಂ.ನಾಗರಾಜ ಅವರು ಸಹ ಸಂಘಟನೆಯಲ್ಲಿ ತೊಡಗಿಕೊಂಡಿದ್ದಾರೆ. ಪಕ್ಷ ನಿಷ್ಠಾವಂತ ಕಾರ್ಯಕರ್ತರಿಗೆ ಟಿಕೆಟ್ ನೀಡಿದ್ದು, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಅಭಿನಂದನೆಗಳ ಸಲ್ಲಿಸಿದ್ದಾರೆ. ಇವರೆಲ್ಲರೂ ಪಕ್ಷದ ತತ್ವ ಸಿದ್ಧಾಂತಗಳ ಅಡಿ ಕಾರ್ಯನಿರ್ವಹಿಸಿ ಸಾಮಾನ್ಯ ಕಾರ್ಯಕರ್ತರಾಗಿದ್ದು ಇಂತಹವರನ್ನು ಪಕ್ಷ ಗುರುತಿಸಿ ಪಕ್ಷವು ರಾಜ್ಯಸಭೆ ಹಾಗೂ ವಿಧಾನ ಪರಿಷತ್‌ಗೆ ಅಭ್ಯರ್ಥಿಯಾಗಿರುವುದು ಶ್ಲಾಘನೀಯ ಕಾರ್ಯ ಎಂದು ತಿಳಿಸಿದ್ದಾರೆ.

ರೂ.5.87ಲಕ್ಷ ಮೌಲ್ಯದ ಚಿನ್ನಾಭರಣ ಕಳುವು

• **ಸಿಂದಗಿ:** ಇತ್ತೀಚೆಗೆ ನಗರದ ವಿವಿಧ ಬಡಾವಣೆಗಳಲ್ಲಿ ಕಳ್ಳರ ಗ್ಯಾಂಗ್ ಸರಣಿಗಳ್ಳತನ ಮಾಡಿದ ಘಟನೆ ನಡೆದಿದೆ. ಸಾಲುಮರದ ತಮ್ಮಕ್ಕನ ವೃಕ್ಷೋತ್ಥಾನದ ಹೊನ್ನಪ್ಪಗೌಡ ಲೇಔಟ್‌ನ ನಿವಾಸಿಯಾದ ಪುಂಡಲೀಕ ಬಿರಾದಾರ ಎಂಬುವವರ ಮನೆಯ ಬಾಗಿಲು ಮುರಿದು ಮನೆಯಲ್ಲಿನ ಲಾಕರ್ ನಲ್ಲಿದ್ದ ರೂ.2.49ಲಕ್ಷ ಮೊತ್ತ ಹಾಗೂ ರಮೇಶ ಎಸ್ .ನಂದಗೌಡರ ಅವರ ಮನೆಯಲ್ಲಿನ ರೂ.1.50ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ವಸ್ತುಗಳನ್ನು ಕಳ್ಳರು ಕಳವು ಮಾಡಿದ್ದಾರೆ. ಅದೇ ರೀತಿಯಾಗಿ ಬೂದಿಹಾಳ ಲೇಔಟ್‌ನ್ ನಿವಾಸಿ ಗಂಗಾಬಾಯಿ ಎಸ್.ಬಳೂಂಡಗಿ ಅವರ ಮನೆಯಲ್ಲಿನ ಬಂಗಾರದಾಭರಣ, ಬೆಳ್ಳಿವಸ್ತು, ನಗದು ಹಣ ಸೇರಿ ರೂ.1.88ಲಕ್ಷದಷ್ಟು ಕಳ್ಳತನವಾಗಿದೆ. ಹೀಗೆ ನಗರದಲ್ಲಿ ಒಟ್ಟು ರೂ.5.87ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ನಗದು ಕಳ್ಳತನವಾಗಿದೆ. ನಗರದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಎಲ್ಲ ಕಳ್ಳತನದ ಪ್ರಕರಣಗಳಿಂದ ನಗರದ ಹೊರವಲಯದ ಬಡಾವಣೆಯಲ್ಲಿ ವಾಸಿಸುವ ನಿವಾಸಿಗಳು ಆತಂಕಕ್ಕೆ ಒಳಗಾಗಿ ಕಳ್ಳರ ಗ್ಯಾಂಗ್‌ನ್ನು ಕೂಡಲೇ ಪೊಲೀಸ್ ಇಲಾಖೆ ಪತ್ತೆ ಮಾಡಬೇಕು ಎಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

1.47 ಲಕ್ಷ ರೂ. ಕಳುವು

• **ಹುಬ್ಬಳ್ಳಿ:** ದಾಜೀಬಾನ್ ಪೇಟೆಯ ಕುಬೇರ ಸಿಲ್ಕ್ ಆ್ಯಂಡ್ ಸಾರೀಸ್ ಮಳಿಗೆಯ ನಾಲ್ಕನೇ ಮಹಡಿಯ ಗ್ರಿಲ್ ಬಾಗಿಲು ಮುರಿದು 1.47 ಲಕ್ಷ ನಗದು ಕಳುವು ಮಾಡಲಾಗಿದೆ. ಮಳಿಗೆ ವ್ಯವಸ್ಥಾಪಕ ರಾಕೇಶ ಕುಲಕರ್ಣಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಹೃದಯಾಘಾತದಿಂದ ಪಿ.ಎಸ್.ಸದಾನಂದ ಸಾವು

• **ಮುಂಡಗೋಡ:** ಲೋಕಧ್ವನಿ ದೈನಂದಿನ ಪತ್ರಿಕೆಯ ನಿವೃತ್ತ ಸಂಪಾದಕ ತಾಲೂಕಿನ ನ್ಯಾಸರ್ಗಿ ಗ್ರಾಮದ ಪಿ.ಎಸ್.ಸದಾನಂದ (73) ಹೃದಯಾಘಾತದಿಂದ ಮಂಗಳವಾರ ಮೃತಪಟ್ಟಿದ್ದಾರೆ.



ಇವರು ಲೋಕಧ್ವನಿ ಪತ್ರಿಕೆಯ ಸಂಪಾದಕರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಇವರಿಗೆ ಮಂಗಳವಾರ ಮಧ್ಯಾಹ್ನ ಎದೆ ನೋವು ಕಾಣಿಸಿಕೊಂಡು ತಕ್ಷಣವೇ ಇಲ್ಲಿನ ತಾಲೂಕು ಆಸ್ಪತ್ರೆಗೆ ದಾಖಲಿಸಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮೃತರ ನಿಧನಕ್ಕೆ ಸಂತಾಪ ಸೂಚಿಸಿದೆ.

ಕೃಷ್ಣಾ ನದಿ ಬತ್ತಿದಾಗ ಮಾತ್ರ ಗೋಚರಿಸುವ ದೇವಾಲಯ!

▸ ಮಲ್ಲಿಕಾರ್ಜುನ ತುಂಗಳ

ದಿಗಂತ ವಿಶೇಷ

• **ರಬಕವಿ-ಬನಹಟ್ಟಿ:** ಕೃಷ್ಣಾನದಿಖಾಲಿಯಾಗಿದ್ದರಿಂದ ಮಹಿಷವಾಡಗಿ ಬ್ಯಾರೇಜ್‌ನ ಹಿಂಭಾಗದಲ್ಲಿ ಕಟ್ಟಿರುವ ಈ ಗುಡಿ(ದೇವಾಲಯ) ಪೂರ್ತಿಯಾಗಿ ಕಾಣತೊಡಗಿದ್ದು, ಕೃಷ್ಣೆ ಪೂರ್ತಿ ಬರಿದಾದಾಗ ಮಾತ್ರ ಕಾಣುವ ಈ ದೇವಸ್ಥಾನ ಅಪರೂಪ ಎನ್ನುವಂತೆ ವರ್ಷದಲ್ಲಿ ಒಂದು ಬಾರಿ ಇಲ್ಲವೇ, 2 ವರ್ಷ, 3 ವರ್ಷ ಹೀಗೆ ಬರಗಾಲ ಬಂದಾಗ ಮಾತ್ರ ಇದು ಗೋಚರಿಸುವುದರ ಜೊತೆಗೆ ಪೂಜೆಗೊಳ್ಳುವ ವಿಶೇಷ ದೇವಸ್ಥಾನವಾಗಿದೆ.

ದಿನ ದಿನಕ್ಕೆ ನೀರು ಕಡಿಮೆಯಾದಂತೆ ಗೋಚರಿಸುವ ಈ ದೇವಾಲಯವು ಪೂರ್ವಕ್ಕೆ ಮುಖ ಮಾಡಿ ಕಟ್ಟಲಾಗಿದೆ. ಬೃಹದಾಕಾರದ ಕರಿ ಕಲ್ಲಿನಿಂದ ನಿರ್ಮಿಸಲಾಗಿರುವ ಕಟ್ಟಡದಲ್ಲಿ ಯಾವುದೇ ವಾಸ್ತು ಶಿಲ್ಪವಾಗಲಿ ಕೆತ್ತನೆಯ ಕೆಲಸವಾಗಲಿ ಇಲ್ಲ, ಆದರೂ ಅದು ನೋಡುಗರನ್ನು ಆಕರ್ಷಿಸುವಂತಿದೆ.

ಈ ದೇವಾಲಯದ ಕುರಿತು ಮಾಹಿತಿ ಕಲೆ ಹಾಕುವಾಗ ರಬಕವಿಯ ಮರೆಗುದ್ದಿ ಮನೆತನದ



ಹಿರಿಯ ಅಜ್ಜ ಬಾಳಪ್ಪ ಮರೆಗುದ್ದಿ ಕಟ್ಟಿಸಿದ್ದು ಎಂದು ತಿಳಿದು ಬಂದಿದ್ದು, ಈಗಲೂ ಆ ದೇವಸ್ಥಾನಕ್ಕೆ ಬಾಳಪ್ಪನ ಗುಡಿ ಅಂತಾ ಕರಿಯುತ್ತಾರೆ. ಆದರೆ, ಇದು ಈಶ್ವರ ದೇವಸ್ಥಾನ.

ಆಗಿನ ಸಾಂಗ್ಲಿ ಸಂಸ್ಥಾನದಿಂದ ದೇವಾಲಯ ಕಟ್ಟಲು ಪರವಾನಗಿ ಪಡೆದು 1912ರ ಸುಮಾರಿಗೆ ಈ ದೇವಾಲಯವನ್ನು ನಿರ್ಮಿಸಲಾಯಿತು. ಧಾರ್ಮಿಕ ಕಾರ್ಯವಾಗಿದ್ದರಿಂದ ನಮ್ಮ ಮುತ್ತ್ಯಾ ಯಾವುದಕ್ಕೂ ನನ್ನ ಹೆಸರು ಬೇಡ ಅಂದರು. ಈ ದೇವಾಲಯ ಕಟ್ಟಿಸಿದರ ಬಗ್ಗೆ ಸಾಂಗ್ಲಿಯಲ್ಲಿ ದಾಖಲೆಗಳು ಮೋಡಿ ಭಾಷೆಯೊಳಗೆ ನೋಡಲು ಸಿಗುತ್ತಾವೆ ಎನ್ನುತ್ತಾರೆ ಮರೆಗುದ್ದಿ ಮನೆತನದವರು.

ಮೊದಲು ನದಿಯ ವ್ಯಾಪ್ತಿ ಬಹಳ ಕಡಿಮೆ ಇದ್ದ ಕಾರಣ ದೇವಾಲಯ ನದಿಯ ದಡದಲ್ಲಿ ಇತ್ತು. ಆದರೆ, 1971ರಲ್ಲಿ ವಿರೇಂದ್ರ ಪಾಟೀಲ ಸರ್ಕಾರ ರಬಕವಿ-ಬನಹಟ್ಟಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಗೆ ಕುಡಿಯುವನೀರಿನಸಲುವಾಗಿ ಬ್ಯಾರೇಜ್ ನಿರ್ಮಿಸಲು ಅನುಮತಿ ನೀಡಿದರು.

1973ರಲ್ಲಿ ದೇವರಾಜ ಅರಸು ಸರ್ಕಾರವಿದ್ದಾಗ ಪ್ರಥಮ ಬಾರಿಗೆ ನೀರನ್ನು ತಡೆ ಹಿಡಿಯಲಾಯಿತು. ಕಾರಣದೇವಾಲಯನೀರೊಳಗೆಮುಳುಗಿಹೋಯಿತು. ಆಗ ಅದೇ ನದಿಯ ಮಧ್ಯ ಭಾಗವಾಯಿತು. ನಿಜಕ್ಕೂ ಒಂದು ಅಪರೂಪದ ದೇವಸ್ಥಾನವಾಗಿರುವ ಇದು ಶತಮಾನಗಳು ಕಳೆದರೂ ಯಾವುದೇ ನೀರಿಗೂ ಗರ್ಭಗುಡಿಯಲ್ಲಿರುವ ಮೂರ್ತಿಗಳು ಜಗ್ಗದೇ ಅಲುಗಾಡದೇ ಹಾಗೇ ನಿಂತಿರುವುದು ವಿಶೇಷವಾಗಿದೆ.

ಈ ದೇವಾಲಯಕ್ಕೆಂದೇ ಹಳೆಯ ತಲೆಮಾರಿನ ಹಿರಿಯಜ್ಜ ಹಾಗು ಅವರ ಪಾಲನೆಯಿಂದ ಈಗಲೂ ಹಲವಾರು ಜನ ಭಕ್ತರು ಇದ್ದಾರೆ. ಒಟ್ಟಾರೆ ಬೇಸಿಗೆ ಸಂದರ್ಭದಲ್ಲಿ ಮಾತ್ರ ಕಾಣಸಿಗುವ ಈ ದೇವಾಲಯವು ಭಣಗುಡುತ್ತಿರುವ ನದಿಯ ಮಧ್ಯ ದೇವಾಲಯ ವೀಕ್ಷಣೆಯೊಂದಿಗೆ ಕಣ್ಣಿಗೆ ಹಾಗೂ ಮನಸ್ಸಿಗೆ ಸ್ವಲ್ಪಮಟ್ಟಿಗಾದರೂ ನೆಮ್ಮದಿ ದೊರಕಲು ಕಾರಣವಾಗುತ್ತಿದೆ.

ಪೆಂಕಾಕ್ ಸೀಲತ್‌ನಲ್ಲಿ ಉತ್ತಮ ಸಾಧನೆ

• **ಹನುಮಸಾಗರ:** ಬೆಂಗಳೂರಿನ ಡಾ.ಬಿ.ಆರ್.ಅಂಬೇಡ್ಕರ್ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 12ನೇ ರಾಜ್ಯಮಟ್ಟದ ಪೆಂಕಾಕ್ ಸೀಲತ್ ಚಾಂಪಿಯನ್ ಶಿಪ್‌ನಲ್ಲಿ ಹನುಮಸಾಗರದ ಕ್ರೀಡಾಪಟುಗಳು ಅತ್ಯುತ್ತಮ ಪ್ರದರ್ಶನ ನೀಡಿ ಹಲವು ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಸ್ಪರ್ಧೆಯಲ್ಲಿ ರಕ್ಷಿತಾ ಗುಡಗದ್ದಿ ಫೈಟ್ ವಿಭಾಗದಲ್ಲಿ ಪ್ರಥಮ, ಅಕ್ಷತಾ ಬದಾಮಿ ಸೋಲೋ ಹಾಗೂ ಫೈಟ್ ವಿಭಾಗಗಳಲ್ಲಿ ಪ್ರಥಮ, ಅನಿತಾ ಬಸವರಾಜ ಇಟಗಿ ಗಾಂಡಾ ಮತ್ತು ಫೈಟ್ ವಿಭಾಗಗಳಲ್ಲಿ ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ.

ಇನ್ನು ರತ್ನಾ (ಸ್ವಪ್ನಾ) ಬದಾಮಿ ಗಾಂಡಾ ವಿಭಾಗದಲ್ಲಿ ಪ್ರಥಮ ಹಾಗೂ ಫೈಟ್ ಮತ್ತು ತುಂಗ್ಗಲ್ ವಿಭಾಗಗಳಲ್ಲಿ ದ್ವಿತೀಯ, ಮಂಜುನಾಥ ಬೇನಾಳ (ಹನಮನಾಳ) ಫೈಟ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಜೂ.29ರಂದು ಮಹಾರಾಷ್ಟ್ರದ ನಾಸಿಕ್‌ನಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಪೆಂಕಾಕ್ ಸೀಲತ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಕ್ರೀಡಾಪಟುಗಳ ಸಾಧನೆಗೆ ತರಬೇತುದಾರರಾದ ಬಾಚ್ಚ ಸಿಂಗ್ ಮೈತ್ಯ ಹಾಗೂ ಈರಣ್ಣ ಬದಾಮಿ ಮಾರ್ಗದರ್ಶನ ಪ್ರಮುಖ ಕಾರಣವಾಗಿದೆ. ಕಾರ್ಯಕ್ರಮದಲ್ಲಿ ಪೆಂಕಾಕ್ ಸೀಲತ್ ಸಂಸ್ಥೆಯ ರಾಷ್ಟ್ರೀಯ ತಾಂತ್ರಿಕ ನಿರ್ದೇಶಕ ಅಬ್ದುಲ್ ರಜಾಕ್ ಟೈಲರ್, ರಾಜ್ಯ ಕಾರ್ಯದರ್ಶಿ ವಿಜಯಕುಮಾರ್ ಹಂಚಿನಾಳ, ಬೋಣಿ ಬೆಂಗಳೂರು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.



ಮೋದಿ ನೇತೃತ್ವದ ಸರ್ಕಾರ 12 ವರ್ಷ ಯಶಸ್ವಿ: ವಿಶೇಷ ಪೂಜೆ



• **ಶಿರಸಿ:** ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ 12 ವರ್ಷಗಳ ಯಶಸ್ವಿ ಆಡಳಿತಾವಧಿ ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ, ಪ್ರಧಾನಿಯವರಿಗೆ ಉತ್ತಮ ಆರೋಗ್ಯ, ದೀರ್ಘಾಯುಷ್ಯ ಲಭಿಸಲಿ ಮತ್ತು ದೇಶದ ಜನಪರ ಆಡಳಿತ ಮತ್ತಷ್ಟು ಯಶಸ್ವಿಯಾಗಿ ಮುಂದುವರಿಯಲಿ ಎಂದು ಪ್ರಾರ್ಥಿಸಿ ಶಿರಸಿಯ ಪ್ರಸಿದ್ಧ ಶಕ್ತಿದೇವಿ ಶ್ರೀ ಮಾರಿಕಾಂಬಾ ದೇವಸ್ಥಾನದಲ್ಲಿ ಮಂಗಳವಾರ ವಿಶೇಷ ಪೂಜೆ ಸಲ್ಲಿಸಲಾಯಿತು.

ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಾರ್ಥನೆ ಸಲ್ಲಿಸಿದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದರು.

ಕಳೆದ 12 ವರ್ಷಗಳ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ದಕ್ಷ ನೇತೃತ್ವದಲ್ಲಿ ದೇಶವು ಸರ್ವತೋಮುಖ ಪ್ರಗತಿ ಸಾಧಿಸಿದೆ. ಮೂಲಸೌಕರ್ಯ ಅಭಿವೃದ್ಧಿ, ಬಡವರ ಕಲ್ಯಾಣ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ, ದೇಶದ ಗಡಿ ಭದ್ರತೆ ಹಾಗೂ ಜಾಗತಿಕ ಮಟ್ಟದಲ್ಲಿ ಭಾರತದ ಕೀರ್ತಿಯನ್ನು ಎತ್ತಿ ಹಿಡಿದಿರುವುದು ಮೋದಿ ಸರ್ಕಾರದ ಐತಿಹಾಸಿಕ ಸಾಧನೆಗಳಾಗಿವೆ. ದೇಶದ ಸಮಗ್ರ ವಿಕಾಸಕ್ಕಾಗಿ ಅವರ ನಾಯಕತ್ವ ಮುಂದಿನ ದಿನಗಳಲ್ಲೂ ಮತ್ತಷ್ಟು ಬಲಗೊಳ್ಳಬೇಕಿದೆ ಎಂದು ಆಶಯ ವ್ಯಕ್ತಪಡಿಸಿದರು.

ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಬಿಜೆಪಿ ಪ್ರಮುಖರಾದ ಆರ್.ಡಿ.ಹೆಗಡೆ, ಆನಂದ ಸಾಲೇರ, ಉಷಾ ಹೆಗಡೆ, ನಾಗರಾಜ ನಾಯ್ಕ, ಸದಾನಂದ ಭಟ್ಟ ಸೇರಿದಂತೆ ಪಕ್ಷದ ಪ್ರಮುಖ ಮುಖಂಡರು ಹಾಗೂ ನೂರಾರು ಸಂಖ್ಯೆಯ ಕಾರ್ಯಕರ್ತರು ಉಪಸ್ಥಿತರಿದ್ದರು.



ಗೋಕರ್ಣ: ಬೀದರನ ಮಾಣಿಕ ಪ್ರಭು ಸಂಸ್ಥಾನದ ಜ್ಞಾನರಾಜ ಮಾಣಿಕ ಪ್ರಭು ಮಹಾರಾಜರವರು ಇಲ್ಲಿನ ಮಹಾಬಲೇಶ್ವರ ಮಂದಿರಕ್ಕೆ ಮಂಗಳವಾರ ಭೇಟಿ ನೀಡಿ ಆತ್ಮಲಿಂಗಕ್ಕೆ ಪೂಜೆ ಸಲ್ಲಿಸಿದರು. ಮಂದಿರದ ಪ್ರಧಾನ ಅರ್ಚಕರಾದ ವೇ. ಅಮೃತೇಶ ಹಿರೇ ಪೂಜಾ ಕೈಂಕರ್ಯ ನೆರವೇರಿಸಿದರು. ಈ ವೇಳೆ ಮಂದಿರದ ವ್ಯವಸ್ಥಾಪಕ ಸುಬ್ರಹ್ಮಣ್ಯ ಹೆಗಡೆ, ಶಿಷ್ಯವೃಂದವರು ಇದ್ದರು. ಇದಕ್ಕೂ ಮೊದಲು ಮಹಾಗಣಪತಿ ಮಂದಿರಕ್ಕೆ ತೆರಳಿ ಪೂಜೆ ನೆರವೇರಿಸಿದರು.

ಸಮಸ್ಯೆಗಳ ಪರಿಹಾರಕ್ಕೆ ಶೀಘ್ರ ಕ್ರಮಕೈಗೊಳ್ಳಲು ಒತ್ತಾಯ

• **ಹುಬ್ಬಳ್ಳಿ:** ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ಇತ್ತೀಚೆಗೆ ಜರುಗಿದ ಆಡಳಿತ ಮಂಡಳಿ ಸಭೆಯಲ್ಲಿ ರಾಜ್ಯದ ವಿವಿಧ ಭಾಗಗಳ ವ್ಯಾಪಾರಸ್ಥರು, ಉದ್ಯಮಿಗಳು, ರೈತರು ಹಾಗೂ ಸಾರ್ವಜನಿಕರು ಎದುರಿಸುತ್ತಿರುವ ಹಲವಾರು ಮಹತ್ವದ ಸಮಸ್ಯೆಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು.

ಸಭೆಯಲ್ಲಿ ಭಾಗವಹಿಸಿದ್ದ ಆಡಳಿತ ಮಂಡಳಿ ಸದಸ್ಯರುಗಳು ಮತ್ತು ವಿವಿಧ ವಲಯಗಳ ಪ್ರತಿನಿಧಿಗಳು ತಮ್ಮ ಪ್ರದೇಶಗಳ ಸಮಸ್ಯೆಗಳನ್ನು ಮಂಡಿಸಿ, ಅವುಗಳ ಶೀಘ್ರ ಪರಿಹಾರಕ್ಕಾಗಿ ಸರ್ಕಾರ ಮತ್ತು ಸಂಬಂಧಿತ ಇಲಾಖೆಗಳು ತುರ್ತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪ್ರಯಾಣಿಕರ ಅನುಕೂಲಕ್ಕಾಗಿ ಅಣ್ಣಿಗೇರಿ ರೈಲ್ವೆ ನಿಲ್ದಾಣದಲ್ಲಿ ಕ್ಯಾಂಟೀನ್ ಸೌಲಭ್ಯ ಕಲ್ಪಿಸುವುದು ಹಾಗೂ ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ಲಗೇಜ್ ಸಾಗಾಟಕ್ಕಾಗಿ ಕೂಲಿದಾರರು ನಿಗದಿತ ದರಕ್ಕಿಂತ ಹೆಚ್ಚಿನ ಶುಲ್ಕ ವಸೂಲಿ ಮಾಡುತ್ತಿರುವ ಕುರಿತು ಕಟ್ಟುನಿಟ್ಟಿನ



ಕ್ರಮ ಕೈಗೊಂಡು ಪಾರದರ್ಶಕ ದರ ವ್ಯವಸ್ಥೆ ಜಾರಿಗೊಳಿಸುವಂತೆ ಸಭೆಯಲ್ಲಿ ಆಗ್ರಹಿಸಿದರು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪ್ರದೇಶದಲ್ಲಿ ಬಿಆರ್‌ಟಿಎಸ್ ಯೋಜನೆಯಿಂದ ಉಂಟಾಗುತ್ತಿರುವ ಸಂಚಾರ ದಟ್ಟಣೆ, ಅಪಘಾತಗಳ ಸಾಧ್ಯತೆ ಮತ್ತು ಸಾರ್ವಜನಿಕರ ದೈನಂದಿನ ತೊಂದರೆಗಳನ್ನು ಪರಿಗಣಿಸಿ ಯೋಜನೆಯ ಕಾರ್ಯಕ್ಷಮತೆಯನ್ನು ಮರುಪರಿಶೀಲಿಸುವ ಅಗತ್ಯವಿದೆ. ನಗರದಲ್ಲಿ ನಡೆಯುತ್ತಿರುವ ಫ್ಲೈಓವರ್ ಕಾಮಗಾರಿ ಸಂಪೂರ್ಣ ಮುಗಿಯುವವರೆಗೆ ಬಿಆರ್‌ಟಿಎಸ್ ಸಂಚಾರಿ ಮಾರ್ಗದಲ್ಲಿ ಸಾರ್ವಜನಿಕ ವಾಹನಗಳಿಗೆ ಮುಕ್ತ ಅವಕಾಶ ನೀಡಲು ಸದಸ್ಯರು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಕುಂದಗೋಳ ಕ್ರಾಸ್-ಬುಡರಸಿಂಗಿ ಮಧ್ಯದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸರ್ವಿಸ್ ರಸ್ತೆ ನಿರ್ಮಾಣ ಕಾಮಗಾರಿಯನ್ನು ತ್ವರಿತವಾಗಿ ಕೈಗೊಂಡು ಸಾರ್ವಜನಿಕರ ಸುರಕ್ಷಿತ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕೆಂದು ಸದಸ್ಯರು ಕೋರಿದರು.

ಕೈಗಾರಿಕಾ ವಸಾಹತುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕ ಉದ್ಯಮಿಗಳು ಇ-ಸ್ವತ್ತು ಉತಾರ ಲಭ್ಯವಿಲ್ಲದ ಕಾರಣ ಬ್ಯಾಂಕ್ ಸಾಲ ಸೌಲಭ್ಯಗಳಿಂದ ವಂಚಿತರಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಕೈಗಾರಿಕೆಗಳ ಬೆಳವಣಿಗೆಗೆ ಅಡ್ಡಿಯಾಗುತ್ತಿರುವ ಈ ಸಮಸ್ಯೆಯನ್ನು ಸರ್ಕಾರ ತಕ್ಷಣ ಪರಿಹರಿಸಿ ಉದ್ಯಮ ಸ್ನೇಹಿ ವಾತಾವರಣ ನಿರ್ಮಿಸಬೇಕೆಂದು ಸದಸ್ಯರು ಆಗ್ರಹಿಸಿದರು.

ಕೃಷಿ ಚಟುವಟಿಕೆಗಳು ಹಾಗೂ ತುರ್ತು ಅಗತ್ಯಗಳಿಗಾಗಿ ರೈತರಿಗೆ ಕ್ಯಾನ್‌ಗಳಲ್ಲಿ ಡೀಸೆಲ್ ಮತ್ತು ಪೆಟ್ರೋಲ್ ವಿತರಣೆ ಮಾಡಲು ಪೆಟ್ರೋಲ್ ಬಂಕ್‌ಗಳಿಗೆ ಸೂಕ್ತ ನಿರ್ದೇಶನ ನೀಡುವುದು ಅಗತ್ಯವಾಗಿದೆ. ಜೊತೆಗೆ ಮುಂಗಾರು ಹಂಗಾಮಿನಲ್ಲಿ ರಾಸಾಯನಿಕ ಗೊಬ್ಬರಗಳ ಕೊರತೆ ಉಂಟಾಗದಂತೆ ಮುಂಜಾಗ್ರತಾ ಕ್ರಮ ಕೈಗೊಂಡು, ನಿಗದಿತ ಸಮಯದಲ್ಲಿ ಸಮರ್ಪಕ ಪ್ರಮಾಣದಲ್ಲಿ ರಸಗೊಬ್ಬರ ಪೂರೈಕೆ ಖಚಿತಪಡಿಸಬೇಕೆಂದು ಸಭೆಯಲ್ಲಿ ಸಂಸ್ಥೆಯ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ಅವರು ಸರಕಾರಕ್ಕೆ ಮನವಿ ಮಾಡಿದ್ದಾರೆ.

ಸರ್ಕಾರ ಹಾಗೂ ಸಂಬಂಧಿತ ಇಲಾಖೆಗಳು ಈ ಸಮಸ್ಯೆಗಳ ಗಂಭೀರತೆಯನ್ನು ಅರಿತು ಸಕಾರಾತ್ಮಕ ಸ್ಪಂದನೆ ನೀಡಲಿವೆ ಎಂಬ ವಿಶ್ವಾಸವನ್ನು ಸಂಸ್ಥೆಯ ಗೌರವ ಕಾರ್ಯದರ್ಶಿ ಉದಯ ರೇವಣಕರ ವ್ಯಕ್ತಪಡಿಸಿದ್ದಾರೆ.

ಕ್ರಾಂತಿಕಾರಿ ಬದಲಾವಣೆ ತಂದ ಎಐ

• **ಧಾರವಾಡ:** ಇಲ್ಲಿನ ದವಳಗಿರಿ ಹತ್ತಿರದ ಎಸ್‌ಡಿಎಂ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜನರೇಟಿವ್ ಎಐ, ಏಜೆಂಟಿಕ್ ಎಐ; ಪ್ರಾಂಪ್ಟ್ ಎಂಜಿನಿಯರಿಗ್‌ನಿಂದ ಅಟೊನೋಮಸ್ ಎಐ ಎಜೆಂಟರ್‌ಗಳ ವಿನ್ಯಾಸ ಕಾರ್ಯಕ್ರಮ ಜರುಗಿತು.

ಉದ್ಘಾಟಿಸಿದ ಎಸ್‌ಡಿಎಂ ಸೊಸೈಟಿ ಕಾರ್ಯದರ್ಶಿ ವಿ.ಜೀವಂದರಕುಮಾರ್ ಮಾತನಾಡಿ, ಇಂದಿನ ಯುಗದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಶಿಕ್ಷಣ, ಸಂಶೋಧನೆ, ಕೈಗಾರಿಕೆ ಮತ್ತು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿರುವುದಾಗಿ ತಿಳಿಸಿದರು. ಅಧ್ಯಾಪಕರು ಬದಲಾದ ತಂತ್ರಜ್ಞಾನಗಳ ಕುರಿತು ಅರಿವು ಹೊಂದುವ ಮೂಲಕ ಜ್ಞಾನ ವೃದ್ಧಿಸಿಕೊಳ್ಳಬೇಕು. ಅಲ್ಲದೇ ಅಧ್ಯಾಪಕರು ಕಾರ್ಯಾಗಾರದಲ್ಲಿ ಕಲಿತ ಜ್ಞಾನವನ್ನು ತಮ್ಮ ವರ್ಗ ಕೊಠಡಿಗಳಲ್ಲಿ ಸಹ ಅನುಷ್ಠಾನಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ರಮೇಶ ಚಕ್ರಸಾಲಿ ಮಾತನಾಡಿ, ಅಧ್ಯಾಪಕರು ಆಧುನಿಕ ಕೃತಕ ಬುದ್ಧಿಮತ್ತೆ ಉಪಕರಣಗಳು ಮತ್ತು ತಂತ್ರಜ್ಞಾನ ಪರಿಚಯದಿಂದ ಬೋಧನೆ, ಸಂಶೋಧನೆ ಹಾಗೂ ನಾವೀನ್ಯತೆಯಲ್ಲಿ ಬದಲಾವಣೆ ತರಬಹುದು ಎಂದರು. ಪ್ರಾಂಪ್ಟ್ ಎಂಜಿನಿಯರಿಂಗ್, ಲಾರ್ಜ್ ಲ್ಯಾಂಗ್ವೇಜ್ ಮೊಡೆಲ್ಸ್, ಜನರೇಟಿವ್ ಎಐ, ಏಜೆಂಟಿಕ್ ಎಐ, ಆಟೊನೋಮಸ್ ಎಐ ಏಜೆಂಟ್‌ಗಳ ವಿನ್ಯಾಸ-ಅಭಿವೃದ್ಧಿ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ತರಬೇತಿ ನೀಡುವರು. ಕಾಲೇಜಿನ ವಿವಿಧ ವಿಭಾಗಗಳ ಅಧ್ಯಾಪಕರು ಭಾಗವಹಿಸಿದ್ದರು. ಪ್ರೊ. ಮೇಘಾ ಹುಕ್ಕೇರಿ ಪ್ರಾರ್ಥಿಸಿದರು. ಪ್ರೊ. ರಾಜೇಶ್ವರಿ ಪಾಟೀಲ ನಿರೂಪಿಸಿದರು. ಸಂಯೋಜಕಿ ಡಾ.ಲೀನಾ ಸಾಕ್ರಿ ಸ್ವಾಗತಿಸಿದರು. ಡಾ.ಸಚ್ಚಿದಾನಂದ ಜೋಶಿ ವಂದಿಸಿದರು.



ಕೊಲೆ ಪ್ರಕರಣ: ಮೂವರ ಬಂಧನ

• **ಬೆಳಗಾವಿ:** ಜಿಲ್ಲೆಯ ಬೈಲಹೊಂಗಲ ಉಪವಿಭಾಗದ ಕಿತ್ತೂರು ವೃತ್ತದ ದೊಡವಾಡ ಪೊಲೀಸ್ ಠಾಣೆ ಪೊಲೀಸರು ಕೊಲೆ ಪ್ರಕರಣವೊಂದನ್ನು ಭೇದಿಸಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.







ಮಂಗಳವಾರ ನಗರದ ಪೊಲೀಸ್ ಕಚೇರಿಯಲ್ಲಿ ಎಸ್ಪಿ ಕೆ.ರಾಮರಾಜನ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೃತ ಫಕೀರಪ್ಪ ಮಲ್ಲಪ್ಪ ಕಿರ್ಸಾಲಿ (38) ಮೇ 29ರಂದು ಮೃತದೇಹ ದೊಡವಾಡ ಗ್ರಾಮದ ಜಮೀನೊಂದರಲ್ಲಿ ಪತ್ತೆಯಾಗಿದೆ. ಮೃತ ಫಕೀರಪ್ಪ ಆರಂಭದಲ್ಲಿ ಅನುಮಾನಾಸ್ಪದ ಮೃತಪಟ್ಟಿರುವುದಾಗಿ ನಮ್ಮ ಪೊಲೀಸರು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡರು. ಈ ಕೊಲೆ ಪ್ರಕರಣದ ಬಗ್ಗೆ ತನಿಖೆ ಕೈಗೊಂಡಾಗ ಬೇರೆಯ ಸ್ವರೂಪ ಪಡೆದುಕೊಂಡಿದೆ. ಮೃತನ ಪತ್ನಿ ನೀಡಿದ ದೂರಿನ ಮೇರೆಗೆ ಹಾಗೂ ಸಿಸಿ ಟಿವಿ ದೃಶ್ಯಗಳು ಮತ್ತು ಇತರ ಸಾಕ್ಷ್ಯಾಧಾರಗಳ ಪರಿಶೀಲನೆಯ ನಂತರ ಇದು ಕೊಲೆ ಪ್ರಕರಣ ಎಂಬುದು ಬೆಳಕಿಗೆ ಬಂದಿದೆ ಎಂದು ಹೇಳಿದರು. ಕೊಲೆ ಪ್ರಕರಣಕ್ಕೆ ಬೆನ್ನೂ ಬಿದ್ದ ಪೊಲೀಸರು, ತನಿಖೆಯಲ್ಲಿ ಹಾಲಪ್ಪ ಸಹದೇವಪ್ಪ ಜವಳಿ, ಮಂಜುನಾಥ ಪುಂಡಲೀಕಪ್ಪ ತಳವಾರ ಹಾಗೂ ಅರ್ಜುನ ಲಕ್ಕಪ್ಪ ಚೂನಪ್ಪಗೋಳ ಎಂಬುವರು ಮೂವರು ಸೇರಿಕೊಂಡು ಕೊಲೆ ಮಾಡಿದ್ದಾರೆಂದು ತಿಳಿದು ಬಂದಿದೆ.

ಮೃತ ಫಕೀರಪ್ಪ ಅವರು ಆರೋಪಿಗಳ ಬಳಿ ಕುರಿ ಕಾಯುವ ಕೆಲಸಕ್ಕೆ ಸೇರಿ ರೂ.10,000 ಮುಂಗಡ ಹಣ ಪಡೆದಿದ್ದರು. ಬಳಿಕ ಕೆಲಸ ಬಿಟ್ಟು ಮನೆಗೆ ತೆರಳಿದ್ದರಿಂದ ಆರೋಪಿಗಳು ಮತ್ತು ಮೃತನ ನಡುವೆ ವೈಮನಸ್ಸು ಉಂಟಾಗಿತ್ತು. ಮೇ 28ರಂದು ಹಣ ಹಾಗೂ ಕೆಲಸದ ವಿಚಾರವಾಗಿ ನಡೆದ ಜಗಳದ ವೇಳೆ ಆರೋಪಿಗಳು ಫಕೀರಪ್ಪನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಕೊಲೆ ಮಾಡಿದ್ದಾರೆ ಎಂದು ತನಿಖೆ ವೇಳೆ ತಿಳಿದು ಬಂದಿದೆ ಎಂದು ಹೇಳಿದರು.

ದೊಡವಾಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಜೂನ್ 6ರಂದು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಎಸ್ಪಿ ಕೆ. ರಾಮರಾಜನ್ ತಿಳಿಸಿದರು.

ಅಪ್ರಾಪ್ತನಿಂದ ಕಾರು ಚಾಲನೆ: ರೂ.25ಸಾವಿರ ದಂಡ

• **ಬೆಳಗಾವಿ:** ಅಪ್ರಾಪ್ತ ಬಾಲಕನೊಬ್ಬ ಸಾರ್ವಜನಿಕ ರಸ್ತೆಯಲ್ಲಿ ಕಾರು ಚಾಲನೆ ಮಾಡುತ್ತಿದ್ದ ವೇಳೆ ಸಂಚಾರಿ ಪೊಲೀಸರು ವಾಹನ ಸಮೇತ ಆತನನ್ನು ವಶಕ್ಕೆ ಪಡೆದ ಘಟನೆ ನಗರದ ಕಿತ್ತೂರು ಚನ್ನಮ್ಮ ವೃತ್ತ ಸಮೀಪದ ಗಣೇಶಗುಡಿ ಬಳಿ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಾಹನದ ಮಾಲೀಕರಿಗೆ ರೂ.25 ಸಾವಿರ ದಂಡ ವಿಧಿಸಿರುವ ಘಟನೆ ಬೆಳಕಿಗೆ ಬಂದಿದೆ.

ಕೆಎ-26-ಎಂ-3409 ನೋಂದಣಿ ಸಂಖ್ಯೆಯ ಕಾರನ್ನು ಅಪ್ರಾಪ್ತ ಬಾಲಕನೊಬ್ಬ ಚಲಾಯಿಸುತ್ತಿರುವುದು ಪೊಲೀಸರ ಗಮನಕ್ಕೆ ಬಂದಿತ್ತು. ತಕ್ಷಣ ಎಚ್ಚೆತ್ತ ಸಂಚಾರಿ ಪೊಲೀಸರು ಗಣೇಶಗುಡಿ ಬಳಿ ಕಾರನ್ನು ತಡೆದು ಪರಿಶೀಲನೆ ನಡೆಸಿದಾಗ, ಚಾಲಕ ಅಪ್ರಾಪ್ತ ವಯಸ್ಸಿನ ಬಾಲಕ ಎಂಬುದು ದೃಢಪಟ್ಟಿದೆ.

ಸಾರ್ವಜನಿಕರ ಜೀವಕ್ಕೆ ಅಪಾಯ ಉಂಟುಮಾಡುವ ರೀತಿಯಲ್ಲಿ ಅಪ್ರಾಪ್ತನಿಗೆ ವಾಹನ ಚಾಲನೆಗೆ ಅವಕಾಶ ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ಕಾರನ್ನು ವಶಪಡಿಸಿಕೊಂಡು, ಬಾಲಕನ ಪೋಷಕರು ಹಾಗೂ ವಾಹನದ ಮಾಲೀಕರಿಗೆ ಅಧಿಕೃತ ನೋಟಿಸ್ ಜಾರಿ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ವಾಹನದ ಮಾಲೀಕರಿಗೆ ರೂ.25,000 ದಂಡ ವಿಧಿಸಲಾಗಿದೆ.

ಗ್ರೂಪ್ ಎ, ಬಿ ವೃಂದದ 384 ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ
ಸಿಬಿಐ, ನ್ಯಾಯಾಂಗ ತನಿಖೆಗೆ ಸಿದ್ದೇಶ್ ಒತ್ತಾಯ

• **ಬಳ್ಳಾರಿ:** ಕರ್ನಾಟಕ ಲೋಕಸೇವಾ ಆಯೋಗ 2023-24ನೇ ಸಾಲಿನಲ್ಲಿ ನಡೆಸಿದ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ ಎ ಹಾಗೂ ಗ್ರೂಪ್ ಬಿ ವೃಂದದ 384 ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದ್ದು, ಅರ್ಹರಿಗೆ ಅನ್ಯಾಯವಾಗಿದೆ. ಕೂಡಲೇ ಸರ್ಕಾರ ಈ ಪ್ರಕರಣವನ್ನು ಸಿಬಿಐ ಅಥವಾ ನ್ಯಾಯಾಂಗ ತನಿಖೆಗೆ ವಹಿಸಬೇಕು ಎಂದು ಸಾಮಾಜಿಕ ಹೋರಾಟಗಾರ ಸಿದ್ದೇಶ್ ಉಳುರ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರನಡೆದಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ರೇಡ್ ಎ ಹುದ್ದೆಗೆ 1.60 ಕೋಟಿ, ಗ್ರೂಪ್ ಬಿ ಹುದ್ದೆಗೆ 1.10 ಲಕ್ಷ ಹಣದ ವ್ಯವಹಾರ ನಡೆದಿದೆ ಎನ್ನುವ ಆರೋಪಗಳು ಹರಿದಾಡುತ್ತಿವೆ. ಈ ಕುರಿತು ಸರ್ಕಾರ ಗಂಭೀರವಾಗಿ ಪರಿಗಣಿಸಿ ಕೂಡಲೇ ತನಿಖೆಗೆ ಒಳಪಡಿಸಬೇಕು, ತಪ್ಪಿತಸ್ಥರು ಯಾರೇ ಇರಲಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು



ಎಂದು ಒತ್ತಾಯಿಸಿದರು.

ಅರ್ಹತೆಯೇ ಇಲ್ಲದ ಮಕ್ಕಳು, ಪ್ರಭಾವಿಗಳ ಸಂಬಂಧಿಕರು, ಅವರ ಮಕ್ಕಳಿಗೆ ಮಣೆ ಹಾಕಲಾಗಿದೆ. ಸರ್ಕಾರದ ಪ್ರಭಾವಿ ಸಚಿವರು, ಉನ್ನತ ಅಧಿಕಾರಿಗಳು, ಕೆಪಿಎಸ್ ಸಿ ಹಾಗೂ ಕೆಇಎ ಅಧಿಕಾರಿಗಳು ಈ ಅಕ್ರಮದಲ್ಲಿ ಭಾಗಿಯಾಗಿರುವ ಶಂಕೆಯಿದೆ. ನೇಮಕಾತಿ ಪ್ರಕ್ರಿಯೆ ಸಂಪೂರ್ಣ ಅಕ್ರಮವಾಗಿ ನಡೆದಿದೆ, ಪಾರದರ್ಶಕವಾಗಿ ಈ ನೇಮಕಾತಿ ಪ್ರಕ್ರಿಯೆ ನಡೆಯದ ಹಿನ್ನೆಲೆಯಲ್ಲಿ, ಅರ್ಹರು, ಹೆಚ್ಚು ಅಂಕಗಳನ್ನು ಪಡೆದ ಪ್ರತಿಭಾನ್ವಿತ ಮಕ್ಕಳಿಗೆ ಅನ್ಯಯವಾಗಿದೆ.

ಇದರಿಂದ ಮಕ್ಕಳ ಕುಟುಂಬದ ಸದಸ್ಯರ ಆತ್ಮಸ್ಥೈರ್ಯ ಕುಗ್ಗಿದಂತಾಗಿದೆ. ಈ ಹಗರಣಕ್ಕೆ ಸಂಬಂಧಿಸಿ ರಾಜ್ಯ ಸರ್ಕಾರ ಕೆಪಿಎಸ್‌ಸಿ ಯಾವುದೇ ತನಿಖಾ ಸಂಸ್ಥೆಗಳಿಂದ ತನಿಖೆಗೆ ಒಳಪಡಿಸದೆ, ಕೆಪಿಎಸ್‌ಸಿ ಅಧಿಕಾರಿಗಳಿಂದ ಆಂತರಿಕ ತನಿಖೆ ನಡಿಸಿದೆ, ದುರಂತಕ್ಕೆ ವರದಿಯಲ್ಲಿ ಕ್ಲೀನ್ ಚಿಟ್ ನೀಡಿರುವುದು ನಾನಾ ಅನುಮಾನ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ಸಿಬಿಐ ಅಥವಾ ಇಡಿ ಅಥವಾ ನ್ಯಾಯಾಂಗ ತನಿಖೆ ಒಳಪಡಿಸಿ, ಪ್ರತಿಭಾನ್ವಿತ ಮಕ್ಕಳಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

11 ವಿದ್ಯಾರ್ಥಿಗಳು ಅಗ್ನಿವೀರರಾಗಿ ಆಯ್ಕೆ

▸ ಮಹಾಂತೇಶ ಕಣವಿ

ದಿಗಂತ ವಿಶೇಷ

• **ಧಾರವಾಡ:** ವಿದ್ಯಾಕಾಶಿಯ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಂದಾದ ಮರಾಠಾ ವಿದ್ಯಾಪ್ರಸಾರಕ ಮಂಡಳದ ಶ್ರೀ ಛತ್ರಪತಿ ಶಿವಾಜಿ ಮಹಾರಾಜ ಕಲಾ-ವಾಣಿಜ್ಯ ಪದವಿ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ ಪ್ರಸಕ್ತ ಐತಿಹಾಸಿಕ ಸಾಧನೆಗೆ ಸಾಕ್ಷಿಯಾಗಿದೆ.

ಮಹಾವಿದ್ಯಾಲಯದ ಬರೋಬ್ಬರಿ 11 ವಿದ್ಯಾರ್ಥಿಗಳು 'ಅಗ್ನಿಪಥ್' ಕಠಿಣ ಪ್ರಕ್ರಿಯೆ ಯಶಸ್ವಿಯಾಗಿ ಪೂರೈಸುವ ಮೂಲಕ ಭಾರತೀಯ ಸೈನ್ಯಕ್ಕೆ ಆಯ್ಕೆಯಾಗಿರುವುದು ಹೆಮ್ಮೆಯ ವಿಷಯ.

ಜ್ಯೋತಿಬಾ ರಾಧಾಯಿ, ರೋಹಿತ ಕಾಟ್ಕರ್, ಮುತ್ತುರಾಜ ಹೊಟ್ಟಿ, ಬಸವರಾಜ ಈಳಗೇರ, ಪ್ರದೀಪ ಶಿವಳ್ಳಿ, ಪ್ರಜ್ವಲ್ ಘಾಟಗೆ, ಚೇತನ ಜೋಡಳ್ಳಿ, ವಿನಾಯಕ ತಳವಾರ, ಕಲ್ಮೇಶ ಮೊರಬದ, ಕಿರಣ ಅಂಬಾಯಿ, ಶ್ರೀಹರಿ ಬಡಿಗೇರ ಆಯ್ಕೆ ಆಗಿದ್ದಾರೆ.

ಒಂದೇ ಮಹಾವಿದ್ಯಾಲಯದಿಂದ ಇಷ್ಟು ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದೇಶದ ರಕ್ಷಣಾ ಪಡೆಗೆ 'ಅಗ್ನಿವೀರ'ರಾಗಿ ಆಯ್ಕೆ ಆಗಿರುವುದಂತೂ ವಿದ್ಯಾಕಾಶಿ ಧಾರವಾಡ ಜಿಲ್ಲೆಯಲ್ಲಿ ಹಾಗೂ ಶೈಕ್ಷಣಿಕ ವಲಯದಲ್ಲಿ ಸಹ ವ್ಯಾಪಕ ಪ್ರಸಂಶೆಗೆ ಪಾತ್ರವಾಗಿದೆ.

ಮರಾಠಾ ಮಂಡಳದ ಆಡಳಿತ ಮಂಡಳಿಯ ಪದಾಧಿಕಾರಿಗಳು, ಪ್ರಾಚಾರ್ಯರು, ದೈಹಿಕ ಶಿಕ್ಷಣ ನಿರ್ದೇಶಕರ ಮಾರ್ಗದರ್ಶನ, ನಿರಂತರ ತರಬೇತಿ ಜತೆ ಜತೆಗೆ ವಿದ್ಯಾರ್ಥಿಗಳು ಸ್ವಯಂ ಶಿಸ್ತು ಹಾಗೂ ಕಠಿಣ ಪರಿಶ್ರಮವೇ ಸಾಧನೆಗೆ ಪ್ರಮುಖ ಕಾರಣ.

> **ನಮ್ಮ ಸಂಸ್ಥೆಯ ವಿದ್ಯಾರ್ಥಿಗಳಲ್ಲಿ ಸತ್ಪ್ರಜೆಗಳಾಗುವ, ದೇಶಸೇವೆ ಮನೋಭಾವನೆ ಬಿತ್ತುತ್ತಿದೆ. 11 ಜನ ಅಗ್ನಿವೀರರಾಗಿ ಆಯ್ಕೆಯಾಗಿ ಸಂಸ್ಥೆಯ ಕೀರ್ತಿ ಹೆಚ್ಚಿಸಿದ್ದು, ಅವರಿಗೆ ಶುಭವಾಗಲಿ.**
> ■ ಎಂ.ಎಸ್.ಗಾಣಿಗೇರ, ಪ್ರಾಚಾರ್ಯರು ಛತ್ರಪತಿ ಶಿವಾಜಿ ಮಹಾರಾಜ ಪದವಿ ಕಾಲೇಜು

> **ಶಿವಾಜಿ ಮಹಾರಾಜರ ಹೆಸರಿನ ನಮ್ಮ ಕಾಲೇಜಿನ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ, ಶಿಸ್ತು ರಕ್ತಗತವಾಗಿ ಬಂದಿದೆ. ನಮ್ಮ ಸಂಸ್ಥೆಯ 11 ಜನ ಅಗ್ನಿವೀರರಾಗಿರುವುದು ಅಭಿಮಾನದ ಸಂಗತಿ.**
> ■ ಎಂ.ಎನ್.ಮೋರೆ, ಅಧ್ಯಕ್ಷರು ಮರಾಠಾ ವಿದ್ಯಾಪ್ರಸಾರಕ ಮಂಡಳ

ಪರ್ತಗಾಳಿ ಶ್ರೀಗಳ ಭೇಟಿಯಾದ ಸುನೀಲ ನಾಯ್ಕ



• **ಭಟ್ಕಳ:** ಅಧಿಕ ಮಾಸದ ಧಾರ್ಮಿಕ ಕಾರ್ಯಕ್ರಮಗಳ ಪ್ರಯುಕ್ತ ಪಟ್ಟಣದ ವಡೇರ ಮಠದಲ್ಲಿ ಮೊಕ್ಕಾಂ ಹೂಡಿರುವ ಗೋಕರ್ಣ ಪರ್ತಗಾಳಿ ಮಠದ ಶ್ರೀಮದ್ ವಿದಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರನ್ನು ಮಾಜಿ ಶಾಸಕ ಸುನೀಲ ನಾಯ್ಕ ಭೇಟಿ ಮಾಡಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಸುನೀಲ ನಾಯ್ಕ ಅವರು ಮಠದಲ್ಲಿ ನಡೆಯುತ್ತಿರುವ ಧಾರ್ಮಿಕ ಕಾರ್ಯಕ್ರಮಗಳ ಕುರಿತು ಮಾಹಿತಿ ಪಡೆದರು. ಬಳಿಕ ಶ್ರೀಗಳು ಸುನೀಲ ನಾಯ್ಕ ಅವರಿಗೆ ಮಂತ್ರಾಕ್ಷತೆ ನೀಡಿ ಹಾರೈಸಿದರು. ಈ ಸಂದರ್ಭದಲ್ಲಿ ವಡೇರ ಮಠದ ಅಧ್ಯಕ್ಷ ನರೇಂದ್ರ ನಾಯಕ, ಜಿಎಸ್‌ಎಸ್ ಅಧ್ಯಕ್ಷ ಗಿರಿಧರ ನಾಯಕ, ನಾಗೇಶ ಪೈ, ಗಣಪತಿ ಪ್ರಭು ಮುಂತಾದವರಿದ್ದರು.

ಕಿರುಸುದ್ದಿ

ಮಾರಾಟಕ್ಕೆ ತೊಂದರೆ

◆ **ನರಗುಂದ:** ವಾರದ ಸಂತೆ ನಡೆಸಲಿಕ್ಕೆ ಸೂಕ್ತವಾದ ಸ್ಥಳ ಇಲ್ಲದ ಕಾರಣ ಕಾಯಿಪಲ್ಲೆ ಹಾಗೂ ಇತರೇ ವಸ್ತುಗಳ ಮಾರಾಟಕ್ಕೆ ತೊಂದರೆಯಾಗುತ್ತಿದೆ. ಮಳೆಯಾದರಂತೂ ರೈತರು ಹಾಗೂ ಚಿಕ್ಕ ವ್ಯಾಪಾರಸ್ಥರ ಸ್ಥಿತಿ ಆಯೋಮಯ ಎಂದು ಗ್ರಾಮಸ್ಥ ಸೋಮು ಹೊಂಗಲ ಸೇರಿದಂತೆ ಅನೇಕರು ಆರೋಪಿಸಿದ್ದಾರೆ. ತಾಲೂಕಿನ ಚಿಕ್ಕನರಗುಂದ ಗ್ರಾಮದಲ್ಲಿ ಪ್ರತಿ ಸೋಮವಾರ ವಾರದ ಸಂತೆ ನಡೆಯುತ್ತದೆ. ಕೃಷಿ ಉತ್ಪನ್ನಗಳ ಮಾರಾಟಕ್ಕೆ ಎಪಿಎಂಸಿಯಿಂದ ನಿರ್ಮಿತವಾದ ಸಂತೆಕಟ್ಟೆಯಿದೆ. ಆದರದೂ ಅನೈತಿಕ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿದೆ. ಸದ್ಯ ಹಲವು ವರ್ಷಗಳಿಂದ ಗ್ರಾಮದ ಮಧ್ಯಭಾಗದಲ್ಲಿನ ಬಸವೇಶ್ವರ ದೇವಸ್ಥಾನದ ಬಯಲು ಜಾಗದಲ್ಲಿ ಕೃಷಿ ಉತ್ಪನ್ನಗಳ ಮಾರಾಟ ಮಾಡುತ್ತಾ ಬರಲಾಗುತ್ತಿದೆ. ಸೋಮವಾರ ಸಂಜೆ ಸುರಿದ ಮಳೆಯಿಂದ ತರಕಾರಿ ಹಾಗೂ ಇತರೇ ವಸ್ತುಗಳಿಗೆ ಸುರಕ್ಷತೆ ಇಲ್ಲದಂತಾಗಿದೆ. ಕುಳಿತುಕೊಳ್ಳಲಿಕ್ಕೂ ಮತ್ತು ವ್ಯಾಪಾರ ಮಾಡಲಿಕ್ಕೂ ಸುರಕ್ಷಿತ ಸ್ಥಳವಿಲ್ಲದೇ ವ್ಯಾಪಾರಸ್ಥರು ಮತ್ತು ಗ್ರಾಹಕರು ಬಹಳಷ್ಟು ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಅವರು ದೂರಿದ್ದಾರೆ.

ಫುಟ್‌ಪಾತ್ ತೆರವು ಕಾರ್ಯ



◆ **ಲಕ್ಷ್ಮೇಶ್ವರ:** ತಾಲೂಕು ಬೀದಿ ಬದಿ ವ್ಯಾಪಾರಸ್ಥರ ಸಂಘದಿಂದ ಸಾರ್ವಜನಿಕರಿಗೆ ವಾಹನ ಸವಾರರಿಗೆ ಅನುಕೂಲವಾಗಲೆಂದು ಬೀದಿ ಬದಿ ವ್ಯಾಪಾರಸ್ಥರಿಗೆ ಫುಟ್‌ಪಾತ್‌ನಿಂದ ತೆರವುಗೊಳಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ವ್ಯಾಪಾರ ನಡೆಸಲು ಅನುಕೂಲ ಮಾಡಿಕೊಟ್ಟರು. ಕೆಲವು ಬೀದಿ ಬದಿ ವ್ಯಾಪಾರಸ್ಥರು ರೋಡ್‌ನಲ್ಲಿ ನಿಂತು ವ್ಯಾಪಾರ ಮಾಡುವುರಿಂದ ಜನರಿಗೆ ವಾಹನ ಸವಾರರಿಗೆ ತೊಂದರೆ ಆಗಿತ್ತು. ಈ ಬಗ್ಗೆ ಅನೇಕ ದೂರುಗಳು ಪುರಸಭೆಗೆ ಪೊಲೀಸ್ ಠಾಣೆಗೆ ಸಾರ್ವಜನಿಕರು ಮನವಿ ಸಲ್ಲಿಸುವ ಮೂಲಕ ಕೇಳಿಕೊಂಡಿದ್ದರು. ಪೊಲೀಸ್ ಠಾಣೆ ಪಿಎಸ್ಐ ನಾಗರಾಜ ಗಡದ ಬೀದಿ ಬದಿ ವ್ಯಾಪಾರಸ್ಥರ ಸಂಘದ ಸದಸ್ಯರಿಗೆ ಠಾಣೆಯಲ್ಲಿ ಕರೆದು ಸಮಸ್ಯೆಗಳ ಬಗ್ಗೆ ಹೇಳಿದ್ದರು. ಇದಕ್ಕೆ ಸಂಘದ ಸದಸ್ಯರು ಬೆಂಬಲ ಸೂಚಿಸಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ವ್ಯಾಪಾರ ನಡೆಸಲು ಸಹಕಾರ ನೀಡುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ಅದರಂತೆ ಸಂಘದ ಅಧ್ಯಕ್ಷ ಮಂಜುನಾಥ ಹೊಗೆಸೊಪ್ಪಿನ ಸದಸ್ಯರು ರಸ್ತೆ ಮೇಲಿದ್ದ ವ್ಯಾಪಾರಸ್ಥರಿಗೆ ತಿಳಿ ಹೇಳಿ ಫುಟ್‌ಪಾತ್ ಹಿಂದೆ ಹಚ್ಚಲು ತಿಳಿಸಿದರು. ಇದಕ್ಕೆ ಬೀದಿ ಬದಿ ವ್ಯಾಪಾರಸ್ಥರು ಸಹಕರಿಸಿದ್ದಾರೆ.

ಪಾದಚಾರಿ ಸಾವು

◆ **ಗದಗ:** ಹೊಸ ಬಸ್ ನಿಲ್ದಾಣದಿಂದ ಹಳೆಯ ಜಿಲ್ಲಾಧಿಕಾರಿ ಕಚೇರಿ ಕಡೆಗೆ ತೆರಳುವ ಮುಖ್ಯ ರಸ್ತೆಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಪಾದಚಾರಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತೋರ್ವ ಪಾದಚಾರಿ ಅಪಘಾತದಿಂದ ಕ್ಷಣಮಾತ್ರದಲ್ಲೇ ಪಾರಾಗಿರುವ ಘಟನೆ ನಡೆದಿದೆ. ಗಜೇಂದ್ರಗಡ ಸಾರಿಗೆ ಡಿಪೋಗೆ ಸೇರಿದ ಕೆಎಸ್‌ಆರ್‌ಟಿಸಿ ಬಸ್ ಹೊಸ ಬಸ್ ನಿಲ್ದಾಣದಿಂದ ಗಜೇಂದ್ರಗಡದತ್ತ ತೆರಳುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ. ರಸ್ತೆ ದಾಟುತ್ತಿದ್ದ ಇಬ್ಬರು ಪಾದಚಾರಿಗಳಲ್ಲಿ ಓರ್ವನಿಗೆ ಬಸ್ ಡಿಕ್ಕಿ ಹೊಡೆದಿದ್ದು, ಮತ್ತೋರ್ವ ಪಾದಚಾರಿ ಕ್ಷಣಮಾತ್ರದಲ್ಲೇ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಬಸ್‌ನ ಹಿಂಬದಿ ಚಕ್ರಕ್ಕೆ ಸಿಲುಕಿದ ಪರಿಣಾಮ ವ್ಯಕ್ತಿ ತೀವ್ರವಾಗಿ ಗಾಯಗೊಂಡು, ತೀವ್ರ ರಕ್ತಸ್ರಾವದಿಂದ ಪಾದಚಾರಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ಗುರುತು ಮತ್ತು ವಿಳಾಸದ ಕುರಿತು ಇನ್ನೂ ಯಾವುದೇ ಮಾಹಿತಿ ಲಭ್ಯವಾಗಿಲ್ಲ, ಮಾಹಿತಿ ಕಲೆಹಾಕಲು ಹಾಗೂ ಕುಟುಂಬಸ್ಥರನ್ನು ಪತ್ತೆಹಚ್ಚಲು ಪೊಲೀಸರು ಪ್ರಯತ್ನ ನಡೆಸುತ್ತಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	7697-6725
ಅಜವಾನ	10529-10529
ಅಲಸಂದಿ	6566-4990
ಅವರೆ	3044-3044
ಕಡಲೆ	2500-6147
ಉದ್ದು	1500-5244
ಹವೀಜ	10381-4659
ಹೆಸರು	2809-7412
ಹುರಳಿ	2000-2000
ಜೋಳ	2399-4783
ಮಡಕಿ	3519-11675
ಕುಸಬಿ	4436-5272
ಸೂರ್ಯಕಾಂತಿ	7107-7107
ಗೋಧಿ	2169-3339
ಬೆಲ್ಲ	4200-4200
ಗೋವಿನಜೋಳ	2100-2100



ನರಗುಂದ: ವಾರದ ಸಂತೆ ನಡೆಸಲಿಕ್ಕೆ ಸೂಕ್ತವಾದ ಸ್ಥಳ ಇಲ್ಲದ ಕಾರಣ ಕಾಯಿಪಲ್ಲೆ ಹಾಗೂ ಇತರೇ ವಸ್ತುಗಳ ಮಾರಾಟಕ್ಕೆ ತೊಂದರೆಯಾಗುತ್ತಿದೆ.ಮಳೆಯಾದರಂತೂ ರೈತರು ಹಾಗೂ ಚಿಕ್ಕ ವ್ಯಾಪಾರಸ್ಥರ ಸ್ಥಿತಿ ಅಯೋಮಯ ಎಂದು ಗ್ರಾಮಸ್ಥ ಸೋಮು ಹೊಂಗಲ ಸೇರಿದಂತೆ ಅನೇಕರು ಆರೋಪಿಸಿದ್ದಾರೆ.

60ನೇ ವರ್ಷದ ಅಸ್ತಮಾ ಯಜ್ಞದ ಕಾರ್ಯಕ್ರಮ

◆ **ಲಕ್ಷ್ಮೇಶ್ವರ:** ಆಯುರ್ವೇದ ಔಷಧಿ ಪುರಾತನ ಕಾಲದಿಂದಲೂ ಬಳಕೆಯಲ್ಲಿದ್ದು, ಗಿಡಮೂಲಿಕೆಗಳನ್ನು ಬಳಸಿ ಔಷಧಿ ನೀಡುವುದರಿಂದ ಸಾಕಷ್ಟು ಜನರು ಗುಣಮುಖರಾಗಿರುವ ಉದಾಹರಣೆಗಳಿವೆ. ಇಂತಹ ಆಯುರ್ವೇದ ಔಷಧಿಯ ಮೂಲಕ ಪಟ್ಟಣದ ಕೀರ್ತಿ ಬೆಳಗುವಂತೆ ಮಾಡಿದ ದಿ. ವೈದ್ಯ ಬಾಬುರಾವ್ ಕುಲಕರ್ಣಿಯವರ ಸೇವೆ ಸದಾ ಸ್ಮರಣೀಯವಾಗಿದೆ ಎಂದು ಕುಂದಗೋಳದ ಬಸವಣ್ಣಜ್ಜನವರು ಅಭಿಪ್ರಾಯಪಟ್ಟರು.

ಅವರು ಪಟ್ಟಣದ ಪ್ರಾಥಮಿಕ ಶಾಲೆ ನಂ.1 ರ ಆವರಣದಲ್ಲಿ 60ನೇ ವರ್ಷದ ಅಸ್ತಮಾ ಯಜ್ಞದ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ, ಸಮಾಜ ಸೇವೆ ಮಾಡುವ ಮನೋಭಾವನೆ ಎಲ್ಲರಲ್ಲೂ ಬರಲು ಸಾಧ್ಯವಿಲ್ಲ. ಈ ಭಾಗದಲ್ಲಿ ದಿ. ವೈದ್ಯ ಬಾಬುರಾವ್ ಕುಲಕರ್ಣಿ ಅವರ ಸೇವಾ ಮನೋಭಾವನೆಯಿಂದ ಇಂತಹ ಅಸ್ತಮಾ ರೋಗಕ್ಕೆ ಔಷಧಿಯನ್ನು ಯಾವುದೇ ಫಲಾಪೇಕ್ಷೆಯಿಲ್ಲದೆ 60 ವರ್ಷಗಳಿಂದ ನೀಡುತ್ತಾ ಬಂದಿರುವುದು ಶ್ಲಾಘನೀಯ ಎಂದರು. ಪಿಎಸ್ಐ ನಾಗರಾಜ ಗಡದ ಮಾತನಾಡಿ, ಮೃಗಶಿರಾ ಮಳೆಯ ನಕ್ಷತ್ರದ ವೇಳೆಗೆ ನೀಡುವ ಅಸ್ತಮಾ ರೋಗಿಗಳಿಗೆ ಉಚಿತ ಔಷಧಿ ನೀಡುವ ಮೂಲಕ ಲಕ್ಷಾಂತರ ಜನರು ಈ ರೋಗದಿಂದ ವಾಸಿ ಮಾಡಿದ ಕೀರ್ತಿ ಬಾಬುರಾವ ಅವರಿಗೆ ಸಲ್ಲುತ್ತದೆ. ಮೃಗಶಿರಾ ಮಳೆಯ ನಕ್ಷತ್ರದ ಮಹತ್ವವೇ ಹಾಗಿದ್ದು, ಈ ದಿನಗಳಲ್ಲಿ ವಾತಾವರಣ ಬದಲಾಗುವುದರಿಂದ ಇದಕ್ಕೆ ಈ ಔಷಧಿಯ ಮಹತ್ವವಿದೆ. ವೈದ್ಯ ಬಾಬುರಾವ ಕುಲಕರ್ಣಿ ಅವರು ನೀಡುವ ಔಷಧಿ ಬಗ್ಗೆ ಕೇಳಿದ್ದು, ಇಲ್ಲಿನ ಜನಸ್ತೋಮಕ್ಕೆ ಅವರ ಆಶೀರ್ವಾದವಿದೆ ಎಂದರು. ದುಮ್ಮವಾಡದ ಸರ್ಪಭೂಷಣ ಸ್ವಾಮೀಜಿ, ಹುಲ್ಲೂರಿನ ಅಮೋಘಿಮಠದ ಶ್ರೀಗಳು ಉಪಸ್ಥಿತರಿದ್ದರು. ಹುಬ್ಬಳ್ಳಿ ಆಯುರ್ವೇದಿಕ ಕಾಲೇಜಿನ ಪ್ರಾಚಾರ್ಯ ಡಾ.ಬಿ.ಬಿ.ಜೋಶಿ ಪ್ರಾಸ್ತಾವಿಸಿದರು.



ಲಕ್ಷ್ಮೇಶ್ವರ: ಪಟ್ಟಣದ ಪ್ರಾಥಮಿಕ ಶಾಲೆ ನಂ.1 ರ ಆವರಣದಲ್ಲಿ 60ನೇ ವರ್ಷದ ಅಸ್ತಮಾ ಯಜ್ಞದ ಕಾರ್ಯಕ್ರಮ ನಡೆಯಿತು. ಅಧ್ಯಕ್ಷತೆಯನ್ನು ಹಿರಿಯರಾದ ಪಲ್ಲಣ್ಣನವರು ಕುಲಕರ್ಣಿ ವಹಿಸಿದ್ದರು. ಪುರಸಭೆ ವ್ಯವಸ್ಥಾಪಕರಾದ ಮಂಜುಳಾ ಹೂಗಾರ, ಡಾ.ಹರೀಶ ಕುಲಕರ್ಣಿ, ಮಾಜಿ ಅಧ್ಯಕ್ಷ ವ್ಹಿ.ಜಿ.ಪಡಗೇರಿ, ನಿಂಗಪ್ಪ ಬನ್ನಿ, ಶಿವಪ್ರಕಾಶ ಲಿಂಬಯ್ಯಸ್ವಾಮಿಮಠ, ಗೋಪಾಲ ಪಡ್ನೀಸ್, ನಿಂಗಪ್ಪ ತಹಸೀಲ್ದಾರ, ಅನಿಲ ಕುಲಕರ್ಣಿ, ಎಂ.ಆರ್.ಪಾಟೀಲ, ಡಾ. ಮಂಗಸೂಳಿ, ಶಂಕ್ರಪ್ಪ ತಹಸೀಲ್ದಾರ ಹಾಗೂ ಮಂತ್ರಾಲಯ ಪಾದಯಾತ್ರಾ ಸಂಘದ ಸದಸ್ಯರು ಇದ್ದರು. ಕೃಷ್ಣ ಕುಲಕರ್ಣಿ ನಿರೂಪಿಸಿದರು. ಡಿ.ಎಂ.ಪೂಜಾರ ವಂದಿಸಿದರು.

ಮುದ್ರಾ, ಸಾಲ, ಕೃಷಿ ಸಾಲ ವಿತರಣೆಗೆ ವೇಗ ನೀಡಿ: ಬೊಮ್ಮಾಯಿ

ಬ್ಯಾಂಕುಗಳು ಜನರಿಗೆ ನೆರವಾಗಲಿ

◆ **ಗದಗ:** ಬ್ಯಾಂಕಿಂಗ್ ಸೇವೆಗಳು ಕೇವಲ ಹಣಕಾಸು ವ್ಯವಹಾರಗಳಿಗೆ ಸೀಮಿತವಾಗದೆ ಸಮಾಜದ ಕಟ್ಟಕಡೆಯ ವ್ಯಕ್ತಿಯ ಆರ್ಥಿಕ ಅಭಿವೃದ್ಧಿಗೆ ನೆರವಾಗಬೇಕು. ರೈತರು, ದಲಿತರು, ಹಿಂದುಳಿದ ವರ್ಗದವರು ಹಾಗೂ ಮಹಿಳೆಯರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಲ ಸೌಲಭ್ಯ ಒದಗಿಸುವ ಮೂಲಕ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಬ್ಯಾಂಕುಗಳಿಗೆ ಕರೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಕಾರ್ಯಾಲಯದ ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲಾ ಮಟ್ಟದ ಬ್ಯಾಂಕುಗಳ ಪ್ರಗತಿ ಪರಿಶೀಲನಾ ಸಭೆ (ಡಿಎಲ್ ಆರ್‌ಸಿ) ಹಾಗೂ ಜಿಲ್ಲಾ ಮಟ್ಟದ ಬ್ಯಾಂಕುಗಳ ಸಲಹಾ ಸಮಿತಿ (ಡಿಸಿಸಿ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರೈತರ ಅಭಿವೃದ್ಧಿಯೇ ದೇಶದ ಆರ್ಥಿಕತೆಯ ಮೂಲಾಧಾರವಾಗಿದ್ದು, ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುವುದು ಅಗತ್ಯ. ರಾಜ್ಯ ಸರ್ಕಾರ ಶೂನ್ಯ ಬಡ್ಡಿದರದಲ್ಲಿ ಬೆಳೆಸಾಲ ನೀಡುತ್ತಿದ್ದರೂ ಎಲ್ಲ ರೈತರಿಗೆ ಅದರ ಸೌಲಭ್ಯ ದೊರೆಯುವುದಿಲ್ಲ. ಹೀಗಾಗಿ ರಾಷ್ಟ್ರೀಕೃತ ಬ್ಯಾಂಕುಗಳು ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಸಾಲ ವಿತರಿಸಿ ರೈತರನ್ನು ಬೆಂಬಲಿಸಬೇಕು ಎಂದರು.

ಪ್ರತಿದಿನ ದುಡಿದು ಬದುಕುವ ಸಾಮಾನ್ಯ ಜನರು ಹೆಚ್ಚಿನ ಪ್ರಮಾಣದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯ ವ್ಯಾಪ್ತಿಗೆ ಬರಬೇಕು. ಕೃಷಿ ಮತ್ತು ಗ್ರಾಮೀಣ ಆರ್ಥಿಕತೆಯೊಂದಿಗೆ ಹೊಂದಾಣಿಕೆ ಸಾಧಿಸಿ ಬ್ಯಾಂಕುಗಳು ಅಭಿವೃದ್ಧಿಯತ್ತ ಸಾಗಬೇಕು. ಸಮಗ್ರ ಆರ್ಥಿಕ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಿದರೆ ಜಿಲ್ಲೆ ಹಾಗೂ ರಾಜ್ಯದ ಅಭಿವೃದ್ಧಿಗೆ ಬ್ಯಾಂಕಿಂಗ್ ಕ್ಷೇತ್ರ ಮಹತ್ತರ ಕೊಡುಗೆ ನೀಡಲಿದೆ ಎಂದರು.

ಸಭೆಯಲ್ಲಿ ಜಿಲ್ಲೆಯ ಬ್ಯಾಂಕಿಂಗ್ ಪ್ರಗತಿ, ಸಾಲ ವಿತರಣೆ, ಸ್ವಸಹಾಯ ಸಂಘಗಳ ಹಣಕಾಸು ಸ್ಥಿತಿ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಅನುಷ್ಠಾನದ ಕುರಿತು ಸಮಗ್ರ ಪರಿಶೀಲನೆ ನಡೆಸಲಾಯಿತು. ಶಾಸಕ ಸಿ.ಸಿ. ಪಾಟೀಲ್, ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸಿ.ಎನ್. ಶ್ರೀಧರ್, ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ ಸಿ.ಆರ್. ಮುಂಡರಗಿ, ಆರ್.ಬಿ.ಐ ಅಧಿಕಾರಿ ವಿಜಯಶ್ರೀ, ನಬಾರ್ಡನ ಎಜಿಎಂ ಹನುಮಂತರಾಜು, ಎಸ್.ಬಿ.ಐನ ರಿಜಿನಲ್ ಮ್ಯಾನೇಜರ್ ರಾಘವೇಂದ್ರ ರಾವ್, ಲೀಡ್ ಬ್ಯಾಂಕಿನ ಮ್ಯಾನೇಜರ್ ಸಂತೋಷಕುಮಾರ ಸೇರಿದಂತೆ ಬ್ಯಾಂಕಿನ ಹಿರಿಯ ಅಧಿಕಾರಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.



ಸಾಲ ಸೌಲಭ್ಯ ಒದಗಿಸಿ

ಕೃಷಿ ಕ್ಷೇತ್ರದಲ್ಲಿ ಒಂದು ಶೇಕಡಾ ಅಭಿವೃದ್ಧಿಯಾದರೆ ಉತ್ಪಾದನಾ ಕ್ಷೇತ್ರದಲ್ಲಿ ನಾಲ್ಕು ಶೇಕಡಾ ಮತ್ತು ಸೇವಾ ಕ್ಷೇತ್ರದಲ್ಲಿ ಹತ್ತು ಶೇಕಡಾ ಬೆಳವಣಿಗೆ ಸಾಧ್ಯವಾಗುತ್ತದೆ. ರೈತ ಕೇವಲ ಉತ್ಪಾದಕನಲ್ಲ, ಆತ ದೊಡ್ಡ ಗ್ರಾಹಕನೂ ಆಗಿದ್ದಾನೆ. ರೈತರ ಕೊಳ್ಳುವ ಶಕ್ತಿ ಹೆಚ್ಚಿದಾಗ ಆರ್ಥಿಕ ಚಟುವಟಿಕೆಗಳು ಮತ್ತಷ್ಟು ವಿಸ್ತಾರವಾಗುತ್ತವೆ. ಆದ್ದರಿಂದ ಬ್ಯಾಂಕುಗಳು ರೈತರನ್ನು ತಲುಪಿ ಅಗತ್ಯ ಸಾಲ ಸೌಲಭ್ಯ ಒದಗಿಸಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಆರ್ಥಿಕ ಅಭಿವೃದ್ಧಿಗೆ ಅಡಿಪಾಯ

ಕೃಷಿ ಕ್ಷೇತ್ರದ ಬೆಳವಣಿಗೆಯೇ ದೇಶದ ಸಮಗ್ರ ಆರ್ಥಿಕ ಅಭಿವೃದ್ಧಿಗೆ ಅಡಿಪಾಯವಾಗಿದ್ದು, ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಸಾಲ ವಿತರಿಸುವ ಮೂಲಕ ಅವರ ಕೊಳ್ಳುವ ಶಕ್ತಿ ಹೆಚ್ಚಿಸಲು ಬ್ಯಾಂಕುಗಳು ಮುಂದಾಗಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಬ್ಯಾಂಕುಗಳಿಗೆ ಹೇಳಿದರು.

ಖೇತ್ ಬಚಾವೋ ಅಭಿಯಾನಕ್ಕೆ ಬೊಮ್ಮಾಯಿ ಚಾಲನೆ

◆ **ಗದಗ:** ರೈತರ ಕೃಷಿ ಭೂಮಿಯ ಸಂರಕ್ಷಣೆ, ಮಣ್ಣಿನ ಫಲವತ್ತತೆ ಕಾಪಾಡುವಿಕೆ ಹಾಗೂ ಸುಸ್ಥಿರ ಕೃಷಿ ಪದ್ಧತಿಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ಜಿಲ್ಲಾ ಪಂಚಾಯತ್ ಹಾಗೂ ಕೃಷಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿರುವ ಖೇತ್ ಬಚಾವೋ ಅಭಿಯಾನಕ್ಕೆ ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಮಂಗಳವಾರ ಜಿಲ್ಲಾಡಳಿತ ಭವನದ ಆವರಣದಲ್ಲಿ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕೃಷಿ ದೇಶದ ಆರ್ಥಿಕತೆಯ ಬೆನ್ನೆಲುಬಾಗಿದ್ದು, ಕೃಷಿ ಭೂಮಿಯ ಸಂರಕ್ಷಣೆ ಹಾಗೂ ಮಣ್ಣಿನ ಆರೋಗ್ಯ ಕಾಪಾಡುವಿಕೆ ಇಂದಿನ ಅಗತ್ಯವಾಗಿದೆ ಎಂದರು.

ಖೇತ್ ಬಚಾವೋ ಅಭಿಯಾನದ ಮೂಲಕ ರೈತರಿಗೆ ಕೃಷಿ ಭೂಮಿಯ ಸಂರಕ್ಷಣೆ, ಮಣ್ಣಿನ ಸವಕಳಿ ತಡೆ, ಬೆಳೆ ವೈವಿಧ್ಯತೆ, ನೀರಿನ ಸಂರಕ್ಷಣೆ ಹಾಗೂ ಪರಿಸರ ಸ್ನೇಹಿ ಕೃಷಿ ಪದ್ಧತಿಗಳ ಕುರಿತು ಅರಿವು ಮೂಡಿಸಲಾಗುವುದು ಎಂದರು.

> ರೈತರು ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಮಣ್ಣಿನ ಪರೀಕ್ಷೆ, ನೀರಿನ ಸಮರ್ಪಕ ಬಳಕೆ ಹಾಗೂ ಸಾವಯುವ ಮತ್ತು ನೈಸರ್ಗಿಕ ಕೃಷಿ ಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು.
> ■ ಬಸವರಾಜ ಬೊಮ್ಮಾಯಿ, ಸಂಸದ

ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಜಂಟಿ ಕೃಷಿ ನಿರ್ದೇಶಕಿ ಚೇತನಾಪಾಟೀಲ್, ಕೃಷಿ ಸಹಾಯಕ ನಿರ್ದೇಶಕ ಮಲ್ಲಯ್ಯ ಕೆ., ಜಿಲ್ಲಾ ಪಂಚಾಯತ್ ಅಧಿಕಾರಿಗಳಾದ ಎಂ.ವಿ. ಚಳಗೇರಿ, ಎಸ್.ಎಸ್. ಕಲ್ಮನಿ ಸೇರಿದಂತೆ ಕೃಷಿ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ರೈತ ಪ್ರತಿನಿಧಿಗಳು ಉಪಸ್ಥಿತರಿದ್ದರು. ಅಭಿಯಾನದ ಅಂಗವಾಗಿ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಜಾಗೃತಿ ಕಾರ್ಯಕ್ರಮಗಳು, ರೈತರ ಸಭೆಗಳು ಹಾಗೂ ಕೃಷಿ ತಂತ್ರಜ್ಞಾನ ಕುರಿತ ಮಾಹಿತಿ ಶಿಬಿರಗಳನ್ನು ಆಯೋಜಿಸಿ ರೈತರಿಗೆ ಅಗತ್ಯ ಮಾರ್ಗದರ್ಶನ ನೀಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.



ಕುಡಿಯುವ ನೀರಿನ ಪೈಪ್‌ಲೈನ್ ದುರಸ್ತಿ ಆರಂಭ

◆ **ಗದಗ:** ಪೈಪ್‌ಲೈನ್ ಹಾಗೂ ಕೊಳವೆ ಬಾವಿ ದುರಸ್ತಿಯ ನಿರ್ಲಕ್ಷ್ಯದಿಂದ ಸಮರ್ಪಕ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ, ಗ್ರಾಮದ ಹೊರವಲಯವು ಅಸ್ವಚ್ಛತೆಯಿಂದ ಕೂಡಿದೆ ಎಂದು ಇತ್ತೀಚೆಗೆ ನಡೆದ ಗ್ರಾಮ ಸಭೆಯಲ್ಲಿ ಗ್ರಾಮಸ್ಥರು ಒತ್ತಾಯಿಸಿದ ಪರಿಣಾಮ ಗ್ರಾಮ ಪಂಚಾಯತಿಯು ಮಿನಿ ಟ್ಯಾಂಕ್‌ಗಳ ಸ್ವಚ್ಛತೆ ಜತೆಗೆ ಪೈಪ್‌ಲೈನ್, ಕೊಳವೆ ಬಾವಿ ದುರಸ್ತಿ ಕಾಮಗಾರಿಯನ್ನು ಕೈಗೊಂಡಿದ್ದು, ಒಂದು ವಾರದಲ್ಲಿ ಎಲ್ಲ ವಾರ್ಡ್‌ಗಳಿಗೂ ಸಮರ್ಪಕ ನೀರು ಒದಗಿಸಲು ಆಡಳಿತಾಧಿಕಾರಿಗಳು ಮತ್ತು ಅಭಿವೃದ್ಧಿ ಅಧಿಕಾರಿಗಳು ಮುಂದಾಗಿ ಕಾರ್ಯಗಳು ಭರದಿಂದ ಆರಂಭಗೊಂಡಿವೆ.

ವಾರ್ಡ್, ಶಾಲೆ ಆವರಣ, ರಸ್ತೆಯಲ್ಲಿ ನಿರ್ಮಿಸಲಾಗಿರುವ ಒಟ್ಟು 35 ಮಿನಿ ಟ್ಯಾಂಕ್‌ಗಳನ್ನು ಗ್ರಾ. ಪಂ ಸಿಬ್ಬಂದಿಯಿಂದ ಸ್ವಚ್ಛಗೊಳಿಸಿ ಸುಣ್ಣವನ್ನು ಹಚ್ಚಿಸಲು ಆರಂಭಿಸಲಾಗಿದೆ. ಜಂತ್ಲಿ ಶಿರೂರ ರಸ್ತೆಯಲ್ಲಿರುವ ಕೊಳವೆ ಬಾವಿಯಿಂದ ನೀರು ಪೂರೈಕೆಯ ಪೈಪ್‌ಲೈನ್‌ಗಳು ದುರಸ್ತಿಗೊಳ್ಳುತ್ತಿವೆ. ಕುಡಿಯುವ ನೀರಿನ ಮಿನಿ ಟ್ಯಾಂಕ್‌ಗಳ ಪರಿಸರ ಸ್ವಚ್ಛತೆ, ಟ್ಯಾಂಕಿಗೆ ಸುಣ್ಣ, ಬಣ್ಣ ಹಚ್ಚಿ ಸುಂದರಗೊಳಿಸುತ್ತಿದ್ದಾರೆ.



ವಾಲ್‌ಮನ್‌ಗೆ ವೇಳೆ ನಿಗದಿ

ಗ್ರಾಮದಲ್ಲಿ 11 ವಾರ್ಡ್‌ಗಳಿದ್ದು 1ರಿಂದ 5 ಮತ್ತು 11ನೇ ವಾರ್ಡ್‌ಗಳಲ್ಲಿ ಈಗಾಗಲೇ 2-3 ದಿನಕ್ಕೊಮ್ಮೆ ಸಮರ್ಪಕ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಆದರೆ 6 ರಿಂದ 10 ನೇ ವಾರ್ಡ್‌ಗಳಲ್ಲಿ 8-12 ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತಿದ್ದು, ನೀರಿನ ಪೂರೈಕೆ ಬಗ್ಗೆ ಸಿಬ್ಬಂದಿಯೊಂದಿಗೆ ಚರ್ಚಿಸಲಾಗಿದೆ. ಹೆಚ್ಚು ಕುಟುಂಬಗಳಿರುವ 6-10 ನೇ ವಾರ್ಡಿನಲ್ಲಿ 35 ವಾಲ್‌ಗಳಿದ್ದು ಇಲ್ಲಿ ಇಬ್ಬರು ವಾಲ್‌ಮನ್‌ರನ್ನು ನೇಮಕ ಮಾಡಿ ಅವರಿಗೆ ಸಮಯ ನಿಗದಿ ಮಾಡಲಾಗಿದೆ ಎಂದು ಆಡಳಿತಾಧಿಕಾರಿ ಶರಣು ಗೋಗೇರಿ ತಿಳಿಸಿದರು.

ಪ್ರತಿದಿನ 9 ಲಕ್ಷ ಲೀಟರ್ ಅವಶ್ಯ

ಗ್ರಾಮದಲ್ಲಿ ಪ್ರತಿದಿನ 9 ಲಕ್ಷ ಲೀಟರ್ ಬೇಕಾಗಿದ್ದು ಈಗ ತುಂಗಾಭದ್ರಾ ನದಿ ಪಾತ್ರದಿಂದ 5 ಲಕ್ಷ ಲೀಟರ್ ನೀರು ಮಾತ್ರ ಪೂರೈಕೆಯಾಗುತ್ತಿದ್ದು ಇನ್ನೂ 4 ಲಕ್ಷ ಲೀಟರ್ ನೀರನ್ನು ಗ್ರಾಮದ ಕೊಳವೆ ಬಾವಿಗಳ ಸಂಪನ್ಮೂಲಗಳಿಂದ ಪೂರೈಕೆ ಮಾಡಲು ಎಲ್ಲ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಪಿಡಿಒ ಡಾ.ಅಮೀರನಾಯಕ ತಿಳಿಸಿದರು.

- ಈ ವಾರ್ಡ್‌ಗಳಲ್ಲಿ ಕನಿಷ್ಟ 4 ದಿನಕ್ಕೊಮ್ಮೆ ನೀರು ಪೂರೈಕೆ ಮಾಡಲು ಕ್ರಮ
- ಹೆಚ್ಚು ನೀರು ಪೂರೈಕೆಗೆ ಕೊಳವೆ ಬಾವಿ ಮತ್ತು ಪೈಪ್‌ಲೈನ್ ದುರಸ್ತಿ ಕಾಮಗಾರಿ ಆರಂಭ
- ಒಂದು ವಾರದಲ್ಲಿ ಎಲ್ಲ ವಾರ್ಡ್‌ಗಳಿಗೆ ಸಮರ್ಪಕ ನೀರು ಪೂರೈಕೆ ಮಾಡಲಾಗುವುದು ಎಂದ ಆಡಳಿತಾಧಿಕಾರಿ ಶರಣು ಗೋಗೇರಿ

ತೋಂಟದಾರ್ಯ ಶಾಖಾ ಮಠದಲ್ಲಿ ಪೂಜಾ ಸಮಾರಂಭ, ಅನ್ನಸಂತರ್ಪಣೆ

◆ **ಮುಂಡರಗಿ:** ಮುಂಡರಗಿ ತಾಲೂಕು ಸಾರ್ವಜನಿಕ ಹೋರಾಟ ವೇದಿಕೆ, ಗದಗ-ಹರಪನಹಳ್ಳಿ ರೈಲ್ವೆ ಮಾರ್ಗ ರಚನೆಯ ಜಂಟಿ ಕ್ರಿಯಾ ಸಮಿತಿ ಅದ್ವಿಕ್ ವಿವಿಧೋದ್ದೇಶಗಳ ಅಭಿವೃದ್ಧಿ ಸಂಘ, ಮುಂಡರಗಿ ಇವುಗಳ ಆಶ್ರಯದಲ್ಲಿ ಇಲ್ಲಿಯ ಶ್ರೀ ಜಗದ್ಗುರು ತೋಂಟದಾರ್ಯ ಶಾಖಾ ಮಠದಲ್ಲಿ ಪೂಜಾ ಸಮಾರಂಭ ಹಾಗೂ ಅನ್ನಸಂತರ್ಪಣಾ ಕಾರ್ಯಕ್ರಮ ನೆರವೇರಿತು.

ಕರ್ನಾಟಕ ರಾಜ್ಯ ಸಾರ್ವಜನಿಕ ಹೋರಾಟ ವೇದಿಕೆಯ ಸಂಚಾಲಕ ಬಸವರಾಜ ನವಲಗುಂದ ಮಾತನಾಡಿ, 12ನೇ ವರ್ಷದ ಜನ ಕಲ್ಯಾಣ ಯಾತ್ರೆ ಮುಂಡರಗಿಯಿಂದ ಕಾಶಿ, ಅಯೋಧ್ಯ, ಪ್ರಯಾಗ್‌ರಾಜ ವರೆಗೂ ಯಶಸ್ವಿಯಾಗಿ ನಡೆದ ನಿಮಿತ್ತ ಶ್ರೀ ಜಗದ್ಗುರು ತೋಂಟದಾರ್ಯ ಶಾಖಾ ಮಠದಲ್ಲಿ ರುದ್ರಾಭಿಷೇಕದ ಪೂಜಾ ಸಮಾರಂಭವು ಯಾತ್ರಿಕರು ಮಾಡಿರುವುದು ಸೂಕ್ತವಾಗಿದೆ. ಯಾತ್ರೆಯ ಫಲವಾಗಿ ರೈಲ್ವೆ ಮಾರ್ಗ ಮಂಜೂರಾತಿ, ಸರ್ಕಾರಿ ಪ್ರೌಢಶಾಲೆ ಮಂಜೂರಾತಿ, ಕಪ್ಪತ ಗುಡ್ಡದ ಸಂರಕ್ಷಣೆಯ ವಿಶೇಷ ಯೋಜನೆಯ ಮಂಜುರಾತಿ ಕುರಿತು ಸರಕಾರದ ಗಮನ ಸೆಳೆದಿರುವುದು ಜನ ಕಲ್ಯಾಣ ಯಾತ್ರೆ ಮಾಡಿರುವುದರಿಂದ ಲಭಿಸಿದೆ ಎಂದರು.

ಈ ಸಮಾರಂಭದಲ್ಲಿ ಜನ ಕಲ್ಯಾಣ ಯಾತ್ರೆಯಲ್ಲಿ ಭಾಗವಹಿಸಿದ ಯಾತ್ರಿಕರಲ್ಲೊಬ್ಬರಾದ ಕೊಟ್ರಗೌಡ ಪಾಟೀಲ ಕೊರ್ಲಹಳ್ಳಿ ಅವರಿಗೆ ಮತ್ತು 12ನೇ ಜನ ಕಲ್ಯಾಣ ಯಾತ್ರೆಯ ನೇತೃತ್ವ ವಹಿಸಿದ್ದ ರವಿಗೌಡ ಪಾಟೀಲ ಅವರಿಗೆ ಸನ್ಮಾನಿಸಲಾಯಿತು. ಧ್ರುವಕುಮಾರ ಹೂಗಾರ, ಸುರೇಶ ಕುಂಬಾರ, ಬಸಪ್ಪ ವಡ್ಡರ, ಯಮನಪ್ಪ ಭಜಂತ್ರಿ, ಹನುಮಂತ ಬೆನ್ನಳ್ಳಿ, ಭರ್ಮಣ್ಣ ಮಲ್ಲಿನಕೇರಿ ಮತ್ತು ನೂರಾರು ಮಂದಿ ಹೆಣ್ಣು ಮಕ್ಕಳು ರುದ್ರಾಭಿಷೇಕದ ಎಲೆ ಕಂಕಣಕ್ಕೆ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು. ಸದಾಶಿವಯ್ಯ ಪ್ರಧಾನ ಅರ್ಚಕರು ಪೂಜಾ ಸಮಾರಂಭವನ್ನು ನೆರವೇರಿಸಿದರು.



ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡಿದರೆ ಲೈಸನ್ಸ್ ರದ್ದು: ಕುಲಕರ್ಣಿ ಎಚ್ಚರಿಕೆ

◆ **ಗಜೇಂದ್ರಗಡ:** ರಸಗೊಬ್ಬರ ಮಾರಾಟಗಾರರು ರೈತ ಸ್ನೇಹಿಯಾಗಿ ಕಾರ್ಯನಿರ್ವಹಿಸಬೇಕು. ಅಲ್ಲದೇ ನಿಗದಿಗಿಂತ ಹೆಚ್ಚಿನ ಬೆಲೆಗೆ ರಸಗೊಬ್ಬರಗಳನ್ನು ಮಾರಾಟ ಮಾಡಿದರೆ ಅಂಥವರ ಲೈಸನ್ಸ್ ರದ್ದು ಪಡಿಸಲಾಗುವುದು ಎಂದು ತಹಶೀಲ್ದಾರ್ ಕಿರಣಕುಮಾರ ಕುಲಕರ್ಣಿ ಹೇಳಿದರು.

ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತಾಲೂಕಿನ ಖಾಸಗಿ ಹಾಗೂ ಸಹಕಾರಿ ಸಂಘಗಳ ರಸಗೊಬ್ಬರ ಮಾರಾಟಗಾರರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿರ್ದೇಶನದಂತೆ ದರ ಪಟ್ಟಿ ನಿಗದಿ, ರಸಗೊಬ್ಬರ ದಸ್ತಾನು ಸಂಗ್ರಹಣೆ, ಮಾರಾಟದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಅಂಗಡಿಯಲ್ಲಿ ಅಳವಡಿಸಬೇಕು. ಯಾವುದೇ ರಸಗೊಬ್ಬರ ಮಾರಾಟ ಮಾಡಿದರೆ ರೈತರಿಗೆ ಜಿಎಸ್.ಟಿ ಬಿಲ್ ಗಳನ್ನು ನೀಡಬೇಕು. ಬಿಳಿಯ ಹಾಳೆಯ ಮೇಲೆ ಬಿಲ್ ಬರೆದುಕೊಡಬಾರದು.ಅಂಗಡಿಯಲ್ಲಿ ರಸಗೊಬ್ಬರ ಸಂಗ್ರಹಣೆ ಇಟ್ಟುಕೊಂಡು ಗೊಬ್ಬರ ಇಲ್ಲವೆಂದು ರೈತರಿಗೆ ದಾರಿ ತಪ್ಪಿಸುವ ಕೆಲಸ ಮಾಡಬೇಡಿ ಎಂದು ಸೂಚಿಸಿದರು.

ರೈತರು ಗೊಬ್ಬರ ಕೊಡುವ ತನಕ ತಡೆದುಕೊಳ್ಳಲ್ಲ, ಗಲಾಟೆ ಮಾಡಿ ಸಮಸ್ಯೆ ಉದ್ಭವಿಸುತ್ತಾರೆ ಎಂದು ಮಾರಾಟಗಾರರು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ತಹಶೀಲ್ದಾರರು, ನಿಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲವೆಂದರೆ ಹೆದರುವ ಅವಶ್ಯಕತೆ ಇಲ್ಲ, ಪ್ರತಿ ಅಂಗಡಿಕಾರರು ಅಂಗಡಿಯ ಮುಂದೆ ಸಿಸಿ ಕ್ಯಾಮೆರಾ ಅಳವಡಿಸಿ ಯಾರು ತಪ್ಪಿತಸ್ಥರೋ ಅವರ ವಿರುದ್ಧ ಕ್ರಮವಹಿಸೋಣ ಎಂದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಬಸವರಾಜ ಮಳೆದ ಮಾತನಾಡಿ, ನ್ಯಾನೋ ಯೂರಿಯಾ ಎನ್ನುವುದು ಸಸ್ಯಗಳಿಗೆ ಸಾರಜನಕವನ್ನು ಒದಗಿಸುವ ನ್ಯಾನೊ ತಂತ್ರಜ್ಞಾನ ಆಧಾರಿತ ದ್ರವರೂಪದ ರಸಗೊಬ್ಬರವಾಗಿದೆ. ಸಾಂಪ್ರದಾಯಿಕ ಹರಳಿನ ಯೂರಿಯಾಕ್ಕೆ ಹೋಲಿಸಿದರೆ ಇದು ಅತ್ಯಂತ ಪರಿಣಾಮಕಾರಿ, ಪರಿಸರ ಸ್ನೇಹಿ ಮತ್ತು ಕಡಿಮೆ ವೆಚ್ಚದಾಯಕವಾಗಿದೆ. ಒಂದು ಎಕರೆ ಜಮೀನಿಗೆ ಕೇವಲ 500 ಮಿ.ಲೀ ಬಾಟಲಿ ಸಾಕಾಗುತ್ತದೆ ಎಂದು ತಿಳಿಸಿದರು. ಸರ್ವರ್ ಸಮಸ್ಯೆ ಇದೆಯೆಂದು ಮಧ್ಯಾಹ್ನ 2 ಗಂಟೆಗೆ ಬಂದ್ ಮಾಡುತ್ತಾರೆ ಎಂದು ರೈತರು ಆರೋಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ತಾ.ಪಂ. ಇಒ ಜನಸಂದಣಿ, ಮೋಡಕವಿದ ವಾತಾವರಣ ಇದ್ದಾಗ ಸರ್ವರ್ ಸಮಸ್ಯೆ ಬರುತ್ತದೆ ಎಂದರು. ಕೃಷಿ ಅಧಿಕಾರಿ ಬಸವರಾಜ ಗದಗಿನ ಪ್ರಸ್ತಾವಿಸಿದರು. ಕೃಷಿಕ ಸಮಾಜದ ತಾಲೂಕು ಉಪಾಧ್ಯಕ್ಷ ಮುದಕಪ್ಪ ಬೇಟಗೇರಿ ಇದ್ದರು.



ಸದಸ್ಯತ್ವಕ್ಕೆ ರಾಜೀನಾಮೆ ನೀಡುವ ಎಚ್ಚರಿಕೆ



◆ **ಗದಗ:** ರೋಣ ಶಾಸಕ ಜಿ.ಎಸ್.ಪಾಟೀಲರಿಗೆ ರಾಜ್ಯದ ಸಚಿವ ಸಂಪುಟದಲ್ಲಿ ಸ್ಥಾನ ನೀಡದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ಹಾಗೂ ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿ ಪಕ್ಷದ ಕಾರ್ಯಕರ್ತರು ಹಾಗೂ ಜಿ.ಎಸ್.ಪಾಟೀಲರ ಅಭಿಮಾನಿಗಳು ಎಚ್ಚರಿಕೆ ನೀಡಿದರು. ಪಂಡಿತ ಪುಟ್ಟರಾಜ ಗವಾಯಿಗಳ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ವೀರೇಶ್ವರ ಪುಣ್ಯಾಶ್ರಮದವರೆಗೆ ಕೆಲವರು ದೀಡ್ ನಮಸ್ಕಾರ, ಉರುಳು ಸೇವೆ ಮಾಡಿದರು. ಯುವಕರು, ಮಹಿಳೆಯರು, ವೃದ್ಧರು ಮೈಮೇಲೆ ನೀರು ಸುರಿದುಕೊಂಡು, ಕಡ್ಡಿ ಹಿಡಿದು ದೀಡ್ ನಮಸ್ಕಾರ ಮಾಡಿದರು. ಜಿ.ಎಸ್. ಪಾಟೀಲರು ಮಂತ್ರಿಯಾಗಬೇಕೆಂಬ ಸಂಕಲ್ಪ ಈಡೇರಬೇಕೆಂದು ಕೆಲವರು ಉರುಳು ಸೇವೆ ಮಾಡಿದರು. ಜಾನಪದ ವಾದ್ಯ ಮೇಳಕ್ಕೆ ತಕ್ಕಂತೆ ಕಾರ್ಯಕರ್ತರು ನೃತ್ಯ ಮಾಡಿದರು. ಗಜೇಂದ್ರಗಡ ತಾಪಂ ಮಾಜಿ ಅಧ್ಯಕ್ಷ ಶಶಿಧರ ಹೂಗಾರ, ಮುಂಡರಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಡಿ. ಮೋರನಾಳ, ಕಾಂಗ್ರೆಸ್ ಮುಖಂಡ ಎಚ್.ಎಸ್.ಸೋಮಪುರ ಇದ್ದರು.

ಸಚಿವ ಸ್ಥಾನ ನೀಡಲು ಆಗ್ರಹ

◆ **ಗದಗ:** ಎಚ್.ಕೆ.ಪಾಟೀಲರಿಗೆ ಸಚಿವ ಸ್ಥಾನಮಾನ ನೀಡಬೇಕು ಎಂದು ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಜಾತಿ ಮುಖಂಡ ಶಂಭು ಕಾಳೆ ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಚ್.ಕೆ.ಪಾಟೀಲ ಅವರು ಜನಪರ ಹಾಗೂ ಪಾರದರ್ಶಕ ಆಡಳಿತ ನೀಡಿದ್ದು, ಅವರ ಹಿರಿತನ ಮತ್ತು ಅನುಭವವನ್ನು ಪರಿಗಣಿಸಿ ಮೊದಲ ಹಂತದಲ್ಲಿಯೇ ಸಚಿವ ಸ್ಥಾನ ನೀಡಬೇಕಿತ್ತು. ಅವರಿಗೆ ಸಚಿವ ಸ್ಥಾನ ನೀಡದಿರುವುದು ಕಾರ್ಯಕರ್ತರು ಹಾಗೂ ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿದೆ ಎಂದರು.

ಹೊನ್ನಪ್ಪ ಸಾಕಿ ಮಾತನಾಡಿ, ಮೊದಲ ಸಚಿವ ಸಂಪುಟ ರಚನೆ ವೇಳೆಯೇ ಅವರ ಅನುಭವಕ್ಕೆ ತಕ್ಕ ಗೌರವ ಸಿಗಬೇಕಿತ್ತು. ಆದರೆ ಅದು ಸಾಧ್ಯವಾಗದಿರುವುದು ದುರದೃಷ್ಟಕರ. ಎಚ್.ಕೆ. ಪಾಟೀಲ ಮುಖ್ಯಮಂತ್ರಿ ಅಭ್ಯರ್ಥಿಗಳ ಪಟ್ಟಿಯಲ್ಲಿರುವ ನಾಯಕರಾಗಿದ್ದು, ರಾಜ್ಯ ರಾಜಕಾರಣದಲ್ಲಿ ಮಹತ್ವದ ಸ್ಥಾನ ಹೊಂದಿದ್ದಾರೆ ಎಂದರು.

ಗುರುರಾಜ ಸಂಕಣ್ಣವರ ಮಾತನಾಡಿ, ನಗರದ ಕಾಟನ್ ಸೇಲ್ಸ್ ಸೊಸೈಟಿಯಲ್ಲಿ ಜೂ.16ರಂದು ಶಾಂತಿಯುತ ಹೋರಾಟ ಹಮ್ಮಿಕೊಳ್ಳಲಾಗಿದ್ದು, ಸರ್ಕಾರ ಕೂಡಲೇ ಎಚ್.ಕೆ.ಪಾಟೀಲ ಅವರಿಗೆ ಸಚಿವ ಸ್ಥಾನ ನೀಡುವ ಕುರಿತು ನಿರ್ಧಾರ ಕೈಗೊಳ್ಳಬೇಕು. ಇಲ್ಲದಿದ್ದರೆ ಜೂ.19ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಜುನಾಥ ಸಿಂಗಾಡಿ, ಮಲ್ಲಿಕಾರ್ಜುನ ಸಂಗಾಪುರ, ಯಲ್ಲಪ್ಪ ಒಂಟೆತ್ತಿನ, ಗಂಗಾಧರ ವಾಲಿಕಾರ ಹಾಗೂ ಗಣೇಶ ಕಟಿಗಿ ಉಪಸ್ಥಿತರಿದ್ದರು.



ಗಾಣಿಗ ಸಮಾಜಕ್ಕೆ ಸಚಿವ ಸ್ಥಾನ ನೀಡಿ



◆ **ಗದಗ:** ಹೊಸ ಸರ್ಕಾರದಲ್ಲಿ ಗಾಣಿಗ ಸಮಾಜಕ್ಕೆ ಅನ್ಯಾಯವಾಗಿದೆ. ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ನೀಡಿದ್ದ ಭರವಸೆಯಂತೆ ಸಮಾಜದ ನಾಯಕರಿಗೆ ಸಚಿವ ಸ್ಥಾನ ನೀಡಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ಗಾಣಿಗ ಸಮಾಜದ ಮುಖಂಡ ಬಸವರಾಜ ಬಿಂಗಿ ಎಚ್ಚರಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿವಮೊಗ್ಗದ ನಾಯಕರು, ಲಕ್ಷ್ಮಣ ಸವದಿ ಹಾಗೂ ವೀರೇಂದ್ರ ಪಪ್ಪಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಸಮಾಜದ ಮುಖಂಡ ಡಾ. ಶೇಖರ್ ಸಜ್ಜನವರ ಮಾತನಾಡಿ, ರಾಜ್ಯದಲ್ಲಿಯೇ ಅತಿಹೆಚ್ಚು ಮತಗಳ ಅಂತರದಿಂದ ಗೆದ್ದಿರುವ ಹಾಗೂ ಅನುಭವಿ ಹೋರಾಟಗಾರರಾಗಿರುವ ಲಕ್ಷ್ಮಣ ಸವದಿ ಅವರು ರಾಜ್ಯದ ಪ್ರಮುಖ ನಾಯಕರಾಗಿದ್ದಾರೆ. ಅವರನ್ನು ಸರ್ಕಾರದಲ್ಲಿ ಸಚಿವರನ್ನಾಗಿ ಮಾಡಬೇಕು ಎಂದರು.

ಜಾತ್ಯತೀತ ಪಕ್ಷ ಎಂದು ಹೇಳಿಕೊಳ್ಳುವ ಸರ್ಕಾರವು ಹಿಂದುಳಿದ ಹಾಗೂ ತುಳಿತಕ್ಕೊಳಗಾದ ಸಮುದಾಯಗಳಿಗೆ ನ್ಯಾಯ ಒದಗಿಸಬೇಕು. ಸಮಾಜಕ್ಕೆ 30-40 ಶಾಸಕರನ್ನು ಗೆಲ್ಲಿಸುವ ಸಾಮರ್ಥ್ಯವಿದೆ ಎಂಬುದನ್ನು ಪರಿಗಣಿಸಿ ಸಚಿವ ಸ್ಥಾನ ನೀಡಬೇಕು ಎಂದು ಮುಖಂಡರು ಒತ್ತಾಯಿಸಿದರು. ನಿಂಗಪ್ಪ ಕೆಂಗಾರ, ಅಶೋಕ ಮಂದಾಲಿ, ಗೀರೆಪ್ಪ ಅಸೂಟಿ ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಎಚ್‌ಕೆಪಾಗೆ ಸಚಿವ ಸ್ಥಾನ ನೀಡಿ

◆ **ಗದಗ:** ಉತ್ತರ ಕರ್ನಾಟಕದ ಪ್ರಾಮಾಣಿಕ ಹಾಗೂ ಅನುಭವಿ ನಾಯಕರಾಗಿರುವ ಎಚ್. ಕೆ. ಪಾಟೀಲ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಮೆಕ್ಯಾನಿಕಲ್ ಸಂಘದ ಅಧ್ಯಕ್ಷ ಉಸ್ಮಾನ್ ಮಾಳಿಕೊಪ್ಪ ಹೇಳಿದರು.

ಮಂಗಳವಾರ ನಗರದ ಪತ್ರಿಕಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೆಕ್ಯಾನಿಕಲ್ ಹುದ್ದೆ ಎನ್ನುವ ಕೀಳಿರಿಮೆ ಇದ್ದ ನಮನ್ನು, ಒಂದು ಗೂಡಿಸಿ ಸಂಘವನ್ನು ಮಾಡಲು ಹೇಳಿ ನಮ್ಮ ಶಕ್ತಿಯ ಕುರಿತು ಅರಿವು ಮೂಡಿಸುವಲ್ಲಿ ಶಾಸಕ ಎಚ್.ಕೆ. ಪಾಟೀಲರ ಪಾತ್ರ ಮಹತ್ವವಾಗಿದ್ದು , ನಂತರ 1.26 ಎಕರೆ ಜಾಗ ನೀಡಿ ಶೆಡ್ ನಿರ್ಮಿಸಿಕೊಳ್ಳಲು ನಮಗೆ ಸಹಾಯ ಮಾಡಿದ್ದಾರೆ ಹಾಗೂ ರಕ್ತದಾನ, ಅಂಗಾಂಗ ದಾನ ಸೇರಿದಂತೆ ಹಲವು ಸಾಮಾಜಿಕ ಕಾರ್ಯಗಳಲ್ಲಿ ಕಾರ್ಯ ಪ್ರವೃತ್ತ ರಾಗಲು ನಮಗೆ ಪ್ರೇರಣೆ ನೀಡಿದ್ದಾರೆ. ಅವರಿಗೆ ಮುಂದಿನ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದರು.

ಬಿ.ಎಂ. ನದೀಮ್ ಮುಲ್ಲಾ ಮಾತನಾಡಿ, ಉತ್ತರ ಕರ್ನಾಟಕದಲ್ಲಿ ಪ್ರಾಮಾಣಿಕ ನಾಯಕತ್ವ ನೀಡುತ್ತಿರುವ ಎಚ್.ಕೆ. ಪಾಟೀಲ ಅವರಿಗೆ ಸಚಿವ ಸ್ಥಾನ ನೀಡದಿರುವುದು ನೋವಿನ ಸಂಗತಿ ಎಂದರು. ಮಹಮದ್ ಶಬ್ಬಿ, ನಿಂಗಪ್ಪ ಎಂಬತ್ತನಾಳ, ಸೈಯದ್ ಜಮೀರ್ ಖಾಜಿ, ಮಹಮದ್ ಅಲಿ ನವಲಗುಂದ, ಅಬ್ದುಲ್ ಖಾದರ್, ಸಿರಾಜ್ ಬಾಗಲಕೋಟೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಕಿರುಸುದ್ದಿ

₹7.50 ಲಕ್ಷ ನಗದು ಕಳುವು

ಹುಬ್ಬಳ್ಳಿ: ಇಲ್ಲಿಯ ನವೀನ ಪಾರ್ಕ್‌ನ ಶ್ರದ್ಧಾ ಅಪಾರ್ಟ್‌ಮೆಂಟ್ ಎದುರು ಇರುವ ಬಾಲಕೃಷ್ಣ ಶೆಟ್ಟಿ ಅವರ ಮನೆಯಲ್ಲಿ ಇಲ್ಲದಾಗ ಕಳ್ಳರು ಮನೆಯ ಬಾಗಿಲ ಇಂಟರ್ ಲಾಕ್ ಮುರಿದು ರೂ.7.50 ಲಕ್ಷ ನಗದು ಕಳುವು ಮಾಡಿದ್ದಾರೆ. ಹೋಟೆಲ್ ಉದ್ಯಮಿ ಬಾಲಕೃಷ್ಣ ಶೆಟ್ಟಿ ಅವರು ತಮ್ಮ ಮಕ್ಕಳ ಕಾಲೇಜ್ ದಾಖಲಾತಿ ಸಲುವಾಗಿ ಬೆಂಗಳೂರಿಗೆ ಹೋಗಿದ್ದರು. ಇದನ್ನು ಗಮನಿಸಿದ ಕಳ್ಳರು ಕಳೆದ ರಾತ್ರಿ ವೇಳೆಯಲ್ಲಿ ಬಾಗಿಲಿನ ಇಂಟರ್ ಲಾಕ್ ಮುರಿದು ಒಳಗೆ ನುಗ್ಗಿ ವಾರ್ಡ್ರೋಬ್‌ನಲ್ಲಿ ಇಟ್ಟಿದ್ದ 7.50 ಲಕ್ಷ ರೂ. ಹಣವನ್ನು ದೋಚಿದ್ದಾರೆ. ಈ ಕುರಿತು ಜಯರಾಮ ಶೆಟ್ಟಿ ಅವರು ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮಹಿಳೆ ಆತ್ಮಹತ್ಯೆ: ಮಹಿಳೆಯೊಬ್ಬರು ಟ್ರೇಡ್ ಮಾರ್ಕೆಟ್‌ನಲ್ಲಿ ಹೂಡಿಕೆ ಮಾಡಿದ್ದ ಹಣ ನಷ್ಟವಾಗಿದ್ದಕ್ಕೆ ಬೇಸಗೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಇಲ್ಲಿಯ ಹೊಸ ಮೇದಾರ ಓಣಿಯಲ್ಲಿ ನಡೆದಿದೆ. ಮೇದಾರ ಓಣಿಯ ವಾಸಂತಿ ಕದಂ(32) ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ. ಕೆಲ ವರ್ಷಗಳಿಂದ ವಾಸಂತಿ ಅವರು ಟ್ರೇಡ್ ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುತ್ತಿದ್ದರು. ಆದರೆ, ಇತ್ತೀಚಿಗೆ ಅದು ನಷ್ಟವಾಗಿದ್ದಕ್ಕೆ ನೊಂದು ಮನೆಯಲ್ಲಿನ ಫ್ಯಾನಿಗೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ ಎಂದು ಅವರ ತಾಯಿ ಶಹರ ಠಾಣೆಯಲ್ಲಿ ದೂರು ನೀಡಿದ್ದಾರೆ. ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿ ಆತ್ಮಹತ್ಯೆ

ಸಿದ್ದಾಪುರ: ತಾಲೂಕಿನ ಕಾನಸೂರಿನ ಇಂದಿರಾಗಾಂಧಿ ವಸತಿ ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿ ಹಾರ್ಸಿಕಟ್ಟಾ ಸಮೀಪದ ಹುತ್ತಾರ ಕಲ್ಲಬ್ಬೆಯ ಗೋಕುಲ ಕೃಷ್ಣ ಗೌಡ(15) ವಸತಿ ಶಾಲೆಯಲ್ಲಿ ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಸ್ಥಳಕ್ಕೆ ಸಿದ್ದಾಪುರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬಿವ್ಹಿವ್ಹಿ ಸಂಘದಲ್ಲಿ ಆರೋಗ್ಯ ಸಂಶೋಧನೆಗೆ ಹೊಸ ದಿಕ್ಕು: ಡಾ.ಕೃಷ್ಣಮೂರ್ತಿ

ಜೀವನ ಸುಧಾರಿಸುವ ಸಂಶೋಧನೆಗಳು ಅಗತ್ಯ


ಸಿಬಿಟಿಎಚ್ ಆರ್ ಕೇಂದ್ರ ಸ್ಥಾಪನೆ

ಬಾಗಲಕೋಟೆ: ನಾಡಿನ ಅಭಿವೃದ್ಧಿ ವ್ಯಕ್ತಿಗಳು ಮತ್ತು ಸಮುದಾಯಗಳ ಜೀವನವನ್ನು ಸುಧಾರಿಸುವ ಸಂಶೋಧನೆಗಳು ಅಗತ್ಯವಾಗಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ವಿಶ್ರಾಂತ ಹಿರಿಯ ಸಲಹೆಗಾರ ಡಾ.ರಮೇಶ ಕೃಷ್ಣಮೂರ್ತಿ ಹೇಳಿದರು.

ಅವರು ಬಿ.ವಿ.ವಿ ಸಂಘದ ಎಸ್.ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನಲ್ಲಿ ರಿಸರ್ಚ್: ಕಾನ್‌ಕ್ಲೇವ್-2026 ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಉತ್ತರ ಕರ್ನಾಟಕದಲ್ಲಿ ಸಂಶೋಧನೆಯಲ್ಲಿ ಕೊರತೆ ಇದೆ. ವಿವಿಧ ಕಾಯಿಲೆಗಳು, ಸಾಂಕ್ರಾಮಿಕ ರೋಗಗಳು ಮತ್ತಿತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಇಂಥ ಸಂಶೋಧನಾ ಕೇಂದ್ರಗಳ ಸ್ಥಾಪನೆ ಅಗತ್ಯವಿದೆ. ಸಂಶೋಧನೆಗಳು ರೋಗಿಗಳಿಗೆ ಸಹಾಯವಾಗಬೇಕು ಎಂದರು.

ಜನಸಾಮಾನ್ಯರ ಆರೋಗ್ಯ ವೃದ್ಧಿಗೆ ವೈದ್ಯಕೀಯ ಸಂಶೋಧಕರು ಸಂಶೋಧನೆಯಲ್ಲಿ ಸಂಪೂರ್ಣ ತೊಡಗಿಕೊಳ್ಳಬೇಕು ಜೊತೆಗೆ ದಾಖಲಾತಿಗಳನ್ನು ಸಂಸ್ಕರಿಸಿ ಇಡಬೇಕು. ವೈದ್ಯಕೀಯ ರಂಗ ಮಾನವ-ಪ್ರಾಣಿಗಳು-ಪರಿಸರ ಹಾಗೂ ಕೈಗಾರಿಕೆಗಳ ಸಂಕೀರ್ಣ ಅಧ್ಯಯನವಾಗಿದೆ. ಬಿವಿವಿ ಸಂಘದ ಶಿಕ್ಷಣ ಸಂಸ್ಥೆಗಳಲ್ಲಿ ಲಭ್ಯವಿರುವ ವೈದ್ಯಕೀಯ, ತಾಂತ್ರಿಕ, ಅಂತಾರಾಷ್ಟ್ರೀಯ ಗುಣಮಟ್ಟದ ಸೌಲಭ್ಯ ಮತ್ತು ಸೇವೆಗಳನ್ನು ಗಮನಿಸಿದಾಗ ಮುಂಬರುವ ದಿನಗಳಲ್ಲಿ ದೇಶದ ಪ್ರಮುಖ ವೈದ್ಯಕೀಯ ಸಂಶೋಧನಾ ಕೇಂದ್ರಗಳಲ್ಲಿ ಬಿವಿವಿ ಸಂಘ ಒಂದಾಗಲಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಬಿವಿವಿ ಸಂಘದ ಬಿವಿವಿಎಸ್



ಸೆಂಟರ್ ಫಾರ್ ಬೆಸಿಕ್ ಆ್ಯಂಡ್ ಟ್ರಾನ್ಸಲೇಶ್‌ನಲ್ ಹೆಲ್ತ್ ರಿಸರ್ಚ್ ಕೇಂದ್ರ ಉದ್ಘಾಟಿಸಿ ಮಾತನಾಡಿದ ಬಿವಿವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಸಿ.ಚರಂತಿಮಠ, ಆರೋಗ್ಯ ಕ್ಷೇತ್ರದ ಮೂಲಭೂತ ಹಾಗೂ ಅನ್ವಯಿಕ ಸಂಶೋಧನೆಗೆ ಉತ್ತೇಜನ ನೀಡಲಾಗುತ್ತಿದ್ದು, ಈ ಕೇಂದ್ರದ ಅಡಿಯಲ್ಲಿ ಹೊಸ ಅವಿಷ್ಕಾರಗಳನ್ನು ರೂಪಿಸಿ, ಅವುಗಳನ್ನು ಆರೋಗ್ಯ ಸೇವೆಗೆ ಅನುವಾದಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುವುದು. ಸಮಾಜದ ಆರೋಗ್ಯ ಸುಧಾರಣೆಗೆ ಅಗತ್ಯವಾದ ವೈದ್ಯಕೀಯ ಅವಿಷ್ಕಾರಗಳಿಗೆ ಈ ಸಂಶೋಧನಾ ಕೇಂದ್ರ ವೇದಿಕೆಯಾಗಲಿ. ಆರೋಗ್ಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಸಂಶೋಧನೆ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಲಿ ಎಂದರು.

ರಿಸರ್ಚ್ ಮತ್ತು ಡೆವಲೆಪ್‌ಮೆಂಟ್ ಸೆಂಟರ್‌ನ ಡೀನ್ ಡಾ.ಎಸ್.ಎಲ್.ಹೋಟಿ ಅವರು ಸ್ವಾಗತಿಸಿ ಪ್ರಸ್ತಾವಿಕ ಮಾತನಾಡಿ ಈ ಕೇಂದ್ರ ವೈದ್ಯಕೀಯ ವಿದ್ಯಾರ್ಥಿಗಳು, ಸಂಶೋಧಕರು, ಹಾಗೂ ಅಧ್ಯಾಪಕರಿಗೆ ಅತ್ಯಾಧುನಿ ಸಂಶೋಧನಾ ಸೌಲಭ್ಯಗಳನ್ನು ಒದಗಿಸುವ ಮೂಲಕ ಆರೋಗ್ಯ ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರ ಕಂಡು ಹಿಡಿಯುವ ನಿಟ್ಟಿನಲ್ಲಿ ಈ ಕೇಂದ್ರ ಮಹತ್ವದ ಪಾತ್ರ ವಹಿಸಲಿದೆ ಎಂದರು.

ವೇದಿಕೆಯಲ್ಲಿ ಬಿವಿವಿ ಸಂಘದ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್. ಸಜ್ಜನ (ಬೇವೂರ), ಎಸ್.ಎನ್.ಮೆಡಿಕಲ್ ಪ್ರಾಚಾರ್ಯ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ ಇದ್ದರು.

ವಿಶೇಷ ಉಪನ್ಯಾಸ ನಿಮಾನ್ಸ್ ಬೆಂಗಳೂರಿನ ಹಿರಿಯ ತಜ್ಞ ವೈದ್ಯೆ ಡಾ. ಅನಿತಾ ಮಾಧವನ, ಭಾರತ ಸರ್ಕಾರ ಆರೋಗ್ಯ ಸಂಶೋಧನಾ ಸಲಹಾ ಮಂಡಳಿಯ ಡಾ.ದರ್ಶನ ನಾರಾಯಣ, ಮಾಹೆ ಮಣಿಪಾಲದ ಡಾ. ಶ್ಯಾಮ ಪ್ರಸಾದ ಉಪನ್ಯಾಸ ನೀಡಿದರು. ಮೆಡಿಕಲ್ ಕಾಲೇಜ್ ಉಪ ಪ್ರಾಚಾರ್ಯ ಡಾ.ಸಿ.ಎಸ್.ಹಿರೇಮಠ ಅತಿಥಿಗಳನ್ನು ಪರಿಚಯಿಸಿದರು. ಡಾ.ಯಾಸ್ಮಿನ್ ಮನಿಯಾರ್ ವಂದಿಸಿದರು. ಬಿ.ವಿ.ವಿ ಸಂಘದ ವಿವಿಧ ವೈದ್ಯಕೀಯ ಸಂಸ್ಥೆಗಳ ಬೋಧಕ ಸಿಬ್ಬಂದಿ ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರಗೆ ಪತ್ರ

ಉತ್ತರ ಕರ್ನಾಟಕ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿ: ಬೆಲ್ಲದ

ಹುಬ್ಬಳ್ಳಿ: ರಾಜ್ಯದಲ್ಲಿನ ಪ್ರಾದೇಶಿಕ ಅಸಮತೋಲನ ನಿವಾರಣೆ, ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಣೆ ಹಾಗೂ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವಂತೆ ವಿಧಾನಸಭೆ ವಿಪಕ್ಷ ಉಪನಾಯಕ ಹಾಗೂ ಹು-ಧಾ ಪಶ್ಚಿಮ ಕ್ಷೇತ್ರದ ಶಾಸಕ ಅರವಿಂದ ಬೆಲ್ಲದ ಆಗ್ರಹಿಸಿದ್ದಾರೆ.



ಈ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಗೆ ಪತ್ರ ಬರೆದಿರುವ ಅವರು, ರಾಜ್ಯದಲ್ಲಿ ಸದ್ಯ ನಿರುದ್ಯೋಗ ದೊಡ್ಡ ಸಮಸ್ಯೆಯಾಗಿದೆ. ಲಕ್ಷಾಂತರ ಯುವಕರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದು, ಅವರ ಬೇಡಿಕೆಗೆ ಸ್ಪಂದಿಸಿ, ಖಾಲಿ ಹುದ್ದೆಗಳ ಭರ್ತಿಗೆ ತುರ್ತು ಕ್ರಮವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

ಆಡಳಿತ ಹಾಗೂ ಆರ್ಥಿಕ ಚಟುವಟಿಕೆಗಳ ಉತ್ತೇಜನಕ್ಕೆ ಪ್ರಾದೇಶಿಕ ಅಸಮತೋಲನ ನಿವಾರಣೆ ಮಾಡಬೇಕಿದೆ. ದಶಕಗಳಿಂದ ರಾಜ್ಯದ ಆಡಳಿತ ಮತ್ತು ಆರ್ಥಿಕ ಚಟುವಟಿಕೆಗಳು ಕೇವಲ ದಕ್ಷಿಣ ಕರ್ನಾಟಕ, ಅದರಲ್ಲೂ ವಿಶೇಷವಾಗಿ ಬೆಂಗಳೂರು ಕೇಂದ್ರೀಕೃತವಾಗಿವೆ. ಇದರಿಂದ ರಾಜ್ಯದಲ್ಲಿ ದೊಡ್ಡಮಟ್ಟದ ಪ್ರಾದೇಶಿಕ ಅಸಮತೋಲನ ಸೃಷ್ಟಿಯಾಗಿದೆ.

ಈ ಅಸಮತೋಲನ ನಿವಾರಿಸಲು ಮತ್ತು ಉದ್ಯೋಗ ಸೃಷ್ಟಿಯ ನಿಟ್ಟಿನಲ್ಲಿ ಉತ್ತರ ಕರ್ನಾಟಕ ಭಾಗದತ್ತ ಸರ್ಕಾರ ವಿಶೇಷ ಗಮನ ಹರಿಸಬೇಕಿದೆ. ಈ ಭಾಗದ ಯುವಕರು ಉದ್ಯೋಗ ಅರಸಿ ಬೇರೆ ನಗರಗಳಿಗೆ ಹೋಗುವುದನ್ನು ತಪ್ಪಿಸಲು, ಉತ್ತರ ಕರ್ನಾಟಕದಲ್ಲೇ ಬೃಹತ್ ಕೈಗಾರಿಕೆಗಳ ಸ್ಥಾಪನೆಯಾಗಬೇಕು. ಇಲ್ಲಿಯೇ ಉದ್ಯೋಗ ಸೃಷ್ಟಿಯಾದರೆ ಮಾತ್ರ ಈ ಭಾಗದ ಆರ್ಥಿಕ ಪರಿಸರ ಸುಧಾರಿಸಲು ಸಾಧ್ಯ ಎಂದು ತಿಳಿಸಿದ್ದಾರೆ.

ಕೈಗಾರಿಕೆಗಳ ಜೊತೆಗೆ ಕೃಷಿ ಪ್ರಧಾನವಾದ ಉತ್ತರ ಕರ್ನಾಟಕ ನಿರಂತರವಾಗಿ ಪ್ರವಾಹ ಮತ್ತು ಬರಗಾಲದಂತಹ ಪ್ರಕೃತಿ ವಿಕೋಪಗಳಗಳಿಗೆ ತುತ್ತಾಗುತ್ತಿದೆ. ಕೃಷ್ಣ ಮೇಲ್ದಂಡೆ ಯೋಜನೆ ಹಾಗೂ ಕಳಸಾ-ಬಂಡೂರಿ ಯೋಜನೆಗಳಿಗೆ ಅಗತ್ಯ ಅನುದಾನ ಒದಗಿಸಿ, ತ್ವರಿತಗತಿಯಲ್ಲಿ ಪೂರ್ಣಗೊಳಿಸುವುದು ಹಾಗೂ ಪ್ರವಾಹ ಮತ್ತು ಬರಗಾಲಕ್ಕೆ ಶಾಶ್ವತ ವೈಜ್ಞಾನಿಕ ಪರಿಹಾರ ಕಲ್ಪಿಸುವುದು ಸರ್ಕಾರದ ಆದ್ಯತೆಯಾಗಬೇಕಿದೆ ಎಂದು ಒತ್ತಾಯಿಸಿದ್ದಾರೆ.

ಉತ್ತರ ಕರ್ನಾಟಕದಲ್ಲಿ ಸುಸಜ್ಜಿತ, ಅತ್ಯಾಧುನಿಕ ಆಸ್ಪತ್ರೆ, ಗುಣಮಟ್ಟದ ಶಿಕ್ಷಣ ಸ್ಥಾಪನೆಗಳ ಜೊತೆಗೆ ಸಕಲ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕಿದೆ. ಸರ್ಕಾರದ 5 ವರ್ಷ ಅವಧಿಯಲ್ಲಿ ಉತ್ತರ ಕರ್ನಾಟಕಕ್ಕೆ ಸಮರ್ಪಕವಾದ ಅನುದಾನ ಬಿಡುಗಡೆಯಾಗದಿದ್ದರೆ, ಈ ಭಾಗದ ಅಭಿವೃದ್ಧಿ ಹತ್ತು ವರ್ಷಗಳಷ್ಟು ಹಿಂದಕ್ಕೆ ಹೋಗಲಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮುಂದಿನ ಎರಡು ವರ್ಷಗಳಲ್ಲಾದರೂ ಅಭಿವೃದ್ಧಿ ಕೇವಲ ಕಾಗದದ ಮೇಲಿನ ಅಂಕಿ-ಅಂಶಗಳಾಗಿ ಉಳಿಯದೆ, ಕಣ್ಣಿಗೆ ಕಾಣುವಂತಹ ಬದಲಾವಣೆಗಳು ಆಗಬೇಕು. ತಮ್ಮ ಅವಧಿಯಲ್ಲೇ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಪ್ರತ್ಯೇಕ ಸಚಿವಾಲಯ ಒದಗಿಸುವ ಮೂಲಕ ನೈಜ ಕಾಳಜಿಯನ್ನು ಪ್ರದರ್ಶಿಸುತ್ತಿರಿ ಎಂದು ವಿಶ್ವಾಸ ವ್ಯಕ್ತಪಡಿಸುತ್ತೇನೆ ಎಂದು ಹೇಳಿದ್ದಾರೆ.

ಚುನಾಯಿತ ಪ್ರಧಾನಿಯಾಗಿ ಮೋದಿ ಹೊಸ ಇತಿಹಾಸ: ತೇಲ್ಕೂರ್

ಕಲಬುರಗಿ: ಪ್ರಧಾನಿ ನರೇಂದ್ರ ಮೋದಿ ಅವರು ಜೂನ್ 10ರಂದು ಸ್ವತಂತ್ರ ಭಾರತದಲ್ಲಿ ಜನರಿಂದ ನೇರವಾಗಿ ಆಯ್ಕೆಯಾಗಿ ಸತತವಾಗಿ ಅತಿ ಹೆಚ್ಚು ಕಾಲ ಆಡಳಿತ ನಡೆಸಿದ ಪ್ರಧಾನಿಯಾಗಿ ಹೊಸ ಇತಿಹಾಸ ನಿರ್ಮಿಸಲಿದ್ದು, ಇದು ದೇಶದ ಪ್ರಜಾಪ್ರಭುತ್ವದ ವಿಜಯೋತ್ಸವವಾಗಿದೆ ಎಂದು ಮಾಜಿ ಶಾಸಕ ರಾಜಕುಮಾರ್ ಪಾಟೀಲ್ ತೇಲ್ಕೂರ್ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ವಾತಂತ್ರ್ಯದ ನಂತರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಆಯ್ಕೆಯಾದ ನಂತರ ಪ್ರಧಾನಿಯಾಗಿದ್ದ ನೆಹರು ಅವರು 4,398 ದಿನ ಚುನಾಯಿತ ಪ್ರಧಾನಿಯಾಗಿ ದೇಶವನ್ನು ಮುನ್ನಡೆಸಿದ್ದರು.ಇದೀಗ ಪ್ರಧಾನಿ ಮೋದಿ 4,399ನೇ ದಿನಕ್ಕೆ ಕಾಲಿಡುವ ಮೂಲಕ ಆ ದಾಖಲೆಯನ್ನು ಮೀರಲಿದ್ದಾರೆ ಎಂದು ಹೇಳಿದರು.

2014, 2019 ಮತ್ತು 2024ರ ಲೋಕಸಭಾ ಚುನಾವಣೆಗಳಲ್ಲಿ ಸತತವಾಗಿ ಜನಾದೇಶ ಪಡೆದು ಅಧಿಕಾರಕ್ಕೆ ಬಂದಿರುವ ಮೋದಿ ಅವರು ದೇಶದ ಜನರ ಅಪಾರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಈ ಮೂಲಕ ಅವರು ಈಗಾಗಲೇ ಇಂದಿರಾ ಗಾಂಧಿ ಅವರ ನಿರಂತರ ಆಡಳಿತದ ದಾಖಲೆಯನ್ನೂ ಹಿಂದಿಕ್ಕಿದ್ದಾರೆ. 2001ರಿಂದ 2014ರ ವರೆಗೆ ಗುಜರಾತ್ ಮುಖ್ಯಮಂತ್ರಿಯಾಗಿ ಹಾಗೂ ನಂತರ ಪ್ರಧಾನಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಮೋದಿ ಸರ್ಕಾರದ ಮುಖ್ಯಸ್ಥರಾಗಿ 8,390 ದಿನಗಳಿಗಿಂತ ಹೆಚ್ಚು ಕಾಲ ಅಧಿಕಾರದಲ್ಲಿರುವುದು ಮತ್ತೊಂದು ದಾಖಲೆಯಾಗಿದೆ ಎಂದು ಹೇಳಿದರು.

ನೆಹರು ನಾಮನಿರ್ದೇಶಿತ ಪ್ರಧಾನಿಯಾಗಿ ತಮ್ಮ ಆಡಳಿತ ಆರಂಭಿಸಿದ್ದರೆ, ಮೋದಿ 2014ರಲ್ಲಿ ಜನರಿಂದ ನೇರವಾಗಿ ಆಯ್ಕೆಯಾಗಿ ಅಧಿಕಾರಕ್ಕೆ ಬಂದರು. ಹೀಗಾಗಿ ಅವರು ದೇಶದ ಅತಿ ಸುದೀರ್ಘ ಅವಧಿಯ ಚುನಾಯಿತ ಪ್ರಧಾನಿಯಾಗಿ ಗುರುತಿಸಿಕೊಳ್ಳಲಿದ್ದಾರೆ. ಇದು 140 ಕೋಟಿ ಭಾರತೀಯರ ವಿಶ್ವಾಸದ ಪ್ರತೀಕವಾಗಿದೆ. ಜೂನ್ 10 ಭಾರತ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಮಹತ್ವದ ದಿನವಾಗಲಿದೆ ಎಂದರು.

ಬೊಮ್ಮನಳ್ಳಿ ರಸ್ತೆಯಲ್ಲಿ ಕರಡಿ ಪ್ರತ್ಯಕ್ಷ



ದಾಂಡೇಲಿ: ತಾಲೂಕಿನ ಬೊಮ್ಮನಳ್ಳಿ ಹತ್ತಿರ ರಸ್ತೆಯಲ್ಲಿ ಕರಡಿ ಪ್ರತ್ಯಕ್ಷವಾಗಿದೆ. ದಟ್ಟ ಕಾಡಿನ ನಡುವೆ ಇರುವ ರಸ್ತೆ ಭಾಗವತಿ-ಬೊಮ್ಮನಳ್ಳಿ ರಸ್ತೆಯಾಗಿದ್ದು, ಇಲ್ಲಿ ಆನೆ, ಕರಡಿಗಳು ಆಗೊಮ್ಮೆ ಈಗೊಮ್ಮೆ ಎಂಬಂತೆ ದರ್ಶನ ಭಾಗ್ಯವನ್ನು ನೀಡುತ್ತಿದೆ.

ಅಂತೆಯೇ ಮಿತ್ರ ಶ್ರೀಶ ರಾವ್ ಅವರು ಭಾಗವತಿಯಿಂದ ದಾಂಡೇಲಿಗೆ ಬರುತ್ತಿದ್ದಾಗ ಬೊಮ್ಮನಳ್ಳಿ ಹತ್ತಿರ ರಸ್ತೆಯಲ್ಲಿ ಕರಡಿ ಪ್ರತ್ಯಕ್ಷವಾಗಿದೆ. ಕರಡಿಯನ್ನು ನೋಡಿದೊಡನೆಯೇ ದೂರದಲ್ಲಿ ವಾಹನವನ್ನು ನಿಲ್ಲಿಸಿದ್ದಾರೆ. ಸ್ವಲ್ಪ ಹೊತ್ತಿನ ಬಳಿಕ ಕರಡಿ ರಸ್ತೆ ಬಿಟ್ಟು ಅರಣ್ಯ ಪ್ರದೇಶಕ್ಕೆ ಹೆಜ್ಜೆ ಹಾಕಿದೆ.

ಜೇನುನೊಣ ದಾಳಿ: 21 ವಿದ್ಯಾರ್ಥಿಗಳು ಅಸ್ವಸ್ಥ

ಮುಂಡಗೋಡ: ಕರಗಿನಕೊಪ್ಪದ ಮೊರಾರ್ಜಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳ ಮೇಲೆ ಜೇನು ಹುಳುಗಳು ದಾಳಿ ಮಾಡಿದ ಪರಿಣಾಮ 21 ವಿದ್ಯಾರ್ಥಿಗಳು ಅಸ್ವಸ್ಥರಾಗಿ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಧ್ಯಾಹ್ನ ಊಟ ಮುಗಿಸಿಕೊಂಡು ತರಗತಿಗೆ ಹೋದಾಗ ಈ ಘಟನೆ ನಡೆದಿದೆ. ಇದರ ಪರಿಣಾಮ 21ವಿದ್ಯಾರ್ಥಿಗಳು ಅಸ್ವಸ್ಥರಾಗಿದ್ದಾರೆ. ತಕ್ಷಣ ವೇ ಅವರನ್ನು ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.

ವಸತಿ ಶಾಲೆಯ ಎರಡನೆ ಮಹಡಿಯಲ್ಲಿ ಜೇನು



ಹುಳುಗಳ ಗೂಡು ಕಟ್ಟಿತ್ತು. ವಿದ್ಯಾರ್ಥಿಯೊಬ್ಬ ಜೇನುಹುಳದ ಗೂಡಿಗೆ ಕಲ್ಲಿನಿಂದ ಹೊಡೆದ ಪರಿಣಾಮದಿಂದಾಗಿ ಜೇನು ಹುಳುಗಳು ದಾಳಿ ಮಾಡಿವೆ ಎನ್ನಲಾಗಿದೆ. ಗಾಯಾಳುಗಳನ್ನು ಇಲ್ಲಿನ ತಾಲೂಕಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಎಲ್ಲಾ ಮಕ್ಕಳು ಆರೋಗ್ಯವಾಗಿ ಇದ್ದಾರೆ. ಇವರಲ್ಲಿ ಕೆಲ ವಿದ್ಯಾರ್ಥಿಗಳು ಚಿಕಿತ್ಸೆ ಪಡೆಯುತ್ತಿದ್ದು, ಸಂಜೆಯ ವರೆಗೆ ಡಿಸ್ಚಾರ್ಜ್ ಮಾಡಲಾಗುವುದು. ಇನ್ನು ಕೆಲ ವಿದ್ಯಾರ್ಥಿಗಳನ್ನು ನಾಳೆಯವರೆಗೂ ನಿಗಾ ಇಡಲಾಗುವುದು ಎಂದು ತಾಲೂಕು ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಸ್ವರೂಪರಾಣಿ ಪಾಟೀಲ ತಿಳಿಸಿದರು.

ಹೆರಾಯಿನ್ ಮಾರಾಟ ಜಾಲದ ಮೇಲೆ ಸಿಸಿಬಿ ದಾಳಿ

10.31ಲಕ್ಷ ರೂ.ಮೌಲ್ಯದ ವಸ್ತು ಜಪ್ತಿ: ಮೂವರ ಬಂಧನ

ಬೆಳಗಾವಿ: ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಹೆರಾಯಿನ್ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ತಂಡದ ಮೇಲೆ ಬೆಳಗಾವಿ ನಗರ ಸಿಸಿಬಿ ಪೊಲೀಸರು ದಾಳಿ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ ಹೆರಾಯಿನ್ ಸೇರಿದಂತೆ ಒಟ್ಟು 10.31ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬಂಧಿತ ಆರೋಪಿಗಳನ್ನು ನಿಖಿಲ್ ನಾರಾಯಣ ಬಳ್ಳಾರಿ (24), ಕಪೀಲ ಗಜಾನನ ಹೊಸುರಕರ (18) ಹಾಗೂ ಆಕಾಶ ಆನಂದ ಸಾಳುಂಕೆ (34) ಎಂದು ಗುರುತಿಸಲಾಗಿದೆ. ಇವರು ಕ್ರಮವಾಗಿ ರೈಲ್ವೆಕ್ವಾಟರ್ಸ್ ಮತ್ತು ಮುಜಾವರ ಗಲ್ಲಿ ನಿವಾಸಿಗಳಾಗಿದ್ದಾರೆ.

ತಾಂಗಡಿ ಗಲ್ಲಿಯ ಮಹಾದೇವ ಮಂದಿರದ ಹಿಂಭಾಗದ ಸಾರ್ವಜನಿಕ ಸ್ಥಳದಲ್ಲಿ ಹೆರಾಯಿನ್ ಮಾರಾಟ ಮಾಡುತ್ತಿದ್ದ ವೇಳೆ, ಸಿಸಿಬಿ ಪಿಐ ಮಂಜುನಾಥ ನಾಯಕ ಅವರ ಮಾರ್ಗದರ್ಶನದಲ್ಲಿ ಪಿಎಸ್‌ಐ ಮಂಜುನಾಥ ಭಜಂತ್ರಿ ಹಾಗೂ ಸಿಬ್ಬಂದಿ ದಾಳಿ ನಡೆಸಿ ಆರೋಪಿಗಳನ್ನು ವಶಕ್ಕೆ ಪಡೆದರು.

ದಾಳಿಯ ವೇಳೆ ಆರೋಪಿತರಿಂದ ರೂ.9.50 ಲಕ್ಷ ಮೌಲ್ಯದ 47.29 ಗ್ರಾಂ ಹೆರಾಯಿನ್ (466 ಸಣ್ಣ ಪೊಟ್ಟಣಗಳು), ರೂ.70 ಸಾವಿರ ಮೌಲ್ಯದ ಸುಜುಕಿ ಅವೆನ್ಯೂ ಸ್ಕೂಟರ್, ರೂ.10,800 ಮೌಲ್ಯದ ಮೂರು ಮೊಬೈಲ್ ಫೋನ್‌ಗಳು ಹಾಗೂ ರೂ.300 ನಗದು ಹಣವನ್ನು ಜಪ್ತಿ ಮಾಡಲಾಗಿದೆ. ಒಟ್ಟಾರೆ ರೂ.10,31,100 ಮೌಲ್ಯದ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ವಿಚಾರಣೆ ವೇಳೆ ಆರೋಪಿತರು ಹೆರಾಯಿನ್ ಮಾದಕ ವಸ್ತುವನ್ನು ಮುಂಬೈ ಮೂಲದ ಸಾಯಿನ್ ಕೋಳವಾಡಾ ಎಂಬ ಮಹಿಳೆಯಿಂದ ಪಡೆದಿರುವುದಾಗಿ ಮಾಹಿತಿ ನೀಡಿದ್ದಾರೆ. ಈ ಸಂಬಂಧ ಖಡೇಬಜಾರ್ ಪೊಲೀಸ್ ಠಾಣೆಯಲ್ಲಿ ಎನ್ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಸ್ಥಿರವಾಗಿದ್ದರೆ ಮಾತ್ರ ಒಳ್ಳೆಯ ಆಡಳಿತ ಸಾಧ್ಯ: ಬೊಮ್ಮಾಯಿ

ಗದಗ: ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಸ್ತಾಂತರ ಮೇಲ್ನೋಟಕ್ಕೆ ಬಹಳ ಸುಗಮವಾಗಿ ಆಯಿತು ಎನ್ನುವಂತೆ ಕಾಣಿಸುತ್ತಿದೆ. ಆದರೆ, ಒಳ ಬೇಗುದಿ ಇನ್ನೂ ಕೆಂಡದಂತೆ ಜೀವಂತ ಆಗಿದೆ. ಇನ್ನೂ ಎರಡು ವರ್ಷ ರಾಜಕೀಯ ಅಸ್ಥಿರತೆ, ಅಸಮಾಧಾನ, ಆಡಳಿತ ಕುಸಿದು ಹೋಗುತ್ತದೆ. ಕಾಂಗ್ರೆಸ್ ಪಕ್ಷದ ಸಂಘರ್ಷಾತ್ಮಕ ರಾಜಕಾರಣದಲ್ಲಿ ಸಾಮಾನ್ಯ ಜನರ ಬದುಕು ದುಸ್ತರವಾಗುವುದು ಸ್ಪಷ್ಟವಾಗಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ನಾಯಕತ್ವ ಒಪ್ಪಿಕೊಂಡಂತೆ ಕಾಂಗ್ರೆಸ್‌ನ ಶಾಸಕರು, ಮಂತ್ರಿಗಳು ಡಿ.ಕೆ. ಶಿವಕುಮಾರ ಅವರನ್ನು ಒಪ್ಪಿಕೊಂಡಿಲ್ಲ, ಸಚಿವರಾಗಲು ಏಕೆ ಇಷ್ಟೊಂದು ಒತ್ತಡ ಇದೆ. ಏಕೆಂದರೆ 2028ಕ್ಕೆ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ ಎಂದು ಶಾಸಕರಿಗೆ ಗೊತ್ತಾಗಿದೆ. ಹೀಗಾಗಿ ಈಗಲೇ ಮಂತ್ರಿ ಆಗಬೇಕೆಂದು ಒತ್ತಡ ಹೇರುತ್ತಿದ್ದಾರೆ.

ಹೀಗಾಗಿ ಬಹಳ ಸವಾಲುಗಳಿವೆ. ರಾಜಕೀಯವಾಗಿ ಸ್ಥಿರವಾಗಿದ್ದರೆ ಮಾತ್ರ ಒಳ್ಳೆಯ ಆಡಳಿತ ಕೊಡಲು ಸಾಧ್ಯ. ಈ ಸವಾಲನ್ನು ಶಿವಕುಮಾರ ಹೇಗೆ ನಿಭಾಯಿಸುತ್ತಾರೆ ಎನ್ನುವುದನ್ನು ಕಾದು ನೋಡಬೇಕು.

ಡಿ.ಕೆ. ಶಿವಕುಮಾರ ಅವರನ್ನು ಟ್ರಬಲ್ ಶೂಟರ್ ಎಂದು ಕರೆಯುತ್ತಾರೆ. ಈಗ ಆಗಿರುವ ಟ್ರಬಲ್‌ಗೆ ಬೇರೆ ಯಾರೂ ಶೂಟರ್ ಇಲ್ಲ, ಅವರು ಇದನ್ನು ಹೇಗೆ ನಿಭಾಯಿಸುತ್ತಾರೆ ಎನ್ನುವುದರ ಮೇಲೆ ಮುಂದಿನ ರಾಜಕೀಯ ಇದೆ.

ಸಿದ್ದರಾಮಯ್ಯ ಸುಮ್ನೆ ಕುಳಿತಿಲ್ಲ: ಸಿದ್ದರಾಮಯ್ಯ ಇನ್ನೂ ಸುಮ್ನೆ ಕುಳಿತಿಲ್ಲ. ಮೊದಲ ಹಂತದ ಸಚಿವ ಸಂಪುಟದಲ್ಲಿ ಯಾರ ಪ್ರಭಾವ ಕಾಣುತ್ತಿದೆ, ಮಲ್ಲಿಕಾರ್ಜುನ ಖರ್ಗೆ, ಮಾಜಿ ಸಿಎಂ ಸಿದ್ದರಾಮಯ್ಯ, ಹೈಕಮಾಂಡ್ ಪ್ರಭಾವ ಮಾತ್ರ ಕಾಣಿಸುತ್ತಿದೆ. ಮುಂದಿನ ಕಂತಿನಲ್ಲಿ ಡಿ.ಕೆ. ಶಿವಕುಮಾರ ನಂಬಿದವರನ್ನು ಮಂತ್ರಿ ಮಾಡಿದರೆ ಅವರ ಛಾಪು ಇದೆ ಎನ್ನಬಹುದು. ಇಲ್ಲವಾದರೆ ಡಿಕೆಶಿ ಛಾಪು ಇಲ್ಲ ಅಂತ ಅರ್ಥ ಎಂದು ಹೇಳಿದರು.

ಮಾಜಿ ಪ್ರಧಾನಿ ದೇವೇಗೌಡರಿಗೆ ರಾಜ್ಯಸಭಾ ಸ್ಥಾನ ನೀಡದೇ ಬಿಜೆಪಿ ಅಪಮಾನ ಮಾಡಿದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮಾಡಿರುವ ಆರೋಪದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸುರ್ಜೇವಾಲ ಅವರಿಗೆ ಕರ್ನಾಟಕದ ರಾಜಕೀಯ ಗೊತ್ತಿಲ್ಲ, ಮತ್ತು ಜಾಣ ಮರೆವು ಇದೆ. ದೇವೇಗೌಡರನ್ನು ಪ್ರಧಾನ ಮಂತ್ರಿ ಸ್ಥಾನದಿಂದ ಇಳಿಸಿದ್ದು ಕಾಂಗ್ರೆಸ್ ಅದಕ್ಕಿಂತ ದೊಡ್ಡ ಅವಮಾನ ಇನ್ನೊಂದಿಲ್ಲ. ಎರಡು ಬಾರಿ ಕುಮಾರಸ್ವಾಮಿ ಜೊತೆ ಸರ್ಕಾರ ಮಾಡಿ ಅವರಿಗೆ ಕೈಕೊಟ್ಟಿರುವುದು ಎಲ್ಲರಿಗೂ ಗೊತ್ತಿದೆ. ಅದಕ್ಕೆ ಕುಮಾರಸ್ವಾಮಿಯವರು ಉತ್ತರ ಕೊಟ್ಟಿದ್ದಾರೆ. ದೇವೇಗೌಡರ ಬಗ್ಗೆ ಬಿಜೆಪಿ ಹೈಕಮಾಂಡ್ ಚಿಂತನೆ ಮಾಡುತ್ತಿದೆ. ಖಂಡಿತವಾಗಿಯೂ ಅವರಿಗೆ ಯಾವ ಸಂದರ್ಭದಲ್ಲಿ ಗೌರವ ಸ್ಥಾನ ಕೊಡಬೇಕೊ ಅದನ್ನು ಮಾಡುತ್ತಾರೆ ಎಂದು ಹೇಳಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಸಹಾಯ ಧನ ಮಂಜೂರಾತಿ ಪತ್ರ ವಿತರಣೆ

ಬನವಾಸಿ: ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 2026–27ನೇ ಸಾಲಿನ ಗ್ರಾಮ ಕಲ್ಯಾಣ ಕಾರ್ಯಕ್ರಮದಡಿ ನೀಡುವ ವೈದ್ಯಕೀಯ ಚಿಕಿತ್ಸೆ ವೆಚ್ಚದ ಸಹಾಯಧನದ ಮಂಜೂರಾತಿ ಪತ್ರವನ್ನು ಸಮೀಪದ ಕೊರ್ಲಕಟ್ಟ ಗ್ರಾಮದ ಕಾಂಡ್ರಾಜಿಯ ಫಲಾನುಭವಿಯಾದ ಆದರ್ಶ ನಾಗೇಂದ್ರ ನಾಯ್ಕ್ ಅವರಿಗೆ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಮಂಜುನಾಥ ಎಸ್.ಜಿ. ಹಾಗೂ ಜಿಲ್ಲಾ ಜನಜಾಗೃತಿ ವೇದಿಕೆಯ ಜಿಲ್ಲಾ ಸಂಘಟನಾ ಉಪಾಧ್ಯಕ್ಷ ಸುಧೀರ ನಾಯರ್ ಅವರು ಮಂಗಳವಾರ ವಿತರಿಸಿದರು. ಆದರ್ಶ ನಾಗೇಂದ್ರ ನಾಯ್ಕ್ ಕಳೆದ ಕೆಲ ತಿಂಗಳಿನಿಂದ ಹೃದಯ ಸಂಬಂಧಿ ಕಾಯಿಲೆಗೆ ತುತ್ತಾಗಿ ಚಿಕಿತ್ಸೆ ಪಡೆಯುತ್ತಿದ್ದು ಈ ಸಂದರ್ಭದಲ್ಲಿ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 2026–27ನೇ ಸಾಲಿನ ಗ್ರಾಮ ಕಲ್ಯಾಣ ಕಾರ್ಯಕ್ರಮದಡಿ ನೀಡುವ ವೈದ್ಯಕೀಯ ಚಿಕಿತ್ಸೆ ವೆಚ್ಚದ 25 ಸಾವಿರ ರೂ.ಗಳ ಮಂಜೂರಾತಿ ಪತ್ರ ನೀಡಲಾಗಿದೆ ಎಂದು ಯೋಜನಾಧಿಕಾರಿ ಮಂಜುನಾಥ ಎಸ್.ಜಿ. ತಿಳಿಸಿದರು. ಈ ಸಂದರ್ಭದಲ್ಲಿ ಬಿಸಲಕೊಪ್ಪ ವಲಯ ಮೇಲ್ವಿಚಾರಕ ಭಾಸ್ಕರ ಆರ್.ಶೇಟ್, ಸಿಬ್ಬಂದಿ ಗಣೇಶ ಇದ್ದರು.

ಹಲವೆಡೆ ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪ ವಿಭಾಗ ವ್ಯಾಪ್ತಿಯಲ್ಲಿ ಜಂಗಲ್ ಕಟಿಂಗ್, ಲೈನ್ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಜೂ.10 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕಾರವಾರ ನಗರ, ಎನ್ ಎಚ್–17, ಕೋಡಿಭಾಗ, ಹುಬ್ಬುವಾಡ, ಕೆ.ಎಚ್.ಬಿ, ಅಮದಳ್ಳಿ, ಬಿಣಗಾ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲ್ಲಿದ್ದು ಹಾಗೂ ಹೊನ್ನಾವರ ತಾಲೂಕಿ ಗೇರುಸೊಪ್ಪ 33/11ಕೆವಿ. ವಿದ್ಯುತ್ ವಿತರಣಾ ಕೇಂದ್ರದ 33ಕೆ.ವಿ ಮಾರ್ಗ ನಿರ್ವಹಣಾ ಕೆಲಸದ ನಿಮಿತ್ತ ಮಾಗೋಡ, ಉಪ್ಪೋಣಿ, ರೈಟ್, ಲೆಫ್ಟ್ ಹಾಗೂ ಕಾಲೋನಿ ಫೀಡರುಗಳ ವ್ಯಾಪ್ತಿಗಳಲ್ಲಿ 11ಕೆ.ವಿ ಮಾರ್ಗದ ನಿರ್ವಹಣೆಯ ನಿಮಿತ್ತ ಜೂ.10ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ, ಹೊನ್ನಾವರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮರ ತೆರವಿಗೆ ಜನರ ಒತ್ತಾಯ

ಗೋಕರ್ಣ: ವಾಸದ ಮನೆ ಪಕ್ಕದಲ್ಲಿ ಬೀಳುವ ಹಂತದಲ್ಲಿರುವ ಮರವನ್ನ ತೆರವುಗೊಳಿಸಿ ಕೊಡುವಂತೆ ಗ್ರಾಪಂ ಮೂರುವರ್ಷದಿಂದ ಮನವಿ ಮಾಡುತ್ತಾಬಂದರು ಯಾವುದೇ ಕ್ರಮತೆಗೆದುಕೊಂಡಿಲ್ಲ, ಮತ್ತೆ ಮಳೆಗಾಲ ಪ್ರಾರಂಭವಾಗಿದ್ದು, ಏನಾದರು ಅವಘಡ ನಡೆದರೆ ಪಂಚಾಯತದವರೆ ಹೊಣೆ ಎಂದು ಸಾಣೆಕಟ್ಟಾ ನಿವಾಸಿ ನಾರಾಯಣ ವೆಂಕಟ್ರಮಣ ನಾಯ್ಕ ಹೇಳಿದ್ದಾರೆ. ಈ ಕುರಿತು



ಪತ್ರಿಕಾ ಹೇಳಿಕೆ ನೀಡಿರುವ ಅವರು ಕಳೆದ ವರ್ಷ ಮರ ಟೊಂಗೆ ಬಿದ್ದು, ನೀರಿನ ಟ್ಯಾಂಕ್,ಚಾವಣಿ ಮತ್ತುಗೋಡೆ ಹಾನಿಯಾಗಿತ್ತು.ನಂತರ ಕಂದಾಯ ಇಲಾಖೆಯವರು ಪರಿಶೀಲನೆ ನಡೆಸಿದ್ದರು, ಆದರೆ ಹಾನಿಯ ಪರಿಹಾರವನ್ನ ನೀಡಿಲ್ಲ. ಅವಘಡ ನಡೆದ ನಂತರ ಮತ್ತೆ ಗ್ರಾಮ ಪಂಚಾಯತಕ್ಕೆ ಅರ್ಜಿ ಸಲ್ಲಿಸಿದ್ದೇವೆ. ಆದರೆ ಇದುವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62899	67700
ಬಿಳಿಗೋಟು	23199	36099
ಕೆಂಪುಗೋಟು	21109	35599
ಬೆಟ್ಟೆ	40200	50509
ರಾಶಿ	49699	53309
ಚಾಲಿ	43899	48569

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58899	58899
ರಾಶಿ	50299	55599
ಬೆಟ್ಟೆ	38000	48769
ಕೆಂಪುಗೋಟು	18899	37199
ಬಿಳಿಗೋಟು	20000	35199
ಚಾಲಿ	37599	48141
ಕೋಕಾ	12909	29499
ಕಾಳುಮೆಣಸು	60211	68555



ಬನವಾಸಿ: ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 2026–27ನೇ ಸಾಲಿನ ಗ್ರಾಮ ಕಲ್ಯಾಣ ಕಾರ್ಯಕ್ರಮದಡಿ ನೀಡುವ ವೈದ್ಯಕೀಯ ಚಿಕಿತ್ಸೆ ವೆಚ್ಚದ ಸಹಾಯಧನದ ಮಂಜೂರಾತಿ ಪತ್ರವನ್ನು ಕೊರ್ಲಕಟ್ಟ ಗ್ರಾಮದ ಕಾಂಡ್ರಾಜಿಯ ಫಲಾನುಭವಿಯಾದ ಆದರ್ಶ ನಾಗೇಂದ್ರ ನಾಯ್ಕ್ ಅವರಿಗೆ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಮಂಜುನಾಥ ಎಸ್.ಜಿ. ಹಾಗೂ ಜಿಲ್ಲಾ ಜನಜಾಗೃತಿ ವೇದಿಕೆಯ ಜಿಲ್ಲಾ ಸಂಘಟನಾ ಉಪಾಧ್ಯಕ್ಷ ಸುಧೀರ ನಾಯರ್ ವಿತರಿಸಿದರು.

ಪರವಾನಗಿ ರಹಿತ ಹೋಟೆಲ್, ಹೋಂಸ್ಟೇ: ಕ್ರಮಕ್ಕೆ ಆಗ್ರಹ

ದಾಂಡೇಲಿ: ತಾಲೂಕಿನ ಆಲೂರು ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಕೇರವಾಡದ ದಾಂಡೇಲಪ್ಪ ದೇವಸ್ಥಾನದ ಹತ್ತಿರ ಗ್ರಾಪಂ ಪರವಾನಿಗೆ ಪಡೆಯದೆ ಅಥವಾ ವಾಣಿಜ್ಯ ನಿಯಮಾವಳಿಗಳ ಅನುಮತಿ ಇಲ್ಲದೆ ಸುದೀರ್ಘ ದಿನಗಳಿಂದ ಹೋಟೆಲ್ ನಡೆಸುತ್ತಿದ್ದು, ಮತ್ತು ಇದೀಗ ಹೋಂಸ್ಟೇ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಇದರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಕೇರವಾಡ ಮಜರೆ ಹಾಲಮಡ್ಡಿ ಗ್ರಾಮದ ಸಾರ್ವಜನಿಕರು ಮಾಜಿ ಗ್ರಾಪಂ ಸದಸ್ಯ ಸುಭಾಷ ಬೋವಿವಡ್ಡರ ನೇತೃತ್ವದಲ್ಲಿ ಆಲೂರು ಗ್ರಾಪಂ ಅಭಿವೃದ್ಧಿ ಅಧಿಕಾರಿ, ತಾಪಂ ಕಾರ್ಯನಿರ್ವಹಣಾಧಿಕಾರಿ ಟಿ.ಸಿ.ಹಾದಿಮನಿ ಮತ್ತು ತಹಶೀಲ್ದಾರ್ ಶೈಲೇಶ ಪರಮಾನಂದ ಅವರಿಗೆ ಮನವಿ ನೀಡಿ ಆಗ್ರಹಿಸಿದ್ದಾರೆ.ಸಾರ್ವಜನಿಕರು ನೀಡಿದ ಮನವಿಯಲ್ಲಿ ದಾಂಡೇಲಪ್ಪ ದೇವಸ್ಥಾನದ ಹತ್ತಿರ ಶಿವರಾಮ ಅಪ್ಪಾಜಿ ಪಾಟೀಲ್ ಎಂಬವರು ಗ್ರಾಪಂಯಿಂದ ಪರವಾನಿಗೆ ಹಾಗೂ ನಿರಪೇಕ್ಷಣಾ ಪತ್ರ ಪಡೆಯದೆ ಸುದೀರ್ಘ ದಿನಗಳಿಂದ ಹೋಟೆಲ್ ನಡೆಸುತ್ತಿದ್ದಾರೆ ಮತ್ತು ಇದೀಗ ಹೋಂಸ್ಟೇ ನಿರ್ಮಾಣ ಕಾಮಗಾರಿಯನ್ನು ಆರಂಭಿಸಿದ್ದಾರೆ. ಇಷ್ಟೇ ಅಲ್ಲದೆ ಇವರು ಕಟ್ಟಡ ಕಟ್ಟಿಕೊಂಡು ವ್ಯಾಪಾರ ನಡೆಸುತ್ತಿರುವ ಜಾಗೀಯ ಕುರಿತಂತೆ, ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದ್ದು ಇವರು ನ್ಯಾಯಾಲಯದ ನಿಯಮವನ್ನು ಸಹ ಉಲ್ಲಂಘನೆ ಮಾಡಿರುತ್ತಾರೆ. ಪ್ರಕರಣದ ಪಿರ್ಯಾದು ಸಂಖ್ಯೆ 871/ 2022 ಇರುತ್ತದೆ. ಇಲ್ಲಿ ರೈತಪಿ ಹೊರತುಪಡಿಸಿ ಯಾವುದೇ ಚಟುವಟಿಕೆಗಳನ್ನು ನಡೆಸಲು ಅನುಮತಿ ನೀಡಬಾರದಾಗಿಯೂ ಹಾಗೂ ಇದರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಲಾಗಿದೆ.



ದಾಂಡೇಲಿ: ತಾಲೂಕಿನ ಆಲೂರು ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಕೇರವಾಡದ ದಾಂಡೇಲಪ್ಪ ದೇವಸ್ಥಾನದ ಹತ್ತಿರ ಗ್ರಾಪಂ ಪರವಾನಿಗೆ ಪಡೆಯದೆ ಅಥವಾ ವಾಣಿಜ್ಯ ನಿಯಮಾವಳಿಗಳ ಅನುಮತಿ ಇಲ್ಲದೆ ಸುದೀರ್ಘ ದಿನಗಳಿಂದ ಹೋಟೆಲ್ ನಡೆಸುತ್ತಿದ್ದು, ಮತ್ತು ಇದೀಗ ಹೋಂಸ್ಟೇ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಇದರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಕೇರವಾಡ ಮಜರೆ ಹಾಲಮಡ್ಡಿ ಗ್ರಾಮದ ಸಾರ್ವಜನಿಕರು ಮನವಿ ಸಲ್ಲಿಸಿದರು.

ಚಾಲಕನ ಸಮಯ ಪ್ರಜ್ಞೆಗೆ ಸಾರ್ವಜನಿಕರ ಮೆಚ್ಚುಗೆ

ಕೈ ಕೊಟ್ಟ ಬ್ರೇಕ್: ತಪ್ಪಿದ ಅನಾಹುತ

ಅಂಕೋಲಾ: ತಾಲೂಕಿನಲ್ಲಿ ಗ್ರಾಮೀಣ ಪ್ರದೇಶಗಳಿಗೆ ತೆರಳುವ ಸಾರಿಗೆ ಸಂಸ್ಥೆಯ ಬಸ್‌ಗಳ ತಾಂತ್ರಿಕ ದೋಷದಿಂದ ಜನರ ಜೀವದ ಜೊತೆ ಆಟವಾಡುವ ಘಟನೆಗಳು ಹೆಚ್ಚುತ್ತಲೇ ಇದ್ದು ಮಂಗಳವಾರ ಸಂಜೆ ಹಾರವಾಡಕ್ಕೆ ತೆರಳುತ್ತಿದ್ದ ಬಸ್‌ನ ಬ್ರೇಕ್ ಕೆಟ್ಟು ಹೋಗಿ ಚಾಲಕನ ಸಮಯ ಪ್ರಜ್ಞೆಯಿಂದ ಭಾರೀ ಅನಾಹುತವೊಂದು ತಪ್ಪಿದೆ.

> **ಅಂಕೋಲಾ ಘಟಕದ ಹಳೆ ಬಸ್‌ಗಳ ತಾಂತ್ರಿಕ ಸ್ಥಿತಿಗತಿ ಕುರಿತು ಪರಿಶೀಲನೆ ನಡೆಸಬೇಕೆಂದು ಸಾರ್ವಜನಿಕರ ಆಗ್ರಹ**

ಸಂಜೆ ಅಂಕೋಲಾ ಬಸ್ ನಿಲ್ದಾಣದಿಂದ ಅಲಗೇರಿ ಮಾರ್ಗವಾಗಿ ಹಾರವಾಡಕ್ಕೆ ತೆರಳುವ ಬಸ್ ನಿಲ್ದಾಣದಿಂದ ಹೊರ ಬಿದ್ದ ಮೇಲೆ ಬ್ರೇಕ್ ಕೈ ಕೊಟ್ಟಿರುವುದು ಚಾಲಕನ ಗಮನಕ್ಕೆ ಬಂದಿದ್ದು ದೃತಿಗೆಡದ ಚಾಲಕ ಬಸ್‌ನ್ನು ಬೇರೆ ಮಾರ್ಗದಲ್ಲಿ ಚಲಾಯಿಸಿ ತಂದು ಬಸ್ ನಿಲ್ದಾಣದ ಕಡೆ ಮರಳಿ ಹೋಗುವ ಮಾರ್ಗದ ಮಧ್ಯೆ ಕಿತ್ತೂರು ಚೆನ್ನಮ್ಮ ರಸ್ತೆಯಲ್ಲಿ ಬಸ್ ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದಾನೆ.

ಬಸ್‌ನಲ್ಲಿ ಮಹಿಳೆಯರು, ಶಾಲಾ ವಿದ್ಯಾರ್ಥಿಗಳು ಸೇರಿದಂತೆ ಹಲವರು ಪ್ರಯಾಣಿಸುತ್ತಿದ್ದು, ಸಂಭವನೀಯ ಅನಾಹುತ ತಪ್ಪಿಸಿದ ಚಾಲಕನ ಬುದ್ಧಿವಂತಿಕೆಗೆ ಮೆಚ್ಚುಗೆ ವ್ಯಕ್ತವಾದರೂ ತಾಂತ್ರಿಕ ದೋಷವಿರುವ ಗುಜರಿ ಬಸ್‌ಗಳನ್ನು ಸರಿಪಡಿಸದೇ ಓಡಿಸುತ್ತಿರುವ ಅಂಕೋಲಾ ಘಟಕದ ಕಾರ್ಯವೈಕರಿಯ ಕುರಿತಂತೆ ಆಕ್ರೋಶದ ಮಾತುಗಳು ಕೇಳಿ ಬಂದಿವೆ.



> ತಾಂತ್ರಿಕ ದೋಷವಿರುವ ಗುಜರಿ ಬಸ್‌ಗಳನ್ನು ಸರಿಪಡಿಸದೇ ಓಡಿಸುತ್ತಿರುವ ಅಂಕೋಲಾ ಘಟಕದ ಕಾರ್ಯವೈಕರಿಯ ಕುರಿತು ಆಕ್ರೋಶ

ಹಾರವಾಡಕ್ಕೂ ಸುಸ್ಥಿಯಲ್ಲಿರುವ ಬಸ್‌ಗಳಿಗೂ ನಂಟಿಲ್ಲ ಎನ್ನುವಂತೆ ಹಾರವಾಡಕ್ಕೆ ತೆರಳುತ್ತಿದ್ದ ಬಸ್ ತಾಂತ್ರಿಕ ದೋಷದಿಂದ ರಸ್ತೆಯ ಮಧ್ಯೆ ನಿಲ್ಲುವಂತಾಗಿದ್ದು ಈ ಹಿಂದೆ

ಹಾರವಾಡಕ್ಕೆ ತೆರಳುತ್ತಿದ್ದ ಕೆಎ31ಎಫ್1310 ನೋಂದಣಿ ಸಂಖ್ಯೆಯ ಡಬಲ್ ಡೋರ್ ಬಸ್ ಹಲವಾರು ಬಾರಿ ಕೆಟ್ಟು ನಿಂತು ಸುದ್ದಿಯಾಗಿತ್ತು ನಂತರ ಅದರ ಬದಲಿಗೆ ಬಿಟ್ಟ ಇನ್ನೊಂದು ಬಸ್ ಸಹ ಬ್ರೇಕ್ ಫೇಲ್ ಆಗಿ ಆವರಣ ಗೋಡೆ ಮತ್ತು ದ್ವಿಚಕ್ರ ವಾಹನಗಳಿಗೆ ಡಿಕ್ಕಿಹೊಡೆಯುವಂತಾಗಿತ್ತು. ಕೆಲವು ದಿನಗಳಿಂದ ಡಬಲ್ ಡೋರ್ ಬಸ್‌ನ್ನು ಸರಿಪಡಿಸಲಾಗಿದೆ ಎಂದು ಮತ್ತೆ ಹಾರವಾಡಕ್ಕೆ ಬಿಡಲಾಗುತ್ತಿತ್ತಾದರೂ ಇತ್ತೀಚಿಗೆ ಮರದ ಕೊಂಬೆ ತಗಲಿ ಮುಂಭಾಗಕ್ಕೆ ಹಾನಿ ಸಂಭವಿಸಿದ್ದರಿಂದ ಕೆ.ಎ31ಎಫ್ 1427 ನೋಂದಣಿ ಸಂಖ್ಯೆಯ ಮಿನಿಬಸ್ ಮಾದರಿಯ ಬಸ್‌ನ್ನು ಓಡಿಸಲಾಗುತಿತ್ತು.ಅಂಕೋಲಾ ಮುಖ್ಯ ರಸ್ತೆ ಅಲಗೇರಿಯ ಮೂಲಕ ಹೋಗುವ ಬಸ್ ಮುಖ್ಯ ರಸ್ತೆಯಲ್ಲಿ ಬ್ರೇಕ್ ದೋಷಕ್ಕೊಳಗಾದರೆ ಅನಾಹುತ ಸಂಭವಿಸುವ ಸಾಧ್ಯತೆ ಇತ್ತು ಎನ್ನುವ ಮಾತುಗಳು ಕೇಳಿ ಬರುತ್ತಿದ್ದು, ಅಂಕೋಲಾ ಘಟಕದ ಹಳೆ ಬಸ್‌ಗಳ ತಾಂತ್ರಿಕ ಸ್ಥಿತಿಗತಿ ಕುರಿತು ಪರಿಶೀಲನೆ ನಡೆಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮತದಾರರ ಯಾದಿ ಪಾರದರ್ಶಕವಾಗಿರಲು ಎಚ್ಚರಿಕೆ ವಹಿಸಿ: ರೂಪಾಲಿ ಎಸ್.ನಾಯ್ಕ

ಕಾರವಾರ: ಮತದಾರರ ಪಟ್ಟಿ ಪರಿಷ್ಕರಣೆ ನಡೆಯಲಿದ್ದು, ಪಟ್ಟಿಯಲ್ಲಿ ಯಾವುದೇ ನ್ಯೂನ್ಯತೆಗಳು ಇರದಂತೆ ಹಾಗೂ ಮತದಾರರ ಯಾದಿ ಪಾರದರ್ಶಕವಾಗಿರುವಂತೆ ಎಚ್ಚರಿಕೆ ವಹಿಸಬೇಕು. ಅರ್ಹ ಮತದಾರರು ಮತದಾನದಿಂದ ವಂಚಿತವಾಗಬಾರದು ಹಾಗಾಗಿ ಎಲ್ಲ ಅರ್ಹ ಮತದಾರರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗುವಂತಾಗ ಬೇಕು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ತಿಳಿಸಿದರು.

ಭಾರತೀಯ ಜನತಾ ಪಕ್ಷ ಗ್ರಾಮೀಣ ಮಂಡಲದ ಅಡಿಯಲ್ಲಿ ಮಾಜಾಳಿ ಮಹಾಶಕ್ತಿ ಕೇಂದ್ರ, ಚಿತ್ತಾಕುಲ ಮಹಾಶಕ್ತಿ ಕೇಂದ್ರ, ಮಲ್ಲಾಪುರ ಮಹಾಶಕ್ತಿ ಕೇಂದ್ರ, ಕಡವಾಡ ಮಹಾಶಕ್ತಿ ಕೇಂದ್ರ ಹಾಗೂ ಚೆಂಡಿಯಾ ಮಹಾಶಕ್ತಿ ಕೇಂದ್ರಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ನೇಮಿಸಲಾದ ಪಕ್ಷದ ತಂಡಗಳ ವಿಶೇಷ ಸಭೆಯಲ್ಲಿ ಮಾತನಾಡಿದರು.

ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಈಗಾಗಲೆ ಪಕ್ಷದಿಂದ ಬಿಎಲ್ ಓ 2. ಬೂತ್ ಅಧ್ಯಕ್ಷರು, ಸದಸ್ಯರ ತಂಡಗಳು ಹಾಗೂ ಮಹಿಳಾ ಪ್ರಮುಖರು ಕಾರ್ಯೋನ್ಮುಖರಾಗಿದ್ದಾರೆ. ಎಸ್ ಐಆರ್ ಪ್ರಕ್ರಿಯೆ ನಡೆಯುವಾಗ ಎಲ್ಲರೂ ತಮ್ಮ ತಮ್ಮ ಜವಾಬ್ದಾರಿ ಅರಿತುಕೊಂಡು ದಕ್ಷತೆಯಿಂದ ಕಾರ್ಯನಿರ್ವಹಿಸಬೇಕೆಂದು ಅವರು ವಿನಂತಿಸಿದರು.

ಭಾರತೀಯ ಜನತಾ ಪಾರ್ಟಿಯ ಗ್ರಾಮೀಣ ಮಂಡಲ ಅಧ್ಯಕ್ಷ ಸುಭಾಷ್ ಗುನಗಿ, ಬಿಎಲ್ ಎ 1 ರಾಘು ಭಟ್, ಮಂಡಲಪ್ರಧಾನಕಾರ್ಯದರ್ಶಿಸೂರಜ್ ದೇಸಾಯಿ, ರಾಜೇಶ್ ಹೊಸಾಳಕರ್, ಉಪಾಧ್ಯಕ್ಷರಾದ ಸಂಜಯ್ ಸಾಳಂಕೆ, ಮಾರುತಿ ರಾಣೆ, ದೀಪಕ ದೇಸಾಯಿ, ದತ್ತಾನಂದ ಬಾಂದೇಕರ, ವರ್ಷಾ ಪಡುವಳ್ಕರ, ಬಾಬು ನಾಯ್ಕ, ಕಿಶೋರ ಕಡವಾಡಕರ, ಉದಯ ನಾಯ್ಕ, ಸತೀಶ ಸ್ಥಳೇಕರ, ಹರೀಶ್, ವಿಕೇಶ ಬಾಂದೇಕರ, ಕಲ್ಪನಾ ನಾಯ್ಕ ಪಾಲ್ಗೊಂಡಿದ್ದರು.



ಸತ್ಕರ್ಮಗಳಿಂದ ಗಳಿಸಿದ ಕೀರ್ತಿ ಶಾಶ್ವತ

ಭಟ್ಕಳ: ಪಟ್ಟಣದ ವಡೇರ ಮಠದಲ್ಲಿ ಕಳೆದ ಕೆಲವು ದಿನಗಳಿಂದ ವಾಸ್ತವ್ಯ ಇರುವ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಪರಮಪೂಜ್ಯ ಶ್ರೀಮದ್ ವಿದ್ಯಾದೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರು ನಾಗಯಕ್ಷೆ ಮಹಾಸತಿ ಧರ್ಮದೇವಿ ದೇವಸ್ಥಾನಕ್ಕೆ ಭೇಟಿ ನೀಡಿ ದೇವಿ ದರ್ಶನ ಪಡೆದರು.

ನಂತರ ಅಲ್ಲಿನ ಭಕ್ತರನ್ನುದ್ದೇಶಿಸಿ ಆಶೀರ್ವಚ ನೀಡಿದ ಸ್ವಾಮೀಜಿಯವರು, ಜಗತ್ತಿನಲ್ಲಿ ಧರ್ಮ ಮತ್ತು ಕೀರ್ತಿ ಎಂಬ ಎರಡು ಮಾತ್ರ ಶಾಶ್ವತವಾಗಿ ಉಳಿಯುವವು. ಆಯುಷ್ಯ, ಯೌವನ, ಐಶ್ವರ್ಯ, ಪುತ್ರ–ದಾರರು ಸೇರಿದಂತೆ ಜೀವನದ ಎಲ್ಲ ಭೌತಿಕ ಸುಖಸಂಪತ್ತುಗಳು ಅಸ್ಥಿರ ಹಾಗೂ ನಶ್ವರವಾಗಿವೆ. ಮಾನವನ ಜೀವನದಲ್ಲಿ ದೊರೆಯುವ ಆಯುಷ್ಯ, ಯೌವನ, ಸಂಪತ್ತು ಹಾಗೂ ಕುಟುಂಬ ಎಲ್ಲವೂ ಒಂದು ದಿನ ಕಳೆಯುವವು. ಆದರೆ ಧರ್ಮಾಚರಣೆ ಮತ್ತು ಸತ್ಕರ್ಮಗಳಿಂದ ಗಳಿಸಿದ ಕೀರ್ತಿ ಮಾತ್ರ ಶಾಶ್ವತವಾಗಿ ಉಳಿಯುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಅವರು 'ಯದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ' ಎಂಬ ಸಂಸ್ಕೃತ ವಾಕ್ಯದ ಅರ್ಥವನ್ನು ವಿವರಿಸಿ, ಯಾರ ಮನಸ್ಸಿನಲ್ಲಿ ಯಾವ ರೀತಿಯ ಭಾವನೆ, ನಂಬಿಕೆ ಮತ್ತು ಶ್ರದ್ಧೆ ಇರುತ್ತದೆಯೋ, ಅವರಿಗೆ ಅದೇ ರೀತಿಯ ಫಲ ಮತ್ತು ಸಿದ್ಧಿ ದೊರೆಯುತ್ತದೆ. ಮಂತ್ರ, ದೇವರು ಹಾಗೂ ಗುರುಗಳ ಮೇಲಿನ ಅಚಲ ವಿಶ್ವಾಸದಿಂದ ಜೀವನದಲ್ಲಿ ಯಶಸ್ಸು ಮತ್ತು ಶಾಂತಿ ದೊರೆಯುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಧರ್ಮ ಮಾರ್ಗದಲ್ಲಿ ನಡೆದು ಸಮಾಜಕ್ಕೆ ಒಳಿತಾಗುವ ಕಾರ್ಯಗಳನ್ನು ಮಾಡುವ ಮೂಲಕ ತಮ್ಮ ಜೀವನವನ್ನು ಸಾರ್ಥಕಗೊಳಿಸಬೇಕು ಎಂದು ಸಲಹೆ ನೀಡಿದರು. ನೀಡಿದರು.

ಆಡಳಿ ಮಂಡಳಿ ಅಧ್ಯಕ್ಷ ರಾಮದಾಸ ಪ್ರಭು ದೇವಸ್ಥಾನದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಸಂಸ್ಥಾನದ ಆಡಳಿತ ಮಂಡಳಿಯ ಉಪಾಧ್ಯಕ್ಷ ಗಣಪತಿ ಪ್ರಭು, ಸದಸ್ಯರಾದ ರಾಮದಾಸ ಪ್ರಭು ಶಿರಾಲಿ, ಅನಂತ ಕಾಮತ, ಅರವಿಂದ ಪೈ, ದಿಗಂಬರ ಶೇಟ್, ಡಾ ಪ್ರಭಾಕರ ನಂಬಿಯಾರ, ಶ್ರೀಕಾಂತ ಬಡಾಲ, ಸುಜಾತ ಕಾಮಕರ, ಉದಯ ಪ್ರಭು, ರಾಧಾಕೃಷ್ಣ ಪ್ರಭು ಹಾಗೂ ಭಕ್ತರು ಉಪಸ್ಥಿತರಿದ್ದರು.



ಕೆಸರುಗದ್ದೆಯಾದ ಹಳೆ ದಾಂಡೇಲಿ ರಸ್ತೆ

ಸಂದೇಶ್ ಎಸ್.ಜೈನ್,

ದಾಂಡೇಲಿ: ಯುಜಿಡಿ, ಇನ್ನೊಂದು, ಮತ್ತೊಂದು ಎಂದು ಅಭಿವೃದ್ಧಿಯ ಹೆಸರಿನಲ್ಲಿ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಇದ್ದ ರಸ್ತೆಯನ್ನು ಹದಗೆಡಿಸಿ ವರ್ಷ 3 ಸಂದರೂ, ರಸ್ತೆ ಮಾತ್ರ ದುರಸ್ತಿಯಾಗದೆ, ಹೊಂಡಮಯವಾಗಿ, ಕೆಸರುಗದ್ದೆಯಾಗಿ ಮಾರ್ಪಟ್ಟು ಸಾರ್ವಜನಿಕರ ಹಾಗೂ ಸ್ಥಳೀಯರ ಮತ್ತು ವಿದ್ಯಾರ್ಥಿಗಳ ಕೆಂಗಣ್ಣಿಗೆ ಗುರಿಯಾಗಿದೆ ಹಳೆ ದಾಂಡೇಲಿಯ ಹದಗೆಟ್ಟ ರಸ್ತೆ.

ತಪ್ಪು ಸರ್ಕಾರದ್ದಲ್ಲ, ನಗರ ಸಭೆಯದ್ದು ಅಲ್ಲ ಕಣ್ರೀ. ತಪ್ಪು ಜನರದ್ದೆ, ಇಷ್ಟೆಲ್ಲ ಸಮಸ್ಯೆಗಳು ಇದ್ದರೂ ಚುನಾವಣೆಯ ಸಮಯದಲ್ಲಿ ನಾಯಕರ ಭರಪೂರ್ತಿ ಭರವಸೆಯ ಮಾತುಗಳನ್ನು ನಂಬಿ, ನಾಯಕರ ಹಿಂದೆ ಓಡುವ ಜನರದ್ದೆ ತಪ್ಪಲ್ವೆ, ದಾಂಡೇಲಿ ನಗರದ ಬಹುತೇಕ ರಸ್ತೆಗಳನ್ನು ಯುಜಿಡಿ ಕಾಮಗಾರಿ ತಿಂದು ತೇಗಿದೆ. ಇನ್ನೂ ಹಳೆ ದಾಂಡೇಲಿಯ ರಸ್ತೆಯ ಪರಿಸ್ಥಿತಿಯಂತೂ ಯಾರಿಗೂ ಬೇಡ.

ಈ ರಸ್ತೆಯಲ್ಲಿ ಸತ್ತ ಹೆಣವನ್ನು ಕೊಂಡೊಯ್ಯಲು ಹರಸಾಹಸ ಪಡಬೇಕಾಗಿದೆ. ಹಳೆದಾಂಡೇಲಿಯಿಂದ ಪಟೇಲ್ ನಗರಕ್ಕೆ ಹೋಗುವ ರಸ್ತೆಯ ಸ್ಥಿತಿ ಅಯೋಮಯವಾಗಿದೆ. ಈ ರಸ್ತೆಯಲ್ಲಿ ಶಾಲೆಗಳು, ಕಾಲೇಜು, ಅಂಗನವಾಡಿ ಕೇಂದ್ರ, ಕೆಎಸ್ಆರ್‌ಟಿಸಿ ಘಟಕವು ಇದೆ. ವಿದ್ಯಾರ್ಥಿಗಳ ಪರಿಸ್ಥಿತಿಯಂತೂ ಯಾರಿಗೂ ಬೇಡ. ಏನೋ ದ್ವಿಚಕ್ರ ವಾಹನ ಸವಾರರಂತು ವಾಹನಗಳಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳನ್ನು ಇಟ್ಟುಕೊಳ್ಳುವುದು ಅನಿವಾರ್ಯ ಎಂಬಂತಿದೆ ಈ ರಸ್ತೆ.



ಈ ರಸ್ತೆಯಲ್ಲಿ ಸಂಚರಿಸುವ ಆಟೋಗಳಿಗೆ ಗ್ಯಾರೇಜ್ ತವರು ಮನೆಯಾಗಿದೆ. ಸಾರಿಗೆ ಬಸ್ ಡಿಪೋದಿಂದ ಹೊರ ಬಂದು ಸ್ವಲ್ಪ ದೂರದವರೆಗೆ ಐದಾರು ಜನ ಸಿಬ್ಬಂದಿಗಳು ಬರಲೇಬೇಕು. ಯಾಕೆಂದರೆ ಹೊಂಡದಲ್ಲಿ ಹೋಗುವಾಗ ಬಸ್ ಎಲ್ಲಾದರೂ ನಿಂತಲ್ಲಿ ಎಂಬ ಭಯವಿದೆ.

ಹಳೆ ದಾಂಡೇಲಿ ಜನತೆಯ ಮುಗ್ದತೆಯನ್ನು ಬಂಡವಾಳವನ್ನಾಗಿಸಿ ಕೊಂಡಿರುವುದರಿಂದಲೇ ಈ ರಸ್ತೆ ಕೆಸರುಗದ್ದೆಯಾಗಿ ಹೊಂಡಮಯವಾಗಿ ಇರುವಂತಾಗಿದೆ.

ತಾಲೂಕು ವಕೀಲರ ಸಂಘದಿಂದ ಸಿಎಂಗೆ ಮನವಿ

ಮುಂಡಗೋಡ: ಮುಂಡಗೋಡನ್ಯಾಯಾಲಯವನ್ನು ಉಚ್ಚನ್ಯಾಯಾಲಯ ಮುಂಗಳೂರು ಪೀಠದ ಅಧಿಕಾರ ವ್ಯಾಪ್ತಿಗೆ ಸೇರಿಸದೇ ಈಗ ಇದ್ದಂತಹ ಧಾರವಾಡದ ಉಚ್ಚ ನ್ಯಾಯಾಲಯದ ಪೀಠದ ಅಧಿಕಾರ ವ್ಯಾಪ್ತಿಯಲ್ಲಿ ಮುಂದುವರಿಸುವಂತೆ ಒತ್ತಾಯಿಸಿ ತಾಲೂಕು ವಕೀಲರ ಸಂಘದವರು ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ಉಚ್ಚನ್ಯಾಯಾಲಯದ ಪೀಠವನ್ನು ಮಂಗಳೂರಿನಲ್ಲಿ ಸ್ಥಾಪಿಸಲು ಇಚ್ಛಿಸಿದ್ದು ಅದಕ್ಕೆ ಉತ್ತರಕನ್ನಡ ಜಿಲ್ಲೆಯನ್ನು ಸಹ ಅದರ ಅಧಿಕಾರ ವ್ಯಾಪ್ತಿಗೆ ಒಳಪಡಿಸಲು ಇಚ್ಛಿಸಿದ್ದು ಇದರಿಂದ ಉತ್ತರಕನ್ನಡ ಜಿಲ್ಲೆಯ ಕಕ್ಷಿದಾರರಿಗೆ, ವಕೀಲರಿಗೆ ಬಹಳ ತೊಂದರೆಯಾಗುತ್ತದೆ. ಮಂಗಳೂರಿನಲ್ಲಿ ಉಚ್ಚನ್ಯಾಯಾಲಯದ ಪೀಠವನ್ನು ಸ್ಥಾಪಿಸಿ ಅದರ ಅಧಿಕಾರ ವ್ಯಾಪ್ತಿಗೆ ಮುಂಡಗೋಡ ನ್ಯಾಯಾಲಯವನ್ನು ನೀಡಿದಲ್ಲಿ ಮಂಗಳೂರು ಮುಂಡಗೋಡದಿಂದ ಸುಮಾರು 350 ಕಿ.ಮೀ. ರಷ್ಟು ದೂರವಾಗುತ್ತದೆ. ಸಾರಿಗೆಯ ಸೌಕರ್ಯವು ಸಮರ್ಪಕವಾಗಿ ಇರುವುದಿಲ್ಲ,

ಮುಂಡಗೋಡದಿಂದ ಧಾರವಾಡದ ಉಚ್ಚನ್ಯಾಯಾಲಯದ ಪೀಠವು ಕೇವಲ 75 ಕಿ.ಮೀ ದೂರದಲ್ಲಿ ಇರುತ್ತದೆ. ನಮ್ಮ ಜಿಲ್ಲೆಯ ಹಳಿಯಾಳದಿಂದ ಕೇವಲ 20 ಕಿ.ಮೀ. ಅಂತರದಲ್ಲಿ ಧಾರವಾಡ ಪೀಠ ಇರುತ್ತದೆ. ಅದೂ ಅಲ್ಲದೇ ಘಟ್ಟ ಹತ್ತಿ ಇಳಿದು ಹೋಗಿ ಬಂದು ಮಾಡಬೇಕಾಗುತ್ತದೆ. ನ್ಯಾಯ ಕೇಳುವ ಕಕ್ಷಿದಾರರಿಗೆ ಇದರಿಂದ ತುಂಬಾ ತೊಂದರೆ ಆಗುತ್ತದೆ 2 ಅಥವಾ 3 ದಿನ ಅಲ್ಲಿಯೇ ಉಳಿದು ಬರಬೇಕಾಗುತ್ತದೆ. ಈ ಎಲ್ಲಾ ಖರ್ಚುಗಳನ್ನು ಭರಿಸುವ ಶಕ್ತಿ ಇಲ್ಲಿಯ ಕಕ್ಷಿದಾರರಿಗೆ ಇರುವುದಿಲ್ಲ. ಇಲ್ಲಿಯ ವಕೀಲರು ಸಹ ಅಷ್ಟು ದೂರ ಹೋಗಿ ಬಂದು ಮಾಡುವುದು ಕಷ್ಟಕರವಾಗಿರುತ್ತದೆ. ಉತ್ತರ ಕನ್ನಡ ಜಿಲ್ಲೆಗೆ ಬಹಳ ಅನುಕೂಲವಾದ ಪೀಠ ಧಾರವಾಡ. ಮಂಗಳೂರು ಪೀಠಕ್ಕೆ ಸೇರ್ಪಡೆ ಮಾಡಲು ನಮ್ಮ ವಕೀಲರ ಸಂಘದ ತಕರಾರು ಇರುತ್ತದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.ಈ ವೇಳೆ ವಕೀಲರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರು ಇದ್ದರು.



ಸಂಚಾರ ಸುವ್ಯವಸ್ಥೆಗೆ ಕ್ರಮ ಕೈಗೊಳ್ಳಿ: ಜೋಗಳೆಕರ್

ಅಂಕೋಲಾ: ಪಟ್ಟಣದಲ್ಲಿ ಸಂಚಾರ ವ್ಯವಸ್ಥೆ ಸಂಪೂರ್ಣ ಹದಗೆಟ್ಟು ಹೋಗಿದ್ದು ಸಂಚಾರ ಸುವ್ಯವಸ್ಥೆಗೆ ಪುರಸಭೆ ಮತ್ತು ಪೊಲೀಸ್ ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ವಾಹನ ಸಂಚಾರ ಸುಗಮಗೊಳಿಸುವ ದಿಶೆಯಲ್ಲಿ ಪೊಲೀಸ್ ಇಲಾಖೆ ಮತ್ತು ಪುರಸಭೆಯ ವತಿಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಚಿಕ್ಕದಾಗಿರುವ ಅಂಕೋಲಾ ಪಟ್ಟಣದಲ್ಲಿ ಅವ್ಯವಸ್ಥೆಗೆ ಅವಕಾಶ ಮಾಡಿಕೊಡಬೇಡಿ ಎಂದು ಕಾನೂನು ಸೇವಾ ಸಮಿತಿಯ ಅಧ್ಯಕ್ಷೆ ಹಿರಿಯ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶೆ ಪ್ರಿಯಾ ಜೋಗಳೆಕರ್ ಹೇಳಿದರು.

ಲೋಕ ಅದಾಲತ್ ಪೂರ್ವಭಾವಿ ಸಭೆಯಲ್ಲಿ ವಕೀಲ ಉಮೇಶ ನಾಯ್ಕ ಅವರು ಪಟ್ಟಣದಲ್ಲಿ ವಾಹನ ನಿಲುಗಡೆಗೆ ಸ್ಥಳವಿಲ್ಲ ಬೇಕಾಬಿಟ್ಟಿ ವಾಹನಗಳನ್ನು ಪಾರ್ಕ್ ಮಾಡಲಾಗುತ್ತದೆ. ಸಂಚಾರಿ ನಿಯಮಗಳನ್ನು ಉಲ್ಲಂಘಿಸಿ ವಾಹನಗಳ ಚಾಲನೆ ಹೆಚ್ಚುತ್ತಿದೆ ಬೀದಿಬದಿಗಳಲ್ಲಿ ಎಲ್ಲಿದೆಲ್ಲಿ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಲಾಗಿದೆ ಎಂದು ಗಮನಕ್ಕೆ ತಂದಿರುವುದನ್ನು ಉಲ್ಲೇಖಿಸಿ ಮಾತನಾಡಿದ ನ್ಯಾಯಾಧೀಶೆ ಜೋಗಳೆಕರ್ ಸಂಚಾರಿ ನಿಯಮಗಳ ಉಲ್ಲಂಘನೆಯಾದರೂ ಪೊಲೀಸರು ಯಾಕೆ ಕ್ರಮ ಕೈಗೊಳ್ಳುತ್ತಿಲ್ಲ ಮುಲಾಜಿಲ್ಲದೇ ದಂಡ ಹಾಕಿ ಸಂಚಾರ ಸುವ್ಯವಸ್ಥೆಯ ವಿಷಯದಲ್ಲಿ ತ್ವರಿತ ಕ್ರಮ ಏಕೆ ಆಗುತ್ತಿಲ್ಲ ಅಧಿಕಾರಿಗಳು ಯಾರದೋ ಒತ್ತಡಕ್ಕೆ ಮಣಿದು



ಕೆಲಸ ಮಾಡುವಂತೆ ತೋರುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಾಹನ ನಿಲುಗಡೆ, ಏಕಮುಖ ಸಂಚಾರ ವ್ಯವಸ್ಥೆಗೆ ಸಂಬಂಧಿಸಿದಂತೆ ಪುರಸಭೆಯಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ, ಪೊಲೀಸ್ ಇಲಾಖೆಯಿಂದ ಪೊಲೀಸ್ ವರಿಷ್ಠರ ಗಮನಕ್ಕೆ ತನ್ನಿ ಹೆಲ್ಮೆಟ್ ಧರಿಸದೇ ವಾಹನ ಸಂಚಾರ, ಅತಿ ವೇಗದಲ್ಲಿ ಬೈಕುಗಳ ಚಾಲನೆ, ಹೆಚ್ಚುತ್ತಿದೆ. ಬೈಕ್ ಸವಾರರು ಸಂಚಾರಿ ನಿಯಮಗಳನ್ನು ಪಾಲಿಸುತ್ತಿದ್ದಾರೋ ಎನ್ನುವುದನ್ನು ಪರಿಶೀಲಿಸಿ ನಿಯಮಗಳ ಉಲ್ಲಂಘನೆಯಾದರೆ ದಂಡ ಹಾಕಿ ಎಂದು ನ್ಯಾಯಾಧೀಶರು ಸೂಚಿಸಿದರು.

ಸಂಚಾರ ನಿಯಮಗಳ ಪಾಲನೆಗೆ ತಾಲೂಕು ಮಟ್ಟದ ಸಭೆ ನಡೆದು ಹಲವು ತಿಂಗಳುಗಳು ಕಳೆದರೂ ಇದುವರೆಗೆ ಯಾವ ತೀರ್ಮಾನಗಳೂ ಕಾರ್ಯರೂಪಕ್ಕೆ ಬಂದಿಲ್ಲ. ಅಂಕೋಲಾ ಗೋಕರ್ಣ ರಸ್ತೆಯಲ್ಲಿ ಕುಂಬಾರಕೇರಿ ಬಳಿ


ಮಹಿಯೋರ್ವರು ಅಪಘಾತದಿಂದ ಮೃತ ಪಟ್ಟಿದ್ದಾರೆ ಎಂದು ಉಮೇಶ ನಾಯ್ಕ ತಿಳಿಸಿದರು. ವಾಹನ ಸವಾರರಿಗೆ ಸೂಚನೆ ನೀಡುವ ಫಲಕಗಳು ಎಲ್ಲೂ ಕಾಣುತ್ತಿಲ್ಲ ಸೂಚನಾ ಫಲಕಗಳ ಅಳವಡಿಕೆಗೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಾಧೀಶೆ ಪ್ರಿಯಾ ಜೋಗಳೆಕರ್ ತಿಳಿಸಿದರು.ಪಿ.ಎಸ್.ಐ ವಿಶ್ವನಾಥ ನಿಂಗೊಳ್ಳಿ, ಪುರಸಭೆ ವ್ಯವಸ್ಥಾಪಕ ಬೀರಣ್ಣ ನಾಯಕ, ಸಹಾಯಕ ಸರ್ಕಾರಿ ಅಭಿಯೋಜಕರುಗಳಾದ ಅಣ್ಣಪ್ಪ ನಾಯ್ಕ, ಶಿಲ್ಪಾ ನಾಯ್ಕ ವಿವಿಧ ಇಲಾಖೆಗಳ ಅಧಿಕಾರಿಗಳು, ವಕೀಲರ ಸಂಘದ ಅಧ್ಯಕ್ಷರು, ಪದಾಧಿಕಾರಿ, ಸದಸ್ಯರು ಉಪಸ್ಥಿತರಿದ್ದರು.

> **ಅತಿ ವೇಗ ಮತ್ತು ನಿರ್ಲಕ್ಷ್ಯದ ಚಾಲನೆಯಿಂದ ತಾಲೂಕಿನಲ್ಲಿ ಅಪಘಾತಗಳು ಸಂಭವಿಸುತ್ತಿರುವುದು ಗಮನಕ್ಕೆ ಬಂದಿದ್ದು ಸಂಬಂಧಿಸಿದ ಇಲಾಖೆಗಳು ಇದನ್ನು ಗಂಭೀರವಾಗಿ ಪರಿಗಣಿಸಬೇಕಿದೆ.**
> **■ ಸುನೀತಾ,ಕಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶೆ**

ಗ್ರಾಮಸ್ಥರಿಂದಲೇ ರಸ್ತೆ ದುರಸ್ತಿ

ಯಲ್ಲಾಪುರ: ಮಾವಿನ ಕಟ್ಟಾ –ಬಿಸಿಲ ಕೊಪ್ಪ ರಸ್ತೆ ಮೂಲಕ ಹತ್ತಾರು ಹಳ್ಳಿಯಿಂದ ನೂರಾರು ಜನ ಓಡಾಡುವ ರಸ್ತೆಯು ತೀರಾ ಹದಗೆಟ್ಟಿದ್ದು ಇಂತಹ ಸಂಧರ್ಭದಲ್ಲಿ ಊರವರೆ ಒಟ್ಟಾಗಿ ಹಣ ಸಂಗ್ರಹಿಸಿ ಸ್ವತಃ ತಾವೇ ಗಟಾರಗಳನ್ನ ಕ್ಲಿನ್ ಮಾಡಿ ರಸ್ತೆ ಹೊಂಡಗಳನ್ನು ಮುಚ್ಚಿ ಏರು ತಗ್ಗುಗಳನ್ನು ಸಮಾ ಮಾಡಿ ಜನರಿಗೆ ಓಡಾಡುವಂತೆ ಮಾಡಿ ಮಾದರಿಯಾಗಿದ್ದಾರೆ.

ಮಾವಿನಕಟ್ಟಾದಿಂದ ಕುಂದರಗಿ, ಮಾರಿಮಕ್ಕಿ ಹರಾಹುರಿ, ಕರ್ಲೆಜಡ್ಡಿ,ಬುಗಡಿಸರ,ಉಳ್ಳಾಳ, ಮುಖಾಂತರ ಬಿಸಲಕೊಪ್ಪಕ್ಕೆ ಸಾಮಾನ್ಯ ಜನ ಶಾಲಾ ಮಕ್ಕಳು ಓಡಾಡಲಾಗದ ಪರಿಸ್ಥಿತಿ ಐದಾರು ವರ್ಷಗಳಿಂದ ಇರುವದನ್ನು ಪದೇ ಪದೇ ಜನಪ್ರತಿನಿಧಿಗಳಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗದೆ. ಪ್ರತಿ ಮಳೆಗಾಲ ಕಳೆಯುವುದೆ ಕಷ್ಟವಾಗುತ್ತಿದ್ದು. ಈ ಮಳೆಗಾಲ ಕಳೆದ ಮೇಲಾದರು ರಸ್ತೆ ದುರಸ್ತಿ ಮಾಡಿ ಸರಿ ಮಾಡುವಂತಾಗಲಿ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.



ವಿದ್ಯಾರ್ಥಿಗಳು ಅಧ್ಯಯನಶೀಲರಾಗಲಿ

ಹಳಿಯಾಳ: ಪಟ್ಟಣದ ಕೆಎಲ್ಎಸ್ ಪದವಿ ಪೂರ್ವ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ 2026–27ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ 'ಪ್ರೇರಣಾ–2026' ಜರುಗಿತು. ಕಾರ್ಯಕ್ರಮ ಉದ್ಘಾಟಿಸಿದ ಅರಭಾವಿಯ ಕೆ.ಆರ್.ಸಿ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ. ಆನಂದ ಮಸ್ತಿಹೋಳಿ ಮಾತನಾಡಿ, ಆರೋಗ್ಯ ಜೀವನದ ಬಹುದೊಡ್ಡ ಆಸ್ತಿ. ವಿದ್ಯಾರ್ಥಿ ಜೀವನದಲ್ಲಿ ಆರೋಗ್ಯ ಜೊತೆಗೆ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಬೇಕು ಎಂದು ಹೇಳಿದರು.ಮುಖ್ಯ ಅತಿಥಿಯಾಗಿ ಕೆಎಲ್ಎಸ್ ಕಾಲೇಜಿನ ಹಳೆಯ ವಿದ್ಯಾರ್ಥಿ ಕರ್ನಾಟಕ ಮೆಡಿಕಲ್ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿ ಅಭಿಶೇಕ್ ಶರ್ಮಾ, ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷ ಪ್ರಶಾಂತ ಕುಲಕರ್ಣಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾಲೇಜು ಪ್ರಾಂಶುಪಾಲ ಶ್ರೀನಿವಾಸ ಪ್ರಭು ಸ್ವಾಗತಿಸಿದರು. ಮಲ್ಲಿಕಾರ್ಜುನ ಕಾಜಗಾರ ಕಾಲೇಜಿನ ಬಗ್ಗೆ ಹೇಳಿದರು, ಸಾಂಸ್ಕೃತಿಕ ಸಂಯೋಜಕಿ ಸ್ವಪ್ನಾ ಸಾಳುಂಕೆ ವಂದಿಸಿದರು. ಉಪನ್ಯಾಸಕಿ ವಂದನಾ ಗೌಡ ಅತಿಥಿಯರನ್ನು ಪರಿಚಯಿಸಿದರು. ಉಪನ್ಯಾಸಕ ನಿರಂಜನ ಕೊತ್ ಸಾಧಕರ



ಯಾದಿ ವಾಚಿಸಿದರು. ಪ್ರಿಯಾ ಪಟ್ಟಣ, ಖುಷಿ ಮಡಾಕರ ನಿರೂಪಿಸಿದರು. ಸಂಜನಾ ಗೋಂಧಳಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಶ್ಲೋಕಾ ತೇಗುರ ಉಪಸ್ಥಿತರಿದ್ದರು.2025–26ನೇ ಸಾಲಿನಲ್ಲಿ ದ್ವಿತೀಯ ಪಿಯು ಫಲಿತಾಂಶದಲ್ಲಿ ಅತಿ ಹೆಚ್ಚು ಅಂಕ ಪಡೆದ ಗೌತಮ ಧಾರವಾಡಕರ, ವರ್ಷಾ ಬಹದ್ದೂರ ಸೇರಿದಂತೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಲಾ ಹದಿನೈದು ಸಾವಿರ ರೂಪಾಯಿ ನಗದು ಬಹುಮಾನ ನೀಡಲಾಯಿತು.ಉಪನ್ಯಾಸಕ ಶಾಂತಾರಾಮ ಚಿಬ್ಬುಲಕರ, ಪ್ರೀತಿ ತೇಲಿ, ಡಾ. ಕಿರಣಕುಮಾರ, ಮಂಜುನಾಥ ಭೋವಿ, ರಾಜೇಶ ಹೆಗಡೆ, ಡಾ. ಸಂಗಮೇಶ ಎನ್. ನಿಶಾ ಮಾಸ್ಕರೇನಿಸ್, ಶಣ್ಮುಖ ದಂಡಿನ, ಹೊಳಪ್ಪಾ ತಳವಾರ, ಅರ್ಚನಾ ರಗಟೆ, ಅಲ್ಬೆಟಿನ್ ಮೆಂಡಿಸ್, ಪೂಜಾ ವೇಡ್ನೆಕರ, ಮನೋಜ ನಾಯ್ಕ, ಪವನ ಕುಲಕರ್ಣಿ, ಪೂಜಾ ಚಿಪ್ಪಿ ಗ್ರಂಥಪಾಲಕ ಸಂಜಯ ಕುಲಕರ್ಣಿ ಹಾಗೂ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಪಾಲಕರು ಉಪಸ್ಥಿತರಿದ್ದರು.

ಕಿರುಸುದ್ದಿ

ನೇತ್ರ ತಪಾಸಣಾ ಉಚಿತ ಶಿಬಿರ



ಹಾನಗಲ್ಲ: ಪಟ್ಟಣದ ಕುಮಾರೇಶ್ವರ ವಿರಕ್ತಮಠದ ಮಂಗಲಭವನದಲ್ಲಿ ನಿಸರ್ಗ ಸಮಾಜ ಸೇವಾ ಸಂಸ್ಥೆ ಆಶ್ರಯದಲ್ಲಿ- ಶಿವಮೊಗ್ಗದ ಪ್ರಸಾದ ನೇತ್ರಾಲಯದ- ವೈದ್ಯರಿಂದ ನೇತ್ರ ಉಚಿತ ತಪಾಸಣಾ ಶಿಬಿರ ನಡೆಯಿತು. ಶಿಬಿರದಲ್ಲಿ 115 ಜನರು ಉಚಿತ ನೇತ್ರ ತಪಾಸಣೆಗೆ ಒಳಗಾದರು. ಈ ಪೈಕಿ 40 ಕ್ಕೂ ಅಧಿಕ ಜನರಿಗೆ ಉಚಿತ ಶಸ್ತ್ರಚಿಕಿತ್ಸೆಗೆ ನೋಂದಣಿ ಮಾಡಿಕೊಳ್ಳಲಾಯಿತು. ಪ್ರಸಾದ ನೇತ್ರಾಲಯದ ವೈದ್ಯ ಡಾ.ಸಾಗರ, ತಂತ್ರಜ್ಞರಾದ ಸುಷ್ಮಾ, ಭೂಮಿಕಾ, ಶಂಭುಲಿಂಗ ಶಿಗ್ಗಿ ಶಿಬಿರ ನಿರ್ವಹಣೆ ಮಾಡಿದರು. ತಹಶೀಲ್ದಾರ್ ವಿಠಲ ಚೌಗಲಾ ಶಿಬಿರಕ್ಕೆ ಚಾಲನೆ ನೀಡಿದರು. ಐಡಿಎಲ್‌ಆರ್ ಜಿಲ್ಲಾ ಘಟಕದ ಅಧ್ಯಕ್ಷೆ ಪರಿಮಳ ಜೈನ್ ಮಾತನಾಡಿ, ಉಚಿತ ಆರೋಗ್ಯ ಸೇವೆಗಳು ಬಡ ಜನರ ಅನುಕೂಲಕ್ಕೆ ಆದ್ಯತೆ ನೀಡಿ ನಡೆಯಬೇಕಾಗಿದೆ ಎಂದರು. ನಿಸರ್ಗ ಸಮಾಜ ಸೇವಾ ಸಂಸ್ಥೆ ಗೌರವಾಧ್ಯಕ್ಷ ನಾಗಪ್ಪ ಸವದತ್ತಿ, ಅಧ್ಯಕ್ಷ ರವಿಬಾಬು ಪೂಜಾರ ಮಾತನಾಡಿದರು. ಕಾರ್ಯದರ್ಶಿ ನಿಸಾರ್ ಪಾನವಾಲೆ, ಉಪಾಧ್ಯಕ್ಷ ಹೂಗಾರ, ಪ್ರಭು ಬಸವರಾಜ ಗಾಳಪೂಜಿ, ನಾಗರಾಜ ಚನ್ನೂರ, ಪ್ರಶಾಂತ ಪೂಜಾರ, ವಿದ್ಯಾ ಗಿರೇಗೊಂಡರ, ವೆಂಕಟೇಶ ಕಾಟೇಕರ, ಪುರಸಭೆ ಮಾಜಿ ಅಧ್ಯಕ್ಷ ವೈ.ಎಫ್.ಕಿತ್ತೂರ, ಗಣ್ಯರಾದ ಪಿ.ಎಂ.ಪಾಟೀಲ, ಕೆ.ಎಲ್. ದೇಶಪಾಂಡೆ, ಶ್ರೀಕಾಂತ ಇದ್ದರು.

ನಾಳೆ ರಾಷ್ಟ್ರೀಯ ಲೋಕ ಅದಾಲತ್

ಹಾವೇರಿ: ಜಿಲ್ಲೆಯ ಎಲ್ಲ ನ್ಯಾಯಾಲಯಗಳಲ್ಲಿ ಜುಲೈ 11 ರಂದು ರಾಷ್ಟ್ರೀಯ ಲೋಕ ಅದಾಲತ್ ಜರುಗಲಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶೈಲಜಾ ಎಚ್.ವಿ. ತಿಳಿಸಿದ್ದಾರೆ. ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಸಹ ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಇಚ್ಛಿಸಿದಲ್ಲಿ ಮುಂಚಿತವಾಗಿ ಸಂಬಂಧಪಟ್ಟ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲೂಕು ಕಾನೂನು ಸೇವಾ ಸಮಿತಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ಡಿಡಿಡಿ.ಎಥ್ಞಿಠಿಚ.ಛಿಜ್ಞಿ.ಜ್ಞಿ ಅಥವಾ ಸಹಾಯವಾಣಿ ಸಂಖ್ಯೆ15100 ಸಂಪರ್ಕಿಸಲು ಕೋರಲಾಗಿದೆ.

ತ್ಯಾಜ್ಯ ಸುಡುತ್ತಿದ್ದ ಸಾರ್ವಜನಿಕರಿಗೆ ದಂಡ



ಹಾವೇರಿ: ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ, ನಗರಸಭೆ ಪೌರಾಯುಕ್ತರ ನೇತೃತ್ವದಲ್ಲಿ ನಗರಸಭೆ ಸಿಬ್ಬಂದಿ ದಿಡೀರ್ ಕಾರ್ಯಾಚರಣೆ ನಡೆಸಿ ಹೆಗ್ಗೇರಿ ಕೆರೆ ಹತ್ತಿರ ಮಂಗಳವಾರ ತ್ಯಾಜ್ಯವನ್ನು ಸುರಿಯುವ ಹಾಗೂ ತ್ಯಾಜ್ಯವನ್ನು ಸುಡುತ್ತಿರುವ ಸಾರ್ವಜನಿಕರಿಗೆ ಘನತ್ಯಾಜ್ಯ ನಿರ್ವಹಣೆ ನಿಯಮಗಳು– 2026 ರನ್ವಯ 5,000 ರೂ., ದಂಡವಿಸುವ ಮೂಲಕ ಚಾಟಿ ಬೀಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಪೌರಾಯುಕ್ತ ಎಚ್. ಕಾಂತರಾಜು, ಆರೋಗ್ಯ ನಿರೀಕ್ಷಕಿ ರೂಪಾ ನಾಯಕ್ ಹಾಗೂ ದುರ್ಗೇಶ ತಿಮ್ಮಾಪುರ, ಅಣ್ಣಪ್ಪ ತಗಡಿನಮನಿ, ಚಂದ್ರು, ಸಿದ್ದಪ್ಪ ಮತ್ತು ಇತರರು ಪೌರಕಾರ್ಮಿಕರು ಇದ್ದರು.

ಚಿನ್ನಾಭರಣ ಕಳ್ಳತನ : ದೂರು ದಾಖಲು

ಹಾವೇರಿ: ಮನೆಯ ಹಾಲ್‌ನಲ್ಲಿಟ್ಟಿದ್ದ ತಿಜೋರಿ ಲಾಕರ್ ತೆಗೆದು ಅದರಲ್ಲಿದ್ದ ಸುಮಾರು 7.16 ಲಕ್ಷ ರೂ.ಮೌಲ್ಯದ ಬೆಲೆಬಾಳುವ ಬಂಗಾರದ ಆಭರಣಗಳನ್ನು ಕಳ್ಳರು ಕಳುವು ಮಾಡಿರುವ ಘಟನೆ ಹಿರೇಕೆರೂರು ಪಟ್ಟಣದ ಜಾವೀದ್‌ಖಾನ್ ನಗರದಲ್ಲಿ ನಡೆದಿದೆ. ಮನೆಯ ಹಾಲ್‌ನಲ್ಲಿ ಇದ್ದ ತಿಜೋರಿಯ ಬಾಗಿಲು ತೆಗೆದಿರುವ ಕಳ್ಳರು 3.20 ಲಕ್ಷ ರೂ.ಮೌಲ್ಯದ ಮಾಂಗಲ್ಯ ಸರ, 80 ಸಾವಿರ ರೂ.ಮೊತ್ತದ ಬಂಗಾರದ ಲಚ್ಚಾ, 1.20ಲಕ್ಷ ರೂ.ಕಿಮ್ಮತ್ತಿನ ಕಿವಿಯೋಲೆ, ಬಂಗಾರದ ಉಂಗುರ ಸೇರಿ ಒಟ್ಟು 7,16,000 ರೂ. ಬೆಲೆಬಾಳುವ 89.5ಗ್ರಾಂ ತೂಕದ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ. ಪಟ್ಟಣದ ಜಾವೀದಖಾನ್ ನಗರದ ನಿವಾಸಿಗಳಾದ ಜಬೀವುಲ್ಲಾ ಹೊನ್ನಾಳಿ, ಶಬೀನಾ ಹೊನ್ನಾಳಿ, ಅಮಾನುಲ್ಲಾ ಹೊನ್ನಾಳಿ, ಆಯೇಷಾ ಹೊನ್ನಾಳಿ, ಹಾಲಿವಸ್ತಿ ಬೆಳಗಾವಿಯಲ್ಲಿರುವ ಹಿರೇಕೆರೂರು ನಿವಾಸಿಗಳಾದ ಜಪ್ರುಲ್ಲಾ ಹೊನ್ನಾಳಿ, ಖಾಲಿದಾ ಹೊನ್ನಾಳಿ ಎಂಬುವವರ ಮೇಲೆ ಸಂಶಯ ಇರುವುದಾಗಿ ದೂರುದಾರಳಾದ ಶಮೀಮ್‌ಬಾನು ಉಲ್ಲಾ ಎಂಬುವವರು ಪೊಲೀಸರಿಗೆ ನೀಡಿದ ಎಫ್‌ಐಆರ್‌ನಲ್ಲಿ ತಿಳಿಸಿದ್ದಾರೆ. ಹಿರೇಕೆರೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶಿಗ್ಗಾವಿ:ಪಟ್ಟಣದ ತಾಪಂ ಆವರಣದಲ್ಲಿ ರೋಶನಿ ಸಮಾಜ ಸೇವಾ ಸಂಸ್ಥೆ (ಹಾನಗಲ್), ಎಪಿಡಿ ಸಂಸ್ಥೆ (ಬೆಂಗಳೂರು) ಇವರ ಸಂಯುಕ್ತ ಆಶ್ರಯದಲ್ಲಿ, ತಾಲೂಕಿನ ಶೀಘ್ರ ಮಧ್ಯಸ್ಥಿಕೆ ಮತ್ತು ಆರಂಭಿಕ ಕೇಂದ್ರದ ವತಿಯಿಂದ ವಿಶೇಷ ಚೇತನ ಮಕ್ಕಳಿಗೆ ಅಗತ್ಯವಿರುವ ಸಾಧನ ಸಲಕರಣೆಗಳನ್ನು ವಿತರಿಸಿ ಸಿಸ್ಟರ್ ಅನಿತಾ ಡಿಸೋಜ ಮಾತನಾಡಿದರು.

ಗುರು-ಹಿರಿಯರನ್ನು ಗೌರವಿಸಿ: ಹಾದಿಮನಿ

ಗುತ್ತಲ: ಸಾಧನೆಗೆ ಗುರಿ ಮುಖ್ಯ, ಗುರಿ ತಲುಪಲು ಗುರು ಮುಖ್ಯ ಅಂತಹ ಗುರುವಿನ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಮುನ್ನಡೆದಾಗ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದು ಅಹಿಂದ ಮುಖಂಡ ಬಸವರಾಜ ಹಾದಿಮನಿ ಹೇಳಿದರು. ಸಮೀಪದ ಹಾವನೂರು ಗ್ರಾಮದಲ್ಲಿ ಮಾನವ ಬಂಧುತ್ವ ವೇದಿಕೆ ಕರ್ನಾಟಕ ತಾಲೂಕ ಸಮಿತಿ ಹಾವೇರಿ. ಅಹಿಂದ ಯುವ ಪಡೆ ಜಿಲ್ಲಾ ಘಟಕ ಹಾವೇರಿ ವತಿಯಿಂದ ಗ್ರಾಮ ಸಂಚಾಲಕರ ಒಂದು ದಿನದ ವಿಚಾರ ಸಂಕಿರಣ ಕಾರ್ಯಕ್ರಮ ಹಾಗೂ 2025–26 ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಕ್ಕಳು ಗುರು ಹಿರಿಯರನ್ನು ಗೌರವಿಸುವ ತಂದೆ ತಾಯಿಯರನ್ನು ಪೂಜಿಸುವ ಪ್ರವೃತ್ತಿ ರೂಢಿಸಿಕೊಳ್ಳಬೇಕು ಅಂದಾಗ ತಾವುಗಳು ಸಮಾಜದಲ್ಲಿ ಆದರ್ಶರಾಗಿರಲು ಸಾಧ್ಯ ಎಂದರು. ವಿಭಾಗಿಯ ಸಂಚಾಲಕ ರವಿ ಹಾದಿಮನಿ ಮಾತನಾಡಿ, ಮಾನವ ಬಂಧುತ್ವ ವೇದಿಕೆಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಯ ಕುರಿತು ಅರಿವನ್ನು ಮೂಡಿಸಿದರು. ಜಿಲ್ಲಾ ಮಹಿಳಾ ಸಮಿತಿಯ ಸಂಚಾಲಕಿ ಸುಮಂಗಳಾ ಇಪ್ಪಿಕೊಪ್ಪ, ,ಮುಖಂಡರುಗಳಾದ ಮಂಜುನಾಥ ಮಟ್ಟಿಮನಿ, ಸರ್ಕಾರಿ ಪ್ರೌಢ ಶಾಲೆ ಮುಖ್ಯಪಾಧ್ಯಾಯ ಭಜಂತ್ರಿ, ರಮೇಶ ಮಾಗಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಸುನೀಲ ಕಡೂರ ನಿರೂಪಿಸಿದರು. ವೇದಿಕೆಯ ತಾಲೂಕು ಸಂಚಾಲಕ ಸುರೇಶ ಹಳ್ಳಳ್ಳಿ ಸ್ವಾಗತಿಸಿ ವಂದಿಸಿದರು.ಕಾರ್ಯಕ್ರಮಕ್ಕೂಮುನ್ನ ಬಾಬಾ ಸಾಹೇಬ್ ಡಾ.ಬಿ.ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.



ಗುತ್ತಲ: ಹಾವನೂರು ಗ್ರಾಮದಲ್ಲಿ ಮಾನವ ಬಂಧುತ್ವ ವೇದಿಕೆ ಕರ್ನಾಟಕ ತಾಲೂಕ ಸಮಿತಿ ಹಾವೇರಿ. ಅಹಿಂದ ಯುವ ಪಡೆ ಜಿಲ್ಲಾ ಘಟಕ ಹಾವೇರಿ ವತಿಯಿಂದ ಗ್ರಾಮ ಸಂಚಾಲಕರ ಒಂದು ದಿನದ ವಿಚಾರ ಸಂಕಿರಣ ಕಾರ್ಯಕ್ರಮ ಹಾಗೂ 2025-26 ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ಷಮತೆ, ಬದ್ಧತೆಯಿಂದ ಕೆಲಸ ಮಾಡಿ | ಸಂಸದ ಬೊಮ್ಮಾಯಿ ಸೂಚನೆ

ಒತ್ತಾಯದ ಗೊಬ್ಬರ ಮಾರಾಟ ಬೇಡ

ಹಾವೇರಿ : ಜಿಲ್ಲೆಯಲ್ಲಿ ರೈತರಿಗೆ ಕಾಂಪ್ಲೆಕ್ಸ್ ಗೊಬ್ಬರವನ್ನು ಒತ್ತಾಯಪೂರ್ವಕವಾಗಿ ಮಾರಾಟ ಮಾಡುತ್ತಿರುವ ಕುರಿತು ದೂರು ಬಂದಿದ್ದು ಅಂತಹ ಕ್ರಮ ಬೇಡ ಎಂದು ಸಂಸದ ಬಸವರಾಜ ಬೊಮ್ಮಾಯಿ ಖಡಕ್ ಸೂಚನೆ ನೀಡಿದರು.

ಕೃಷಿ ಚಟುವಟಿಕೆ, ಗೊಬ್ಬರ ಹಾಗೂ ಬೀಜ ಪೂರೈಕೆ, ಬೆಳೆ ವಿಮೆ, ಶಿಕ್ಷಣ, ಆರೋಗ್ಯ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಕುರಿತು ಇಲ್ಲಿನ ಜಿಪಂ ಸಭಾಂಗಣದಲ್ಲಿ ನಡೆದ ದಿಶಾ ಸಭೆಯಲ್ಲಿ ಮಾತನಾಡಿ, ಕೆಲವು ಅಂಗಡಿಕಾರರು ಒತ್ತಾಯ ಪೂರ್ವಕವಾಗಿ ರೈತರಿಗೆ ಕಾಂಪ್ಲೆಕ್ಸ್ ಗೊಬ್ಬರ ಕೊಡುತ್ತಿರುವ ಬಗ್ಗೆ ದೂರುಗಳಿವೆ. ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ವಹಿಸಬೇಕು. ರೈತರಿಗೆ ಗೊಬ್ಬರ ಮತ್ತು ಬೀಜ ವಿತರಣೆಯಲ್ಲಿ ಮೊದಲು ಸಹಕಾರಿ ಸಂಘಗಳಿಗೆ ಆದ್ಯತೆ ನೀಡಬೇಕು. ಬಳಿಕ ಖಾಸಗಿ ಮಾರಾಟಗಾರರಿಗೆ ಅವಕಾಶ ಮಾಡಿಕೊಡಿ ಎಂದು ಸೂಚಿಸಿದರು.

ಕೃಷಿಜೆಡಿಕೆ.ಮಲ್ಲಿಕಾರ್ಜುನಮಾತನಾಡಿ, ರಟ್ಟಿಹಳ್ಳಿ, ಶಿಗ್ಗಾವಿ ಹಾಗೂ ಸವಣೂರು ಭಾಗಗಳಲ್ಲಿ ಮಾತ್ರ ಸ್ವಲ್ಪ ಮಳೆ ಕೊರತೆ ಇದ್ದು, ಕೆಲ ದಿನಗಳಲ್ಲಿ ಉತ್ತಮ ಮಳೆಯ ಸಾಧ್ಯತೆ ಇದೆ. ಜಿಲ್ಲೆಯಲ್ಲಿ ಯೂರಿಯಾ ಗೊಬ್ಬರಕ್ಕೆ 65 ಸಾವಿರ ಟನ್ ಬೇಡಿಕೆ ಇದ್ದು, ಮಳೆ ಕೊರತೆಯಿಂದ ವಿತರಣೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿತ್ತು. ಈಗ ಮಳೆಯಾಗುತ್ತಿರುವ ಹಿನ್ನೆಲೆ ಯೂರಿಯಾ ವಿತರಣೆ ಆರಂಭಿಸಲಾಗಿದೆ. ಕೆಲ ರೈತರು ಈಗಾಗಲೇ ಗೊಬ್ಬರ ಖರೀದಿಸಿ ಸಂಗ್ರಹಿಸಿ ಕೊಂಡಿದ್ದಾರೆ. ಜಿಲ್ಲೆಯಲ್ಲಿ ಸುಮಾರು 54 ಸಾವಿರ ರೈತರ ಹೆಸರುಗಳನ್ನು ಯೋಜನೆಯಿಂದ ತೆಗೆದುಹಾಕಲಾಗಿದೆ ಎಂದು ಮಾಹಿತಿ ನೀಡಿದರು.

ಸವಣೂರು ಭಾಗದ ಹಲವು ರೈತರಿಗೆ ಕಳೆದ ವರ್ಷದ ಬೆಳೆವಿಮೆ ಪರಿಹಾರ ಇನ್ನೂ ಸಿಗದ ಕುರಿತು ಬೊಮ್ಮಾಯಿ ವಿಮಾ ಕಂಪನಿ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು. ಈ ಕುರಿತು ಶೀಘ್ರದಲ್ಲೇ ರಾಜ್ಯಮಟ್ಟದ ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿ ತಿಳಿಸಿದರು.

ಹೆಚ್ಚಿನ ಚಿಕಿತ್ಸೆಗೆ ಕೆಎಂಸಿಯೇ ಗತಿ: ಹಾವೇರಿ ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳಿಗೆ ಹೆಚ್ಚಿನ ಚಿಕಿತ್ಸೆಯ ಅಗತ್ಯ ಬಿದ್ದರೆ ಹುಬ್ಬಳ್ಳಿಯ ಕೆಎಂಸಿಗೆ ಕಳುಹಿಸಲಾಗುತ್ತಿದೆ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಹಾವನೂರ ಅವರು ಸಭೆಗೆ ಮಾಹಿತಿ ನೀಡಿದರು. ಜಿಲ್ಲೆಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಂಜೂರಾದಲ್ಲಿ ಅದನ್ನು ಮೆಡಿಕಲ್ ಕಾಲೇಜು ಬಳಿ ನಿರ್ಮಿಸಿದರೆ ಸಾರ್ವಜನಿಕರಿಗೆ ದೂರವಾಗುತ್ತದೆ. ಅದರ ಬದಲು ಜಿಲ್ಲಾಸ್ಪತ್ರೆ ಸಮೀಪದ ಹಳೆಯ ಕೆಇಬಿ ಕಚೇರಿ ಆವರಣದಲ್ಲಿ ನಿರ್ಮಿಸಬೇಕು ಎಂದು ಬೊಮ್ಮಾಯಿ ಸಲಹೆ ನೀಡಿದರು.

ರಾಜ್ಯಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆ ವಿಳಂಬವಾದ ಕಾರಣ ಕೆಲವು ಔಷಧಗಳ ಕೊರತೆ ಉಂಟಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಜಯಾನಂದ ಸಭೆಗೆ ಮಾಹಿತಿ ನೀಡಿದರು. ಕಂದಾಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಯಿತು. ಜಿಪಂ ಉಪ ಕಾರ್ಯದರ್ಶಿ ಡಾಪುನೀತ್, ಎಎಸ್ಪಿ ಲಕ್ಷ್ಮಣ ಶಿರಕೋಳ ಸೇರಿದಂತೆ ವಿವಿಧ ಅಧಿಕಾರಿಗಳು ಇದ್ದರು.



ಅಕ್ರಮದ ವಿರುದ್ಧ ಕ್ರಮ

ಅಕ್ರಮ ಅಕ್ಕಿ ಸಾಗಾಟ ಹಾಗೂ ಮಾರಾಟ ವಿರುದ್ಧ 17 ಪ್ರಕರಣ ದಾಖಲಿಸಲಾಗಿದೆ ಎಂದು ಆಹಾರ ಇಲಾಖೆ ಉಪನಿರ್ದೇಶಕ ಡಿ.ಜೆ. ಮಂಜುನಾಥ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ಅನ್ನ ಕದಿಯುವವರಿಗೆ ಜಾಮೀನು ಸಿಗದಂತೆ ಕಾನೂನು ಮಾಡಬೇಕು. ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ. ರೇಶನ್ ಅಂಗಡಿಗಳಲ್ಲಿ ಕೇಂದ್ರ ಸರ್ಕಾರದ ಯೋಜನೆಯಡಿ ಅಕ್ಕಿ ವಿತರಿಸಲಾಗುತ್ತಿದೆ ಹಾಗೂ ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಡಿ ಹಣ ನೀಡಲಾಗುತ್ತಿದೆ ಎಂಬುದನ್ನು ಸ್ಪಷ್ಟಪಡಿಸುವ ಫಲಕ ಅಳವಡಿಸಬೇಕು ಎಂದು ಆಹಾರ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

> ಆಧುನಿಕ ತಂತ್ರಜ್ಞಾನಗಳು ಇದ್ದರೂ ಸಾರ್ವಜನಿಕರು ಕೆಲಸ ಮಾಡಿಸಿಕೊಳ್ಳಲು ಕಚೇರಿಗೆ ಅಲೆದಾಡುವುದು ತಪ್ಪುತ್ತಿಲ್ಲ. ಈ ರೀತಿ ಆಗದಂತೆ ಅಧಿಕಾರಿಗಳು ಬದ್ಧತೆಯಿಂದ ಕೆಲಸ ಮಾಡಬೇಕು.
> ■ ಬಸವರಾಜ ಬೊಮ್ಮಾಯಿ, ಸಂಸದ.

ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿದ ಡಿಸಿ

ಹಾವೇರಿ: ಜಿಲ್ಲೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳು ಹಾಗೂ ಸಾರ್ವಜನಿಕ ಸೇವೆಗಳ ಕಾರ್ಯ ನಿರ್ವಹಣೆಯನ್ನು ಪರಿಶೀಲಿಸುವ ಉದ್ದೇಶದಿಂದ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರು ಮಂಗಳವಾರ ಶಿಗ್ಗಾಂವ ತಾಲೂಕಿನ ಹಲವು ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೊದಲಿಗೆ ಅವರು ಬಂಕಾಪುರ ಪಟ್ಟಣದಲ್ಲಿರುವ ನವಿಲುಧಾಮ ಹಾಗೂ ಕಿಲಾರಿ ತಳಿ ಗೋವು ಸಂವರ್ಧನಾ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿನ ಕಾರ್ಯಚಟುವಟಿಕೆಗಳು, ಪ್ರಾಣಿ ಸಂರಕ್ಷಣೆ ಹಾಗೂ ನಿರ್ವಹಣಾ ಕ್ರಮಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಬಳಿಕ ಐತಿಹಾಸಿಕ ನಗರೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಸ್ಥಳದ ಅಭಿವೃದ್ಧಿ ಮತ್ತು ನಿರ್ವಹಣೆ ಕುರಿತು ಪರಿಶೀಲನೆ ನಡೆಸಿದರು.

ನಂತರ ಬಂಕಾಪುರ ಪುರಸಭೆ ವ್ಯಾಪ್ತಿಯಲ್ಲಿ ಜಾರಿಯಲ್ಲಿರುವ 24/7 ಕುಡಿಯುವ ನೀರು ಸರಬರಾಜು ಯೋಜನೆಯ ಕಾರ್ಯವೈಖರಿಯನ್ನು ಅವಲೋಕಿಸಿದರು. ಜರಗಟ್ಟಿ, ಕೊಟ್ಟಿಗೇರಿ ಹಾಗೂ ಸುಂಕದಕಟ್ಟಿ ವಾರ್ಡ್‌ಗಳಿಗೆ ಭೇಟಿ ನೀಡಿ ಸ್ಥಳೀಯ ನಿವಾಸಿಗಳೊಂದಿಗೆ ನೇರವಾಗಿ ಸಂವಾದ ನಡೆಸಿ ನೀರು ಸರಬರಾಜಿನ ಸ್ಥಿತಿಗತಿ ಕುರಿತು ಮಾಹಿತಿ ಪಡೆದರು ಯೋಜನೆಯ ಅನುಷ್ಠಾನ ಕುರಿತು ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಿ, ಸಮಸ್ಯೆಗಳಿದ್ದರೆ ತಕ್ಷಣ ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

24/7 ಕುಡಿಯುವ ನೀರು ಪೂರೈಕೆಯಾಗದಿರುವ ಮನೆಗಳಿಗೆ ಒಂದು ವಾರದೊಳಗೆ ನೀರು ಪೂರೈಕೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಪುರಸಭೆ ಸಿಬ್ಬಂದಿ ಹಾಗೂ ವಾಟರ್ ಮ್ಯಾನ್ ಸಿಬ್ಬಂದಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಜೊತೆಗೆ ಸಾರ್ವಜನಿಕರು ಕುಡಿಯುವ ನೀರನ್ನು ಮಿತವ್ಯಯವಾಗಿ ಬಳಸುವಂತೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಪುರಸಭೆ ವತಿಯಿಂದ ಹಮ್ಮಿಕೊಳ್ಳಬೇಕೆಂದು ಸಲಹೆ ನೀಡಿದರು.

ಹಾಗೆಯೇ ಶಿಗ್ಗಾಂವ ತಾಲೂಕಿನ ಶಿಶುವಿನಾಳ ಗ್ರಾಮಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ಶಿಶುವಿನಾಳ ಶರೀಫ್ ಥೀಮ್ ಪಾರ್ಕ್ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿ, ಕಾಮಗಾರಿಯನ್ನು ಗುಣಮಟ್ಟದೊಂದಿಗೆ ತ್ವರಿತ ಗತಿಯಲ್ಲಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು. ಅಲ್ಲದೆ ಈಗಾಗಲೇ ನಿರ್ಮಾಣಗೊಂಡಿರುವ ಸಾಂಸ್ಕೃತಿಕ ಭವನವನ್ನು ವೀಕ್ಷಿಸಿ ಅದರ ಸೌಲಭ್ಯಗಳ ಕುರಿತು ಮಾಹಿತಿ ಪಡೆದರು. ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳು ಮತ್ತು ಸಾರ್ವಜನಿಕ ಸೇವೆಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಇಂದು ಜಿಲ್ಲೆಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.



ವಿದ್ಯುತ್ ಖಾಸಗೀಕರಣಕ್ಕೆ ರೈತರ ವಿರೋಧ

ಶಿಗ್ಗಾವಿ : ಕೇಂದ್ರ ಸರ್ಕಾರ ವಿದ್ಯುತ್ ಖಾಸಗಿಕರಣ ಮಾಡುತ್ತಿರುವದನ್ನು ವಿರೋಧಿಸಿ ಹಾಗೂ ರೈತರ ರಸಗೊಬ್ಬರ ಏಕರೂಪ ದರ ಮಾಡುವಂತೆ ಒತ್ತಾಯಿಸಿ ಹಾಗೂ ತಾಲೂಕಿನಲ್ಲಿ ಯುರಿಯಾ ರಸಗೊಬ್ಬರದ ಅಭಾವವನ್ನ ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕಾ ಘಟಕದ ಪದಾಧಿಕಾರಿಗಳು ಶಿಗ್ಗಾವಿ ಗ್ರೇಟ್-2 ತಹಶೀಲ್ದಾರ ವಿಶ್ವನಾಥ ತಿತ್ತಿ ಅವರಿಗೆ ಮನವಿ ಸಲ್ಲಿಸಿದರು.

ಕೇಂದ್ರ ಸರ್ಕಾರ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವಿದ್ಯುತ್‌ನ್ನು ಟಾಟಾ ಪವರ್' ಕಂಪನಿ ಲಿ, ರವರು ರಾಜ್ಯದ ಎಲ್ಲಾ ವಿದ್ಯುತ್ ವಿತರಣಾ ಕಂಪನಿಗಳ ವ್ಯಾಪ್ತಿಯ ಆಯ್ದ ಸ್ಥಳಗಳಲ್ಲಿ ಸಮಾನಾಂತರವಾಗಿ ವಿತರಣಾ ಜಾಲವನ್ನು ಆರಂಭಿಸುವ ಬಗ್ಗೆ ಪರವಾನಿಗೆಯನ್ನು ಕೋರಿ ಕರ್ನಾಟಕ ವಿದ್ಯುತ್ ಶಕ್ತಿ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದು, ರಾಜ್ಯದ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಕೂಡಾ ನೀಡಿರುತ್ತಾರೆ. ರಾಜ್ಯ ಸರ್ಕಾರ ಲಾಭ ನಷ್ಟ ವಿಚಾರ ಗಮನಿಸದೇ ಜನಪರ ಯೋಜನೆಗಳಾದ ಗ್ರಾಮೀಣ ವಿದ್ಯುತೀಕರಣ, ನೀರಾವರಿ ಪಂಪ್ ಸೆಟ್, ಗೃಹ ಜ್ಯೋತಿಗಳಿಗೆ ಉಚಿತ ವಿದ್ಯುತ್ ಹಾಗೂ ಭಾಗ್ಯಜ್ಯೋತಿ, ಕುಟೀರ ಜ್ಯೋತಿ, ಗಂಗಾಕಲ್ಯಾಣ ಯೋಜನೆ ಹಾಗೂ ರೈತರಿಗೆ ಅನಕೂಲವಾಗುವ ಯೋಜನೆಗಳ ಹಾಗೂ ಕೈಗಾರಿಕೆಗಳ ವಿದ್ಯುದೀಕರಣ ಕೇಂದ್ರ ಸರ್ಕಾರ ಟಾಟಾ ಪವರ್ ಕಂಪನಿ ಖಾಸಗಿಕರಣ ಕೊಡುತ್ತಿರುವುದನ್ನು ವಿರೋಧಿಸಿ, ಕೂಡಲೇ ಕೈ ಬಿಡಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಮಾನಗಳಲ್ಲಿ ನಿರಂತರ ಧರಣಿ ಹೊರಾಟ ಮಾಡಬೇಕಾಗುತ್ತದೆ ಎಂದು ರೈತು ಮನವಿಯಲ್ಲಿ ತಿಳಿಸಿದ್ದಾರೆ.

ರೈತರ ರಸಗೊಬ್ಬರವನ್ನ ಒಂದೇ ದರದಲ್ಲಿ ವಿತರಿಸಬೇಕು ಹಾಗೂ ಶಿಗ್ಗಾವಿ ತಾಲೂಕಿನಲ್ಲಿ ಯುರಿಯಾ ಗೊಬ್ಬರದ ಕೊರತೆಯನ್ನ ಕೂಡಲೇ ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಆನಂದ ಕೆಳಗಿನಮನಿ, ಉಪಾಧ್ಯಕ್ಷ ಶಂಕರಗೌಡ ಪಾಟೀಲ, ನಾಗರಾಜ ಅಂಗಡಿ, ಈರಣ್ಣ ಸಮಗೊಂಡ, ಪ್ರಕಾಶಗೌಡ ಮಣ್ಣೂರ, ನಾಗರಾಜ ಸಂಶಿ, ರಾಮನಗೌಡ ಗಾಳಿಗೌಡ್ರ, ಚಂದ್ರಶೇಖರ ಹಿರೇಮಠ, ಮಹಾಂತೇಶ ಬಾರಕೇರ, ಪಂಚಯ್ಯ ಹಿರೇಮಠ, ಬೀಮಪ್ಪ ಗೊಟಗೋಡಿ, ದೇವರಾಜ ದೊಡ್ಡಮನಿ, ಹನುಮಂತಪ್ಪ ಹರಿಜನ, ದಯಾನಂದ ಮೆಣಸಿನಕಾಯಿ ಸೇರಿದಂತೆ, ರೈ ಮುಖಂಡರು ಇದ್ದರು.



ವಿದ್ಯಾರ್ಥಿ ವಿರೋಧಿ ನೀತಿ ಹಿಮ್ಮೆಟ್ಟಿಸಲು ಚಳವಳಿ ರೂಪಿಸಿ

ಹಾವೇರಿ : ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುಸರಿಸುವ ಜನವಿರೋಧಿ ನೀತಿಗಳು, ವಿದ್ಯಾರ್ಥಿ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಬಲಿಷ್ಠ ವಿದ್ಯಾರ್ಥಿ ಚಳುವಳಿಯನ್ನು ರೂಪಿಸಬೇಕಾಗಿದೆ ಎಂದು ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಹೇಳಿದರು.

ನಗರದ ಪಿ.ಬಿ ರಸ್ತೆಯ ಭಗತ್ ಅಕಾಡೆಮಿಯಲ್ಲಿ ಎಸ್ ಎಫ್ ಐ ಜಿಲ್ಲಾ ಸಮಿತಿಯು ಆಯೋಜಿಸಿದ್ದ ಜಿಲ್ಲಾ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಭಗತ್ ಸಿಂಗ್, ರಾಜಗುರು, ಸುಖದೇವ್ ಅವರು ಜೀವನಶೈಲಿ, ವಿಚಾರಧಾರೆಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು. ಭಗತ್‌ಸಿಂಗ್ ಹೋರಾಟ ನಮಗೆ ಸ್ಫೂರ್ತಿ. ಜಾತಿ ವ್ಯವಸ್ಥೆ ತೊಲಗಿಸಲು ಹೋರಾಟ ರೂಪಿಸಬೇಕಿದೆ. ಜಿಲ್ಲೆಯಲ್ಲಿ ಎಲ್ಲರೂ ಸೇರಿ ಚಳುವಳಿಯನ್ನು ಕಟ್ಟಬೇಕು ಎಂದರು.

ರಾಜ್ಯ ಸಮಿತಿ ಸದಸ್ಯೆ ರೇಣುಕಾ ಕಹರ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧ್ಯಕ್ಷ ಬಸವರಾಜ ಎಸ್ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಅನ್ಯಾಯವನ್ನು ಪ್ರಶ್ನಿಸುವ ಯುವಕರಿಗೆ ಜಿರಳೆಗಳೆಂದು ಹಂಗಿಸುವ ಮನಸ್ಥಿತಿಗಳು ದೇಶದ ದುರಂತಗಳೆಂದು ಹೇಳಬಹುದು. ಶಿಕ್ಷಣ ಹಾಗೂ ಉದ್ಯೋಗ, ಆರೋಗ್ಯದ ಸಮಸ್ಯೆಗಳ ಪರಿಹಾರಕ್ಕಾಗಿ ಚರ್ಚೆ ನಡೆಸಬೇಕಾದ ಘನವೆತ್ತ ಅಧಿಕಾರಿಗಳು ವಿದ್ಯಾರ್ಥಿಗಳಿಗೆ, ಯುವಕರಿಗೆ ಜಿರಳೆಗಳೆನ್ನುವುದು ಹಾಸ್ಯಾಸ್ಪದ ವಿಷಯವಲ್ಲ, ಬಹಳಷ್ಟು ಗಂಭೀರವಾದ ಪರಿಸ್ಥಿತಿಯಲ್ಲಿ ಇದು ಬಹುದೊಡ್ಡ ಚಳುವಳಿಯಾಗಿ ಬೆಳೆಯುತ್ತಿದೆ. ಆದರಿಂದ ವಿದ್ಯಾರ್ಥಿಗಳು ತಮಗೆ ಆದ ಅನ್ಯಾಯವನ್ನು ಸಹಿಸಿಕೊಳ್ಳಬಾರದು ಸಂಘಟಿತರಾಗಬೇಕು ಎಂದರು.

ಈ ಸಂದರ್ಭದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳ ಉಪಸಮಿತಿಯ ರಾಜ್ಯ ಸಂಚಾಲಕ ಅರುಣ್ ನಗವತ್, ಕಾಲೇಜ್ ಘಟಕದ ಅಧ್ಯಕ್ಷೆ ಚೈತ್ರಾ ಕೊರವರ ಇದ್ದರು.

ಶಂಭು ಸವದತ್ತಿ, ಪರಶುರಾಮ ಎಸ್, ಜ್ಯೋತಿ ಪಟ್ಟಣಶೆಟ್ಟಿ, ಪ್ರೀತಿ ಭದ್ರಾಪುರ, ಆಫ್ರಿಯ ನದಾಫ್, ವಿಕಾಶ್ ಎಂ, ನಂಜುಂಡ, ಶರಣ್, ಪಲ್ಲವಿ ಸವಣೂರ, ಜ್ಯೋತಿ ಪೂರ್ಲಿ, ಸಂದೀಪ್, ಮಂಜುಳಾ ಹಾವೇರಿ ಅನೇಕ ಕಾರ್ಯಕರ್ತರು ಭಾಗವಹಿಸಿದರು. ಕೃಷ್ಣ ನಾಯ್ಕ ನಿರೂಪಿಸಿದರು. ರಾಘು ಅಂಗಡಿ ವಂದಿಸಿದರು.



ಶಾಶ್ವತ ಮನೆ ಮಾಲೀಕತ್ವ ಹಕ್ಕುಪತ್ರ ವಿತರಣೆ

ಹಾನಗಲ್ಲ: ಕಾಂಗ್ರೆಸ್ ಯಾವತ್ತೂ ಬಡವರ ಪರ. ಬಡವರ ಮನೆಗೆ ಬರುವ ಸೌಲಭ್ಯ ಮತ್ತು ಕಾರ್ಯಕ್ರಮಗಳ ಪಟ್ಟಿ ಮಾಡಿದರೆ ಅವೆಲ್ಲವೂ ಕಾಂಗ್ರೆಸ್ ಕೊಡುಗೆ ಎನ್ನುವುದು ತಿಳಿಯುತ್ತದೆ. ಭೇದಭಾವ ಮಾಡದೇ ಎಲ್ಲರನ್ನೂ ಕಾಂಗ್ರೆಸ್ ಜೊತೆಗೆ ಕರೆದೊಯ್ದಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಕೊಪ್ಪರಸಿಕೊಪ್ಪ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ವಿದ್ಯಾರ್ಥಿನಿಯರ ವಸತಿ ಶಾಲೆಯಲ್ಲಿ ವಿವಿಧ ಕಂದಾಯ ಗ್ರಾಮ, ಉಪ ಗ್ರಾಮಗಳ 371 ಫಲಾನುಭವಿ ಕುಟುಂಬಗಳಿಗೆ ಶಾಶ್ವತ ಮನೆ ಮಾಲಿಕತ್ವದ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು.

ತಹಶೀಲ್ದಾರ್ ವಿಠ್ಠಲ್ ಚೌಗಲಾ ಮಾತನಾಡಿದರು. ಸಮಾರಂಭದಲ್ಲಿ ಕೊಪ್ಪರಸಿಕೊಪ್ಪ ಗ್ರಾಮದ 235, ದಶರಥಕೊಪ್ಪ ಗ್ರಾಮದ 68 ಹಾಗೂ ಹುಡೆ ಗ್ರಾಮದ 68 ಫಲಾನುಭವಿ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಲಾಯಿತು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಹನುಮಂತಪ್ಪ ಮರಗಡಿ, ತಾಲೂಕಾಧ್ಯಕ್ಷ ಈರಪ್ಪ ಬೈಲವಾಳ, ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸನಗೌಡ ಪಾಟೀಲ, ಕೆಎಂಎಫ್ ನಿರ್ದೇಶಕ ಚಂದ್ರಪ್ಪ ಜಾಲಗಾರ, ಮುಖಂಡರಾದ ವಿಷ್ಣುಕಾಂತ ಜಾಧವ, ಭರಮಣ್ಣ ಶಿವೂರ, ಅಶೋಕ ಜಾಧವ, ರಾಮಣ್ಣ ಓಲೇಕಾರ, ಪರಶುರಾಮ ಚಿಕ್ಕಣಗಿ, ಹೆಗ್ಗಪ್ಪ ಕಾಮನಹಳ್ಳಿ, ಗದಿಗೆಪ್ಪಗೌಡ ಪಾಟೀಲ, ಮಕ್ಬೂಲ್‌ಅಹ್ಮದ್ ಬಡಗಿ, ಇಸ್ಮೈಲ ಬಡಗಿ, ಗದಿಗೆಪ್ಪ ರಾಟಿ, ಬಾಬುಸಾಬ ಹಂಚಿನಮನಿ, ಮಲಿಕರೆಹಾನ ಹಂಚಿನಮನಿ, ರವಿ ಓಲೇಕಾರ ಸೇರಿದಂತೆ ಇನ್ನಿತರರು ಇದ್ದರು.



ರೈತರ ಸಮಸ್ಯೆಗೆ ಶೀಘ್ರ ಪರಿಹಾರ: ಶಾಸಕ ಶಿವಣ್ಣನವರ

ಬ್ಯಾಡಗಿ: ಗುಣಮಟ್ಟದ ಇಳುವರಿ ಸಮತೋಲನ ರಸಗೊಬ್ಬರ ಬಳಕೆ ಮೂಲಕ ಅಧಿಕ ಇಳುವರಿ ಪಡೆಯಲು ರೈತರು ಮುಂದಾಗಬೇಕು ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ನಡೆದ ರೈತ ಮುಖಂಡರ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ರೈತರ ವಿವಿಧ ಸಮಸ್ಯೆಗಳ ಕುರಿತು ಸಭೆಯ ಹಾಗೂ ಬಿತ್ತಿ ಪತ್ರ ಬಿಡುಗಡೆ ಮಾಡಿ ಮಾತನಾಡಿದರು.

ರೈತರು ಹೆಚ್ಚಿನ ಇಳುವರಿಯ ಆಸೆಗೆ ಅತಿಯಾದ ರಾಸಾಯನಿಕ ಬಳಸಿದರೆ ಮಣ್ಣು ನೈಸರ್ಗಿಕ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಆದ್ದರಿಂದ ರಾಸಾಯನಿಕ ಗೊಬ್ಬರಗಳ ಜತೆ ಕೊಟ್ಟಿಗೆ ಗೊಬ್ಬರ, ಹಸಿರು ಎಲೆ ಗೊಬ್ಬರ ಹಾಗೂ ಜೈವಿಕ ಗೊಬ್ಬರಗಳನ್ನು ಸಮಪ್ರಮಾಣದಲ್ಲಿ ಬಳಸಿದರೆ ಮಣ್ಣಿನ ಫಲವತ್ತತೆ ಹೆಚ್ಚಲಿದೆ ಎಂದರು.

ಎಲ್ಲಾ ವಿಷಯಗಳನ್ನು ಸಂಬಂಸಿದ ಇಲಾಖೆಗಳೊಂದಿಗೆ ಸಮನ್ವಯ ಸಾಸಿ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕರು ಭರವಸೆ ನೀಡಿದರು.

ತಾಲೂಕು ಮಟ್ಟ ಹಾಗೂ ಜಿಲ್ಲಾಮಟ್ಟದಲ್ಲಿ ಬಗೆಹರಿಯುವ ಸಮಸ್ಯೆಗಳಿಗೆ ಅಧಿಕಾರಿಗಳು ವಿಳಂಬ ಮಾಡದೆ ರೈತರಿಗೆ ಸ್ಪಂದಿಸಿ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಸೂಚನೆ ನೀಡಿದರು.

ರೈತರ ಬಿತ್ತನೆ ಕಾರ್ಯ ಮುಗಿಯುವವರೆಗೂ ಬಿತ್ತನೆಯ ಬೀಜ ಕೊರತೆಯಾಗದಂತೆ ಅಧಿಕಾರಿಗಳನ್ನು ನೋಡಿಕೊಳ್ಳಲು ಮತ್ತು ಬೀಜ ಮಾರಾಟ ಮಾಡುವವರು ಬಿತ್ತನೆ ಬೀಜವನ್ನು ಸ್ಟಾರ್ಟ್ ಮಾಡಿ ಬೀಜದ ಅಭಾವ ಸೃಷ್ಟಿಸಿ ಹೆಚ್ಚಿನ ದರದಲ್ಲಿ ಮಾರಾಟ ಮಾಡಬಾರದು ಅಂತ ಮಾರಾಟ ಮಾಡುವವರು ಕಠಿಣ ಕ್ರಮ ತೆಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹಾವೇರಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ ಬಳ್ಳಾರಿ ಮಾತನಾಡಿದರು. ಈ ಸಂದರ್ಭದಲ್ಲಿ 'ಖೇತ್ ಬಚಾವೋ ಆಂದೋಲನ' ಅಭಿಯಾನದಡಿ ಸಮತೋಲಿತ ರಸಗೊಬ್ಬರ ಬಳಕೆಯ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ) ಹನುಮನಮಟ್ಟಿಯ ವಿಜ್ಞಾನಿ ಡಾ. ರಶ್ಮಿ ಅವರು ಮಣ್ಣಿನ ಮಣ್ಣಿನ ಪರೀಕ್ಷೆ ಆಧಾರಿತ ಪೋಷಕಾಂಶ ನಿರ್ವಹಣೆ ಹಾಗೂ ಯೂರಿಯಾ, ಡಿಎಪಿ, ಪೊಟ್ಯಾಷ್ ಮತ್ತು ಸಾವಯವ ಗೊಬ್ಬರಗಳ ಸಮರ್ಪಕ ಬಳಕೆಯ ಮಾಹಿತಿ ನೀಡಿದರು.

ತಹಶೀಲ್ದಾರ್ ಚಂದ್ರಶೇಖರ್ ನಾಯಕ್, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ್ ಕೆಎಂ, ಕೃಷಿಕ ಸಮಾಜದ ಅಧ್ಯಕ್ಷರಾದ ಮಂಜುನಾಥ್ ಬೆನಕನಕೊಂಡ, ಉಪಾಧ್ಯಕ್ಷರಾದ ಎನ್.ಟಿ. ಪಾಟೀಲ್, ಜಿಲ್ಲಾ ಪ್ರತಿನಿಧಿ ಗಂಗಣ್ಣ ಎಲಿ, ತಾಲೂಕು ಘಟಕದ ಅಧ್ಯಕ್ಷ ರುದ್ರಗೌಡ ಕಾಡನಗೌಡ್ರು, ಚಿಕ್ಕಪ್ಪ ಛತ್ರದ, ಮೌನೇಶ್ ಕಮ್ಮಾರ ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ರೈತ ಮುಖಂಡರು ಉಪಸ್ಥಿತರಿದ್ದರು.



> ಪ್ರಸಕ್ತ ಹಂಗಾಮಿಗೆ ಅಗತ್ಯವಿರುವ ಸೋಯಾಬೀನ್, ಶೇಂಗಾ, ಮೆಕ್ಕೆಜೋಳ, ತೊಗರಿ ಹಾಗೂ ಹೆಸರು ಬೆಳೆಗಳ ಬಿತ್ತನೆ ಬೀಜಗಳು ಸಮರ್ಪಕವಾಗಿ ಲಭ್ಯವಿದ್ದು, ರೈತರಿಗೆ ವಿತರಣೆ ಮಾಡಲಾಗುತ್ತಿದೆ ಎಂದರು. ಯೂರಿಯಾ, ಡಿಎಪಿ, ಕಾಂಪ್ಲೆಕ್ಸ್ ಸೇರಿದಂತೆ ವಿವಿಧ ರಸಗೊಬ್ಬರಗಳ ಸಾಕಷ್ಟು ದಾಸ್ತಾನು ಲಭ್ಯವಿದ್ದು, ರೈತರು ಆತಂಕ ಪಡುವ ಅಗತ್ಯವಿಲ್ಲ.
> ■ ಗಣೇಶ್ ಕಮ್ಮಾರ, ಸಹಾಯಕ ಕೃಷಿ ನಿರ್ದೇಶಕ

ಮೈಲಾರ ಮಹದೇವಪ್ಪನವರ ಜನ್ಮದಿನಾಚರಣೆ

ಹಾವೇರಿ : ನಗರದ ಸಮೀಪದ ವೀರಸೌಧದಲ್ಲಿ ಹುತಾತ್ಮ ಮೈಲಾರ ಮಹದೇವಪ್ಪನವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಟ್ರಸ್ಟಿನ ಸದಸ್ಯರಾದ ಎಚ್.ಎಸ್. ಮಹದೇವಪ್ಪ, ದೀಪಾ ಗೋನಾಳ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್ ಗಾಜಿಗೌಡ್ರ, ಡಾ.ಸತೀಶ ಕುಲಕರ್ಣಿ, ವಿ.ಎನ್. ತಿಪ್ಪನಗೌಡ್ರ, ಅಬ್ದುಲ್ ಹುಬ್ಬಳ್ಳಿ, ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲಿಂಗಯ್ಯ ಹಿರೇಮಠ, ಗೂಳಪ್ಪ ಅರಳಿಕಟ್ಟಿ ಹಾಗೂ ಸದಸ್ಯ ಕಾರ್ಯದರ್ಶಿ ವೀರಯ್ಯಸ್ವಾಮಿ ಅವರು ಉಪಸ್ಥಿತರಿದ್ದರು.



ದಲ್ಜೀತ್‌ಕುಮಾರಗೆ ಸನ್ಮಾನ

ಹಾವೇರಿ: ಕರ್ನಾಟಕ ರಾಜ್ಯ ಗ್ರಾಪಂ ಮಹಾಒಕ್ಕೂಟ-ಹಾವೇರಿ ಜಿಲ್ಲಾ ಘಟಕದ ವತಿಯಿಂದ ಹಾವೇರಿ ಜಿಪಂಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ಆಗಮಿಸಿದ ದಲ್ಜೀತ್‌ಕುಮಾರ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು.

ನಂತರ ಶೀಘ್ರವಾಗಿ ಸ್ಥಳೀಯ ಸರ್ಕಾರಗಳಿಗೆ ಚುನಾವಣೆ ಮಾಡುವಂತೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಾಗೂ ಜಿಲ್ಲಾಧಿಕಾರಿಗಳವರ ಮೂಲಕ ರಾಜ್ಯ ಸರ್ಕಾರದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಗೆ ಮನವಿ ಸಲ್ಲಿಸಲಾಯಿತು. ಈಸಂದರ್ಭದಲ್ಲಿಮಹಾಒಕ್ಕೂಟದ ಜಿಲ್ಲಾಧ್ಯಕ್ಷರಾದ ಅನಂತರಾಜ ಹವಳಣ್ಣನವರ, ರಾಜ್ಯ ಮಾಧ್ಯಮ ಕಾರ್ಯದರ್ಶಿ ನಿಂಗಪ್ಪ ಆರೇರ, ಹಾನಗಲ್ ತಾಲ್ಲೂಕಪ್ರಧಾನಕಾರ್ಯದರ್ಶಿಮಲ್ಲಿಕಾರ್ಜುನಬಾಳೂರು, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಂಜೀವಪ್ಪ ಬಿ.ಕೆ., ಬಿಳ್ಳಳ್ಳಿ ಗ್ರಾಪಂ ಅಧ್ಯಕ್ಷರಾದ ಹನುಮರಡ್ಡಿ ದಬಾಳಪ್ಪನವರ, ಮಹೇಶ ಜವಳಿ ಸೇರಿದಂತೆ ಅನೇಕರಿದ್ದರು.





ಬೆಳಗಾವಿ : ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬೆಳಗಾವಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮಾಜಿ ಸೈನಿಕರ ಸಂಘಟನೆಗಳ ಮಹಾಒಕ್ಕೂಟ ಹಾಗೂ ಮಹಿಳಾ ಘಟಕದ ವತಿಯಿಂದ ಶುಕ್ರವಾರ ಸಸಿ ವಿತರಣಾ ಕಾರ್ಯಕ್ರಮ ನೆರವೇರಿಸಲಾಯಿತು. ಡಾ. ಸತೀಶ ಚೌಲಿಗೇರ, ಜಗದೀಶ ಪೂಜೇರಿ ಸೇರಿದಂತೆ ಮತ್ತಿತರರು ಇದ್ದರು.

ಆಸ್ಪತ್ರೆಯಲ್ಲಿ ಗ್ರಂಥಾಲಯ ಉದ್ಘಾಟನೆ

ಗೋಕಾಕ: ಆರೋಗ್ಯ ಜಾಗೃತಿ ಮೂಡಿಸುವುದು ಹಾಗೂ ಓದುವ ಸಂಸ್ಕೃತಿಯನ್ನು ಉತ್ತೇಜಿಸುವ ಉದ್ದೇಶದಿಂದ ವಿಶ್ವಜ್ಯೋತಿ ನರ್ಸಿಂಗ್ ಹೋಮ್‌ನಲ್ಲಿ ಸಿಬ್ಬಂದಿ, ರೋಗಿಗಳು ಹಾಗೂ ಸಂದರ್ಶಕರಿಗಾಗಿ ನೂತನ ಗ್ರಂಥಾಲಯವನ್ನು ಉದ್ಘಾಟಿಸಲಾಯಿತು. ಗ್ರಂಥಾಲಯವನ್ನು ಹಿರಿಯ ಸ್ತ್ರೀರೋಗ ತಜ್ಞೆ, ವಿಶ್ವಜ್ಯೋತಿ ನರ್ಸಿಂಗ್ ಹೋಮ್‌ನ ಮೆಡಿಕಲ್ ಡೈರೆಕ್ಟರ್ ಹಾಗೂ ಸ್ವಾಮಿ ಸಂಕಲ್ಪ ಎಜು ಹೆಲ್ತ್ ಫೌಂಡೇಶನ್‌ನ ಸಹ-ಸಂಸ್ಥಾಪಕರಾದ ಡಾ. ಜ್ಯೋತಿ ವಿ. ಸಿಂದೋಳಿಮಠ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ವೈದ್ಯರು, ಶುಶ್ರೂಷಕರು, ಸಿಬ್ಬಂದಿ, ರೋಗಿಗಳು ಹಾಗೂ ಅವರ ಸಂಬಂಧಿಕರು ಉಪಸ್ಥಿತರಿದ್ದರು. ಡಾ. ವಿಶ್ವನಾಥ್ ವಿ. ಸಿಂದೋಳಿಮಠ ಮಾತನಾಡಿ, ಆಸ್ಪತ್ರೆಯು ದೇಹದ ಆರೋಗ್ಯದ ಜೊತೆಗೆ ಮನಸ್ಸಿನ ಆರೋಗ್ಯಕ್ಕೂ ಪೂರಕವಾಗಿರಬೇಕು. ಗ್ರಂಥಾಲಯವು ಸಿಬ್ಬಂದಿಯ ಜ್ಞಾನ ವೃದ್ಧಿಗೆ ಸಹಕಾರಿಯಾಗುವುದರ ಜೊತೆಗೆ, ಆಸ್ಪತ್ರೆಯಲ್ಲಿ ಕಾಯುವ ಸಮಯವನ್ನು ರೋಗಿಗಳು ಹಾಗೂ ಸಂದರ್ಶಕರು ಸದುಪಯೋಗಪಡಿಸಿಕೊಳ್ಳಲು ನೆರವಾಗಲಿದೆ ಎಂದು ಹೇಳಿದರು. ಆಸ್ಪತ್ರೆಯ ಆಡಳಿತ ಮಂಡಳಿಯು ಮುಂದಿನ ದಿನಗಳಲ್ಲಿ ಇನ್ನಷ್ಟು ಆರೋಗ್ಯ ಶಿಕ್ಷಣ ಹಾಗೂ ಸಾಹಿತ್ಯ ಕೃತಿಗಳನ್ನು ಗ್ರಂಥಾಲಯಕ್ಕೆ ಸೇರಿಸುವ ಯೋಜನೆ ಹೊಂದಿದ್ದು, ಓದುಗರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.



ಗೋಕಾಕ: ಆರೋಗ್ಯ ಜಾಗೃತಿ ಮೂಡಿಸುವುದು ಹಾಗೂ ಓದುವ ಸಂಸ್ಕೃತಿಯನ್ನು ಉತ್ತೇಜಿಸುವ ಉದ್ದೇಶದಿಂದ ವಿಶ್ವಜ್ಯೋತಿ ನರ್ಸಿಂಗ್ ಹೋಮ್‌ನಲ್ಲಿ ಸಿಬ್ಬಂದಿ, ರೋಗಿಗಳು ಹಾಗೂ ಸಂದರ್ಶಕರಿಗಾಗಿ ನೂತನ ಗ್ರಂಥಾಲಯವನ್ನು ಉದ್ಘಾಟಿಸಲಾಯಿತು.

ಕಿರುಸುದ್ದಿ

ವಿದ್ಯುತ್ ಹರಿವು: ಎಚ್ಚರಿಕೆ ವಹಿಸಲು ಸೂಚನೆ

ಬೆಳಗಾವಿ: ಹುವಿಸಕಂನಿಯು ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ 10/33-11 ಕೆವಿ ಸವದತ್ತಿ ವಿದ್ಯುತ್ ವಿತರಣಾ ಕೇಂದ್ರದಿಂದ ವಟ್ನಾಳ ವ್ಯಾಪ್ತಿಯಲ್ಲಿ ಬರುವ ಹೊಸದಾಗಿ ನಿರ್ಮಿಸಿರುವ ಕುಡಿಯುವ ನೀರು ಪೂರೈಕೆಯ 1255 ಕೆ.ವಿ.ಎ, ವಿದ್ಯುತ್ ಸ್ಥಾವರಕ್ಕೆ ಸುಮಾರು 11.2. ಕಿ.ಮೀ ಗಳಷ್ಟು ಮತ್ತು ಹೀರೆಉಳ್ಳಿಗೇರಿ ವ್ಯಾಪ್ತಿಯಲ್ಲಿ ಬರುವ ಹೊಸದಾಗಿ ನಿರ್ಮಿಸಿರುವ ಕುಡಿಯುವ ನೀರು ಪೂರೈಕೆಯ 2000 ಕೆ.ವಿ.ಎ, ವಿದ್ಯುತ್ ಸ್ಥಾವರಕ್ಕೆ ಸುಮಾರು 6.4. ಕಿ.ಮೀ ಗಳಷ್ಟು ಉದ್ದದ, ವಿದ್ಯುತ್ ಮಾರ್ಗಗಳನ್ನು ನಿರ್ಮಿಸಲಾಗಿದೆ. ಸದರಿ 33ಕೆವಿ ವಿದ್ಯುತ್ ಮಾರ್ಗಗಳು ಸವದತ್ತಿ, ರೇಣುಕಾನಗರ, ಜೋಗಳಬಾವಿ, ಗೋರವಿನಕೊಳ್ಳ, ಹೀರೆಉಳ್ಳಿಗೇರಿ ಗ್ರಾಮಗಳ ಮತ್ತು ಅಕ್ಕಪಕ್ಕ ಸರಹದ್ದಿನ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಹಾಯ್ದು ಹೋಗಿರುತ್ತದೆ. ಸದರಿ 33 ಕೆವಿ ವಿದ್ಯುತ್ ಮಾರ್ಗಗಳಲ್ಲಿ ಜೂನ್ 11ರಂದು ಇಲ್ಲವೆ ತದನಂತರ ಯಾವುದೇ ಕ್ಷಣದಲ್ಲಿ ವಿದ್ಯುತ್ತನ್ನು ಹರಿಬಿಡಲಾಗುವುದು. ಆದಕಾರಣ, ಸದರಿ 33 ಕೆವಿ ವಿದ್ಯುತ್ ಮಾರ್ಗಗಳ ಕಂಬಗಳನ್ನು ಹತ್ತುವುದಾಗಲಿ, ತಂತಿಗಳನ್ನು ಮುಟ್ಟುವುದಾಗಲಿ, ಹಸಿರು ಟೊಂಗೆಗಳನ್ನು ಎಸೆಯುವುದಾಗಲಿ ಹಾಗೂ ಮಾರ್ಗದ ಕೆಳಗಡೆ ದನಕರುಗಳನ್ನು ಕಟ್ಟುವುದಾಗಲಿ ಪ್ರಾಣಾಪಾಯಕರವಾಗುವುದು. ಆದ್ದರಿಂದ, ಸಾರ್ವಜನಿಕರು ಮೇಲ್ಕಾಣಿಸಿದ ಕೃತ್ಯಗಳನ್ನು ಮಾಡಬಾರದು ಎಂದು ಹು.ವಿ.ಸ.ಕಂ.ನಿ 33ಕೆವಿ ಎಸ್ ಮತ್ತು ಎಲ್ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಲಕ್ಕಪ್ಪ ಪೂಜಾರಿ ಆಯ್ಕೆ





ರಾಯಬಾಗ: ಪಟ್ಟಣದ ಲೋಕೋಪಯೋಗಿ ಇಲಾಖೆಯ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ಮಾದರ ಮಹಾಸಭಾ(ರಿ) ಬೆಂಗಳೂರು ರಾಯಬಾಗ ತಾಲೂಕು ಘಟಕದ ಪದಾಧಿಕಾರಿಗಳ ಆಯ್ಕೆಯು ಜರುಗಿತು. ಕರ್ನಾಟಕ ಮಾದರ ಮಹಾಸಭಾ ಕಾರ್ಯಕಾರಿಣಿ ಸದಸ್ಯ ಸುರೇಶ ಐಹೊಳೆಯವರು ತಾಲೂಕು ಪದಾಧಿಕಾರಿಗಳ ಹೆಸರನ್ನು ಘೋಷಣೆ ಮಾಡಿದರು. ಅಧ್ಯಕ್ಷರಾಗಿ ಲಕ್ಕಪ್ಪ ಪೂಜಾರಿ, ಉಪಾಧ್ಯಕ್ಷರಾಗಿ ಶಿವಾಜಿ ಮೇತ್ರಿ, ಕಾರ್ಯದರ್ಶಿಯಾಗಿ ಮಹೇಶ ಮಾಂಗ, ಖಜಾಂಚಿಯಾಗಿ ಪ್ರಭು ಮೈಶಾಳೆ ಆಯ್ಕೆಯಾದರು. ಸಂಘಟನೆಯ ಕಾರ್ಯಕಾರಿಣಿ ಸದಸ್ಯರಾಗಿ ರೇಖಾ ಭಂಡಾರಿ, ಲಖನ್ ಐಹೊಳೆ, ಸಂಜು ಮಾಂಗ, ಶಂಕರ ಮಾಂಗ, ಲಕ್ಕಪ್ಪ ಹೊಸಾಲಿ, ಭಾರತಿ ಮೈಶಾಳೆ, ಯಮನಪ್ಪ ಕಮಾಲ, ಶ್ರೀಕಾಂತ ಮಾಂಗ ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಕರ್ನಾಟಕ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ , ಮಹಾವೀರ ಐಹೊಳೆ, ಮಹಿಳಾ ಹೋರಾಟಗಾರತಿ ಲಕ್ಕವ್ವ ಮಂಟೂರ, ಕರ್ನಾಟಕ ಮಾದರ ಮಹಾಸಭಾ ಜಿಲ್ಲಾ ಮುಖಂಡ ಕಾಡೇಶ ಐಹೊಳೆ, ನಿವೃತ್ತ ಮುಖ್ಯಶಿಕ್ಷಕ ಕುಮಾರ ಅವಳೆ, ಮಹೇಶ ಐಹೊಳೆ, ಬರಮಪ್ಪ ಮಾದರ ಇತರರು ಇದ್ದರು.

ಜಿಲ್ಲಾಧ್ಯಕ್ಷರಾಗಿ ಆಯ್ಕೆ



ಗೋಕಾಕ: ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಗುರುಬಸಪ್ಪ ರೂಢಗಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾವಿ ಜಿಲ್ಲಾಧ್ಯಕ್ಷರ ಆಯ್ಕೆ ಸಭೆಯಲ್ಲಿ ಗೋಕಾಕ ನಗರದ ಯುವಕ ಗಿರೀಶ ಅಶೋಕ ಉದೋಶಿಯವರನ್ನು ಜಿಲ್ಲಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪುಂಡಲಿಕಪ್ಪ ಹಳ್ಳಿಕೇರಿ ನಿಧನ



ಸುರೇಬಾನ: ಸಮೀಪದ ಮನಿಹಾಳ ಗ್ರಾಮದ ನಿವಾಸಿ ತಾಲೂಕು ಪಂಚಾಯತಿ ಮಾಜಿ ಸದಸ್ಯ, ಯಕ್ಷಗಾನ ಕಲಾವಿದರು, ತಾಲೂಕು ನೇಕಾರ ರತ್ನ ಪ್ರಶಸ್ತಿ ಪುರಸ್ಕೃತರು, ನೇಕಾರ ಸಮಾಜದ ಹಿರಿಯರಾದ ಪುಂಡಲಿಕಪ್ಪ ಸಂಜೀವಪ್ಪ ಹಳ್ಳಿಕೇರಿ (87) ಮಂಗಳವಾರ ನಿಧನರಾಗಿದ್ದಾರೆ. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮಳೆಯಿಂದ ಹಾನಿಗೀಡಾದ ವ್ಯಾಪಾರಸ್ಥರು | ಸಂತ್ರಸ್ತರಿಂದ ನಗರಸಭೆಗೆ ಮುತ್ತಿಗೆ

ತಕ್ಷಣ ಪರಿಹಾರ ನೀಡಲು ಆಗ್ರಹ



ಸೂಕ್ತ ಕ್ರಮಕ್ಕೆ ಒತ್ತಾಯ

ಹಾನಿಗೊಳಗಾದ ಮನೆಗಳು, ಅಂಗಡಿಗಳು, ವಾಹನಗಳು, ಕೃಷಿ ಬೆಳೆಗಳ ಸಮೀಕ್ಷೆ ನಡೆಸಿ ಸರ್ಕಾರದಿಂದ ಸೂಕ್ತ ಪರಿಹಾರ ಬಿಡುಗಡೆ ಮಾಡಬೇಕು. ಜೊತೆಗೆ ಆರೋಗ್ಯ ಶಿಬಿರಗಳನ್ನು ಆಯೋಜಿಸಿ ಅಗತ್ಯ ವೈದ್ಯಕೀಯ ನೆರವು ಒದಗಿಸಬೇಕು ಎಂದು ಉಪವಿಭಾಗಾಧಿಕಾರಿಗಳಿಗೆ ಮನವಿ ಮಾಡಿದರು.

ಬೈಲಹೊಂಗಲ: ನಗರದಲ್ಲಿ ಸುರಿದ ಧಾರಾಕಾರ ಮಳೆಗೆಹಾನಿಗಿಡಾದವ್ಯಾಪಾರಸ್ಥರು, ಅಂಗಡಿ ಕಾರರು, ಮಳೆಗೆ ಮನೆ ಕಳೆದುಕೊಂಡ ಸಂತ್ರಸ್ಥರು ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯಕ್ಕೆ ಅಸಮಾಧಾನಗೊಂಡು ನಗರಸಭೆಗೆ ಮುತ್ತಿಗೆ ಹಾಕಿ ಮಂಗಳವಾರ ಉಗ್ರ ಪ್ರತಿಭಟನೆ ನಡೆಸಿದರು.

ಭಾರಿ ಮಳೆಯಿಂದ ಉಂಟಾದ ಅಪಾರ ಹಾನಿಗೆ ಒಳಗಾದ ಜನರು ಜೆಡಿಎಸ್ ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ ನೇತೃತ್ವದಲ್ಲಿ ಸಭೆ ಸೇರಿ ಚರ್ಚಿಸಿ ಎಲ್ಲ ಅಂಗಡಿಗಳನ್ನು ಸ್ವಯಂ ಬಂದ್ ಮಾಡಿ ಪ್ರತಿಭಟನಾ ಮೆರವಣಿಗೆ ಮೂಲಕ ನಗರಸಭೆಗೆ ಮುತ್ತಿಗೆ ಹಾಕಿದರು. ಸರ್ಕಾರ, ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಧಿಕ್ಕಾರ ಕೂಗಿದರು. ತಕ್ಷಣವೇ ಸರ್ಕಾರದಿಂದ ಪರಿಹಾರ ಒದಗಿಸಬೇಕೆಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘಗಳ ಮಹಾಸಂಘ ಒಕ್ಕೂಟದಿಂದ ಸಂಕಷ್ಟಕ್ಕೆ ಸಿಲುಕಿದ ಜನತೆಗೆ, ವ್ಯಾಪಾರಸ್ಥರಿಗೆ, ಸಂತ್ರಸ್ತರಿಗೆ ಸೂಕ್ತ ನೆರವು ಕಲ್ಪಿಸುವಂತೆ ಪಟ್ಟು ಹಿಡಿದು ಇಂಚಲ ಕ್ರಾಸ್ ಮುಖ್ಯ ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಲಾಯಿತು.

ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ, ರೈತ ಸಂಘದ ರಾಜ್ಯಾಧ್ಯಕ್ಷ ಬೀರಪ್ಪ ದೇಶನೂರ ಮಾತನಾಡಿ, 'ಭಾರಿ ಮಳೆಯಿಂದಾಗಿ ಅನೇಕ

- ನಗರಸಭೆಗೆ ಮಂಗಳವಾರ ಮುತ್ತಿಗೆ ಹಾಕಿ ಪ್ರತಿಭಟನೆ
- ರಸ್ತೆ ಬಂದ್ ಮಾಡಿ ಜನಪ್ರತಿನಿಧಿ, ಅಧಿಕಾರಿಗಳ ವಿರುದ್ಧ ಆಕ್ರೋಶ

ಮನೆಗಳಿಗೆ ನೀರು ನುಗ್ಗಿ ಮನೆಯಲ್ಲಿದ್ದ ಸಾಮಗ್ರಿಗಳು ಹಾಳಾಗಿವೆ. ವ್ಯಾಪಾರಸ್ಥರ ಅಂಗಡಿಗಳಿಗೆ ನೀರು ನುಗ್ಗಿ ಕೋಟ್ಯಂತರ ರೂಪಾಯಿ ನಷ್ಟ ಉಂಟಾಗಿದೆ. ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳು ನೀರಿನಲ್ಲಿ ತೇಲಿ ಹೋಗಿವೆ. ಮನೆಗಳು ಕುಸಿದಿರುವುದರಿಂದ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿದ್ದು, ನೆರೆ ಸಂತ್ರಸ್ತರಿಗೆ ತಾತ್ಕಾಲಿಕ ವಸತಿ ವ್ಯವಸ್ಥೆ ಕಲ್ಪಿಸುವಂತೆ ಆಗ್ರಹಿಸಿದರು. ಮಳೆಯಿಂದ ತೊಂದರೆಗೊಳಗಾದ ಅನೇಕ ಕುಟುಂಬಗಳು ಆಹಾರದ ಸಮಸ್ಯೆ ಎದುರಿಸುತ್ತಿದ್ದು, ಗಂಜಿ ಕೇಂದ್ರಗಳನ್ನು ತೆರೆಯುವ ಮೂಲಕ ಊಟದ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿದರು.

ಉಪಾಧ್ಯಕ್ಷ ಈರಣ್ಣ ಅಂಗಡಿ, ಕಾರ್ಯಾಧ್ಯಕ್ಷ ಬಸನಗೌಡ ಪಾಟೀಲ, ಮುಖಂಡರಾದ ರುದ್ರಪ್ಪ ಕೊಡ್ಲಿ, ಸಂಜೀವಕುಮಾರ ತಿಲಗರ, ಮಲ್ಲಪ್ಪ ಭಂಗಿ, ಬಸವರಾಜ ಉಪ್ಪಾರ, ನಗರದ ವ್ಯಾಪಾರಸ್ಥರು, ಸಾರ್ವಜನಿಕರು ಸೇರಿದಂತೆ ಅನೇಕರು ಇದ್ದರು.

ಮಳೆಗೆ ಅಪಾರ ಹಾನಿ



ಮುರಗೋಡ: ಗ್ರಾಮದಲ್ಲಿ ಮಂಗಳವಾರ ಸುರಿದ ಭಾರಿ ಮಳೆಯಿಂದ ಸಂಪೂರ್ಣ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಹೊಸ ಬಸ್ ನಿಲ್ದಾಣದ ಹತ್ತಿರ ಇರುವ ಅಂಗಡಿ ಮುಂಗಟ್ಟುಗಳಿಗೆ ನೀರು ಹೋಗಿ ಅಪಾರ ಹಾನಿಯನ್ನುಂಟು ಮಾಡಿದೆ.

ಅಭಿ ಕಿರಾಣಿ ಅಂಗಡಿ ಒಳಗಡೆ ನುಗ್ಗಿದ ನೀರು ಅನೇಕ ಕಿರಾಣಿ ವಸ್ತುಗಳು ಹಾಳಾಗಿದೆ. ಜ್ಯೋತಿ ಮೊಬೈಲ್ ಅಂಗಡಿಯೊಳಗೆ ನೀರು ನುಗ್ಗಿದ್ದರಿಂದ ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಹಾಳಾಗಿವೆ.

ಮುರಗೋಡ ಪೊಲೀಸ್ ಠಾಣೆಯ ಆವರಣ ಸಂಪೂರ್ಣ ಕೆರೆಯಂತಾಗಿದೆ. ಗ್ರಾಮದ ಅನೇಕ ಒಳ ಚರಂಡಿಗಳು ಸಂಪೂರ್ಣ ಮುಚ್ಚಿ ಹೋಗಿದ್ದು, ಗ್ರಾಮ ಪಂಚಾಯತಿಯವರು ಹೂಳು ತೆಗೆಯದೆ ನಿಷ್ಕಾಳಜಿ ವಹಿಸಿದ್ದರಿಂದ ಇಷ್ಟೊಂದು ಪ್ರಮಾಣದಲ್ಲಿ ಹಾನಿ ಉಂಟಾಗಿದೆ ಎಂದು ಸಾರ್ವಜನಿಕರು ಹಿಡಿ ಶಾಪ ಹಾಕುತ್ತಿದ್ದಾರೆ.

ಮುಂಗಾರು ಮಳೆ ಹಿನ್ನೆಲೆಯಲ್ಲಿ ಎಚ್ಚರಿಕೆ

ಶಿಥಿಲ ಮನೆಗಳಿಂದ ದೂರವಿರಿ

ಬೈಲಹೊಂಗಲ: ಮುಂಗಾರು ಮಳೆಗಾಲ ಆರಂಭಗೊಂಡ ಹಿನ್ನೆಲೆಯಲ್ಲಿ ಬೈಲಹೊಂಗಲ ನಗರದಲ್ಲಿ ಕಳೆದ ಕೆಲವು ದಿನಗಳಿಂದ ಭಾರೀ ಮಳೆಯಾಗುತ್ತಿದ್ದು, ಸಾರ್ವಜನಿಕರು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ನಗರಸಭೆ ಮನವಿ ಮಾಡಿದೆ.



ಸಹಾಯವಾಣಿ

ಮಳೆಯಿಂದಾಗಿ ಯಾವುದೇ ರೀತಿಯ ತೊಂದರೆ, ತುರ್ತು ಪರಿಸ್ಥಿತಿ ಅಥವಾ ಸಾರ್ವಜನಿಕ ಸಮಸ್ಯೆಗಳು ಎದುರಾದಲ್ಲಿ ನಗರಸಭೆಯ 24 ಗಂಟೆಗಳ ಸಹಾಯವಾಣಿ 08288-233135 ಸಂಖ್ಯೆಗೆ ಸಂಪರ್ಕಿಸಿ ನೆರವು ಪಡೆಯಬಹುದಾಗಿದೆ.

ನಗರದಲ್ಲಿರುವಹಳೆಯ ಹಾಗೂ ಶಿಥಿಲಾವಸ್ಥೆಯಲ್ಲಿರುವ ಮನೆಗಳು ಮತ್ತು ಕಟ್ಟಡಗಳು ಯಾವುದೇ ಸಮಯದಲ್ಲಿ ಕುಸಿಯುವ ಅಪಾಯ ಇರುವುದರಿಂದ, ಅಂತಹ ಕಟ್ಟಡಗಳಲ್ಲಿ ವಾಸಿಸುವ ಸಾರ್ವಜನಿಕರು ಸುರಕ್ಷಿತ ಸ್ಥಳಗಳಿಗೆ ತೆರಳಬೇಕು ಅಥವಾ ನಗರಸಭೆಯಿಂದ ಗುರುತಿಸಲಾದ ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಪಡೆಯಬೇಕು ಎಂದು ಸೂಚಿಸಿದೆ.

ಅಲ್ಲದೆ, ಬೀಳುವ ಸ್ಥಿತಿಯಲ್ಲಿರುವ ಮನೆಗಳು ಅಥವಾ ಕಟ್ಟಡಗಳು ಕಂಡುಬಂದಲ್ಲಿ ತಮ್ಮ ಹಾಗೂ ಸುತ್ತಮುತ್ತಲಿನ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಅವುಗಳನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗಿದೆ.

ಮಳೆ ನೀರು ಸರಾಗವಾಗಿ ಹರಿಯುವಂತೆ ಸಾರ್ವಜನಿಕರು ಚರಂಡಿ ಹಾಗೂ ರಾಜ ಕಾಲುವೆಗಳಲ್ಲಿ ಕಸ, ತ್ಯಾಜ್ಯ ಮತ್ತು ಇತರೆ ವಸ್ತುಗಳನ್ನು ಎಸೆಯಬಾರದು. ಇದರಿಂದ ಜಲಾವೃತ ಹಾಗೂ ಪ್ರವಾಹದಂತಹ ಸಮಸ್ಯೆಗಳನ್ನು ತಡೆಗಟ್ಟಲು ಸಾಧ್ಯವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ನಗರಸಭೆ ಪೌರಾಯುಕ್ತರಾದ ಭಾಗ್ಯಶ್ರೀ ಆರ್. ಹುಗ್ಗಿ, ಸಾರ್ವಜನಿಕರು ಮುಂಜಾಗ್ರತಾ ಕ್ರಮಗಳನ್ನು ಪಾಲಿಸಿ ತಮ್ಮ ಹಾಗೂ ಕುಟುಂಬದ ಸುರಕ್ಷತೆಗೆ ಆದ್ಯತೆ ನೀಡುವಂತೆ ಮನವಿ ಮಾಡಿದ್ದಾರೆ.

ಮೇ, ಜೂನ್ ತಿಂಗಳ ಪಡಿತರ ಹಂಚಿಕೆ

ಬೆಳಗಾವಿ: ಅನ್ನಭಾಗ್ಯ ಯೋಜನೆಯಡಿ ಮೇ ಮತ್ತು ಜೂನ್ ಮಾಹೆಗಳ ಪಡಿತರ ಹಂಚಿಕೆಯನ್ನು ಜೂನ್ ತಿಂಗಳಲ್ಲಿಯೇ ವಿತರಣೆ ಮಾಡಲಾಗುತ್ತಿದೆ. ಅಂತ್ಯೋದಯ ಪಡಿತರ ಚೀಟಿಯ ಏಕ-ಸದಸ್ಯ, ದ್ವಿ-ಸದಸ್ಯ ಮತ್ತು ತ್ರಿ-ಸದಸ್ಯ ಫಲಾನಿಭವಿಗಳಿರುವ ಪಡಿತರ ಚೀಟಿಗಳನ್ನು ಹೊರತುಪಡಿಸಿ ನಾಲ್ಕು ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಪ್ರತಿ ಫಲಾನುಭವಿಗೆ ಮತ್ತು ಪಿಹೆಚ್ಹೆಚ್ ಪಡಿತರ ಚೀಟಿ ಪ್ರತಿ ಫಲಾನುಭವಿಗೆ ಪ್ರತಿ ತಿಂಗಳಿಗೆ ಹೆಚ್ಚುವರಿಯಾಗಿ 5 ಕೆ.ಜಿ ಅಕ್ಕಿಯನ್ನು ಎರಡೂ ತಿಂಗಳಿಗೆ ಸಂಬಂಧಿಸಿದಂತೆ ವಿತರಣೆ ಮಾಡಬೇಕಾಗಿರುತ್ತದೆ.

ಪರಿಸರ ಮಾಹಿತಿ ಕಾರ್ಯಕ್ರಮ

ಪರಿಸರ ಸ್ವಚ್ಛತೆಗೆ ಆದ್ಯತೆ ನೀಡಿ



ರಾಯಬಾಗ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ರಾಯಬಾಗ ಹಾಗೂ ಸನ್ಮತಿ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಸಂಯುಕ್ತಾಶ್ರಯದಲ್ಲಿ ಪರಿಸರ ಮಾಹಿತಿ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯೆವಿದ್ಯಾ ಪೂಜಾರಿ ಮಾತನಾಡಿ, ಪ್ರಕೃತಿಯನ್ನು ಮಲೀನಗೊಳಿಸದೇ ಸ್ವಚ್ಛವಾಗಿಟ್ಟುಕೊಂಡು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ ಇತರರಿಗೆ ಮಾದರಿ ಯಾಗಿ ಬದುಕಲು ಪ್ರಯತ್ನಿಸೋಣ ಎಂದರು.

ಸನ್ಮತಿ ಶಾಲೆಯ ಕಿರಣ ಹಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿಗಳು ತಾವು ನೆಟ್ಟ ಸಸಿಯೊಂದಿಗೆ ಸೆಲ್ಫಿ ತೆಗೆದು ಕಳಿಸಿದವರಲ್ಲಿ ಉತ್ತಮವಾಗಿ ಪೋಷಣೆ ಮಾಡಿದ ವಿದ್ಯಾರ್ಥಿನಿ ಅಭಿಲಾಷಾರಿಗೆ ಬಹುಮಾನ ನೀಡಿ ವೇದಿಕೆಯಲ್ಲಿ ಗೌರವಿಸಿದರು. ಕೃಷಿ ಮೇಲ್ವಿಚಾರಕ ಚನ್ನಪ್ಪ ಮಾತನಾಡಿದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಸುರೇಶ ಮಾತನಾಡಿದರು. ಸಹ ಶಿಕ್ಷಕ ಪುಂಡಲಿಕ ರೆಂದಾಳೆ ಸ್ವಾಗತಿಸಿದರು. ವಲಯ ಮೇಲ್ವಿಚಾರಕ ವೆಂಕಟೇಶ ಗೌಡ ಕಾರ್ಯಕ್ರಮ ನಿರ್ವಹಿಸಿದರು.

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಜಿಪಂ ಉಪಕಾರ್ಯದರ್ಶಿ ಭೇಟಿ

ಬೆಳಗಾವಿ: ಉಚಗಾಂವ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗಿರುವ ಸ್ವಚ್ಛ ಭಾರತ ಮಿಷನ್ ಯೋಜನೆಯ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಉಚಗಾಂವ ಗ್ರಾಮಕ್ಕೆ ಭೇಟಿ ನೀಡಿದ ಅವರು ಗ್ರಾಮೀಣ ಪ್ರದೇಶದಲ್ಲಿ ಸ್ವಚ್ಛತೆಯನ್ನು ಕಾಪಾಡುವ ಮತ್ತು ಪ್ಲಾಸ್ಟಿಕ್ ಮುಕ್ತ ಪರಿಸರ ನಿರ್ಮಿಸುವ ನಿಟ್ಟಿನಲ್ಲಿ ಘಟಕದ



ಕಾರ್ಯವೈಖರಿಯನ್ನು ವೀಕ್ಷಿಸಿದರು.

ಈ ವೇಳೆ ಮಾತನಾಡಿದ ಜಿ.ಪಂ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ, ಗ್ರಾಮೀಣ ಭಾಗದ ತ್ಯಾಜ್ಯವನ್ನು ಸಮರ್ಪಕವಾಗಿ ಮರುಬಳಕೆ ಮಾಡಲು ಮತ್ತು ಘಟಕವನ್ನು ಯಶಸ್ವಿಯಾಗಿ ಮುನ್ನಡೆಸಲು ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು (ಇಓ) ಹಾಗೂ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಪಿಡಿಓ) ಉಪಸ್ಥಿತರಿದ್ದರು.

ಆರೋಗ್ಯಕರ ಜೀವನ ಶೈಲಿ ಉತ್ತೇಜಿಸಲು ಸೈಕಲ್ ಜಾಥಾ



ಗೋಕಾಕ: ಆರೋಗ್ಯಕರಜೀವನಶೈಲಿಯನ್ನು ಉತ್ತೇಜಿಸಲು ಹಾಗೂ ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು ಮೂಡಿಸುವ ಉದ್ದೇಶದಿಂದ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿದೆ. ಸ್ವಚ್ಛತೆಯೆಂಬುದು ಪ್ರತಿದಿನದ ಆಚರಣೆಯಾಗಬೇಕು ಎಂದು ಡಿಸಿಸಿ ಬ್ಯಾಂಕ ನಿರ್ದೇಶಕ ಹಾಗೂ ಯುವ ಧುರೀಣ ಅಮರನಾಥ ಜಾರಕಿಹೊಳಿ ತಿಳಿಸಿದರು.

ಅವರು ತಾಲೂಕು ಆಡಳಿತ, ತಾಲೂಕು ಪಂಚಾಯತಿ ಹಾಗೂ ನಗರಸಭೆ ಸಹಯೋಗದಲ್ಲಿ ಫಿಟ್ ಇಂಡಿಯಾ ಆಂದೋಲನದಡಿ ವಿಶ್ವ ಬೈಸಿಕಲ್ ದಿನಾಚರಣೆ ಅಂಗವಾಗಿ ಸ್ವಚ್ಛತಾ ರೈಡ್ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಸೈಕಲ್ ಜಾಥಾ ಕಾರ್ಯಕ್ರಮದಲ್ಲಿ ಡಿಸಿಸಿ ಬ್ಯಾಂಕ ನಿರ್ದೇಶಕ ಹಾಗೂ ಯುವ ಧುರೀಣ ಅಮರನಾಥ ಜಾರಕಿಹೊಳಿ ಸೈಕಲ್ ಸವಾರಿ ಮಾಡುವ ಮೂಲಕ ಪಾಲ್ಗೊಂಡರು. ಶಾಸಕ ಗೃಹ ಕಚೇರಿಯಿಂದ ಶುರುವಾದ ಸೈಕಲ್ ಜಾಥಾ ಬಸವೇಶ್ವರ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತದ ಮಾರ್ಗವಾಗಿ ತಹಶೀಲ್ದಾರ್ ಕಚೇರಿಗೆ ತಲಪಿತು.

ಈ ಜಾಥಾದಲ್ಲಿ ತಹಶೀಲ್ದಾರ್ ಡಾ.ಮೋಹನ ಭಸ್ಮೆ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪರಶುರಾಮ್ ಘಸ್ತೆ, ನಗರಸಭೆ ಪೌರಾಯುಕ್ತ ರವಿ ರಂಗಸುಭೆ, ತಾಲೂಕು ಮಟ್ಟದ ಅಧಿಕಾರಿಗಳು ವಿವಿಧ ಇಲಾಖೆ ಸಿಬ್ಬಂದಿ ಪಾಲ್ಗೊಂಡಿದ್ದರು.

ಹುಣಸಿಕೊಳ್ಳಮಠದಲ್ಲಿ ವಚನಾದಿಮಾನೋತ್ಸವ

ಯಮಕನಮರಡಿ: ಸ್ಥಳೀಯ ಶ್ರೀ ಜಗದ್ಗುರು ಶೂನ್ಯ ಸಂಪಾದನಾ ಪೀಠ ಹುಣಸಿಕೊಳ್ಳಮಠದಲ್ಲಿ ಶನಿವಾರ ಸಂಜೆ ಚಂದ್ರಮಾನ ಸಮಯಾನುಸಾರ ವಚನ ಆದಿಮಾನೋತ್ಸವ ಕಾರ್ಯಕ್ರಮ ನಡೆಯಿತು. ಹುಣಸಿಕೊಳ್ಳಮಠದ ಉತ್ತರಾಧಿಕಾರಿ ಸಿದ್ದಬಸವ ದೇವರು ಪ್ರಾಸ್ತವಿಕವಾಗಿ ಮಾತನಾಡಿದರು. ಮೊಮ್ಮನಗಟ್ಟಿ ಬಸವಾನಂದ ಸ್ವಾಮೀಜಿ, ಹರಿ ಮಂದಿರದ ಆನಂದ ಮಹಾರಾಜ ಗೋಸಾವಿ, ಶಿಕ್ಷಕ ಬಿ.ಜಿ. ಪಾಟೀಲ, ಕಾಂಗ್ರೆಸ್ ಯುವ ಮುಖಂಡ ಕಿರಣ ರಜಪೂತ, ಮಠದ ಟ್ರಸ್ಟಿನ ಸದಸ್ಯ ಗಿರೀಶ ಮಿಶ್ರಿಕೋಟಿ, ನಾಗನೂರಿ ಇನ್ನುಳಿದ ಸದಸ್ಯರು ಇದ್ದರು.





ಮುಗಳಖೋಡ: ಕರ್ನಾಟಕದ ನೂತನ ಮುಖ್ಯಮಂತ್ರಿಯಾದ ಡಿ.ಕೆ. ಶಿವಕುಮಾರ್ ಅವರನ್ನು ಬೆಂಗಳೂರಿನ ವಿಧಾನಸೌಧದಲ್ಲಿ ಭೇಟಿ ಮಾಡಿದ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಅವರು ಹೂಗುಚ್ಛ ನೀಡಿ ಪ್ರೀತಿಯ ಸನ್ಮಾನದ ಮೂಲಕ ಗೌರವಿಸಿ, ಅಭಿನಂದನೆ ಸಲ್ಲಿಸಿದರು.

ಪಾಲಿಕೆ ಸಭೆಯಲ್ಲೇ ಠರಾವ್ ಮಂಡಿಸಲು ಆಸೀಫ್ ಸೇಠ್ ಘೋಷಣೆ

ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ

ಬೆಳಗಾವಿ: ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ಠರಾವ್ ಅಂಗೀಕಾರದ ವಿಚಾರದಲ್ಲಿ ಬೆಳಗಾವಿ ಮಹಾನಗರ ಪಾಲಿಕೆ ತೋರಿಸುತ್ತಿರುವ ವಿಳಂಬಕ್ಕೆಇದೀಗತೆರೆಬೀಳುವಸಾಧ್ಯತೆಕಂಡುಬಂದಿದೆ. ಮುಂದಿನ ಮಹಾನಗರ ಪಾಲಿಕೆ ಸಭೆಯಲ್ಲಿ ಈ ಠರಾವ್ ಅನ್ನು ತಾವೇ ಮಂಡಿಸುವುದಾಗಿ ಬೆಳಗಾವಿ ಉತ್ತರ ಶಾಸಕ ಆಸೀಫ್ ಸೇಠ್ ಘೋಷಣೆ ಮಾಡಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಈ ವಿಚಾರದ ಕುರಿತು ವಿಸ್ತೃತ ಚರ್ಚೆ ನಡೆಯಿತು. ಸಭೆಯಲ್ಲಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ನಗರ ಪೊಲೀಸ್ ಆಯುಕ್ತ ಭೂಷಣ ಗುಲಾಬರಾವ್ ಬೋರಸೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕೆ. ರಾಮರಾಜನ್, ಮಹಾನಗರ ಪಾಲಿಕೆ ಆಯುಕ್ತ ಕಾರ್ತಿಕ್ ಎಂ.ಹಾಗೂ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಸಭೆಯಲ್ಲಿ ಮಾತನಾಡಿದ ಕನ್ನಡ ಪರ ಸಂಘಟನೆಗಳ ಮುಖಂಡರು, ಕಳೆದ ಹಲವು ತಿಂಗಳುಗಳಿಂದ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಹಾಗೂ ಮಹಾಜನ ಆಯೋಗದ ವರದಿಯೇ



ಅಂತಿಮ ಎಂಬ ನಿರ್ಣಯ ಅಂಗೀಕರಿಸುವಂತೆ ಆಗ್ರಹಿಸಿ ಹೋರಾಟ ನಡೆಸುತ್ತಿದ್ದರೂ ಪಾಲಿಕೆಯಿಂದ ಯಾವುದೇ ಸ್ಪಷ್ಟ ನಿರ್ಧಾರ ಕೈಗೊಳ್ಳಲಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಪಾಲಿಕೆ ಆಯುಕ್ತರು, ಕಳೆದ ಸಭೆಯಲ್ಲಿ ಸರ್ಕಾರದ ನಾಮನಿರ್ದೇಶಿತ ಸದಸ್ಯ ರಮೇಶ್ ಸೊಂಟಕ್ಕಿ ಅವರು ನಿರ್ಣಯ ಮಂಡಿಸಲು ಮುಂದಾಗಿದ್ದರೂ, ವಿಷಯ ಸುಪ್ರೀಂ ಕೋರ್ಟ್‌ನಲ್ಲಿ ಇರುವ ಕಾರಣ ನಗರಾಭಿವೃದ್ಧಿ ಇಲಾಖೆಯ ಅಭಿಪ್ರಾಯ ಪಡೆಯಲು ಮಹಾಪೌರರು ಸೂಚನೆ ನೀಡಿದ್ದರು ಎಂದು ವಿವರಿಸಿದರು.

ಈ ವಿವರಣೆಗೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಸ್ಪಷ್ಟ ಪ್ರತಿಕ್ರಿಯೆ ನೀಡಿ, ಈ ವಿಷಯದಲ್ಲಿ ಸರ್ಕಾರದ ಅಭಿಪ್ರಾಯಕ್ಕಾಗಿ ಕಾಯುವ ಅಗತ್ಯವಿಲ್ಲ. ಪಾಲಿಕೆ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ನಿರ್ಧಾರ ಕೈಗೊಳ್ಳಬಹುದು ಎಂದು ಹೇಳಿದರು.

ಇದೇ ವೇಳೆ ಶಾಸಕ ಆಸೀಫ್ ಸೇಠ್ ಮಾತನಾಡಿ, ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬುದು ಪ್ರಶ್ನಾತೀತ ಸತ್ಯ. ಮುಂದಿನ ಪಾಲಿಕೆ ಸಭೆಯಲ್ಲಿ ಈ ನಿರ್ಣಯವನ್ನು ನಾನೇ ಮಂಡಿಸುತ್ತೇನೆ ಎಂದು ಘೋಷಿಸಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಕನ್ನಡ ಸಂಘಟನೆಗಳ ಮುಖಂಡರು, ನಿರ್ಣಯ ಮಂಡನೆಯಾದರೆ ಎಂಇಎಸ್ ನ ಕೆಲ ಸದಸ್ಯರನ್ನು ಹೊರತುಪಡಿಸಿ ಬಹುತೇಕ ಸದಸ್ಯರು ಬೆಂಬಲಿಸುವ ವಿಶ್ವಾಸ ವ್ಯಕ್ತಪಡಿಸಿದರು.

ಸಭೆಯಲ್ಲಿ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿಯ ಅಧ್ಯಕ್ಷ ಅಶೋಕ ಚಂದರಗಿ, ಮಹಾದೇವ ತಳವಾರ, ಬಲರಾಮ ಮಾಸೇನಟ್ಟಿ, ಶ್ರೀನಿವಾಸ ತಾಳೂಕರ ಸೇರಿದಂತೆ ವಿವಿಧ ಕನ್ನಡ ಪರ ಸಂಘಟನೆಗಳ ಮುಖಂಡರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಶಿವಾನಂದ ಮಹಾವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆ

ಸ್ವಚ್ಛತಾ ಅಭಿಯಾನ, ಜಾಗೃತಿ ಜಾಥಾ, ವೃಕ್ಷಾರೋಪಣ

ಕಾಗವಾಡ: ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಪ್ರಕೃತಿಯ ಸಮತೋಲನ ಕಾಪಾಡಲು ಯುವಜನತೆ ಮುಂದಾಗಬೇಕು ಎಂದು ಶಿವಾನಂದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಸ್.ಪಿ.ತಳವಾರ ಹೇಳಿದರು.

ಅವರು ಕಾಗವಾಡದ ಶಿವಾನಂದ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ವಿದ್ಯಾರ್ಥಿ ಸೇನೆ (ಎನ್‌ಸಿಸಿ) ಘಟಕದ ವತಿಯಿಂದ ಹಮ್ಮಿಕೊಳ್ಳಲಾದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ವೃಕ್ಷಾರೋಪಣ ನೆರವೇರಿಸಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ ಹವಾಮಾನ ಬದಲಾವಣೆ, ಉಷ್ಣಾಂಶ ಏರಿಕೆ, ಅತಿವೃಷ್ಟಿ ಹಾಗೂ ಅನಾವೃಷ್ಟಿಯಂತಹ ಸಮಸ್ಯೆಗಳಿಗೆ ಮಾನವನ ಅತಿಯಾದ ಹಸ್ತಕ್ಷೇಪವೇ ಪ್ರಮುಖ ಕಾರಣವಾಗಿದೆ. ಪರಿಸರವನ್ನು ಸಂರಕ್ಷಿಸದಿದ್ದರೆ ಪ್ರಕೃತಿಯ ಸಮತೋಲನ ಹದಗೆಡುತ್ತದೆ. ಇದರದುಷ್ಪರಿಣಾಮಗಳು ಈಗಾಗಲೇ ಜಗತ್ತಿನಾದ್ಯಂತ ಗೋಚರಿಸುತ್ತಿವೆ. ಪ್ರತಿಯೊಬ್ಬರೂ ವರ್ಷಕ್ಕೆ ಕನಿಷ್ಠ ಒಂದು ಗಿಡ ನೆಟ್ಟು ಅದರ ಪೋಷಣೆ ಮಾಡುವ ಸಂಕಲ್ಪ ಮಾಡಬೇಕು ಎಂದರು.



ಕಾರ್ಯಕ್ರಮದ ಆರಂಭದಲ್ಲಿ ಮಹಾವಿದ್ಯಾಲಯದ ಆವರಣವನ್ನು ಸ್ವಚ್ಛಗೊಳಿಸುವ ಮೂಲಕ ಪರಿಸರ ಜಾಗೃತಿಗೆ ಚಾಲನೆ ನೀಡಲಾಯಿತು. ಬಳಿಕ ಎನ್ಸಿಸಿ ಕೆಡೆಟ್ಗಳು ಪರಿಸರ ಸಂರಕ್ಷಣೆಯ ಕುರಿತು ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಜಾಗೃತಿ ಜಾಥಾ ನಡೆಸಿದರು.

ಜಾಥಾದ ವೇಳೆ ಪರಿಸರ ರಕ್ಷಣೆ, ಪ್ಲಾಸ್ಟಿಕ್ ಬಳಕೆ ನಿಯಂತ್ರಣ ಹಾಗೂ ವೃಕ್ಷಸಂವರ್ಧನೆಯ ಮಹತ್ವದ ಕುರಿತು ಘೋಷಣೆಗಳನ್ನು ಕೂಗುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಎನ್ಸಿಸಿ ಅಧಿಕಾರಿ ಲೆಫ್ಟಿನೆಂಟ್ ಅಶೋಕ ಆರ್. ಅಲಗೊಂಡಿ ಅವರು ಎಲ್ಲರನ್ನು ಸ್ವಾಗತಿಸಿ, ವಿಶ್ವ ಪರಿಸರ ದಿನದ ಮಹತ್ವವನ್ನು ವಿವರಿಸಿದರು. ಪರಿಸರಸಂರಕ್ಷಣೆಗಾಗಿಪ್ರತಿಯೊಬ್ಬರೂ ತಮ್ಮ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಚಂದ್ರಶೇಖರ ವೈ., ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಉಪಸ್ಥಿತರಿದ್ದರು. ಅವರು ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಕುರಿತು ನಿರಂತರವಾಗಿ ಜಾಗೃತಿ ಮೂಡಿಸುವಕಾರ್ಯಗಳಲ್ಲಿತೊಡಗಿಸಿಕೊಳ್ಳುವಂತೆ ಸಲಹೆ ನೀಡಿದರು.

ಈ ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಎನ್ಸಿಸಿ ಕೆಡೆಟ್ಗಳು ಉತ್ಸಾಹದಿಂದ ಭಾಗವಹಿಸಿ, ಪರಿಸರ ಸಂರಕ್ಷಣೆಯ ಪ್ರತಿಜ್ಞೆ ಸ್ವೀಕರಿಸಿದರು. ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಕಾಳಜಿ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸುವಲ್ಲಿ ಈ ಕಾರ್ಯಕ್ರಮ ಮಹತ್ವದ ಪಾತ್ರ ವಹಿಸಿತು.

ಪರಿಸರ ಸಂರಕ್ಷಣೆಯ ಸಂದೇಶ ಸಾರುವ ಮೂಲಕ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ಕಿರುಸುದ್ದಿ

ಸಹಾಯ ಕೇಂದ್ರ ಪ್ರಾರಂಭ

ಚಿಕ್ಕೋಡಿ: 2026-27ನೇ ಸಾಲಿನಲ್ಲಿ ತಾಲ್ಲೂಕು ವ್ಯಾಪ್ತಿಯಲ್ಲಿ ಅತಿವೃಷ್ಠಿ/ಪ್ರವಾಹ ಕುರಿತಾಗಿ ಪಟ್ಟಣದ ಮಿನಿವಿಧಾನಸೌಧದಲ್ಲಿರುವ ತಹಶೀಲ್ದಾರ ಕಾರ್ಯಾಲಯದಲ್ಲಿ ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದೆ. ಈ ಕಚೇರಿಯ ಸಹಾಯವಾಣಿ ಸಂಖ್ಯೆ 9380684031 ಯನ್ನು 24 ★ 7 ಸಂಪರ್ಕಿಸಬಹುದಾಗಿದೆ ಎಂದು ಚಿಕ್ಕೋಡಿ ತಹಶೀಲ್ದಾರ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿ ಅಧಿಕಾರಿಗಳಿಗೆ ದಂಡ

ಬೆಳಗಾವಿ : ಮಾಹಿತಿ ಹಕ್ಕು ಅಧಿನಿಯಮ ಮಾಹಿತಿ ಅಧಿಕಾರಿಗಳು ಸಾಮಾನ್ಯ ಜನರಿಗೆ ಸಕಾಲಕ್ಕೆ ಮಾಹಿತಿ ನೀಡದೆ ನಿರ್ಲಕ್ಷ್ಯ ವಹಿಸಿರುವುದು, ವಿಚಾರಣೆಗೆ ಗೈರು ಹಾಜರಾಗಿದ್ದು ಹಾಗೂ ಆಯೋಗದ ನೋಟಿಸಗಳಿಗೆ ಸ್ಪಂದಿಸದ ಹಿನ್ನಲೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಮಾಹಿತಿ ಆಯೋಗ ಬೆಳಗಾವಿ ಪೀಠದಿಂದ ದಂಡ ವಿಧಿಸಲಾಗಿದೆ ಎಂದು ರಾಜ್ಯ ಮಾಹಿತಿ ಆಯುಕ್ತರಾದ ಪ್ರಕಾಶ ನಾರಾಯಣ ಚನ್ನಾಳ ತಿಳಿಸಿದ್ದಾರೆ.ಆಯಾ ಇಲಾಖೆಗಳ ಜಿಲ್ಲಾ ಮುಖ್ಯಸ್ಥರಿಗೆ ತಮ್ಮ ಕೆಳ ಹಂತದಲ್ಲಿ ಬರುವ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸರಿಯಾಗಿ ಮಾಹಿತಿ ಆಯೋಗದಲ್ಲಿ ವಿಚಾರಣೆಗೆ ಹಾಜರಾಗಲು ಕಟ್ಟುನಿಟ್ಟಾಗಿ ಸೂಚನೆ ನೀಡಬೇಕು. ಸೂಕ್ತ ಮಾಹಿತಿ ಒದಗಿಸಬೇಕೆಂದು ಆಯುಕ್ತರು ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಬೀದಿ ನಾಯಿಗಳ ಹಾವಳಿ

ಬೆಳಗಾವಿ: ನಗರದಲ್ಲಿ ಬೀದಿ ನಾಯಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಸಾರ್ವಜನಿಕರ ಮೇಲೆ ದಾಳಿ ನಡೆಸುತ್ತಿರುವ ಘಟನೆಗಳು ಹೆಚ್ಚಾಗಿವೆ. ವಿಶೇಷವಾಗಿ ವೃದ್ಧರು, ಶಾಲಾ ಮಕ್ಕಳು ಹಾಗೂ ಪಾದಚಾರಿಗಳು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ.ನಗರದ ವಿವಿಧ ಪ್ರದೇಶಗಳಲ್ಲಿ ರಸ್ತೆಗಳಲ್ಲಿ ಓಡಾಡುವವರ ಮೇಲೆ ಬೀದಿ ನಾಯಿಗಳು ಏಕಾಏಕಿ ದಾಳಿ ಮಾಡುತ್ತಿರುವುದರಿಂದ ಜನರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ.

ಈಗಾಗಲೇ ಬೀದಿ ನಾಯಿಗಳ ದಾಳಿಯಿಂದ ಹಲವರಿಗೆ ಗಾಯಗಳಾಗಿರುವುದಾಗಿ ಸ್ಥಳೀಯರು ತಿಳಿಸಿದ್ದಾರೆ. ಮಂಗಳವಾರ ಬೆಳಗಿನ ಜಾವ ಕುಮಾರಸ್ವಾಮಿ ಲೇಔಟ್ ನ 3ನೇ ಕ್ರಾಸ್ ಬಳಿ ಅಡಿವೇಪ್ಪಾ ಜೋಳದ ಅವರ ಮೇಲೆ ಬೀದಿ ನಾಯಿ ಏಕಾಏಕಿ ದಾಳಿ ನಡೆಸಿದೆ. ದಾಳಿಯಿಂದ ಅವರ ಕಾಲಿಗೆ ಗಂಭೀರ ಗಾಯವಾಗಿದ್ದು, ತಕ್ಷಣವೇ ಬಿಮ್ಸ್ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ನಗರದಲ್ಲಿ ಹೆಚ್ಚುತ್ತಿರುವ ಬೀದಿ ನಾಯಿಗಳ ಹಾವಳಿಯನ್ನು ನಿಯಂತ್ರಿಸಲು ಮಹಾನಗರ ಪಾಲಿಕೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.ಬೀದಿ ನಾಯಿಗಳ ಸಂತಾನೋತ್ಪತ್ತಿ ನಿಯಂತ್ರಣ, ಲಸಿಕಾ ಕಾರ್ಯಕ್ರಮ ಹಾಗೂ ಸಾರ್ವಜನಿಕರ ಸುರಕ್ಷತೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ನಾಗರಿಕರು ಒತ್ತಾಯಿಸಿದರು.

ಕಾಂಗ್ರೆಸ್ ಮುಖಂಡನಿಗೆ ಅಂತಿಮ ನಮನ ಸಲ್ಲಿಸಿದ ಲಕ್ಷ್ಮೀ ಹೆಬ್ಬಾಳಕರ್

ಬೆಳಗಾವಿ: ಜಿಲ್ಲೆಯ ರಾಮದುರ್ಗ ತಾಲೂಕಿನ ಸಿದ್ನಾಳ್ ಗ್ರಾಮದ ಹಿರಿಯ ಕಾಂಗ್ರೆಸ್ ಮುಖಂಡರಾದ ಪರುತಗೌಡ ಪಾಟೀಲ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿರುವ ಮಾಜಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹಾಗೂ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಗ್ರಾಮಕ್ಕೆ ತೆರಳಿ ಅಂತಿಮ ನಮನ ಸಲ್ಲಿಸಿದರು. ಧನಲಕ್ಷ್ಮೀ ಸಕ್ಕರೆ ಕಾರ್ಖಾನೆ ನಿರ್ದೇಶಕರೂ ಆಗಿದ್ದ ಪರುತ ಗೌಡರ ನಿಧನದ ಸುದ್ದಿ ತಿಳಿದು ಮನಸ್ಸಿಗೆ ನೋವಾಯಿತು. ಸಾಮಾಜಿಕ ಹಾಗೂ ರಾಜಕೀಯ ರಂಗದಲ್ಲಿ ಅವರು ಸಲ್ಲಿಸಿದ ಸೇವೆ ಅನನ್ಯವಾದುದು. ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಅವರ ಕುಟುಂಬಸ್ಥರಿಗೆ, ಹಿತೈಷಿಗಳಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ಅವರು ಪ್ರಾರ್ಥಿಸಿದರು.

ಜೆಡಿಎಸ್ ಅಧ್ಯಕ್ಷರಾಗಿ ಮಂಜುನಾಥ ಆಯ್ಕೆ

ಬೆಳಗಾವಿ /ಬೈಲಹೊಂಗಲ: ವಿಧಾನಸಭಾ ಮತಕ್ಷೇತ್ರದ ಬೆಳವಡಿ ಗ್ರಾಮದಲ್ಲಿ ಜೆಡಿಎಸ್ ಸಭೆ ನಡೆಯಿತು. ಭಾರತ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರು ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್ ಡಿ.ಕುಮಾರಸ್ವಾಮಿ ಅವರ ಆದೇಶದ ಮೇರೆಗೆ, ಬೈಲಹೊಂಗಲ ವಿಧಾನಸಭಾ ಮತಕ್ಷೇತ್ರದ ರೈತ ಘಟಕದ ಅಧ್ಯಕ್ಷರಾಗಿ ಮಂಜುನಾಥ್ ತಹಶೀಲ್ದಾರ್ ಅವರನ್ನು ನೇಮಕ ಮಾಡಲಾಯಿತು. ಬೆಳಗಾವಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಶಂಕರ್ ಮಾಡಲಗಿ ಅವರು ಅಧಿಕೃತವಾಗಿ ಪತ್ರ ನೀಡಿ ಭಿನಂದಿಸಿದರು. ಬಳಿಕ ಬೆಳವಡಿ ಗ್ರಾಮದ ಬೂತ್ ಕಮಿಟಿ ರಚಿಸಲಾಯಿತು.ಈ ವೇಳೆ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು, ರೈತರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ಬೆಳಗಾವಿ: ಡಿಸಿಸಿ ಬ್ಯಾಂಕಿನಲ್ಲಿ ಯುಪಿಎ ಹಾಗೂ ಐಎಂಪಿಎಸ್ ಸೇವೆಗಳ ಉದ್ಘಾಟನೆಯನ್ನು ಬ್ಯಾಂಕಿನ ಮಾನ್ಯ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಅವರು, ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರು ಅಶೋಕ್ ಪಟ್ಟಣ, ಮಾಜಿ ಕಿತ್ತೂರು ಬಿಜೆಪಿ ಶಾಸಕ ಮಹಾಂತೇಶ್ ದೊಡ್ಡಗೌಡರ, ವಿಧಾನ ಪರಿಷತ್ ಸದಸ್ಯ ಚನ್ನರಾಜ್ ಹಟ್ಟಿಹೊಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವೃದ್ಧಾಶ್ರಮದಲ್ಲಿ ವಿಶ್ವ ಪರಿಸರ ದಿನಾಚರಣೆ

ಬೆಳಗಾವಿ : ತಾಲೂಕಿನ ಬಸವನ ಕುಡಚಿಯಲ್ಲಿರುವ ಚಿನ್ನಮ್ಮ ಬಸವಂತಯ್ಯ ಹಿರೇಮಠ್ ವೃದ್ಧಾಶ್ರಮದ ನಾಗನೂರು ಶ್ರೀ ಬಸವೇಶ್ವರ ಟ್ರಸ್ಟ್ ಸಹಯೋಗದೊಂದಿಗೆ ಕ್ರಾಂತಿ ಮಹಿಳಾ ಮಂಡಳ ಮತ್ತು ಉಮಾ ಸಂಗೀತ ಪ್ರತಿಷ್ಠಾನದಿಂದ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ವೃದ್ಧಾಶ್ರಮದ ಮೇಲ್ವಿಚಾರಕರಾದ ಎಂ.ಎಸ್ ಚೌಗಲಾ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.ವೃದ್ಧಾಶ್ರಮಕ್ಕೆ ಭೇಟಿ ನೀಡಿ ಹಿರಿಯರ ಆರೋಗ್ಯವನ್ನು ವಿಚಾರಿಸಿ, ಹಾಸಿಗೆ ಮತ್ತು ದಿನಸಿ ಸಾಮಗ್ರಿಗಳನ್ನು , ಹೊಸ ಸೀರೆಗಳನ್ನು ವಿತರಿಸಲಾಯಿತು. ಆಕಾಶವಾಣಿ ದೂರದರ್ಶನ ಕಲಾವಿದರು ಮತ್ತು ನಮ್ಮೂರ ಬಾನುಲಿ ಕೇಂದ್ರದ ಸಂದರ್ಶಕರು ಹಾಗೂ ಸಂಯೋಜಕರು ಮಹಿಳಾ ಕಲ್ಯಾಣ ಸಂಸ್ಥೆ ಬೆಳಗಾವಿಯ ಡಾ.ಶ್ರೀರಂಗ ಜೋಷಿ ಸರ್ ಅವರು ಪ್ರಕೃತಿ ಮಾತೆಯ ಮೇಲೆ ಒಂದು ಸುಂದರ ಗೀತೆಯನ್ನು ಹಾಡಿದರು.ಈ ವೇಳೆ ಎಂ.ಎಸ್. ಚೌಗಲಾ ಮತ್ತು ಶ್ರೀರಂಗ ಜೋಶಿ ಸರ್ ಅವರನ್ನು ಸನ್ಮಾನಿಸಲಾಯಿತು.ಈ ಸಂದರ್ಭದಲ್ಲಿ ಅಧ್ಯಕ್ಷಮಂಗಲಾ ಮಠದವರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ಭಾರತಿ ರತ್ನಪ್ಪೊಳ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಮತಾ ಆಂಟಿನ, ಶೋಭಾ ಕಾಡನ್ನವರ್, ಮೈನಾ ಕುಲಕರ್ಣಿ ರತ್ನಗುಡಗನಟ್ಟಿ ಇವರು ಪ್ರಾರ್ಥಿಸಿದರು. ಸುಶೀಲ ಗುರವ, ನಮಿತಾ ಸೊಂಟಕ್ಕಿ, ಲೀಲಾ ಶೇರಿ, ಮಂದಾಕಿನಿ ನಿರ್ಲೇಕರ್ , ಸುಶೀಲಾ ಗುರವ್ ನಿರೂಪಿಸಿದರು. ನಮಿತಾ ಸೊಂಟಕ್ಕಿ ವಂದಿಸಿದರು.



ಬೆಳಗಾವಿ : ತಾಲೂಕಿನ ಬಸವನ ಕುಡಚಿಯಲ್ಲಿರುವ ಚಿನ್ನಮ್ಮ ಬಸವಂತಯ್ಯ ಹಿರೇಮಠ್ ವೃದ್ಧಾಶ್ರಮದ ನಾಗನೂರು ಶ್ರೀ ಬಸವೇಶ್ವರ ಟ್ರಸ್ಟ್ ಸಹಯೋಗದೊಂದಿಗೆ ಕ್ರಾಂತಿ ಮಹಿಳಾ ಮಂಡಳ ಮತ್ತು ಉಮಾ ಸಂಗೀತ ಪ್ರತಿಷ್ಠಾನದಿಂದ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಪಾಲಿಕೆ ಸಿಬ್ಬಂದಿ ವರ್ಗಾವಣೆಗೆ ಬೆಳಗಾವಿ ನಗರ ಸೇವಕರ ಬೇಸರ

ಬೆಳಗಾವಿ: ಪಾಲಿಕೆಗೆ ಸಂಬಂಧಿಸಿದ ಪ್ರಮುಖ ವೃತ್ತಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಲಾಗಿರುವ ಅನಧಿಕೃತ ಬೃಹತ್ ಜಾಹೀರಾತು ಫಲಕಗಳ ವಿರುದ್ಧ ಕೈಗೊಂಡಿರುವ ಕ್ರಮಗಳ ಕುರಿತು ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ ಸಭೆಯಲ್ಲಿ ಚರ್ಚೆ ನಡೆಯಿತು.

ಇಲ್ಲಿನ ಮಹಾನಗರ ಪಾಲಿಕೆಯ ಸ್ಥಾಯಿ ಸಮಿತಿ ಸಭಾಭವನದಲ್ಲಿ ನಡೆದ ಸಭೆಯಲ್ಲಿ ಸಮಿತಿ ಅಧ್ಯಕ್ಷೆ ರೇಖಾ ಹೂಗಾರ ಅವರು ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸಿದ ಅನಿಲ್ ಬೋರಗಾವಿ, ಅನಧಿಕೃತ ಜಾಹೀರಾತು ಫಲಕ ಅಳವಡಿಸಿದವರ ವಿರುದ್ಧ ಈಗಾಗಲೇ ಎರಡು ಎಫ್‌ಐಆರ್‌ಗಳನ್ನು ದಾಖಲಿಸಲಾಗಿದ್ದು, ಇನ್ನೂ ಹಲವು ಕಡೆಗಳಲ್ಲಿ ತೆರವು ಕಾರ್ಯಾಚರಣೆ ಮುಂದುವರಿದಿದೆ ಎಂದರು. ಆದರೆ ಕೆಲ ತಾಂತ್ರಿಕ ಸಮಸ್ಯೆಗಳ ಕುರಿತು ಸಭೆಗೆ ವಿವರಿಸಿದರು. ಅವರ ಕಾರ್ಯಕ್ಕೆ ಉಪ ಮಹಾಪೌರರು ಹಾಗೂ ಉಪ ಆಯುಕ್ತ (ಅಭಿವೃದ್ಧಿ) ಅಭಿನಂದನೆ ಸಲ್ಲಿಸಿದರು.

ಇದೇ ವೇಳೆ ಕಂದಾಯ ವಾರ್ಡ್‌ಗಳು ಹಾಗೂ ಚುನಾವಣಾ ವಾರ್ಡ್‌ಗಳ ಪುನರ್ವ್ಯವಸ್ಥೆಯ ಹಿನ್ನೆಲೆಯಲ್ಲಿ ನಡೆದ ಸಿಬ್ಬಂದಿಗಳ ಆಂತರಿಕ ವರ್ಗಾವಣೆ ಕುರಿತು ಸಭೆಯಲ್ಲಿ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು. ವರ್ಗಾವಣೆ ಯಾರು ಮಾಡಿದರು, ಯಾವಾಗ ಮಾಡಿದರು ಎಂಬುದು ನಮ್ಮ ಗಮನಕ್ಕೇ ಬಂದಿಲ್ಲ ಎಂದು ಮೇಯರ್, ಉಪ ಮೇಯರ್ ಹಾಗೂ ಸಮಿತಿ ಸದಸ್ಯರು ಪ್ರಶ್ನಿಸಿದರು.



ಸಭೆಯ ಮತ್ತೊಂದು ಹಂತದಲ್ಲಿ ದಕ್ಷಿಣ ವಲಯ ಆಯುಕ್ತರ ಕುರಿತು ನಡೆದ ಚರ್ಚೆ ಹಾಸ್ಯಮಯ ವಾತಾವರಣ ಸೃಷ್ಟಿಸಿತು.

ಇದಕ್ಕೆ ಉತ್ತರಿಸಿದ ಉಪ ಆಯುಕ್ತ (ಆಡಳಿತ), ಕಂದಾಯ ಉಪ ಆಯುಕ್ತರು ಸಿದ್ಧಪಡಿಸಿದ ಪಟ್ಟಿಯನ್ನು ಆಯುಕ್ತರಿಗೆ ಸಲ್ಲಿಸಿದ್ದರು. ಆಯುಕ್ತರ ಆದೇಶದಂತೆ ವರ್ಗಾವಣೆ ಪ್ರಕ್ರಿಯೆ ನಡೆಸಲಾಗಿದೆ ಎಂದು ಹೇಳಿದರು.

ಉಪ ಮಹಾಪೌರರು ಹಾಗೂ ಆಡಳಿತ ಪಕ್ಷದ ನಾಯಕರು ಕೂಡ ಧ್ವನಿಗೂಡಿಸಿ, ಆಂತರಿಕ ವರ್ಗಾವಣೆ ಕುರಿತು ನಗರ ಸೇವಕರಿಗೆ ಮಾಹಿತಿ ನೀಡಬಾರದು ಎಂಬ ಯಾವುದೇ ಕಾನೂನು ಇದೆಯೇ? ಪಾಲಿಕೆಯ ಆಡಳಿತದಲ್ಲಿ ನಮ್ಮ ಪಾತ್ರವೇ ಇಲ್ಲವೇ? ಎಂದು ಅಸಮಾಧಾನ ಹೊರ ಹಾಕಿದರು.

ದಕ್ಷಿಣ ವಲಯ ಆಯುಕ್ತರು ಯಾರು? ಎಂಬ ಪ್ರಶ್ನೆಗೆ ಸದಸ್ಯರು ಮತ್ತು ಅಧಿಕಾರಿಗಳಿಂದ ವಿಭಿನ್ನ ಉತ್ತರಗಳು ಬಂದವು. ಒಬ್ಬರು ಸುನೀಲ್ ಇದ್ದಾರೆ ಎಂದರೆ, ಮತ್ತೊಬ್ಬರು ಬದಲಿ ಆಗಿದ್ದಾರೆ ಎಂದರು. ಹೊಸ ಅಧಿಕಾರಿಗಳು ಚಾರ್ಜ್ ಸ್ವೀಕರಿಸಿದ್ದಾರೆಯೇ ಎಂಬ ಗೊಂದಲವೂ ವ್ಯಕ್ತವಾಯಿತು.

ಈ ಸಂದರ್ಭದಲ್ಲಿ ದಕ್ಷಿಣ ವಲಯದ ಸಹಾಯಕ ಕಂದಾಯ ಅಧಿಕಾರಿ ಮೇತ್ರಿ ಮಾತನಾಡಿ, ಇನ್ನೂ ಅಲ್ಲಿ ಜೆಡಿಸಿ ಆಗಿ ಸುನೀಲೇ ಇದ್ದಾರೆ. ಹೊಸ ಆದೇಶದ ಬಗ್ಗೆ ನನಗೆ ಮಾಹಿತಿ ಇಲ್ಲ. ಅವರು ರಿಲೀವ್ ಆಗಿದ್ದಾರೆಯೇ, ಹೊಸಬರು ಬಂದಿದ್ದಾರೆಯೇ ಎಂಬುದೂ ಗೊತ್ತಿಲ್ಲಎಂದು ಹೇಳಿದ ಮೇಲೆ, ಸಭಾಂಗಣದಲ್ಲಿ ಕೆಲ ಹೊತ್ತು ಗೊಂದಲದ ವಾತಾವರಣ ನಿರ್ಮಾಣ ಗೊಂಡಿತ್ತು.

ಈ ವೇಳೆ ಮಹಾನಗರ ಪಾಲಿಕೆಯಲ್ಲಿ ನಡೆದ ಸ್ಥಾಯಿ ಸಮಿತಿ ಸಭೆಯಲ್ಲಿ ಮಹಾಪೌರ, ಉಪ ಮಾಹಾಪೌರ ಪಾಲಿಕೆಯ ಆಯುಕ್ತರು, ಉಪ ಆಯುಕ್ತರು, ಕಾರ್ಪೋರೇಟರ್ ಗಳು ಸೇರಿದಂತೆ ಹಲವರು ಇದ್ದರು.

ಮದ್ಯದ ಅಂಗಡಿ ಸ್ಥಳಾಂತರಕ್ಕೆ ಡಿಸಿಗೆ ಆಗ್ರಹ

ಬೆಳಗಾವಿ : ಜಿಲ್ಲೆಯ ಸವದತ್ತಿ ತಾಲೂಕಿನ ಅಸುಂಡಿ ಗ್ರಾಮದಲ್ಲಿರುವ ಮದ್ಯದ ಅಂಗಡಿ ಸ್ಥಳಾಂತರ ಮಾಡುವಂತೆ ಆಗ್ರಹಿಸಿ ಗ್ರಾಮಸ್ಥರು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರಿಗೆ ಹಾಗೂ ಅಬಕಾರಿ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಮಂಗಳವಾರ ಹಿರಿಯ ನ್ಯಾಯವಾದಿಗಳಾದ ಜಿ.ಆರ್.ಸೋನೇರ್ ಅವರ ನೇತೃತ್ವದಲ್ಲಿ, ಅಸುಂಡಿ ಗ್ರಾಮಸ್ಥರೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಮಧ್ಯದ ಅಂಗಡಿ ಸ್ಥಳಾಂತ ಮಾಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ಬಳಿಕ ಜಿಲ್ಲಾಧಿಕಾರಿಗಳ ಮತ್ತು ಅಬಕಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಅಸುಂಡಿ ಹಾಗೂ ಕರಕಟ್ಟಿ ಸುತ್ತಮುತ್ತಲಿನ ಗ್ರಾಮಗಳಿಂದ ಪ್ರತಿನಿತ್ಯ ಸಾಕಷ್ಟು ಜನ ಇಲ್ಲಿಗೆ ಮಧ್ಯ ಸೇವನೆ ಮಾಡುವುದಕ್ಕೆ ಆಗಮಿಸುತ್ತಿದ್ದು, ಎಂಎಸ್ ಐಎಲ್ ಮದ್ಯದ ಅಂಗಡಿಯು ರಸ್ತೆಯ ಮಂಧ್ಯದಲ್ಲಿ ಇರುವುದರಿಂದ ಇಲ್ಲಿ ಸ್ಥಳೀಯ ಸಾರ್ಜಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತಿದೆ.

ಈ ಮದ್ಯದ ಮಳಿಗೆಯಿಂದಾಗಿ ಸ್ಥಳೀಯ ಸಾರ್ವಜನಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಪ್ರತಿನಿತ್ಯ ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಈ ಮಳಿಗೆಯ ಪಕ್ಕದಲ್ಲೇ ಶ್ರೀ ಸದ್ಗುರು ಆತ್ಮಾನಂದ ಆಶ್ರಮ ಹಾಗೂ

ಶ್ರೀ ಸಿದ್ದಲಿಂಗೇಶ್ವರ ದೇವಸ್ಥಾನಗಳಿದ್ದು, ಭಕ್ತರ ಮತ್ತು ನಾಗರಿಕರ ನಿತ್ಯವೂ ತೊಂದರೆಯನ್ನು ಅನುಭವಿಸುತ್ತಿದ್ದಾರೆ ಎಂದು ಪ್ರತಿಭಟನೆಯಲ್ಲಿ ಆರೋಪಿಸಿದರು.

ಮದ್ಯದ ಅಮಲಿನಲ್ಲಿರುವ ಕೆಲ ಕಿಡಿ ಗೇಡಿಗಳು ಈ ರಸ್ತೆಯಲ್ಲಿ ಸಂಚರಿಸುವ ವಿದ್ಯಾರ್ಥಿನಿಯರಿಗೆ ಹಾಗೂ ಮಹಿಳೆಯರಿಗೆ ಅಪಹಾಸ್ಯ ಮಾಡುವುದು ಮತ್ತು ಕಿರುಕುಳ ನೀಡುವುದು ನಿರಂತರವಾಗಿ ನಡೆಯುತ್ತಿದೆ. ಇದರಿಂದಾಗಿ ಗ್ರಾಮದ ಸಾರ್ವಜನಿಕ ನೆಮ್ಮದಿ ಸಂಪೂರ್ಣ ಹಾಳಾಗಿದೆ.

ಮಳಿಗೆಯನ್ನು ಕೂಡಲೇ ಬೇರೆಡೆಗೆ ಸ್ಥಳಾಂತರಿಸಬೇಕೆಂದು ಅಸುಂಡಿ ಗ್ರಾಮದ ಜಿಲ್ಲಾಧಿಕಾರಿಗಳಿಗೆ ಹಾಗೂ ಅಬಕಾರಿ ಇಲಾಖೆಗೆ ಮನವಿ ಮಾಡಿಕೊಂಡರು.

ಈ ವೇಳೆ ಗಂಗಪ್ಪ ಜ್ಞಾನಪ್ಪ ಈನಾಮತಿ, ನ್ಯಾಯವಾದಿ ಜಿ ಆರ್ ಸೋನೇರ್ ಸೇರಿದಂತೆ ಅಸುಂಡಿ ಹಾಗೂ ಕರಕಟ್ಟಿ ಗ್ರಾಮಸ್ಥರು ಇದ್ದರು.




ಆರ್.ಬಿ.ತಿಮ್ಮಾಪುರವರಿಗೆ ಸಚಿವ ಸ್ಥಾನ ನೀಡಿ

ಅಥಣಿ: ಉತ್ತರ ಕರ್ನಾಟಕದ ಹಿರಿಯ ರಾಜಕಾರಣಿ, ದಲಿತ ಸಮುದಾಯದ ನಾಯಕ ಆರ್.ಬಿ. ತಿಮ್ಮಾಪುರ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕೆಪಿಸಿಸಿ ಪರಿಶಿಷ್ಟ ಜಾತಿ ರಾಜ್ಯ ಮಾಧ್ಯಮ ವಕ್ತಾರ ರಾವಸಾಬ ಐಹೊಳೆ ಹಾಗೂ ತಾಲೂಕು ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಮುಖಂಡರು , ಸಿಎಂ ಡಿ. ಕೆ ಶಿವಕುಮಾರ ಹಾಗೂ ಪಕ್ಷದ ವರಿಷ್ಠರಿಗೆ ಒತ್ತಾಯ ಮಾಡಿದರು.

ಅವರು ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ,ಆರ್. ಬಿ. ತಿಮ್ಮಾಪುರ ಅವರು ಉತ್ತರ ಕರ್ನಾಟಕದ ಹಿರಿಯ ಶಾಸಕರಾಗಿ ಅನೇಕ ಬಾರಿ ಸಚಿವರಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ. ಇದಲ್ಲದೆ ಇತ್ತೀಚಿಗೆ ಬಾಗಲಕೋಟೆಯ ಉಪಚುನಾವಣೆಯಲ್ಲಿ ಉಮೇಶ್ ಮೇಟಿ ಅವರ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ತಿಮ್ಮಾಪುರ ಅವರು ತಮ್ಮ ರಾಜಕೀಯ ಬದುಕಿನುದ್ದಕ್ಕೂ ಕಾಂಗ್ರೆಸ್‌ನ ತತ್ವ ಸಿದ್ಧಾಂತಗಳನ್ನು ಅನುಸರಿಸಿಕೊಂಡು ಬಂದಿದ್ದಾರೆ. ಪಕ್ಷ ಸಂಘಟನೆಗೆ ನಿರಂತರ ಶ್ರಮಿಸಿದ್ದಾರೆ. ಪಕ್ಷ ಇವರ ಶ್ರಮವನ್ನು ಪರಿಗಣಿಸಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ನೇತೃತ್ವದ ಸರ್ಕಾರದಲ್ಲಿ ಪ್ರಮುಖ ಖಾತೆಯ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಬೆಳಗಾವಿ ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕಿನ ನಿರ್ದೇಶಕಿ ಹಾಗೂ ಎಐಸಿಸಿ ಸಂಯೋಜಕಿ ಸುನಿತಾ ಐಹೊಳೆ ಮಾತನಾಡಿ, ಉತ್ತರ ಕರ್ನಾಟಕದ ದಲಿತ ಸಮುದಾಯದ ಹಿರಿಯ ನಾಯಕರಾಗಿರುವ ಆರ್. ಬಿ. ತಿಮ್ಮಾಪುರ ಅವರಿಗೂ ಕೂಡಾ ಮುಂದಿನ ಮಂತ್ರಿಮಂಡಲದಲ್ಲಿ ಅವಕಾಶ ನೀಡಬೇಕು. ಅವರು ಹಿಂದಿನ ಸರ್ಕಾರದಲ್ಲಿ ನಾಲ್ಕೈದು ಬಾರಿ ಸಚಿವರಾಗಿ ರಾಜ್ಯದಲ್ಲಿ ಅನೇಕ ಅಭಿವೃದ್ಧಿ ಕೊಡುಗೆಗಳನ್ನು ನೀಡಿದ್ದಾರೆ. ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಹಾಗೂ ರಾಜ್ಯ ಮತ್ತು ಕೇಂದ್ರ ವರಿಷ್ಠರು ಆರ್ ಬಿ ತಿಮ್ಮಾಪೂರ ಅವರಿಗೆ ಮಂತ್ರಿ ಸ್ಥಾನವನ್ನು ನೀಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಅಥಣಿ ತಾಲೂಕ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಅಧ್ಯಕ್ಷ ಹನುಮಂತ ಅದಾರ್ಯೂರ, ಸಮಾಜದ ಮುಖಂಡರಾದ ಕುಮಾರ ಗಸ್ತಿ, ಸಂತೋಷ್ ಹಾದಿಮನಿ, ಸದಾಶಿವ ದೊಡ್ಡಮನಿ, ಸುದೀಪ್ ಐಹೊಳೆ,ಸತೀಶ್ ಕುಲ್ಲೊಳ್ಳಿ, ಪ್ರಶಾಂತ್ ಆಚಾರಟ್ಟಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಕೆಎಂಎಫ್‌ನಿಂದ ಗುಣಮಟ್ಟಕ್ಕೆ ಒತ್ತು: ವಿರೂಪಾಕ್ಷಿ

ಚಿಕ್ಕೋಡಿ: ಗುಣಮಟ್ಟದ ಹಾಲು ಉತ್ಪಾದನೆಯಿಂದಾಗಿಯೇ ನಂದಿನಿ ಉತ್ಪನ್ನಗಳಿಗೆ ದೇಶಾದ್ಯಂತ ಬೇಡಿಕೆ ಹೆಚ್ಚುತ್ತಿದೆ. ಹೀಗಾಗಿಯೇ ದೇಶದಲ್ಲಿ ಕರ್ನಾಟಕದ ಕೆಎಂಎಫ್ ಹಾಲು ಒಕ್ಕೂಟದ ನಂದಿನಿ ಉತ್ಪನ್ನಗಳ ಮಾರಾಟದಲ್ಲಿ 4ನೇ ಸ್ಥಾನದಲ್ಲಿದೆ ಎಂದು ಬೆಳಗಾವಿ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ನಿರ್ದೇಶಕ ವಿರೂಪಾಕ್ಷಿ ಈಟಿ ಹೆಮ್ಮೆ ಪಟ್ಟರು.



ಪಟ್ಟಣದ ತಾಲೂಕು ಪಂಚಾಯತಿ ಕಚೇರಿಯ ಸಭಾಭವನದಲ್ಲಿ ಬೆಳಗಾವಿ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ (ಕೆಎಂಎಫ್) ವತಿಯಿಂದ ಮಂಗಳವಾರ ಹಮ್ಮಿಕೊಂಡ ಚಿಕ್ಕೋಡಿ ತಾಲೂಕು ಹಾಲು ಉತ್ಪಾದಕರ ಸಂಘದ ಸಭೆಯಲ್ಲಿ ಮಾತನಾಡಿ, ಕೆ.ಎಂ.ಎಫ್ ಹಾಲು ಒಕ್ಕೂಟ ಗುಣಮಟ್ಟದ ಹಾಲನ್ನು ಸಂಗ್ರಹಿಸಬೇಕು. ಕಲಬೆರಕೆಯ ಹಾಲನ್ನು ತಡೆಯಬೇಕು. ತಾಲೂಕು ವ್ಯಾಪ್ತಿಯಲ್ಲಿ ಹೊಸ ಸಂಘಗಳನ್ನು ಶೀಘ್ರದಲ್ಲಿಯೇ ಸ್ಥಾಪಿಸಲಾಗುವುದು. ಪಟ್ಟಣದಲ್ಲಿ 6 ನಂದಿನಿ ಪಾರ್ಲರ್ ಗಳನ್ನು ತೆರೆಯಲಾಗುವುದು ಎಂದು ಹೇಳಿದರು.

ಬೆಳಗಾವಿ ಹಾಲು ಉತ್ಪಾದಕರ ಒಕ್ಕೂಟದ (ಕೆಎಂಎಫ್) ವ್ಯವಸ್ಥಾಪಕ ನಿರ್ದೇಶಕ ಶ್ರೀಕಾಂತ ಮಾತನಾಡಿ, ಗ್ರಾಹಕರ ಆರೋಗ್ಯ ದೃಷ್ಟಿಯಿಂದ ಗುಣಮಟ್ಟದ ಹಾಗೂ ಉತ್ತಮವಾದ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ನೀಡುವುದು ಒಕ್ಕೂಟದ ಉದ್ದೇಶವಾಗಿದೆ. ರೈತರಿಗೆ ಉತ್ತಮ ದರ ನೀಡುವುದು ಗುರಿಯಾಗಿದೆ. ರೈತರು ಉತ್ತಮ ಹಾಲು ನೀಡಿದರೆ, ಹೆಚ್ಚಿನ ದರ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದುಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕೆಎಂಎಫ್‌ನ ಪಿ ಆ್ಯಂಡ್ ಐ ವಿಭಾಗದ ಮುಖ್ಯಸ್ಥ ರಾಕೇಶ, ಉಪ ವ್ಯವಸ್ಥಾಪಕ ಆರ್ ಬಿ ಜಂಬಗಿ ಸೇರಿದಂತೆ ಚಿಕ್ಕೋಡಿ ತಾಲ್ಲೂಕು ಹಾಲು ಉತ್ಪಾದಕರ ಸಂಘಗಳ ಅಧ್ಯಕ್ಷರು, ಕಾರ್ಯನಿರ್ವಹಣಾಧಿಕಾರಿಗಳು ಇದ್ದರು.

ಸಮರ್ಪಕ ಮಾಹಿತಿ ನೀಡಿ

ನೇಸರಗಿ: ಪ್ರಸಕ್ತವಾಗಿ ರಾಜ್ಯಾದ್ಯಂತ ಮತದಾರ ಪಟ್ಟಿ ಪರಿಸ್ಕರಣೆ (ಎಸ್‌ಐಆರ್) ಆರಂಭ ಆಗಲಿದ್ದು, ಸತ್ತವರ ಹೆಸರು ತಗೆಸಿ ಅಗತ್ಯ ಧಾಖಲೆ ಅಧಿಕಾರಿಗಳಿಗೆ ನೀಡಿ, ತಮ್ಮ ಮತದಾನ ಗುರುತಿನ ಪತ್ರವನ್ನು ನವಿಕರಣಗೊಳಿಸಬೇಕು, ಇದಕ್ಕೆ ಬೂತ್ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರು ಜನರಿಗೆ ಇದರ ಬಗ್ಗೆ ಅರಿವು ಮೂಡಿಸಬೇಕೆಂದು ಚನ್ನಮ್ಮನ ಕಿತ್ತೂರು ಶಾಸಕರಾದ ಬಾಬಾಸಾಹೇಬ ಪಾಟೀಲ ಹೇಳಿದರು.

ಅವರು ಮಂಗಳವಾರದಂದು ಮಲ್ಲಾಪೂರ ಕೆ ಎನ್ - ನೇಸರಗಿ ಗ್ರಾಮದ ಶ್ರೀ ಗಾಳೇಶ್ವರ ಮಠದಲ್ಲಿ ಆಯೋಜಿಸಲಾಗಿದ್ದ ಮತದಾನ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಬೂತ್ ಮಟ್ಟದ ಕಾರ್ಯಕರ್ತರ ಮಾಡುವ ಕೆಲಸದ ಕುರಿತು ನೇಸರಗಿ ಭಾಗದ ಸಮಾವೇಶದಲ್ಲಿ ಮಾತನಾಡಿದರು.

ಸಂದರ್ಭದಲ್ಲಿ ಮಾಜಿ ಜಿ ಪಂ ಸದಸ್ಯ ನಿಂಗಪ್ಪ ಅರಿಕೇರಿ, ಶಿವನಗೌಡ ಪಾಟೀಲ,ಜಗದೀಶ ಪಾಟೀಲ, ಶಿವಾನಂದ ಕುಂಕುರ, ಬಸವರಾಜ್ ಚಿಕ್ಕನಗೌಡ್ರ, ಕಾಶಿಮ್ ಜಮಾದಾರ, ಸುರೇಶ ಅಗಸಿಮನಿ, ಸಂತೋಷ ಉಳವಿ, ಪ್ರಕಾಶ ಮುಂಗರವಾಡಿ,ಅಜ್ಜಪ್ಪ ಸತ್ತೇನ್ನವರ ಸೇರಿದಂತೆ ನೇಸರಗಿ ಭಾಗದ ಕಾಂಗ್ರೆಸ್ ಕಾರ್ಯಕರ್ತರು, ತಹಶೀಲ್ದಾರ ಕಚೇರಿ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.



ಅರ್ಥಪೂರ್ಣ ಯೋಗ ದಿನ ಆಚರಣೆಗೆ ನಿರ್ಧಾರ

ಅಥಣಿ: ಪ್ರತಿಯೊಬ್ಬ ವ್ಯಕ್ತಿಯು ಉತ್ತಮ ಆರೋಗ್ಯ ಹೊಂದಲಿ ಎಂಬ ಉದ್ದೇಶದಿಂದ ಅಥಣಿ ಪಟ್ಟಣದಲ್ಲಿ ಜೂನ್ 21ರಂದು ವಿಶ್ವ ಯೋಗ ದಿನವನ್ನು ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ಅಥಣಿಯಲ್ಲಿ ಜೂನ್ 21 ರಂದು ನಡೆಯಲಿರುವ ಅಂತರಾಷ್ಟ್ರೀಯ ವಿಶ್ವ ಯೋಗ ದಿನಾಚರಣೆ'ಯ ಹಿನ್ನೆಲೆಯಲ್ಲಿ ಶಾಸಕ ಲಕ್ಷ್ಮಣ ಸವದಿಯವರ ನೇತೃತ್ವದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ತಾಲೂಕು ಆಡಳಿತ ಹಾಗೂ ಅಥಣಿ ಪತಂಜಲಿ ಯೋಗ ಸಮಿತಿಯ ಸಹಯೋಗದೊಂದಿಗೆ ಯೋಗ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳುವ ಕುರಿತು ವಿಶೇಷ ಪೂರ್ವಭಾವಿ ಸಭೆಯು ಪ್ರವಾಸಿ ಮಂದಿರದಲ್ಲಿ ಜರುಗಿತು. ಅಥಣಿಯಲ್ಲಿ ಅರ್ಥಪೂರ್ಣ ಹಾಗೂ ವೈಭವಯುತವಾಗಿ ಪ್ರತಿಯೊಬ್ಬರ ಸಹಯೋಗದೊಂದಿಗೆ ಆಚರಿಸಲು ನಿರ್ಧರಿಸಲಾಯಿತು.

ಪತಂಜಲಿ ಯೋಗ ಸಮಿತಿಯ ತಾಲೂಕು ಪ್ರಭಾರಿ ಎಸ್ ಕೆ ಹೊಳೆಪ್ಪನವರ ಮಾತನಾಡಿದರು.ಸುರೇಶ ಚಿಕ್ಕಟ್ಟಿ ಸ್ವಾಗತಿಸಿದರು. ತಾಲೂಕು ಪ್ರಭಾರಿ ಎಸ್.ಕೆ. ಹೊಳೆಪ್ಪನವರ ಪ್ರಾಸ್ತವಿಕವಾಗಿ ಮಾತನಾಡಿದರು. ರಾಜ್ಯ ಕಿಸಾನ್ ಸೇವಾ ಪ್ರಭಾರಿ ಸಂಜಯ ಕುಸ್ತಿಗಾರ, ಜಿಲ್ಲಾ ಕಿಸಾನ್ ಪ್ರಭಾರಿ ಶಿವಾನಂದ ಬುರ್ಲಿ,ನಾಗೇಂದ್ರ ಭಟ್, ಶಂಕರ ಮಟ್ಟೆಪ್ಪನವರ, ಕಾರ್ಯಕ್ರಮದ ಕುರಿತ ವಿಚಾರಗಳನ್ನು ಹಂಚಿಕೊಂಡರು.



ಪ್ರಮುಖ ನಿರ್ಣಯಗಳು

ವ್ಯಾಪಕ ಪ್ರಚಾರ: ಯೋಗ ದಿನಾಚರಣೆಯ ಬಗ್ಗೆ ಯುವಜನತೆ, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಸಂಘ ಸಂಸ್ಥೆಗಳು,ತಾಲೂಕು ಪತ್ರಕರ್ತರ ಸಂಘ, ಶಿಕ್ಷಣ, ಕಂದಾಯ, ಪೊಲೀಸ್, ಸೇರಿದಂತೆ ತಾಲೂಕ ಆಡಳಿತದ ಎಲ್ಲ ಇಲಾಖೆಗಳು ಸಹಭಾಗಿತ್ವ ಜೊತೆಗೆ ಬ್ಯಾಂಕುಗಳು, ಸಾಹಿತಿಗಳು, ಕನ್ನಡಪರ ಸಂಘಟನೆಗಳು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹೆಚ್ಚಿನ ಒತ್ತು ನೀಡಲಾಗುವುದು.

ಸಭೆಯಲ್ಲಿ ರಾಜ್ಯ ಕಿಸಾನ್ ಸೇವಾ ಪ್ರಭಾರಿ ಸಂಜಯ ಕುಸ್ತಿಗಾರ, ಜಿಲ್ಲಾ ಕಿಸಾನ್ ಪ್ರಭಾರಿ ಶಿವಾನಂದ ಬುರ್ಲಿ,ಜಿಲ್ಲಾ ಮಹಿಳಾ ಪ್ರಭಾರಿ ಸುರೇಖಾ ತಾಂಬಟ,ನಾಗೇಂದ್ರ ಭಟ್, ಯೋಗ ಗುರುಗಳಾದ ಎ.ಬಿ. ಪಾಟೀಲ್, ತಾಲೂಕು ಪ್ರಭಾರಿ ಎಸ್.ಕೆ. ಹೊಳೆಪ್ಪನವರ, ಯುವ ಪ್ರಭಾರಿ ಶ್ರೀಶೈಲ ಪಾಟೀಲ್, ಡಾ. ವಿನಾಯಕ ಚಿಂಚೋಳಿಮಠ,ಮುಖಂಡರಾದ ಎಸ್. ಎಸ್. ಗೊರಜನಾಳ, ಡಾ. ಆರ್ ಎಸ್ ದೊಡ್ಡನಿಂಗಪ್ಪ ಗೋಳ,ವಿಕಾಸ ತಾಂಬಟ ಸೇರಿದಂತೆ ಅನೇಕ ಮುಖಂಡರು ಮತ್ತು ಪತಂಜಲಿ ಯೋಗಸಮಿತಿಯ ಪದಾಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು.

ಪಿಯುಸಿ ಶಿಕ್ಷಣ ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟ

ಚಿಕ್ಕೋಡಿ: ಪಿಯುಸಿ ಶಿಕ್ಷಣ ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವಾಗಿದೆ. ಈ ಹಂತದಲ್ಲಿ ಮಕ್ಕಳು ಯಾರೊಂದಿಗೆ ಸ್ನೇಹ ಮಾಡುತ್ತಾರೆ ಎಂಬ ಕುರಿತು ಪಾಲಕರು ಗಮನ ಹರಿಸಬೇಕು ಎಂಬ ಕಿವಿಮಾತನ್ನು ಕೆಎಲ್‌ಇ ಸಂಸ್ಥೆಯ ನಿರ್ದೇಶಕ, ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಹೇಳಿದರು.

ಪಟ್ಟಣದ ಕೆಎಲ್‌ಇ ಸಂಸ್ಥೆಯ ಸ್ವತಂತ್ರ ಪಿಯು ವಿಜ್ಞಾನ ಮಹಾವಿದ್ಯಾಲಯದ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 2026-27ನೇ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಾ, ಪಾಲಕರು ಮಕ್ಕಳ ಮೇಲೆ ಅನಗತ್ಯ ನಿರೀಕ್ಷೆಗಳ ಭಾರವನ್ನು ಹೇರಬಾರದು. ಮಕ್ಕಳ ವಿದ್ಯಾಭ್ಯಾಸದ ಕುರಿತು ಗಮನ ಹರಿಸಬೇಕು. ಪಿಯುಸಿ ಹಂತದವರೆಗೆ ಮಕ್ಕಳ ಕೈಗೆ ಮೊಬೈಲ್, ಬೈಕ್ ನೀಡುವುದು ಸರಿಯಾರ ಕ್ರಮವಲ್ಲ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಪ್ರೋ.ಸಿ.ಎಂ ತ್ಯಾಗರಾಜ ಮಾತನಾಡಿ, ಪೋಷಕರು ಮನೆಯಲ್ಲಿ ಮಕ್ಕಳಿಗೆ ಶಿಕ್ಷಣದ ಬಗ್ಗೆ ಶ್ರದ್ಧೆ ಮೂಡಿಸಬೇಕು. ಮಕ್ಕಳ ಹಟಗಳನ್ನು ಪೂರೈಸುವ ಬದಲು ಉತ್ತಮ ಜ್ಞಾನವನ್ನು ಪೋಷಕರು ನೀಡಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಗುಣಮಟ್ಟ ಹಾಗೂ ಸಾಮರ್ಥ್ಯವಿದ್ದರೆ ಯಶಸ್ವಿಯಾಗಲು ಸಾಧ್ಯವಿದೆ ಎಂದು ಹೇಳಿದರು.



ಮಹಾಂತೇಶ ಕವಟಗಿಮಠ ಅಭಿಮತ

ಕಾರ್ಯಕ್ರಮದಲ್ಲಿ ಜೆಇಇ, ನೀಟ್ ಪರೀಕ್ಷೆಗಳಲ್ಲಿ ಹಾಗೂ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಕೆಎಲ್‌ಇ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ದರ್ಶನ ಬಿಳ್ಳೂರ, ಪಿಯು ಕಾಲೇಜಿನ ಪ್ರಾಚಾರ್ಯ ಪಿ ವೆಂಕಟರೆಡ್ಡಿ, ಪಿ. ಮಲ್ಲಿಕಾರ್ಜುನ, ವಿನೋದ ಸಾವಂತ್ರೆ, ಸಚಿನ ಮೆಕ್ಕಳಕಿ, ಶಿವಾನಂದ ಉನ್ನಾಳೆ, ಗಂಗಾ ಅರಬಾಂವಿ, ರೇಖಾ ಮೇತ್ರಿ, ಮಹೇಶ ಸನ್ನಿಯರ ಇದ್ದರು.


ಕಿರುಸುದ್ದಿ

ವಿನೋದ ಬಾರಿಗಿಡದಗೆ ಸನ್ಮಾನ

◆ **ಇಳಕಲ್:** ಪ್ರತಿಷ್ಠಿತ ಹಣಕಾಸು ಸಂಸ್ಥೆಯಾದ ಇಳಕಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ನ ನಿರ್ದೇಶಕರಾಗಿದ್ದ ಎಂ.ಎಸ್.ಪಾಟೀಲ ಅವರ ನಿಧನದಿಂದ ತೆರವಾದ ಜಾಗಗೆ ತುಂಬಲು ಬ್ಯಾಂಕಿನ ಅಧ್ಯಕ್ಷರಾದ ಮಂಜುನಾಥ ಶೆಟ್ಟರ ಅವರ ಅಧ್ಯಕ್ಷತೆಯಲ್ಲಿ ನಡೆದ ಆಡಳಿತ ಮಂಡಳಿಯ ವಿಶೇಷ ಸಭೆಯಲ್ಲಿ ಆಡಳಿತ ಮಂಡಳಿಯು ಸರ್ವಾನುಮತದಿಂದ ವಿಜಯಕುಮಾರ ಪಾಟೀಲರನ್ನು ಆಯ್ಕೆ ಮಾಡಲಾಗಿದೆ ಎಂದು ಕೋ-ಆಪರೇಟಿವ್ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ನಾಗರಾಜ ಕುಟಕಮರಿ ಅವರು ತಿಳಿಸಿದ್ದಾರೆ. ಇಳಕಲ್ ಕೋ ಆಪರೇಟಿವ್ ಬ್ಯಾಂಕಿನ ನೂತನ ನಿರ್ದೇಶಕರಾಗಿ ಆಯ್ಕೆಯಾದ ವಿಜಯಕುಮಾರ ಪಾಟೀಲ ಅವರನ್ನು ಚಂದನ ಪ್ರತಿಷ್ಠಾನ ಹಾಗೂ ವೀರರಾಣಿ ಕಿತ್ತೂರು ಚೆನ್ನಮ್ಮ ಬಳಗದ ಅಧ್ಯಕ್ಷರಾದ ವಿನೋದ ಬಾರಿಗಿಡದ ಮತ್ತು ಪ್ರತಿಷ್ಠಾನದ ಸರ್ವ ಸದಸ್ಯರು ನೂತನ ನಿರ್ದೇಶಕರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿ ಗೌರವಿಸಿ ಸತ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ಚಂದನ ಪ್ರತಿಷ್ಠಾನದ ಕಾರ್ಯದರ್ಶಿ ಅನಿಲ ತುಂಬಗಿ, ಸುದ್ದಿ ದರ್ಪಣ ಸಂಪಾದಕರಾದ ಶರಣಪ್ಪ ನಂದೇಲಿ,ರವಿ ಪಾಟೀಲ, ಪೃಥ್ವಿ ಕವಡಿಮಟ್ಟಿ, ಮಲ್ಲಪ್ಪ ಗದ್ದಿ ಹಾಗೂ ಪತ್ರಕರ್ತರಾದ ಶರಣಪ್ಪ ಹದಲೂರು,ಮಹಾಂತೇಶ ಯಲಬುರ್ತಿ ಸೇರಿದಂತೆ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಪಟ್ಟಣಕ್ಕೆ ಪೇಜಾವರ ಶ್ರೀಗಳ ಆಗಮನ

◆ **ಕೆರೂರ:** ಪಟ್ಟಣದ ಕಿಲ್ಲಾ ಪೇಟೆಯಲ್ಲಿರುವ ರಾಘವೇಂದ್ರ ಮಠಕ್ಕೆ ಜೂ.10ರಂದು ಉಡಪಿ ಪೇಜಾವರ ಮಠದ ವಿಶ್ವಪ್ರಸನ್ನ ಸ್ವಾಮೀಜಿ ಆಗಮಿಸಲಿದ್ದಾರೆ. ಅಂದು ಸಂಜೆ 5ಕ್ಕೆ ಅಂಬೇಡ್ಕರ್ ವೃತ್ತದ ಬನ್ನಿ ಕಟ್ಟೆಯಿಂದ ಮೆರವಣಿಗೆ ಮೂಲಕ ನಗರೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ನಂತರ ಅದೇ ಮಾರ್ಗದಲ್ಲಿ ಕಿಲ್ಲಾ ಪೇಟೆ ರಾಘವೇಂದ್ರ ಮಠಕ್ಕೆ ಆಗಮಿಸುವವರು.



ಪ್ರಥಮ ಬಾರಿಗೆ ಪಟ್ಟಣಕ್ಕೆ ಆಗಮಿಸುತ್ತಿರುವ ಸ್ವಾಮೀಜಿಯವರನ್ನು ಸ್ವಾಗತಿಸಲು ಭಕ್ತರ ಪಡೆ ಸಜ್ಜಾಗಿ ನಿಂತಿದೆ. ಸಂಜೆ ರಾಘವೇಂದ್ರ ಮಠದಲ್ಲಿ ಶ್ರೀಗಳ ಪಾದಪೂಜೆ, ತೊಟ್ಟಿಲು ಸೇವೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ವಿಪ್ರ ಸಮಾಜದ ಅಧ್ಯಕ್ಷ ರಂಗಣ್ಣ ದೇಸಾಯಿ ಪ್ರಕಟಣೆ ತಿಳಿಸಿದ್ದಾರೆ.

ಸತ್ಯನಾರಾಯಣಗೆ ಅಂತಾರಾಷ್ಟ್ರೀಯ ಪ್ರಶಸ್ತಿ



◆ **ಬಾಗಲಕೋಟೆ:** ನಗರದ ಉದ್ಯಮಿ, ವಿಜಯಾ ಕಾಂಕ್ರೇಟ್ ವರ್ಕ್ಸ್ ಮಾಲೀಕ ಸತ್ಯನಾರಾಯಣ ಸೇಡಂಕರ್ ಅವರಿಗೆ ಉದ್ಯಮ ಕ್ಷೇತ್ರದಲ್ಲಿನ ಸಾಧನೆಯನ್ನು ಗಮನಿಸಿ ಗ್ಲೋಬಲ್ ರಿಸರ್ಚ್ ಆಂಡ್ ಫೌಂಡೇಶನ್ ಈಚೆಗೆ ಹುಬ್ಬಳ್ಳಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಂತಾರಾಷ್ಟ್ರೀಯ ಶ್ರೇಷ್ಠತಾ ಪ್ರಮಾಣಪತ್ರವನ್ನು ನೀಡಿ ಗೌರವಿಸಿದೆ. ಫೌಂಡೇಶನ್ ಅಧ್ಯಕ್ಷ ಶ್ರೀಧರ ದವಸಕರ್ ಅವರು ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.

ತಾಲೂಕಿನಾದ್ಯಂತ ಮಳೆ: ವಿದ್ಯುತ್ ಕಡಿತ

◆ **ಬೀಳಗಿ:** ತಾಲೂಕಿನಾದ್ಯಾಂತ ಮಂಗಳವಾರ ಸಂಜೆ ಮೃಗಶಿರ ಮಳೆ ಧರೆಗೆ ಸುರಿದು ತಂಪೆರೆಯಿತು. ರಭಸವಾಗಿ ಸುರಿದ ಮಳೆಯಿಂದ ಜಮೀನುಗಳ ಒಡ್ಡು, ಓರೆಗಳು ತುಂಬಿ ನಿಂತಿವೆ. ಬಿತ್ತನೆಗಾಗಿ ಭೂಮಿ ಹದಮಾಡಿಕೊಂಡಿರುವ ನೇಗಿಲಯೋಗಿಗಳು ಸಜ್ಜೆ, ಸೂರ್ಯಕಾಂತಿ, ಈರುಳ್ಳಿ, ಗೋವಿನಜೋಳ, ಹೆಸರು, ಉದ್ದು, ತೊಗರಿ ಸೇರಿದಂತೆ ಇನ್ನಿತರ ಬೆಳೆಗಳ ಬೀಜ ಬಿತ್ತನೆ ಮಾಡಲು ಅಣಿಯಾಗಿರುವರು. ಮಳೆ ಹೊರಪು ಕೊಟ್ಟರೆ ಮಾತ್ರ ಬಿತ್ತನೆಗೆ ಚಾಲನೆ ದೊರೆಯಲಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ರೋಹಿಣಿ ಮತ್ತು ಮೃಗಶಿರ ಮಳೆಗಳು ಸಾಯಂಕಾಲ ಆಗುತ್ತಿದ್ದಂತೆ ಸುರಿಯುತ್ತಿವೆ. ಅರಕೇರಿ, ಕಾತರಕಿ, ಜಾನಮಟ್ಟಿ ಸೇರಿದಂತೆ ತಾಲೂಕಿನಾದ್ಯಾಂತ ಸುರಿಯಿತು. ಮಳೆ ಮತ್ತು ಗಾಳಿ ಆರಂಭವಾಗುತ್ತಿದ್ದಂತೆ ವಿದ್ಯುತ್ ಸರಬರಾಜು ಕಡಿತಗೊಂಡಿತು. ಇದರ ಪರಿಣಾಮ ಸಂಜೆ ಅಡುಗೆ ತಯಾರಿಸಲು ಮಹಿಳೆಯರು ಸಾಕಷ್ಟು ತೊಂದರೆ ಅನುಭವಿಸಿದರು.



ಇಲಕಲ್: ವಿಜಯಕುಮಾರ ಪಾಟೀಲ ಅವರನ್ನು ಚಂದನ ಪ್ರತಿಷ್ಠಾನ ಹಾಗೂ ವೀರರಾಣಿ ಕಿತ್ತೂರು ಚೆನ್ನಮ್ಮ ಬಳಗದ ಅಧ್ಯಕ್ಷರಾದ ವಿನೋದ ಬಾರಿಗಿಡದ ಮತ್ತು ಪ್ರತಿಷ್ಠಾನದ ಸರ್ವ ಸದಸ್ಯರು ನೂತನ ನಿರ್ದೇಶಕರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿ ಗೌರವಿಸಿ ಸತ್ಕರಿಸಲಾಯಿತು.

ವಿದ್ಯುತ್ ಸಂಪರ್ಕ ಸರಿಪಡಿಸಲು ಆಗ್ರಹ

◆ **ಗುಳೇದಗುಡ್ಡ:** ಪಟ್ಟಣದ ಬಸವೇಶ್ವರ ನಗರದ ಬಡಾವಣೆಗೆ ಕಳೆದ 2 ತಿಂಗಳಿಂದ ಮನೆಗಳಿಗೆ, ರಸ್ತೆ ದೀಪದ ವಿದ್ಯುತ್ ಸಂಪರ್ಕ ಸರಿಯಾಗಿಲ್ಲ. ಸಾಕಷ್ಟು ಬಾರಿ ಹೆಸ್ಕಾಂ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗುತ್ತಿಲ್ಲ. ಆದಷ್ಟು ಬೇಗ ಸರಿಪಡಿಸಬೇಕೆಂದು ಬಡಾವಣೆ ನಿವಾಸಿಗಳು ಆಗ್ರಹಿಸಿದ್ದಾರೆ.

ಪಟ್ಟಣದಲ್ಲಿ ಕಳೆದ ಹತ್ತಾರು ವರ್ಷಗಳಲ್ಲಿ ಬಸವೇಶ್ವರ ನಗರದ ಬಡಾವಣೆ ಸಾಕಷ್ಟು ಬೆಳೆದಿದೆ. ಆದರೆ ವಿದ್ಯುತ್ ಸಂಪರ್ಕದ ಪೂರೈಕೆ ಮಾತ್ರ ಸರಿಯಾಗಿಲ್ಲ. ನಿತ್ಯ ಈ ಬಡಾವಣೆಗೆ ವಿದ್ಯುತ್ ಸರಿಯಾಗಿ ಪೂರೈಸದೇ ಮನಬಂದಂತೆ ಸಂಪರ್ಕ ಕಟ್ ಮಾಡುತ್ತಾರೆ. ಇದ್ದರಿಂದ ನಿವಾಸಿಗಳಿಗೆ ತೊಂದರೆ ಉಂಟಾಗುತ್ತಿದೆ. ಈ ಕುರಿತು ಪಟ್ಟಣದ ಹೆಸ್ಕಾಂ ಎಸ್‌ಒ ಶ್ರೀಧರ ಮಾಲಗತ್ತಿ ಅವರನ್ನು ಸಂಪರ್ಕಿಸಿದರೆ ಅವರಿಂದ ಸರಿಯಾದ ಮಾಹಿತಿ ಸಿಗುತ್ತಿಲ್ಲ. ಬಡಾವಣೆಯಲ್ಲಿ ಅಗತ್ಯಕ್ಕಿಂತ ಹೆಚ್ಚಿಗೆ ವಿದ್ಯುತ್ ಪೂರೈಕೆ ಮಾಡಬೇಕಿದೆ. ಹೆಚ್ಚಿನ ಕೆವಿ ಟಿಸಿ ಕೂಡಿಸಬೇಕು. ಅದು ಪೂರೈಕೆ ಇಲ್ಲ. ಮೇಲಾಧಿಕಾರಿಗಳು ತಕ್ಷಣ ವಿದ್ಯುತ್ ಸಂಪರ್ಕವನ್ನು ಸರಿಪಡಿಸಬೇಕು. ಇಲ್ಲದಿದ್ದರೆ ಹೆಸ್ಕಾಂ ಕಚೇರಿ ಮುಂದೆ ಸತ್ಯಾಗ್ರಹ ಕೈಗೊಳ್ಳುವುದಾಗಿ ಇಲ್ಲಿನ ನಿವಾಸಿಗಳಾದ ಡಾ.ಎಚ್.ಎಸ್.ಘಂಟಿ, ಶಂಕ್ರಪ್ಪ ಹುಲಮನಿ, ಡಾ.ಸಿ.ಎಂ.ಜೋಶಿ, ಮಹಾಂತೇಶ ಬಳಿಗೇರ, ಸಚೀನ ಸಕ್ರಿ, ಸುಭಾಸ ವಡವಡಗಿ, ಕಬ್ಬಲಗೇರಿ, ಬಸವರಾಜ ಕವಿಶೆಟ್ಟಿ, ಪಟೇಲ, ಆನಂದ ಸುರಪೂರ, ಚಂದ್ರು ಹೆಬ್ಬಳ್ಳಿ, ಸಿ.ಎಂ. ಹಳೆಪೇಟೆ ಸೇರಿದಂತೆ ಇನ್ನೂ ಹಲವು ನಿವಾಸಿಗಳು ಮೇಲಾಧಿಕಾರಿಗಳನ್ನು ಆಗ್ರಹಿಸಿದ್ದಾರೆ.



ಬಾದಾಮಿ: ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ, ಬೆಂಗಳೂರು ಇದರ ಉಪಾಧ್ಯಕ್ಷರ ಸ್ಥಾನಕ್ಕೆ ನಿರ್ದೇಶಕ, ಪಟ್ಟಣದ ಯುವಮುಖಂಡ ಹೊನ್ನಯ್ಯ ಹಿರೇಮಠ ಅವರು ನಾಮಪತ್ರ ಸಲ್ಲಿಸಿದರು.

ಕಲಾದಗಿಯ ವಿದ್ಯಾನಗರ ಮೂಲ ಸೌಕರ್ಯಗಳಿಂದ ವಂಚಿತ
ಪ್ರತ್ಯೇಕ ವಾರ್ಡ್ ರಚನೆಗೆ ಆಗ್ರಹ

▸ ನಿತೀಶ ಪಾಟೀಲ

◆ **ಕಲಾದಗಿ:** ಗ್ರಾಮದ ವಿದ್ಯಾನಗರ (ನವಗ್ರಾಮ) ದಲ್ಲಿ ನಡೆದಾಡಲು ಉತ್ತಮ ರಸ್ತೆ, ಚರಂಡಿ ವ್ಯವಸ್ಥೆ, ಕಸಕಡ್ಡಿಯಿಂದ ತುಂಬಿ ಕೊಳಕು ನಾರುತ್ತಿರುವ ಬಾವಿ, ರಾತ್ರಿ ಸೂಕ್ತ ಬೆಳಕಿನ ವ್ಯವಸ್ಥೆ ಸೇರಿದಂತೆ ಅನೇಕ ಮೂಲಭೂತ ಸೌಲಭ್ಯಗಳಿಲ್ಲದೇ ಅನಾಥವಾಗಿರುವ ಈ ನಿವಾಸಿಗಳ ಗೋಳು ಕೇಳಲು ದಿಕ್ಕು ದೆಸೆ ಇಲ್ಲದಂತಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ರಾಮದ ಬಹುಮುಖ್ಯ ಬಡಾವಣೆಯಾಗಿರುವ ವಿದ್ಯಾನಗರ (ನವಗ್ರಾಮ) ನಿರ್ಮಾಣವಾಗಿ 30 ವರ್ಷ ಕಳೆದರೂ ಉತ್ತಮ ಸೌಲಭ್ಯಗಳಿಲ್ಲದೇ ಸೊರಗುತ್ತಿರುವುದು ವಿಪರ್ಯಾಸ, ಅಂದಾಜು 150ಕ್ಕೂ ಹೆಚ್ಚು ಮನೆಗಳಿಂದ 600ಕ್ಕೂ ಹೆಚ್ಚು ಜನಸಂಖ್ಯೆಯಿರುವ ಬಡಾವಣೆ ಗ್ರಾಮದ ಮುಖ್ಯ ವಸತಿ ಪ್ರದೇಶವಾಗಿದ್ದರೂ ಆದರ ನಿರ್ಲಕ್ಷ ಮಾತ್ರ ಹೇಳತೀರದು.

ಈ ಬಗ್ಗೆ ನಾಲ್ಕೈದು ವರ್ಷಗಳಲ್ಲಿ ಹತ್ತಾರು ಬಾರಿ ಸ್ಥಳೀಯ ಗ್ರಾಪಂಗೆ ಮೂಲಭೂತ ಸೌಕರ್ಯ ಕಲ್ಪಿಸಲು ನಿವಾಸಿಗಳಿಂದ ಲಿಖಿತ ಮನವಿ, ಮೌಖಿಕ ಮನವಿಗಳನ್ನು ನೀಡಿದ್ದರೂ ಸಿಸಿ ರಸ್ತೆಯೂ ಇಲ್ಲ ಚರಂಡಿ ವ್ಯವಸ್ಥೆಯೂ ಇಲ್ಲ, ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗಗಳಿಗೆ ಆಹ್ವಾನಿಸುವ ತಾಣವಾಗಿ ಮಾರ್ಪಾಡಾಗಲಿದ್ದು, ಅಂಗನವಾಡಿ, ಸರ್ಕಾರಿ ಪ್ರಾಥಮಿಕ ಶಾಲೆ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಇಲ್ಲಿಯ ನಿವಾಸಿಗಳೇ ಆಗಿರುವುದರಿಂದ ಅನೇಕ ರೋಗಗಳಿಗೆ ತುತ್ತಾಗುವುದು ಸಾಮಾನ್ಯವಾದಂತಾಗಿದೆ ಈಬಗ್ಗೆ ಅನೇಕ ಬಾರಿ ಮಾಧ್ಯಮಗಳ ಮುಖಾಂತರ ಅಧಿಕಾರಿಗಳ ಗಮನ ಸೆಳೆಯುವಲ್ಲಿ ಯಶಸ್ವಿಯಾದರೂ ಸಹ ಕೇವಲ ಭರವಸೆಗಳಿಂದಲೇ ಸಮಾದಾನಪಡಿಸುವ ಮಾತುಗಳಾಗಿವೆ ಎಂದು ನಿವಾಸಿಗಳು ಅಧಿಕಾರಿಗಳ ವಿರುದ್ದ ಆಕ್ರೋಶ ಹೊರಹಾ ಕುತ್ತಿದ್ದಾರೆ.



> ನಾನು ಸ್ವತಃ ಸ್ಥಳಕ್ಕೆ ತೆರಳಿ ವಿದ್ಯಾನಗರ ನಿವಾಸಿಗಳ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೆನೆ ಶೀಘ್ರವೇ ಅವಶ್ಯವಿರುವ ಚರಂಡಿ ನಿರ್ಮಾಣಕ್ಕೆ ತಾಪಂನಿಂದ ಲಭ್ಯ ಅನುದಾನದಡಿ ಕಾಮಗಾರಿ ಪ್ರಾರಂಭಿಸುತ್ತೇವೆ.
>
> ■ **ಸುಭಾಸ ಸಂಪಗಾವಿ,** ಬಾಗಲಕೋಟೆ ತಾಪಂ ಇಒ

ಪ್ರತ್ಯೇಕ ವಾರ್ಡ ರಚಿಸಿ: ಗ್ರಾಮದ ವಿದ್ಯಾನಗರ ಬಡಾವಣೆಯಲ್ಲಿ ಎಲ್ಲ ವಾರ್ಡಿನ ಜನರು ವಾಸವಿದ್ದು 30ವರ್ಷಗಳ ಹಿಂದೆ ಆಗಿನ ಶಾಸಕ ಪಿ.ಎಚ್.ಪೂಜಾರ ಅವಧಿಯಲ್ಲಿ ಆಶ್ರಯ ಯೋಜನೆ ಮೂಲಕ ಬಡ ಜನರಿಗೆ ವಸತಿ ಕಲ್ಪಿಸಲು ನಿವೇಶನಗಳನ್ನು ನೀಡಲಾಗಿತ್ತು. ಬಡಾವಣೆಯ ಅಭಿವೃದ್ಧಿ ಕಾರ್ಯ ವಾಗಬೇಕಾದರೆ ಪ್ರತ್ಯೇಕ ವಾರ್ಡ್ ರಚಿಸಿದರೆ ಮಾತ್ರ ಸಮರ್ಪಕ ಅನುದಾನ ಲಭ್ಯದಿಂದ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಅವಕಾಶವಾಗಲಿದೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ.

> ಈ ಬಡಾವಣೆಯಲ್ಲಿರುವವರ ಬದುಕು ನರಕ ಸದೃಷವಾದಂತಾಗಿದೆ, ಮೂಲ ಸೌಕರ್ಯಕ್ಕಾಗಿ ಪಂಚಾಯತಿಗೆ ಮನವಿ ಕೊಟ್ಟು ಸಾಕಾಗಿದೆ. ಅನುದಾನ ಇಲ್ಲವೆಂಬ ನೆಪ ಹೇಳಿ ಅಧಿಕಾರಿಗಳು ಜಾರಿಕೊಳ್ಳುತ್ತಿದ್ದಾರೆ. ಕಾನೂನು ಬದ್ಧ ಎಲ್ಲ ಅವಕಾಶಗಳಿದ್ದು ನಮ್ಮ ಬಡಾವಣೆಯನ್ನು ಪ್ರತ್ಯೇಕ ವಾರ್ಡ್ ರಚನೆ ಮಾಡಿದರೆ ಸಮರ್ಪಕ ಅನುದಾನದಿಂದಾಗಿ ನಮ್ಮ ಸಮಸ್ಯೆಗಳು ಪರಿಹಾರವಾಗಲಿವೆ.
>
> ■ **ಬಸಪ್ಪ ವಜ್ಜರಮಟ್ಟಿ,** ಕಲಾದಗಿ ಬಡಾವಣೆ ನಿವಾಸಿ

ಕರ್ನಾಟಕ ಸರ್ಕಾರ ಪಂಚಾಯತಿ ರಾಜ್ಯ ಸೀಮಾ ನಿರ್ಣಯ ಆಯೋಗದ ವೆಬ್‌ಸೈಟ್‌ನಲ್ಲಿ ಪಂಚಾಯತಿ ಸದಸ್ಯರ ಸಂಖ್ಯೆ ನಿರ್ಣಯಕ್ಕೆ ಸಂಬಂಧಿಸಿದ ಆಕ್ಷೇಪಣೆ ಸಲ್ಲಿಸಲು ಸೂಚಿತವಾದ ದಿನಾಂಕದೊಳಗೆ ಬಡಾವಣೆ ನಾಲ್ಕೈದು ನಿವಾಸಿಗಳು ಆಕ್ಷೇಪಣೆ ಸಲ್ಲಿಸಿ ಆ ಪತ್ರವನ್ನು ಜಿಲ್ಲಾವಾರು ಕೊಟ್ಟಿದ್ದ ದಿನಾಂಕದನ್ವಯ ಬೆಂಗಳೂರಿನ ಕರ್ನಾಟಕ ಪಂಚಾಯತಿ ರಾಜ್ಯ ಸೀಮಾನಿರ್ಣಯ ಕಚೇರಿಗೆ ಹೋಗಿ ಲಿಖಿತ ರೂಪದಲ್ಲಿ ಅಗತ್ಯ ದಾಖಲೆಗಳ ಸಮೇತ ಆಕ್ಷೇಪಣೆ ಸಲ್ಲಿಸಿ ಬಂದರೂ ಇಲ್ಲಿ ಯವರೆಗೂ ಅಧಿಕಾರಿಗಳು ಇತ್ತಕಡೆ ಮುಖ ಮಾಡದಿ ರುವುದು ನಿವಾಸಿಗಳ ಆಕ್ರೋಶ ಕಾರಣವಾಗಿದೆ. ಶೀಘ್ರವೇ ಪರಿಹಾರ ಕಲ್ಪಿಸಬೇಕೆಂದು ಆಗ್ರಹಿಸುತ್ತಿದ್ದಾರೆ. ವಿದ್ಯಾನಗರ ಬಡಾವಣೆ ಒಂದು ಮುಖ್ಯ ರಸ್ತೆಯಲ್ಲಿ ಸಿಸಿ ರಸ್ತೆ ನಿರ್ಮಾಣವಾಗಿದ್ದು, ಶೀಘ್ರವೇ ಲಭ್ಯ ಅನುದಾನ ಬಳಸಿ ಇನ್ನುಳಿದ ಒಳಚರಂಡಿ ಹಾಗೂ ಮೂಲ ಭೂತ ಸೌಕರ್ಯ ಕಲ್ಪಿಸಲು ವ್ಯವಸ್ಥೆ ಮಾಡಲಾಗುವುದು ಎಂದು ಗ್ರಾಪಂ ಪಿಡಿಒ ಖಾದರ ಮುಲ್ಲಾ ಹೇಳಿದ್ದಾರೆ.

ನಿವೃತ್ತ ಶಿಕ್ಷಕರ ಅಭಿನಂದನಾ ಸಮಾರಂಭ

◆ **ಬೀಳಗಿ:** ತಾಲೂಕಿನ ಕಾತರಕಿ ಗ್ರಾಮದ ಪಿಎಂಶ್ರೀ ಸರ್ಕಾರಿ ಶಾಲೆ ಆವರಣದಲ್ಲಿ ಹಳೆ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಹಮ್ಮಿಕೊಂಡ ನಿವೃತ್ತ ಶಿಕ್ಷಕರಾದ ಎಂ.ಎಂ. ಜಮಾದಾರ, ಜಿ.ಆರ್.ಮದಕಟ್ಟಿ, ಎಸ್. ಕೆ. ಮಡಿಕೇಶ್ವರ ಅವರ ಅಭಿನಂದನಾ ಸಮಾರಂಭ ಅತ್ಯಂತ ಸಂಭ್ರಮದಿಂದ ಯಶಸ್ವಿಯಾಗಿ ಜರುಗಿತು.

ಜಾನಮಟ್ಟಿ ಸರ್ಕಾರಿ ಪ್ರೌಢ ಶಾಲೆಯ ನಿವೃತ್ತ ಶಿಕ್ಷಕ ಬಿ.ಆರ್.ಮದಕಟ್ಟಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಶಿಕ್ಷಕರು ತಪ್ಪನ್ನು ತಿದ್ದಿ ಹೇಳುವುದು ವಿದ್ಯಾರ್ಥಿಗಳ ಉನ್ನತಿಗೆ. ಅನ್ನ ನೀಡುವ ವೃತ್ತಿಯನ್ನು ಗೌರವಿಸಬೇಕು. ನಿಂದಿಸಿದವರ ನಾಲಿಗೆ ಮೇಲೆ ನಲಿದಾಡುವಂತೆ ಗೆಲ್ಲಬೇಕು. ತಂದೆ-ತಾಯಿಯನ್ನು ಗೌರವಿಸಬೇಕು ಎಂದರು.

ಅರಕೇರಿ ಕೆಜಿಎಸ್ ಶಾಲೆಯ ವಿಶ್ರಾಂತ ಮುಖ್ಯೋಪಾಧ್ಯಾಯ ಎಸ್. ಕೆ. ಮಡಿಕೇಶ್ವರ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಪತ್ತಿನ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷ ಡಿ. ಎಂ.ಸಾವಕಾರ ಮಾತನಾಡಿ, ಶಿಕ್ಷಕರು ವಿದ್ಯೆಯ ಜೊತೆಗೆ ವಿದ್ಯಾರ್ಥಿಗಳ ಬದುಕಿಗೆ ಬಣ್ಣ ತುಂಬುವ ಕೆಲಸವನ್ನು ಮಾಡುವರು. ದೇಶಕ್ಕೆ ಸೈನಿಕ,ಕೃಷಿಕ, ಶಿಕ್ಷಕರ ಕೊಡುಗೆ ಅಪಾರವಾಗಿದ್ದು, ಪ್ರತಿಯೊಬ್ಬರು ಈ ಮೂವರು ವ್ಯಕ್ತಿಗಳನ್ನು ಗೌರವಿಸಿದಾಗ ದೇಶ ವಿಶ್ವಗುರುವಾಗಲು ಸಾಧ್ಯವೆಂದು ಹೇಳಿದರು.

ಪ್ರಗತಿಪರ ರೈತ ವಿ.ಬಿ.ಮಾಚಪ್ಪನವರ, ವಿಶ್ರಾಂತ ಪ್ರಾಚಾರ್ಯ ಜಿ.ಆರ್.ಸುಳ್ಳದ ಮಾತನಾಡಿದರು.

ಮೌನೇಶ ಬಡಿಗೇರ, ಬಸವರಾಜ ಹಡಪದ, ಕೆ. ಎಂ. ಹಿರೇಮಠ ವಿಶ್ರಾಂತ ಶಿಕ್ಷಕರ ಪರಿಚಯ ಮಾಡಿದರು. ಈರಣ್ಣ ಹಿರೇಮಠ, ಸಿದ್ದು ಬಿರಾದಾರ, ಸಚಿನ ಕಾಡೇಶನವರ, ಪರಮಾನಂದ ಕೆರಕಲಮಟ್ಟಿ, ಸಿದ್ದು ಸುಳ್ಳದ ಅಕ್ಷರ ಕಲಿಸಿದ ಶಿಕ್ಷಕರ ಗುಣಗಾನ ಮಾಡಿದರು.

ಇದಕ್ಕೂ ಪೂರ್ವ ಮಾರುತೇಶ್ವರ ದೇವಾಲಯದಿಂದ ಡೊಳ್ಳು, ಆರತಿಯೊಂದಿಗೆ ಹಳೆಯ ವಿದ್ಯಾರ್ಥಿಗಳು, ಗ್ರಾಮದ ಗಣ್ಯರು ಮೂವರು ಶಿಕ್ಷಕರನ್ನು ಪೂರ್ಣಾರ್ಭನೆಗ್ಯೆಯುತ್ತ ವೇದಿಕೆ ಕರೆತಂದರು.

ಗ್ರಾಮದ ಮುಖಂಡ ಎಂ.ಎಸ್. ಕೌಜಲಗಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಗ್ರಾಪಂ ಮಾಜಿ ಅಧ್ಯಕ್ಷ ಸಂಗಪ್ಪ ಕೆರಕಲಮಟ್ಟಿ ಆಗಮಿಸಿದ್ದರು.

ನಕುಲ ಬೆಳ್ಳುಬ್ಬಿ ನಿರೂಪಿಸಿದರು. ನೀಲಪ್ಪ ಹೊಸಕೋಟಿ ಸ್ವಾಗತಿಸಿದರು. ಮಲ್ಲಿಕಾರ್ಜುನ ಕಾಳಪ್ಪಗೋಳ ವಂದಿಸಿದರು.



ಜಾನಪದ ಕಲಾವಿದರ ಒಕ್ಕೂಟ ಪ್ರತಿಭಟನೆ
ಮಾಸಾಶನ ಹೆಚ್ಚಿಸಲು ಒತ್ತಾಯ

◆ **ಬಾಗಲಕೋಟೆ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಹಾಯಕ ನಿರ್ದೇಶಕರನ್ನು ಖಾಯಂ ಆಗಿ ನೇಮಕ ಮಾಡಬೇಕು. ಕಲಾವಿದರ ಮಾಶಾಸನವನ್ನು ಹೆಚ್ಚಿಸಬೇಕು ಎಂದು ಒತ್ತಾಯಿಸಿ ಜಾನಪದ ಕಲಾವಿದರ ಒಕ್ಕೂಟದವರಿಂದ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಆಡಳಿತ ಭವನದ ಎದುರು ಪ್ರತಿಭಟನೆ ನಡೆಸಿದ ಕಲಾವಿದರು ಸರ್ಕಾರ ಕೂಡಲೇ ಜಾನಪದ ಕಲಾವಿದರ ಮಾಶಾಸನವನ್ನು ಹೆಚ್ಚಿಸಬೇಕು ಎಂದು ಒತ್ತಾಯಿಸಿರುವ ಮನವಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿ, ರಾಜ್ಯ ಕಲಾವಿದರ ಒಕ್ಕೂಟದ ಅಧ್ಯಕ್ಷ ಶರಣಬಸವ ಶಾಸ್ತ್ರೀಗಳು, ಕಲಾವಿದರು ಮಾಸಾಶನ ಪಡೆಯಲು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಬರುವಂತಹ ಪ್ರಸಂಗ ಬಂದಿದೆ ಎಂದು ಆರೋಪಿಸಿದರು.

ಸರ್ಕಾರ ಕಲಾವಿದರ ನೋವಿಗೆ ಸ್ಪಂದಿಸಬೇಕು. ಸಂಸ್ಕೃತಿ ಇಲಾಖೆಯಲ್ಲಿ ಖಾಯಂ ಸಹಾಯಕ ನಿರ್ದೇಶಕರನ್ನು ನೇಮಿಸಬೇಕು, ಕಲಾವಿದರಿಗೆ ಮಾಸಾಶನ ಹೆಚ್ಚಾಗಬೇಕು ಮತ್ತು ಅವರ ವಯಸ್ಸು ಕೂಡ 58 ರಿಂದ 50 ಕ್ಕೆ ಇಳಿಕೆಯಾಗಬೇಕು ಮತ್ತು ಸ್ಥಳೀಯ ಕಲಾವಿದರ ಪ್ರಯೋಜನೆ ಮೊತ್ತವನ್ನು ದ್ವಿಗುಣ(30000 ರಿಂದ 50000) ಗೊಳಿಸಬೇಕು ಮತ್ತು ಅರ್ಜಿ ಹಾಕುವ ಕಲಾವಿದರಿಗೆ ವೃದ್ಧಾಪ ವೇತನ ಅಥವಾ ವಿಧವಾ ವೇತನ ಕಡಿತಗೊಳಿಸದೆ ಅರ್ಜಿ ಪಾರಂ ನೀಡಬೇಕು ಹಾಗೂ ಕಲಾವಿದರ ವೇತನ ಮಂಜೂರು ಆದಮೇಲೆ ಇತರೇ ವೇತನ ನಿಲ್ಲಿಸಬೇಕು ಎಂದು ಮನವಿ ಮಾಡಿಕೊಂಡರು.

ಕರವೇ ಮುಖಂಡ ಮುತ್ತುರಾಜ್ ಅರಗಿನಶೆಟ್ಟಿ ಕಲಾವಿದರಾದ ಪವಿತ್ರಾ ಜಕ್ಕಪ್ಪನವರ, ಆಯುಬಖಾನ ಬಾಗೇವಾಡಿ ಮತ್ತು ಯಲ್ಲಪ್ಪ ಪೂಜಾರ,ಶಂಕರ ಲಮಾಣಿ ,ಶಂಕ್ರಪ್ಪ ತಂಬಾಕದ ,ಚನ್ನಪ್ಪಗೌಡ ನಾಗಪ್ಪ ಗಿಡ್ಡಪ್ಪಗೊಳ ,ಪಾರ್ವತೆವ್ವ ಬ ಮಾದರ,ನಾಗವ್ವ ಜೋಗಿ,ನೀಲವ್ವ ಮಾದರ,ಲಕ್ಕವ್ವ ದ್ಯಾವನಗೌಡ್ರು , ಕಲಾವತಿ ಮಾದರ,ರಂಗಪ್ಪ ತಳವಾರ ಇದ್ದರು.



ಕಲಾ ಸಾಧನೆಯಲ್ಲಿ ವಿಜಯ ಸಿಂಧೂರರ ಪಾತ್ರ ಅಪಾರ

◆ **ಜಮಖಂಡಿ:** ವಿಜಯ ಸಿಂಧೂರ ಅವರು ಅಪರೂಪದ ಕಲಾವಿಧರು. ಕಲೆಯ ಜೊತೆಗೆ ಸಂಗೀತದ ಆರಾಧಕರಾಗಿದ್ದರು. ಅವರು ರಚಿಸಿದ ಕಲಾಕೃತಿಗಳು ರಾಷ್ಟ್ರ ಅಂತಾರಾಷ್ಟ್ರ ಮಟ್ಟದಲ್ಲಿ ವಿಶೇಷವಾಗಿ ಪ್ರದರ್ಶನಗೊಂಡು ಗೌರವಕ್ಕೆ ಪಾತ್ರವಾಗಿವೆ ಎಂದು ಹಿರಿಯ ನ್ಯಾಯವಾದಿ ಎನ್.ಎಸ್ ದೇವರವರ ಹೇಳಿದರು.

ನಗರದ ಸಿಂಧೂರ ಆರ್ಟ್ ಗ್ಯಾಲರಿಯಲ್ಲಿ ವಿಜಯ ಸಿಂಧೂರ ಆರ್ಟ್ ಫೌಂಡೇಷನ್ ಹಾಗೂ ವಿಜಯಪುರದ ಕ್ಯಾನ್ವಾಸ್ ಆರ್ಟ್ ಫೌಂಡೇಷನ್ ಸಹಯೋಗದಲ್ಲಿ ಖ್ಯಾತ ಚಿತ್ರ ಕಲಾವಿದ ವಿಜಯ ಸಿಂಧೂರ ಅವರ ಜನ್ಮದಿನಾಚರಣೆ ಅಂಗವಾಗಿ ವಿಜಯ ಸಿಂಧೂರ ಆರ್ಟ್ ಫೌಂಡೇಷನ್ ಉದ್ಘಾಟನೆ ಪ್ರಶಸ್ತಿ ಪ್ರದಾನ, ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ,



ಕಲೆಯನ್ನೆ ಕೃಷಿಯನ್ನಾಗಿ ಮಾಡಿಕೊಂಡು ವಿವಿಧ ವರ್ಣದಲ್ಲಿ ಹಲವಾರು ರಚನಾತ್ಮಕ ಕಲಾಕೃತಿಗಳನ್ನು ರಚಿಸಿ ವರ್ಣಶಿಲ್ಪಿ ಕೆ.ವೆಂಕಪ್ಪ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಬಾಜನರಾಗಿ ಮೇದಾವಿ ಕಲಾವಿಧರಾಗಿ ತುಂಬು ಜೀವನ ನಡೆಸಿಕೊಂಡು ಬಂದರು.

ವಿಜಯಪುರದ ಹಿರಿಯ ಕಲಾವಿದ ವಿದ್ಯಾಧರ ಸಾಲಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬಾಬು ಜತ್ತಕರ್, ವಿಜಯ ಸಿಂಧೂರ ಪ್ರಶಸ್ತಿ ಪುರಸ್ಕೃತ ಶಿವು ಹೂಗಾರ. ಪುತ್ರ ಸೋಮೇಶ ಸಿಂಧೂರ, ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು ಮಾತನಾಡಿದರು.


ಪೌಂಡೇಶನ್ ಅಧ್ಯಕ್ಷೆ ಮಹಾನಂದಾ ವಿಜಯ ಸಿಂಧೂರ, ಪದಾಧಿಕಾರಿಗಳಾದ ಬಸವರಾಜ ಮುಸಂಡಿ, ರಾಜೀವ ಸಿಂಧೂರ, ಸ್ವಪ್ನಿಲ ಸಿಂಧೂರ, ಜ್ಯೋತಿ ಯಾವಗಲ್, ಮಹಾದೇವ ಕವಿಶೆಟ್ಟಿ, ಪಿ.ಎಸ್ ಕಡೇಮನಿ, ನ್ಯಾಯವಾದಿ ಡಾ.ಟಿ.ಪಿ ಬಾಂಗಿ, ಡಾ. ಶಾರದಾ ಮುಳ್ಳೂರ, ಭಾಗ್ಯಶ್ರೀ ಕೋಟಿ, ಇದ್ದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಾರುತಿ ಭಜಂತ್ರಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ರಮೇಶ ಚವ್ಹಾಣ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ಅಮೃತಾ ಸಿಂಧೂರ ವಂದಿಸಿದರು.

ಶಿವರಾಜ ತಂಗಡಗಿಗೆ ಸಚಿವ ಸ್ಥಾನ ನೀಡಿ: ಹುಲ್ಲಪ್ಪ

◆ **ಬಾಗಲಕೋಟೆ:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸಂಪುಟದಲ್ಲಿ ಭೋವಿ ವಡ್ಡರ ಸಮಾಜಕ್ಕೆ ಸಾಮಾಜಿಕ ನ್ಯಾಯ ಕೊಡದೇ ಇರುವುದು ಭೋವಿ ಸಮುದಾಯಕ್ಕೆ ಬೇಸರ ತಂದಿದೆ. 2ನೇ ಪಟ್ಟಿಯಲ್ಲಿ ಭೋವಿ ಸಮಾಜಕ್ಕೆ ಸಚಿವ ಸ್ಥಾನ ನೀಡಬೇಕು ಎಂದು ಭೋವಿ ವಡ್ಡರ ಸಮಾಜದ ಮುಖಂಡ ಹುಲ್ಲಪ್ಪ ಹಳ್ಳೂರ ಒತ್ತಾಯಿಸಿದರು.

ನವನಗರದ ಪತ್ರಿಕಾಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಹಲವಾರು ವರ್ಷಗಳಿಂದ ಭೋವಿ ಸಮಾಜ ಕಾಂಗ್ರೆಸ್ ಪಕ್ಷದ ಜತೆಗೆ ಇದ್ದು, ಸಚಿವ ಸಂಪುಟದಲ್ಲಿ ಸಾಮಾಜಿಕ ನ್ಯಾಯ ಅನುಸರಿಸಿ ಭೋವಿ ಸಮಾಜಕ್ಕೆ ಸ್ಥಾನ ಮಾನ ನೀಡದಿರುವುದು ತುಂಬಾ ಬೇಸರವಾಗಿದೆ ಎಂದರು.



ಮುಂದಿನ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಾಮಾಜಿಕನ್ಯಾಯದಮಾನದಂಡವನ್ನು ಅನುಸರಿಸುವ ಮೂಲಕ ಭೋವಿ ಸಮಾಜದ ನಾಯಕ ಶಿವಾರಾಜ ತಂಗಡಗಿಯವರನ್ನು ಸಚಿವರನ್ನಾಗಿ ನೇಮಕ ಮಾಡಬೇಕು. ನಿಗಮದ ಮಂಡಳಿ, ವಿಧಾನ ಪರಿಷತ್ ನಾಮ ನಿರ್ದೇಶನದಲ್ಲಿಯೂ ಸಮಾಜಕ್ಕೆ ಪ್ರಾತಿನಿಧ್ಯ ನೀಡಬೇಕು ಎಂದು ಆಗ್ರಹಿಸಿದರು.

ತಂಗಡಗಿಯವರು ಸಚಿವರಾಗಿ ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಮಾಜಿ ಸಿಎಂ ಸಿದ್ದರಾಮಯ್ಯ, ರಾಜ್ಯದ ಉಸ್ತುವಾರಿ ರಣಧೀಪಸಿಂಗ್ ಸುರ್ಜೆವಾಲಾ, ಎಐಸಿಸಿ ಪ್ರ.ಕಾ.ವೇಣುಗೋಪಾಲ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು, ಪಕ್ಷದ ನಾಯಕ ರಾಹುಲ್ ಗಾಧಿಯವರು ಶಿವರಾಜ ತಂಗಡಗಿಯವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮನವಿ ಮಾಡಿದರು. ಶಾಸಕ ವಿಜಯಾನಂದ ಕಾಶಪ್ಪನವರಿಗೆ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಬಸವರಾಜ ಬಂಡಿವಡ್ಡರ, ಪಾಂಡು ಕಟ್ಟಿಮನಿ, ಮೌಲೇಶ ಬಂಡಿವಡ್ಡರ, ಹನಮಂತ ತುಂಬದ, ಶರಣಪ್ಪ ಅಮರಾವತಿ ಇದ್ದರು.

ಅಪಾಯಗಳಿಗೆ ಆಹ್ವಾನ | ಲೋಕೋಪಯೋಗಿ ಇಲಾಖೆ ಮೌನ: ಆಕ್ರೋಶ
ಸೇತುವೆ ನವೀಕರಣ ಮಾಡಿ ಪುಣ್ಯ ಕಟ್ಕೊಳ್ಳಿ

▸ ಮಲ್ಲಿಕಾರ್ಜುನ ಕೊಪ್ಪಿ ಸಾವಳಗಿ

◆ **ಸಾವಳಗಿ:** ಕಳೆದ ವರ್ಷ ಸಪ್ಟಂಬರ್ 5ರಂದು ಕುಸಿದು ಸೇತುವೆ ಇನ್ನು ನವೀಕರಣಗೊಂಡಿಲ್ಲ, ರಸ್ತೆ ಪಕ್ಕದ ಮಣ್ಣು ಅಗೆದು ಗುಂಡಿ ಮುಚಿರುವ ಅಧಿಕಾರಿಗಳು ಬೇಜವಾಬ್ದಾರಿ ಕೆಲಸ ಮಾಡುತ್ತಿದ್ದಾರೆ. ಆದರೆ ಮತ್ತು ಮಂಗಳವಾರ ಮಳೆಯಿಂದ ಮತ್ತಷ್ಟು ಸೇತುವೆ ಸಂಪೂರ್ಣ ಕುಸಿದು ಹೋಗಿದೆ ಸ್ವಲ್ಪ ರಸ್ತೆ ಪಕ್ಕಕ್ಕೆ ವಾಹನ ತೆಗೆದುಕೊಂಡರೆ ವಾಹನ ಪಲ್ಟಿ ಯಾಗುವುದು ಗ್ಯಾರಂಟಿ. ರಸ್ತೆ ತುಂಬಾ ತಿರುವು-ಮುರುವು ಇರುವುದರಿಂದ ವಾಹನ ಸವಾರರಿಗೆ ಮತ್ತಷ್ಟು ಭಯ ಹೆಚ್ಚಿಸಿದೆ. ತುಬಚಿ ಗ್ರಾಮದಿಂದ ಜಮಖಂಡಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಮಾರ್ಗ ಮಧ್ಯದಲ್ಲಿ ಸೇತುವೆಯು ಕುಸಿದು ಹೋಗಿದ್ದು, ಅಪಾಯಕ್ಕೆ ಆಹ್ವಾನ ನೀಡುವಂತಾಗಿದೆ.

ಜಮಖಂಡಿ ತಾಲೂಕಿನ ತುಬಚಿ ಹಾಗೂ ಅಥಣಿ ತಾಲೂಕಿನ ಅನೇಕ ಗ್ರಾಮಗಳಿಂದ ಜಮಖಂಡಿ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯು ಡಾಂಬರೀಕರಣವಾಗಿ ಸುಮಾರು ವರ್ಷಗಳ ಪೂರ್ಣಗೊಳ್ಳದಿದ್ದರೂ ಈ ರಸ್ತೆಯು ಸಂಪೂರ್ಣ ಕಿತ್ತು ಹೋಗಿದ್ದರೂ ಅಧಿಕಾರಿಗಳು ಇದಕ್ಕೂ ತಮಗೂ ಯಾವುದೇ ಸಂಬಂಧವಿಲ್ಲದಂತೆ ವರ್ತಿಸುತ್ತಿದ್ದಾರೆ. ಈಗ ಈ ರಸ್ತೆಯ ಮಧ್ಯದಲ್ಲಿ ಕಳೆದ ದಿನಗಳ ಹಿಂದೆ ಅತಿಯಾದ ಮಳೆಗೆ ಸೇತುವೆಯು ಕುಸಿದು ಹೋಗಿದ್ದು, ರಸ್ತೆಯ ಮೇಲೆ ಸಂಚಾರ ಮಾಡುವುದು ಪ್ರಾಣಕ್ಕೆ ಸಂಚಕಾರ ತಂದು ಕೊಂಡಂತಾಗಿದೆ. ಈ ರಸ್ತೆಯ ಮೇಲೆ ಪ್ರತಿನಿತ್ಯ ಸಾವಿರಾರು ವಾಹನಗಳು ಮತ್ತುಅನೇಕ ಶಾಲಾ ವಾಹನಗಳು ಸಂಚಾರ ಮಾಡುತ್ತಿದ್ದರೂ ಅಧಿಕಾರಿಗಳಿಗೆ ಇದರ ಬಗ್ಗೆ ಕಾಳಜಿ ಇಲ್ಲದಂತಾಗಿರುವುದು ನೋವಿನ ಸಂಗತಿಯಾಗಿದೆ.



ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಇಷ್ಟಾದರೂ ಜಾಣ ಮೌನಕ್ಕೆ ಶರಣಾಗಿದ್ದಾರೆ ಎಂದು ವಾಹನ ಸವಾರರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಅಧಿಕಾರಿಗಳು ಗಮನಕ್ಕೆ ತಂದರು ದಿವ್ಯ ನಿರ್ಲಕ್ಷ್ಯ ಮಾಡಿರುವ ಸಂಬಂಧಪಟ್ಟ ಇಲಾಖೆಯವರು ಮತ್ತು ಜನಪ್ರತಿನಿಧಿಗಳು ಯಾವುದೇ ಅಪಾಯ ಸಂಭವಿಸುವ ಮುಂಚೆ ಎಚ್ಚೆತ್ತುಕೊಳ್ಳಬೇಕು.ಈ ಸೇತುವೆ ಯಾಗಿ ಇನ್ನು 5 ವರ್ಷ ಆಗ್ಯೆತೆ ಇಲ್ಲೊ ಗೊತ್ತಿಲ್ರಿ ಇದು ಕಳಪೆ ಕಾಮಗಾರಿಯಾಗಿದ್ದು, ಇದನ್ನು ಪುನಂ ಸೇತುವೆ ನವೀಕರಣ ಮಾಡಬೇಕು ಮತ್ತು ಇಲ್ಲಿ ಯಾವುದೇ ರೀತಿಯ ಅಪಾಯವಾದರೆ ಇದಕ್ಕೆ ನೇರ ಹೊಣೆ ಲೋಕೋಪಯೋಗಿ ಇಲಾಖೆ ಹೊರಬೇಕಾಗುತ್ತದೆ. ಎಂದು ತುಬಚಿ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಡೆಂಘೀ, ಮಲೇರಿಯಾ ತಡೆಗೆ ಮುಂಜಾಗ್ರತಾ ಕ್ರಮ

◆ **ಬಾಗಲಕೋಟೆ:** ಮುಂಗಾರು ಪ್ರಾರಂಭವಾಗಿದ್ದು, ಡೆಂಘೀ, ಮಲೇರಿಯಾ, ಮತ್ತು ಚಿಕುನ್‌ಗುನ್ಯಾ, ಮೆದುಳು ಜ್ವರ ಹಾಗೂ ಆನೆಕಾಲು ರೋಗ ಹರಡದಂತೆ ಮುಂಜಾಗ್ರತಾ ಕ್ರಮ ವಹಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ ಕೆ. ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆಲ್ಲಿ ತಿಳಿಸಿದ ಅವರು ಜೂನ್ ತಿಂಗಳಲ್ಲಿ ಮಳೆಗಾಲ ಆರಂಭವಾಗುವದರಿಂದ ಸೊಳ್ಳೆಗಳ ಉತ್ಪಾದನೆ ಹೆಚ್ಚಾಗಿ ಕೀಟಜನ್ಯ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಸೊಳ್ಳೆಗಳನ್ನು ನಾಶಮಾಡಲು ಕೀಟನಾಶಕ ಸಿಂಪಡಿಸಿ ದಿನನಿತ್ಯ ಸೊಳ್ಳೆ ಪರದೆ ಉಪಯೋಗಿಸಿ ರಕ್ಷಣೆ ಪಡೆಯಬಹುದಾಗಿದೆ. ಪ್ರಸಕ್ತ ವರ್ಷದಲ್ಲಿ ಮುಧೋಳ ತಾಲೂಕಿನಲ್ಲಿ ಎರಡು ಹಾಗೂ ಬಾದಾಮಿ ತಾಲೂಕಿನಲ್ಲಿ ಎರಡು ಪ್ರಕರಣಗಳು ಕಂಡುಬಂದಿರುವುದಾಗಿ ತಿಳಿಸಿದ್ದಾರೆ.

ಎನ್‌ಎಂಎಂಎಸ್ ಪರೀಕ್ಷೆ: 22 ವಿದ್ಯಾರ್ಥಿಗಳು ಆಯ್ಕೆ

◆ ಬಾದಾಮಿ: ಪ್ರಸಕ್ತ ವರ್ಷದಲ್ಲಿ ಜರುಗಿದ ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ತಾಲೂಕಿನ 22 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪಟ್ಲೂರ ತಿಳಿಸಿದ್ದಾರೆ.

ಪರಿಸರ ರಕ್ಷಣೆ ಅಗತ್ಯ: ಶಾಸಕ ಚಿಮ್ಮನಕಟ್ಟಿ



◆ **ಬಾದಾಮಿ:** ಪ್ರತಿಯೊಬ್ಬರೂ ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆ ಮಹತ್ವವನ್ನು ತಿಳಿದುಕೊಳ್ಳಬೇಕು ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ತಾಲೂಕಿನ ಮುತ್ತಲಗೇರಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಅರಣ್ಯ, ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿದ ವಿಶ್ವ ಪರಿಸರ ದಿನಾಚರಣೆಯನ್ನು ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಈ ವೇಳೆ ಶಾಲೆಯಲ್ಲಿ ಆರು ವಿದ್ಯಾರ್ಥಿಗಳು ಆರ್ಮಿ ಅಗ್ನಿವೀರ ಆಯ್ಕೆಯಾಗಿದ್ದಕ್ಕೆ ಸನ್ಮಾನಿಸಲಾಯಿತು.

ಶಾಲೆಯ ವಿವಿಧ ಬೇಡಿಕೆಗಳ ಮನವಿ ಪತ್ರವನ್ನು ಶಾಸಕರಿಗೆ ಸಲ್ಲಿಸಲಾಯಿತು.

ಶಾಲೆ ಎಸ್‌ಡಿಎಂಸಿ. ಅಧ್ಯಕ್ಷ ಎಸ್.ಎಸ್. ಮಾಳಗಿ, ಸದಸ್ಯರು,ಅವಳಿ ಜಿಲ್ಲೆಯ ಹಾಲು ಒಕ್ಕೂಟದ ನಿರ್ದೇಶಕ ಈರನಗೌಡ ಕರಿಗೌಡರ, ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ಪೆಟ್ಲೂರ, ಅಕ್ಷರ ದಾಸೋಹ ನಿರ್ದೇಶಕ ಎಂ.ಎನ್.ನಾರಗಲ್, ದೈಹಿಕ ಶಿಕ್ಷಣ ಪರೀವಿಕ್ಷಕ ಬಿ.ಎಚ್. ಹಳಗೇರಿ, ಅರಣ್ಯ ಇಲಾಖೆ ಅಧಿಕಾರಿ ಎಸ್.ಬಿ. ಪೂಜಾರ, ಮುಖ್ಯ ಶಿಕ್ಷಕಿ ಶಶಿಕಲಾ ಎಂ, ಎಕೋ ಕ್ಲಬ್ ಇನ್ ಚಾರ್ಜ್ ವಿಜ್ಞಾನ ಶಿಕ್ಷಕ ಅವಿನಾಶ ಪಿ.ಮೇಟಿ, ಶಿಕ್ಷಕರಾದ ಆರ್.ಆರ್.ಕಟ್ಟಿ, ಎಸ್ .ಎ.ಮರಿಯನ್ನವರ, ಜಯಶ್ರೀ ಆಲೂರ, ಎಸ್.ಪಿ.ಜಂಗವಾಡ, ಎಸ್.ಎನ್.ಫಡಿ, ಎಂ.ವಿ.ನೀಲವಣಿ, ಕೆ.ಎಸ್.ರಾಠೋಡ, ಗುರುಹಿರಿಯರು, ಮಕ್ಕಳು ಹಾಜರಿದ್ದರು.

ಕಿರುಸುದ್ದಿ

ಡಾ.ಸುಜಾತಾಗೆ ಪ್ರಶಸ್ತಿ



◆ **ತಾಳಿಕೋಟೆ:** ಸ್ವಾಭಿಮಾನಿ ಕರ್ನಾಟಕ ವೇದಿಕೆ ಬೆಂಗಳೂರು 2025ನೇ ಸಾಲಿನ ಸ್ವಾಭಿಮಾನಿ ಪುಸ್ತಕ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಡಾ.ಸಿ.ಸೋಮಶೇಖರ ಸರ್ವಮಂಗಳ ದತ್ತಿ ಪ್ರಶಸ್ತಿಗೆ ಡಾ.ಸುಜಾತಾ ಚಲವಾದಿ ಅವರ ಮನುಷ್ಯ ಮತ್ತು ಪ್ರೀತಿ ಪ್ರಬಂಧ ಸಂಕಲನ ಆಯ್ಕೆಯಾಗಿದೆ. ವಿವಿಧ ವಿಭಾಗಗಳಲ್ಲಿ ಡಿ.ಎಸ್. ಚೌಗಲೆ ಅವರ ಥರ್ಡ್ ಬೆಲ್ (ರಂಗಭೂಮಿ), ಡಾ.ಸುಕನ್ಯಾ ಸೂನಗಹಳ್ಳಿ ಅವರ ಕಬ್ಬಿನ ಸಿಹಿ ವರ್ಧಿಸುವ ಅಮ್ಮ ಡಾ.ಜಾನಕಿ ಅಮ್ಮಾಳ್, ಓರ್ಗಲ್ಲಯ್ಯ ದ್ವಾರಕುಂಟೆ ಅವರ ವಿಶ್ವ ವಿಸ್ಮಯ (ಸಂಕೀರ್ಣ), ಗುರುನಾಥ ಅಕ್ಕಣ್ಣ ಅವರ ಕೊಂಡವರುಳಿದರೇ (ಕಾದಂಬರಿ), ವಿನಯ ಗುಂಟೆ ಅವರ ಬನದ ಕರಡಿ (ಕಥಾ ಸಂಕಲನ) ಹಾಗೂ ಡಾ.ಶೋಭಾ ನಾಯಕ ಅವರ ಅರ್ಧ ಮುಖಗಳ ಶಹರು (ಕವನ ಸಂಕಲನ) ಕೃತಿಗಳು ಪ್ರಶಸ್ತಿಗೆ ಭಾಜನವಾಗಿವೆ. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಆರ್.ಸುನಂದಮ್ಮ, ವೇದಿಕೆ ಅಧ್ಯಕ್ಷ ಡಾ. ದ್ವಾರನಕುಂಟೆ ಪಾತಣ್ಣ, ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಎಚ್.ಆರ್.ಸುಜಾತ ನೇತೃತ್ವದ ಸಮಿತಿ ಪುರಸ್ಕೃತರನ್ನು ಆಯ್ಕೆ ಮಾಡಿದೆ. ಜೂ.13ರಂದು ಸಂಜೆ 5ಕ್ಕೆ ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ವೇದಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

ಆರೋಗ್ಯ ತಪಾಸಣೆ ಉಚಿತ ಶಿಬಿರ ಜೂ.15ರವರೆಗೆ

ವಿಜಯಪುರ: ರಾಷ್ಟ್ರೀಯ ಶಸ್ತ್ರ ಚಿಕಿತ್ಸಾ ತಜ್ಞ ವೈದ್ಯರ ದಿನಾಚರಣೆ ನಿಮಿತ್ತ ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರ ಚಿಕಿತ್ಸಾ ವಿಭಾಗ ಮತ್ತು ವಿಜಯಪುರ ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘದ ಆಶ್ರಯದಲ್ಲಿ ಜೂ.9 ರಿಂದ 15ರವರೆಗೆ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸಪ್ತಾಹ ಆಯೋಜಿಸಲಾಗಿದೆ.

ಈ ಸಪ್ತಾಹದ ನಿಮಿತ್ತ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಶಿಬಿರದಲ್ಲಿ ಶಸ್ತ್ರ ಚಿಕಿತ್ಸೆ ಆಧಾರಿತ ವಿವಿಧ ಕಾಯಿಲೆಗಳಿಗೆ ಉಚಿತ ಚಿಕಿತ್ಸೆ ನೀಡಲಾಗುವುದು.

ರೋಗಿಗಳು ಬರುವಾಗ ತಪ್ಪದೇ ತಮ್ಮ ಆಧಾರ್ ಕಾರ್ಡ್, ಬಿಪಿಎಲ್ ಅಥವಾ ಯಶಸ್ವಿನಿ ಕಾರ್ಡ್ ತರಬೇಕು. ಅಲ್ಲದೆ ಜೂ.14,15 ರಂದು ರಕ್ತದಾನ ಶಿಬಿರ ನಡೆಯಲಿದ್ದು, ಜೂ.15ರಂದು ಮಧ್ಯಾಹ್ನ 3 ರಿಂದ 5ರವರೆಗೆ ಕ್ವಿಜ್ ಮಾಸ್ಟರ್ ಡಾ.ದೀಪಕ ಚವ್ಹಾಣ ನೇತೃತ್ವದಲ್ಲಿ ಎಂಬಿಬಿಎಸ್ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಸರ್ಜಿಕ್ವಿಜ್ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಚಾರ್ಯೆ ಡಾ.ತೇಜಸ್ವಿನಿ ವಲ್ಲಭ, ಆಸ್ಪತ್ರೆ ಶಸ್ತ್ರ ಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ.ಮಂಜುನಾಥ ಕೋಟೆಣ್ಣವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಐಆರ್: 1950 ಸಹಾಯವಾಣಿ ಆರಂಭ

◆ **ವಿಜಯಪುರ:** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಕುರಿತ ಸಾರ್ವಜನಿಕರ ಅನುಕೂಲಕ್ಕಾಗಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಮತದಾರರ ಸಹಾಯವಾಣಿ ಸಂಖ್ಯೆ-1950 ಪ್ರಾರಂಭಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಕುರಿತು ಯಾವುದೇ ಮಾಹಿತಿ ಪಡೆಯಲು ಅಥವಾ ಈ ಕುರಿತು ಕುಂದುಕೊರತೆಗಳನ್ನು ದಾಖಲಿಸಲು ಸಾರ್ವಜನಿಕರು ಈ ಉಚಿತ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬಹುದು. ಈ ಮೂಲಕ ಅಗತ್ಯ ಮಾಹಿತಿ ಮತ್ತು ಸಲಹೆಗಳನ್ನು ಪಡೆದುಕೊಳ್ಳಬಹುದಾಗಿದೆ. ಜಿಲ್ಲೆಯ ಎಲ್ಲ ಸಾರ್ವಜನಿಕರು ಈ ಸಹಾಯವಾಣಿಯ ಸದುಪಯೋಗವನ್ನು ಪಡೆದುಕೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೆಡ್‌ಗೆ ಬೆಂಕಿ: 3 ಕುರಿ ಸಾವು

◆ **ಸಿಂದಗಿ:** ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡ ಸಾಧ್ಯತೆ ಇದೆ. ಈ ಘಟನೆಯಿಂದ ಮನೆಯಲ್ಲಿ ಇರಿಸಲಾಗಿದ್ದ ದಾಸ್ತಾನು 14 ಚೀಲ ಗೋಧಿ, 3 ಚೀಲ ಜೋಳ, 2 ಚೀಲ ಶೇಂಗಾ, ಈರುಳ್ಳಿ, ಜವಿಗೋಧಿ. ಅಕ್ಕಿ, ಹತ್ತಿಬೀಜ ಹಾಗೂ 3 ಕುರಿಗಳು ಹಾಗೂ ರೂ.75ಸಾವಿರ ನಗದು, 2ತೊಲಿ ಬಂಗಾರ, ಬೆಳ್ಳಿ ಸಂಪೂರ್ಣ ಸುಟ್ಟು ಹೋಗಿವೆ. ಇದರಿಂದ ಅಧಿಕ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಸುದ್ದಿ ತಿಳಿದ ತತ್‌ಕ್ಷಣ ಅಗ್ನಿ ಶಾಮಕದಳದ ಸಿಬ್ಬಂದಿಗಳು ಆಗಮಿಸಿ ಅಗ್ನಿ ನಂದಿಸಿದರು. ಅಗ್ನಿ ಆಹುತಿ ಬಳಿಕ ರೈತನ ಹೆಂಡತಿ ದೊಡ್ಡಮ್ಮ ಚನ್ನಬಸಪ್ಪ ಬಿರಾದಾರ ಮಾಧ್ಯಮದವರೊಂದಿಗೆ ಮಾತನಾಡಿ, ನಮ್ಮ ಮನೆ ಸಂಪೂರ್ಣವಾಗಿ ಸುಟ್ಟು ಹೋಗಿದೆ. ಇಂದು ಊಟ ಮಾಡಬೇಕಾದರೆ ಮನೆಯಲ್ಲಿ ಇರುವ ಅಡುಗೆ ಪರಿಕರಗಳು ಹಾಗೂ ಬಟ್ಟೆ, ಆಹಾರದಾನ್ಯ ಮತ್ತು ಕೃಷಿ ಉತ್ಪನ್ನಗಳು ಹಾನಿಯಾಗಿದೆ. ಅಂದಾಜು ರೂ.12ಲಕ್ಷ ನಷ್ಟ ಸಂಭವಿಸಿದೆ ಎಂದು ಅಳಲು ತೊಡಿಕೊಂಡರು. ಈ ಘಟನೆ ಸಿಂದಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜರುಗಿದೆ. ಘಟನಾ ಸ್ಥಳಕ್ಕೆ ಕಂದಾಯ ಇಲಾಖೆಯ ಗ್ರಾಮ ಆಡಳಿತಾಧಿಕಾರಿ ಎಸ್ .ಆಯ್.ಮೋರೆ ಭೇಟಿ ನೀಡಿ ಪರಿಶೀಲಿಸಿದರು.



ನಾಲತವಾಡ: ಕರ್ನಾಟಕ ರೈತ ಸಂಘ, ಹಸಿರು ಸೇನೆ ಅಂಗವಾಗಿ ಆಲಿಮಟ್ಟಿಯಲ್ಲಿ ನಡೆದ ನಾಗರಬೆಟ್ಟ ಏತ ನೀರಾವರಿ ಹೋರಾಟದಲ್ಲಿ ನಾಲತವಾಡ, ವೀರೇಶನಗರ, ನಾಗರಬೆಟ್ಟ, ಮಾವಿನಬಾವಿ, ಜೈನಾಪುರ, ಟಕ್ಕಳಕಿ ಸುತ್ತಮುತ್ತ ಲೀನ ಹಳ್ಳಿಯ ರೈತರು ಹೋರಾಟದಲ್ಲಿ ಭಾಗವಹಿಸಿ, 3 ತಿಂಗಳಲ್ಲಿ ಕಾಮಗಾರಿ ಸಂಪೂರ್ಣ ಮಾಡಿ ನೀರು ಬರುವಂತೇ ಮಾಡುತ್ತೇವೆಂದು ಅಧಿಕಾರಿಗಳು ಲಿಖಿತ ರೂಪದಲ್ಲಿ ಬರೆದು ಕೊಟ್ಟ ನಂತರ ಹೋರಾಟವನ್ನು ಹಿಂಪಡೆಯಲಾಯಿತು. ಹಸಿರು ಸೇನೆ ಜಿ.ಮುಖಂಡ ಶಶಿಧರ ಬಂಗಾರಿ ಗೌಡ್ರು ವಿಜಯ ಹಿರೇಮಠ, ಶೇಖರ್ ಬಿರಾದಾರ, ಇತರರಿದ್ದರು.

ಪ್ರಧಾನಿ ಮೋದಿ ಸಾಧನೆ: ವಿಶೇಷ ಪೂಜೆ

◆ **ಕೊಲ್ಹಾರ:** ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಜೂ.10ರಂದು ಭಾರತದ ರಾಜಕೀಯ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದ್ದು, ಈ ಹಿನ್ನೆಲೆಯಲ್ಲಿ ಬಸವನಬಾಗೇವಾಡಿ ಬಿಜೆಪಿ ಮಂಡಲದಿಂದ ಮತಕ್ಷೇತ್ರದ ಎಲ್ಲ ಪ್ರಮುಖ ದೇವಸ್ಥಾನದಗಳಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಎಸ್. ಕೆ.ಬೆಳ್ಳುಬ್ಬಿ ಹೇಳಿದರು.

ಅವರು ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ಅವಧಿಯ ದಾಖಲೆಯನ್ನು ಹಿಂದಿಕ್ಕಿಸತತವಾಗಿ ದೇಶದ ಅತೀ ದೀರ್ಘಾವಧಿ ಸೇವೆಸಲ್ಲಿಸಿದ ಚುನಾಯಿತ ಪ್ರಧಾನಿ ನರೇಂದ್ರ ಮೋದಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಪ್ರಯುಕ್ತ ಪಟ್ಟಣದ ಅವರ ನಿವಾಸದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನೆಹರು ಅವರು ಪ್ರಧಾನಿಯಾಗಿದ್ದ ಕಾಲಘಟ್ಟಕ್ಕೆ ಹೋಲಿಸಿದರೆ, ಇಂದಿನ ರಾಜಕೀಯ ವ್ಯವಸ್ಥೆಯು ಹೆಚ್ಚು ಸ್ಪರ್ಧಾತಕವಾಗಿದೆ. 1951-52ರಲ್ಲಿ ಕೆಲವೇ ಪಕ್ಷಗಳು ಸ್ಪರ್ಧಿಸುತ್ತಿದ್ದವು, ಆದರೆ ಇಂದು ನೂರಾರು ಪಕ್ಷಗಳು ಮತ್ತು ಪ್ರಾದೇಶಿಕ ಶಕ್ತಿಗಳ ನಡುವೆ ತನ್ನ ಪಕ್ಷವನ್ನು ಮುನ್ನಡೆಸುತ್ತಿರುವುದು ಮೋದಿ ಅವರ ಆಡಳಿತಾತ್ಮಕ ಮತ್ತು ರಾಜಕೀಯ ತಂತ್ರಗಾರಿಕೆಯನ್ನು ಎತ್ತಿ ತೋರಿಸುತ್ತದೆ ಎಂದರು.

ಪಪಂ ಮಾಜಿ ಅಧ್ಯಕ್ಷ ಕಲ್ಲಪ್ಪ ಸೊನ್ನದ,ಬಿಜೆಪಿ ಮುಖಂಡರಾದ ರಾಜಶೇಖರ್ ಶಿಲವಂತ್, ಈರಯ್ಯ ಮಠಪತಿ, ಬಸವರಾಜ ಬಾಟಿ. ಮಳಿಯಪ್ಪ ಬರಗಿ, ಬಾಬು ಭಜಂತ್ರಿ, ಹನುಮಂತ ಬಡಿಗೇರ್, ಸುಭಾಷ ಭಜಂತ್ರಿ, ವಿಜಯಕುಮಾರ ಕೊಟ್ಟಗಿ ಇದ್ದರು.



ಪ್ರಧಾನಮಂತ್ರಿ, ನರೇಂದ್ರ, ಮೋದಿಯವರು ಜೂ.10ರಂದು ಭಾರತದ ರಾಜಕೀಯ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದ್ದು, ಈ ಹಿನ್ನೆಲೆಯಲ್ಲಿ ಬಸವನಬಾಗೇವಾಡಿ ಬಿಜೆಪಿ ಮಂಡಲದಿಂದ ಮತಕ್ಷೇತ್ರದ ಎಲ್ಲ ಪ್ರಮುಖ ದೇವಸ್ಥಾನದಗಳಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಎಸ್. ಕೆ.ಬೆಳ್ಳುಬ್ಬಿ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಮತದಾರರ ನೋಂದಣಾಧಿಕಾರಿಗಳಿಗೆ ತರಬೇತಿ ಶಿಬಿರ

ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಯಶಸ್ವಿಗೊಳಿಸಿ:ಡಿಸಿ

◆ **ವಿಜಯಪುರ:** ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಕಾರ್ಯವನ್ನು ಯಶಸ್ವಿಗೊಳಿಸಲು ಮತ್ತು ಆರೋಗ್ಯಯುತ ಮತದಾರರ ಪಟ್ಟಿಯನ್ನು ಅಂತಿಮಗೊಳಿಸುವಲ್ಲಿ ನಿಯಮಾನುಸಾರ ಅವಶ್ಯಕ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಕುರಿತು ಜಿಲ್ಲೆಯ ಮತದಾರರ ನೋಂದಣಾಧಿಕಾರಿಗಳು ಮತ್ತು ಸಹಾಯಕ ಮತದಾರರ ನೋಂದಣಾಧಿಕಾರಿಗಳಿಗೆ ಹಮ್ಮಿಕೊಂಡ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿ,ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಕಾರ್ಯ ಜೂ.20 ರಿಂದ ಪ್ರಾರಂಭವಾಗಲಿದ್ದು, ಅಷ್ಟರೊಳಗಾಗಿ, ಜಿಲ್ಲೆಯ ಎಲ್ಲ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ನೀಡುವುದು ಅತಿ ಅವಶ್ಯಕವಾಗಿದ್ದು, ಇದರ ಪೂರ್ವಭಾವಿಯಾಗಿ ತಾಲೂಕುವಾರು ತರಬೇತುದಾರರಿಗೆ ತರಬೇತಿಯನ್ನು ಏರ್ಪಡಿಸಲಾಗಿದೆ ಎಂದರು.

ಇಲ್ಲಿ ಪೂರ್ಣ ಪ್ರಮಾಣದ ತರಬೇತಿ



ಪಡೆದುಕೊಂಡು ಪರಿಣಾಮಕಾರಿಯಾಗಿ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿಯನ್ನು ನೀಡಬೇಕು. 2002ರ ಮತದಾರರ ಪಟ್ಟಿಯನ್ನು 2025ರ ಮತದಾರರ ಪಟ್ಟಿಗೆ ಮ್ಯಾಪಿಂಗ್ ಕಾರ್ಯ ಕೈಗೊಳ್ಳುವ ಕುರಿತು ಈಗಾಗಲೇ ಹಲವು ಬಾರಿ ವಿಡಿಯೋ ಸಂವಾದಗಳ ಮೂಲಕ ಮತ್ತು ಸಭೆಗಳನ್ನು ಜರುಗಿಸುವುದರ ಮೂಲಕ ಮತ್ತು ಪತ್ರಗಳ ಮೂಲಕ ನಿಮಗೆ ಸೂಚಿಸಲಾಗಿದ್ದು, ಮ್ಯಾಪಿಂಗ್ ಕಾರ್ಯವು ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ ಅತಿ ಮಹತ್ವಾದ್ದಾಗಿದ್ದು, ಈ ನಿಟ್ಟಿಯಲ್ಲಿ ಎಲ್ಲ ಮತಗಟ್ಟೆಗಳಲ್ಲಿ ಶೇ.90 ಕ್ಕಿಂತ ಹೆಚ್ಚಿನ ಪ್ರಗತಿ ಸಾಧಿಸಬೇಕು ಎಂದರು.

ಮತಗಟ್ಟೆ ಅಧಿಕಾರಿಗಳಿಗೆ ನೀಡಿದ ಗಣತಿ ಫಾರ್ಮ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಹಿಂದಿರಿಗಿಸಿದ ಬಗ್ಗೆ ಪರಿಶೀಲಿಸಲು ಮತ್ತು ಹಿಂದಿರುಗದ ಗಣತಿ ಫಾರ್ಮ್‌ಗಳ ಕುರಿತು ವಿಚಾರಣೆಯನ್ನು ಕೈಗೊಳ್ಳಲು ಮತ್ತು ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಡುವ ಪೂರ್ವದಲ್ಲಿ ಅವಶ್ಯಕ ಎಲ್ಲ ಮುನ್ನೆಚ್ಚರಿಕೆಗಳನ್ನು ವಹಿಸಬೇಕು ಎಂದರು.

> **ಜಿಲ್ಲೆಯ ಎಲ್ಲ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ನೀಡಲು, ಬಿಎಲ್‌ಒ ಫೆಸಿಲೇಶನ್ ಕೇಂದ್ರ ಮತ್ತು ಮತದಾರರ ಫೆಸಿಲಿಟೇಶನ್ ಕೇಂದ್ರಗಳನ್ನು ಸ್ಥಾಪಿಸಲು, ರಾಜಕೀಯ ಪಕ್ಷಗಳ ಸಭೆ ಕರೆದು ಅವರಿಗೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ ತಿಳಿವಳಿಕೆ ನೀಡಬೇಕು.**
> ■ **ಡಾ. ಆನಂದ ಕೆ. ಡಿಸಿ**

ಜಿಲ್ಲೆಯ ಎಲ್ಲ ಮತದಾರರ ನೋಂದಣಾಧಿಕಾರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳು ಮತ್ತು ಮತಕ್ಷೇತ್ರದ ತರಬೇತುದಾರರಿಗೆ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜ್ ಉಪನ್ಯಾಸಕ ಮಹಾವೀರ ರಜಪೂತ ಹಾಗೂ ಆರ್.ಸಿ. ಹಿರೇಮಠ ಅವರು ತರಬೇತಿ ನೀಡಿದರು.

ತರಬೇತಿಯಲ್ಲಿ ಅಪರ ಜಿಲ್ಲಾಧಿಕಾರಿ ಔದ್ರಾಮ, ಮತದಾರರ ನೋಂದಣಾಧಿಕಾರಿ ರಾಜಶೇಖರ ಡಂಬಳ, ವಿನಯ ಪಾಟೀಲ, ಗುರುನಾಥ ದಡ್ಡೆ, ಚಿದಾನಂದ ಗುರುಸ್ವಾಮಿ ಇತರರು ಇದ್ದರು.

ಯೋಧ ಭೀಮಾಶಂಕರಗೆ ಅದ್ದೂರಿ ಸ್ವಾಗತ

◆ **ಚಡಚಣ:** ದೇಶಸೇವೆ ಕೇವಲ ಒಂದು ಉದ್ಯೋಗವಲ್ಲ, ಅದು ರಾಷ್ಟ್ರ ರಕ್ಷಣೆಯ ಪವಿತ್ರ ಜವಾಬ್ದಾರಿ ಎಂಬ ಧ್ಯೇಯದೊಂದಿಗೆ ಭಾರತೀಯ ಸೇನೆಯಲ್ಲಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ವೀರಯೋಧ ಸುಬೇದಾರ್ ಭೀಮಾಶಂಕರ ಗುರುಲಿಂಗಪ್ಪ ಸರಸಂಬಿ ಅವರಿಗೆ ವಿಜಯಪುರ ಜಿಲ್ಲೆಯ ಚಡಚಣ ತಾಲೂಕಿನ ಬರಡೋಲ ಗ್ರಾಮದಲ್ಲಿ ಅದ್ದೂರಿ ಸ್ವಾಗತ ಹಾಗೂ ಸನ್ಮಾನ ಕಾರ್ಯಕ್ರಮ ನಡೆಯಿತು.

1996ರಲ್ಲಿ ಭಾರತೀಯ ಸೇನೆಗೆ ಸೇರ್ಪಡೆಯಾದ ಭೀಮಾಶಂಕರ ಸರಸಂಬಿ ಅವರು ಸುಮಾರು 30 ವರ್ಷಗಳ ಕಾಲ ದೇಶದ ವಿವಿಧ ಗಡಿ ಪ್ರದೇಶಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ನಿವೃತ್ತಿ ನಂತರ ತಾಯಿನಾಡಿಗೆ ಆಗಮಿಸಿದ ಅವರನ್ನು ಬರಡೋಲ ಗ್ರಾಮಸ್ಥರು ಹಾಗೂ ಬರಡೋಲ ಗ್ರಾಮದ ಮಾಳಿ ಸಮಾಜದವರು ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಹೃತ್ಪೂರ್ವಕವಾಗಿ ಬರಮಾಡಿಕೊಂಡರು.

ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ದೇಶಸೇವಕನಿಗೆ ಅಪೂರ್ವ ಸನ್ಮಾನ ಸಲ್ಲಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಭೀಮಾಶಂಕರ ಸರಸಂಬಿ, ಭಾರತ ಮಾತೆಯ ಸೇವೆ ಮಾಡಲು ಅವಕಾಶ ದೊರೆತಿರುವುದು ನನ್ನ ಜೀವನದ ಅತ್ಯಂತ ದೊಡ್ಡ ಭಾಗ್ಯ. ದೇಶಕ್ಕಾಗಿ ಸೇವೆ ಸಲ್ಲಿಸಿರುವುದಕ್ಕೆ ನನಗೆ ಹೆಮ್ಮೆ ಇದೆ. ಪ್ರತಿಯೊಂದು ಕುಟುಂಬದಲ್ಲೂ ಒಬ್ಬ ಸೈನಿಕ ಇರಬೇಕು ಎಂಬುದು ನನ್ನ ಆಶಯ ಎಂದರು.

ತಾಲೂಕಿನ ಜಿಗಜೇವಣಿ ಗ್ರಾಮದ ಮೂಲ ನಿವಾಸಿಯಾಗಿರುವ ಭೀಮಾಶಂಕರ ಸರಸಂಬಿ



ಮೆರವಣಿಗೆ

ಗ್ರಾಮದ ಶ್ರೀಮಲ್ಲಿಕಾರ್ಜುನ ದೇವಸ್ಥಾನದಿಂದ ಮಹಾತ್ಮ ಜ್ಯೋತಿಬಾ ಫುಲೆ ಮಂಗಲ ಕಾರ್ಯಾಲಯದವರೆಗೆ ತೆರೆದ ವಾಹನದಲ್ಲಿ ಭವ್ಯ ಮೆರವಣಿಗೆ ಆಯೋಜಿಸಲಾಗಿತ್ತು. ದೇಶಭಕ್ತಿ ಗೀತೆಗಳು, ಘೋಷಣೆಗಳು ಹಾಗೂ ಪುಷ್ಪವೃಷ್ಟಿಯ ನಡುವೆ ನೂರಾರು ಗ್ರಾಮಸ್ಥರು, ಮಾಜಿ ಸೈನಿಕರು, ಯುವಕರು ಮತ್ತು ಮಾಳಿ ಸಮಾಜದ ಮುಖಂಡರು ವೀರಯೋಧರನ್ನು ಗೌರವಿಸಿದರು.

ಅವರ ಪತ್ನಿ ಗೀತಾಂಜಲಿ. ಇವರಿಗೆ ಪೂಜಾ, ಪುಷ್ಪಾಂಜಲಿ ಎಂಬ ಇಬ್ಬರು ಪುತ್ರಿಯರು ಹಾಗೂ ಗುರುರಾಜ ಎಂಬ ಪುತ್ರನಿದ್ದಾನೆ.

ಈ ವೇಳೆ ಮಾಳಿ ಸಮಾಜದ ಅಧ್ಯಕ್ಷ ಭೀಮಣ್ಣ ಮೇತ್ರಿ, ಅರ್ಜುನ ಮೇತ್ರಿ, ಶ್ರೀಶೈಲ ಮೇತ್ರಿ, ಶಿವಾನಂದ ಮೇತ್ರಿ, ಶ್ರೀಕಾಂತ ಮೇತ್ರಿ ಸೇರಿದಂತೆ ಸಮಾಜದ ಮುಖಂಡರು, ಗ್ರಾಮಸ್ಥರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ತಾಲೂಕಿನ ಮಾಜಿ ಸೈನಿಕರು ಉಪಸ್ಥಿತರಿದ್ದರು.

ಯಶವಂತರಾಯಗೌಡಗೆ ಸಚಿವ ಸ್ಥಾನ ನೀಡಿ

◆ **ಇಂಡಿ:** ನಗರದಲ್ಲಿ ಕಳೆದ ಮೂರು ಅವಧಿಯಲ್ಲಿ ನೀರಾವರಿ ಕ್ಷೇತ್ರಕ್ಕೆ ಸುಮಾರು 1.10 ಹೆಕ್ಟರ ಲಕ್ಷ ಭೂಮಿಗಳಿಗೆ ನೀರಾವರಿ ಸೌಲಭ್ಯ ಒದಗಿಸಿದ್ದಾರೆ.ಹಲವಾರು ನೀರಾವರಿ ಕಾಮಗಾರಿ ಭರದಿಂದ ಸಾಗಲು ಕಾರಣಿಭೂತರಾದ ಶಾಸಕ ಯಶವಂತರಾಯಗೌಡ ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಬೇಕು. ಒಂದು ವೇಳೆ ನೀಡದೆ ಇದ್ದಲ್ಲಿ ಪಕ್ಷದ ಹಾಗೂ ನಾಮನಿರ್ದೇಶನಗೊಂಡ ಎಲ್ಲ ಪದಾಧಿಕಾರಿಗಳು ಸಾಮೂಹಿಕವಾಗಿ ರಾಜಿನಾಮೇ ನೀಡಬೇಕಾಗುತ್ತದೆ ಎಂದು ಕರ್ನಾಕಟ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ ಹೇಳಿದರು.

ಅವರು ನಗರದ ಪ್ರವಾಸಿ ಮಂದಿರದಲ್ಲಿ ಇಂಡಿ-ಬಳ್ಳೊಳ್ಳಿ ಬ್ಲಾಕ್ ಕಾಂಗ್ರೇಸ್ ಹಾಗೂ ನಾಮ ನಿರ್ದೇಶನಗೊಂಡ ಎಲ್ಲ ಪದಾಧಿಕಾರಿಗಳು ಏರ್ಪಡಿಸಿದ ಪತ್ರಿಕಾಗೊಷ್ಠಿಯಲ್ಲಿ ಮಾತನಾಡಿದರು.

ಜಿಲ್ಲಾ ಗ್ಯಾರೆಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಇಲಿಯಾಸ ಬೋರಾಮಣಿ, ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಶಿವಯೋಗೆಪ್ಪ ಚನ್ನಗೊಂಡ, ತಾ. ಗ್ಯಾರೆಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಶಾಂತ ಕಾಳೆ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಅಜೀತ ಧನಶೆಟ್ಟಿ, ನ್ಯಾಯವಾದಿಗಳ ಸಂಘದ ಅಧ್ಯಕ್ಷ ಬೂದಿಹಾಳ, ಕಾಂಗ್ರೇಸ್ ಎಸ್.ಟಿ.ವಿಭಾಗದ ರಾಜ್ಯ ಉಪಾಧ್ಯಕ್ಷ ಸಣ್ಣಪ್ಪ ತಳವಾರ, ನಗರ ಘಟಕ ಕಾಂಗ್ರೇಸ ಅಧ್ಯಕ್ಷ ಶ್ರೀಕಾಂತ ಕೂಡಿಗನೂರ, ಮಹಿಳಾ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ನೀರ್ಮಲಾ ತಳಕೇರಿ ಮುಂತಾದವರು ಮಾತನಾಡಿದರು.

> **ಈ ಬಾರಿ ಸಚಿವಸ್ಥಾನ ನೀಡಬೇಕು ಇಲ್ಲದೆ ಹೊದರೆ ಇಂಡಿ ಬಂದ್ ಮಾಡಿ ಕಾಂಗ್ರೇಸ್ ಪಕ್ಷದ ಕಾರ್ಯಕರ್ತರಾದ ನಾವು ವಿವಿಧ ಹುದ್ದೆಗಳಿಗೆ ಹಾಗೂ ಸದಸ್ಯತ್ವ ಸ್ಥಾನಗಳಿಗೆ ಸಾಮೂಹಿಕವಾಗಿ ರಾಜೀನಾಮೆ ನೀಡಬೇಕಾಗುತ್ತದೆ. ರಾಜ್ಯ ನಾಯಕರು, ಹೈಕಮಾಂಡ್ ನಾಯಕರು, ರಾಜ್ಯ ಹಾಗೂ ರಾಷ್ಟ್ರೀಯ ಅಧ್ಯಕ್ಷರು ನ್ಯಾಯಯುತವಾದ ಬೇಡಿಕೆಯನ್ನು ಇಡೇರಿಸಬೇಕು.**
> ■ **ಭೀಮಣ್ಣ ಕವಲಗಿ, ಕರಾ ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ**

ಈ ವೇಳೆ ಜಟ್ಟೆಪ್ಪ ರವಳಿ, ಮಲ್ಲಣಗೌಡ ಪಾಟೀಲ, ಜಾವಿದ ಮೋಮಿನ, ಅಯೂಬ ಬಾಗವಾನ, ಇಮ್ರಾನ ಮಕಾನದಾರ, ಪಾಮು ಕಿತ್ತಲಿ, ಸುಬಾಸ ಬಾಬರ, ರೈಸ್ ಅಷ್ಟೆಕರ, ಶೈಲಜಾ ಜಾಧವ ಸೇರಿದಂತೆ ಅನೇಕರು ಇದ್ದರು.



ಬಿತ್ತನೆ ಬೀಜ, ಗೊಬ್ಬರ ಸಕಾಲದಲ್ಲಿ ವಿತರಿಸಿ: ಶಾಸಕ ಸೂಚನೆ

◆ **ಸಿಂದಗಿ:** ರೈತರಿಗೆ ಬಿತ್ತನೆ ಬೀಜ, ಗೊಬ್ಬರ ಸಕಾಲದಲ್ಲಿ ವಿತರಣೆ ಮಾಡಬೇಕು. ಬಿತ್ತನೆ ಬೀಜ ವಿತರಣೆ ಹಾಗೂ ಬೀಜ ಉಪಚಾರ ಹಾಗೂ ಕೀಟನಾಶಕ ಸುರಕ್ಷಾ ತರಬೇತಿಗಳಂತಹ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಶಾಸಕ ಅಶೋಕ ಮನಗೂಳಿ ಹೇಳಿದರು.

ನಗರದ ಕೃಷಿ ಇಲಾಖೆ ವತಿಯಿಂದ ಕಛೇರಿ ಆವರಣದಲ್ಲಿ ಹಮ್ಮಿಕೊಂಡ ಮುಂಗಾರು ಹಂಗಾಮಿನ ಬಿತ್ತನೆ ಬೀಜಗಳ ವಿತರಣಾ ಕಾರ್ಯಕ್ರಮದಲ್ಲಿ ವಿತರಣೆ ಮಾಡಿ ಮಾತನಾಡಿ, ಸರ್ಕಾರದ ಯೋಜನೆಗಳು ಮತ್ತು ಸಹಾಯಧನ ಸದುಪಯೋಗಪಡಿಸಿಕೊಳ್ಳಬೇಕು. ಸರ್ಕಾರದಿಂದ ಬರುವ ಬಿತ್ತನೆ ಬೀಜ, ರಸಗೊಬ್ಬರ ವಿತರಣೆ ಮಾಡುವುದು ನಮ್ಮ ಜವಾಬ್ದಾರಿ ಎಂದರು.

ಇಂಡಿ ಕೃಷಿ ಸಹಾಯಕ ಉಪನಿರ್ದೇಶಕ ಚಂದ್ರಕಾಂತ ಪವಾರ ಮಾತನಾಡಿ, ಈ ಭಾಗದ ರೈತರಿಗೆ ಬೀಜ ಮತ್ತು ರಸಗೊಬ್ಬರ ಕೊರತೆ ಉಂಟಾಗದಂತೆ ನಿಗಾವಹಿಸಿಲಾಗುವುದು. 100ಕ್ಕೆ ಶೇ.95ರಷ್ಟು ಬೆಳೆ ಬರುವ ಬೀಜ ಪರಿಷ್ಕರಣೆ ಮಾಡಿಯೇ ವಿತರಣೆ ಮಾಡಲಾಗುತ್ತಿದೆ. ರೈತ ಸಂಕರ್ಪ ಕೇಂದ್ರದಲ್ಲಿ ಮೆಕ್ಕೆಜೋಳ, ತೊಗರಿ, ಹೆಸರು ಮತ್ತು ಸೂರ್ಯಕಾಂತಿ ಬೀಜಗಳನ್ನು ವಿತರಣೆ



ಮಾಡಲಾಗುವುದು. ಮೆಕ್ಕೆಜೋಳ 40ಕ್ವಿಂಟಲ್, ಸೂರ್ಯಕಾಂತಿ 150ಕೆಜಿ ಇದೆ. ಯಾವುದೇ ರೈತರಿಗೆ ಕಡಿಮೆ ಬೀಳದ ರೀತಿಯಲ್ಲಿ ಬೀಜವಿದೆ ಎಂದರು.

ಇದೇ ಸಂದರ್ಭದಲ್ಲಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಪ್ರಶಾಂತ ಸಾಣಿ, ಕೃಷಿಕ ಸಮಾಜದ ಅಧ್ಯಕ್ಷ ಶಿವಪ್ಪಗೌಡ ಬಿರಾದಾರ, ಶಿವಾನಂದ ಹೂವಿನಹಳ್ಳಿ, ಪ್ರಗತಿಪರ ರೈತ ಭಾಗಪ್ಪಗೌಡ ಪಾಟೀಲ, ಗಂಧಾದರ ಚಿಂಚೊಳ್ಳಿ, ಅಶೋಕ ಕೋಳಾರಿ, ನೂರಅಹ್ಮದ ಅತ್ತಾರ, ಸುನಂದಾ ಯಂಪುರೆ, ಅಬ್ದುಲ್ ರಜಾಕ ಮೋಮಿನ ಸೇರಿದಂತೆ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ರೈತರು ಇದ್ದರು.

ಸಂವಹನ ಕೌಶಲ್ಯದಿಂದ ವೃತ್ತಿಯಲ್ಲಿ ಏಳ್ಗೆ ಸಾಧ್ಯ: ಡಾ.ಸಂಜಯ

◆ **ವಿಜಯಪುರ:** ಸರಿಯಾದ ಸಂವಹನ ಕೌಶಲ್ಯದಿಂದ ವೈದ್ಯಕೀಯ ವೃತ್ತಿಯಲ್ಲಿ ಏಳಿಗೆ ಹೊಂದಲು ಸಾಧ್ಯ ಎಂದು ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ, ಸಂಶೋಧನಾ ಸಂಸ್ಥೆಯ ವೈದ್ಯಕೀಯ ವಿಭಾಗದ ಪ್ರಾಧ್ಯಾಪಕ ಮತ್ತು ವೈದ್ಯಕೀಯ ಅಧ್ಯಯನ ವಿಭಾಗದ ಸಂಯೋಜಕ ಡಾ.ಸಂಜಯ ನೀರಲಗಿ ಹೇಳಿದರು.

ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಲಾದ ವೈದ್ಯಕೀಯ ವೃತ್ತಿಯಲ್ಲಿ ಸಂಹವನ ಕೌಶಲ್ಯದ ಶಿಬಿರದಲ್ಲಿ ಅವರು ಮಾತನಾಡಿದರು.

ಸಕ್ರಿಯವಾಗಿ ಆಲಿಸುವುದು, ಸ್ಪಷ್ಟವಾಗಿ ಮಾತನಾಡುವುದು, ಕರುಣೆ, ಸಹಾನುಭೂತಿ ತೋರಿಸುವುದು ಇಲ್ಲಿ ಮುಖ್ಯವಾಗಿವೆ. ಅಷ್ಟೇ ಅಲ್ಲ, ಸರಿಯಾದ ದೇಹಭಾಷೆಯಿಂದ ರೋಗಿಗಳ ಮತ್ತು ಸಂಬಂಧಿಕರ ಆತ್ಮವಿಶ್ವಾಸವನ್ನು ಗೆಲ್ಲಬಹುದು. ಸರಿಯಾದ ಸಂವಹನ ಕೌಶಲ್ಯದಿಂದ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಿ ಸಂಬಂಧಗಳನ್ನು ಬಲಪಡಿಸಲು ಮತ್ತು ವೈದ್ಯಕೀಯ ವೃತ್ತಿಯಲ್ಲಿ ಏಳ್ಗೆ ಹೊಂದಲು ಸಾಧ್ಯವಿದೆ ಎಂದರು.

ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ ಕೋಟೆಣ್ಣವರ



ಮಾತನಾಡಿ, ಔಷಧಿಯಿಂದ ಗುಣಪಡಿಸಲಾಗದ ಕಾಯಿಲೆಗಳಿಗೆ ವೈದ್ಯರ ಸಹಾನುಭೂತಿಯ ಸಮಾಲೋಚನೆಯಿಂದ ರೋಗಿ ಮತ್ತು ರೋಗಿಗಳ ಸಂಬಂಧಿಕರನ್ನು ತೃಪ್ತಿ ಪಡಿಸಬಹುದು ಮತ್ತು ವೈದ್ಯೋನಾರಾಯಣೋ ಹರಿ ಎಂಬ ಉಕ್ತಿಯಂತೆ ರೋಗಿಗಳು ವೈದ್ಯರಲ್ಲಿ ವಿಶ್ವಾಸ ಹೊಂದಲು ಸಂವಹನ ಕೌಶಲ್ಯ ತುಂಬಾ ಸಹಾಯಕಾರಿಯಾಗಿದೆ ಎಂದು ಹೇಳಿದರು.

ಪ್ರಾಚಾರ್ಯೆ ಡಾ.ತೇಜಸ್ವಿನಿ ವಲ್ಲಭ, ವೈದ್ಯಕೀಯ ನಿರ್ದೇಶಕ ಡಾ.ವಿಜಯಕುಮಾರ ಕಲ್ಯಾಣಪ್ಪಗೋಳ, ಉಪ ಪ್ರಾಚಾರ್ಯ ಡಾ.ಆನಂದ ಅಂಬಲಿ, ರೋಗನಿದಾನಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಸುರೇಖಾ ಹಿಪ್ಪರಗಿ, ಪ್ರಾಧ್ಯಾಪಕ ಡಾ.ವಿಜಯಾ ಪಾಟೀಲ, ಡಾ.ರೇಖಾ ಬಿರಾದಾರ, ಡಾ.ಶ್ರವಣಕುಮಾರ, ಪ್ರಾಧ್ಯಾಪಕ ಡಾ.ಪ್ರವೀಣ ಗಂಗನಹಳ್ಳಿ ಇದ್ದರು.

ಬಿತ್ತನೆ ಬೀಜ ವಿತರಣೆಯಲ್ಲಿ ವ್ಯಾಪಕ ಗೊಂದಲ ಹೆಚ್ಚಳ

◆ **ದೇವರಹಿಪ್ಪರಗಿ:** ಮುಂಗಾರು ಹಂಗಾಮು ಆರಂಭವಾಗುತ್ತಿದ್ದಂತೆ ತಾಲೂಕಿನಾದ್ಯಂತ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳ ವಿತರಣೆಯಲ್ಲಿ ವ್ಯಾಪಕ ಗೊಂದಲ ಹಾಗೂ ಕಪ್ಪು ಮಾರುಕಟ್ಟೆ ದಂಧೆ ತಲೆದೋರಿದ್ದು, ಖಾಸಗಿ ಕೃಷಿ ಕೇಂದ್ರಗಳು ರೈತರನ್ನು ಸುಲಿಗೆ ಮಾಡುತ್ತಿವೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ(ರಿ) ವಿಜಯಪುರ ಜಿಲ್ಲಾ ಉಪಾಧ್ಯಕ್ಷ ಸಂಪತ ಜಮಾದಾರ ಹೇಳಿದರು.

ಪಟ್ಟಣದ ಸಹಾಯಕ ಕೃಷಿ ಅಧಿಕಾರಿ ಶರಣಗೌಡ ಬಿರಾದಾರ ಅವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿ, ಸರ್ಕಾರ ನಿಗದಿಪಡಿಸಿರುವ ರಿಯಾಯಿತಿ ದರ ಗಾಳಿಗೆ ತೂರಿ, ಖಾಸಗಿ ಆಗ್ರೋ ಕೇಂದ್ರಗಳ ಮಾಲೀಕರು ಮನಬಂದಂತೆ ಬಿತ್ತನೆ ಬೀಜ ಮತ್ತು ರಸಗೊಬ್ಬರ ಮಾರಾಟ ಮಾಡುತ್ತಿದ್ದಾರೆ. ಇದರಿಂದಾಗಿ ರೈತರಿಗೆ ಭಾರಿ ಆರ್ಥಿಕ ಹೊರೆ ಬೀಳುತ್ತಿದ್ದು, ಸಾಲದ ಸುಳಿಗೆ ಸಿಲುಕುವಂತಾಗಿದೆ. ಅಧಿಕಾರಿಗಳ ಕಣ್ಣೆದುರೇ ಈ ದಂಧೆ ನಡೆಯುತ್ತಿದ್ದರೂ ಯಾವುದೇ ಕಠಿಣ ಕ್ರಮ ಕೈಗೊಳ್ಳದಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ ಎಂದರು.ರೈತ ಮುಖಂಡ ದಿನೇಶಗೌಡ ಪಾಟೀಲ ಮಾತನಾಡಿದರು.

ಕರಾ ರೈತ ಸಂಘ ಹಾಗೂ ಹಸಿರು ಸೇನೆ ನಗರ ಘಟಕ ಅಧ್ಯಕ್ಷ ಶಕೀಲಾ ಹೆಬ್ಬಾಳ, ಉಪಾಧ್ಯಕ್ಷ ಸುನಂದಾ ಸೊನ್ನಳ್ಳಿ, ರಾಮು ದೇಸಾಯಿ, ರಾಚೋಟಯ್ಯಾ ಹಿರೆಮಠ, ಈರಣ್ಣ ಒಂಟೆತ್ತಿನ, ಚಂದ್ರಕಾಂತ ಪ್ಯಾಟಿ, ಕಾಶಿನಾಥ ಕೋರಿ, ಅಜೀಜ ಯಲಗಾರ, ಚೆನ್ನಪ್ಪ ದೇಸಾಯಿ, ಎಸ್. ಎಂ.ಆನಂದಿ, ಸಂತೋಷ ಕುಲಕರ್ಣಿ, ಮಲ್ಲಿಕಾರ್ಜುನ ಕುಂಬಾರ, ಸಂದೀಪ ಬಾಸುತ್ಕರ ಇದ್ದರು.



ರೈತ ಸಂಘಟನೆ ಬೇಡಿಕೆಗಳು:

ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳನ್ನು ಸರ್ಕಾರ ನಿಗದಿಪಡಿಸಿದ ದರದಲ್ಲೇ ಮಾರಾಟ ಮಾಡುವಂತೆ ಖಾಸಗಿ ಕೇಂದ್ರಗಳಿಗೆ ಖಡಕ್ ಸೂಚನೆ ನೀಡಬೇಕು. ನಿಯಮ ಉಲ್ಲಂಘಿಸಿ ಕೃತಕ ಅಭಾವ ಸೃಷ್ಟಿಸುವ ಅಥವಾ ಹೆಚ್ಚಿನ ಬೆಲೆಗೆ ಮಾರುವ ಕೃಷಿ ಕೇಂದ್ರಗಳ ವಿರುದ್ಧ ಕಾನೂನು ಕಠಿಣ ಕ್ರಮ ಜರುಗಿಸಬೇಕು. ಮಾರುಕಟ್ಟೆಗೆ ಲಗ್ಗೆ ಇಡುತ್ತಿರುವ ಕಳಪೆ ಹಾಗೂ ನಕಲಿ ಬಿತ್ತನೆ ಬೀಜಗಳ ಮಾರಾಟವನ್ನು ಸಂಪೂರ್ಣವಾಗಿ ತಡೆಗಟ್ಟಬೇಕು. ಗುಣಮಟ್ಟದ ರಸಗೊಬ್ಬರ ಹಾಗೂ ಬೀಜಗಳು ಸಿಗುವಂತೆ ವ್ಯವಸ್ಥೆ ಮಾಡಬೇಕು. ರೈತರು ಎದುರಿಸುತ್ತಿರುವ ಈ ಗಂಭೀರ ಬಿಕ್ಕಟ್ಟನ್ನು ನಿವಾರಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ರೈತ ಸಂಘ ಎಚ್ಚರಿಸಿದೆ.

ಸಿಲಿಂಡರ್ ಸ್ಫೋಟ: ಮೃತರ ಕುಟುಂಬಕ್ಕೆ ಸಾಂತ್ವನ

◆ **ತಾಳಿಕೋಟೆ:** ಪಟ್ಟಣದಲ್ಲಿ ಇತ್ತೀಚಿಗೆ ನಡೆದ ಭೀಕರ ಗ್ಯಾಸ್ ಸಿಲಿಂಡರ್ ಸ್ಫೋಟ ದುರಂತದಲ್ಲಿ ಬಲಿಯಾದ ಇಬ್ಬರು ಕಟ್ಟಡ ಕಾರ್ಮಿಕರ ಮನೆಗೆ ಕಾಂಗ್ರೆಸ್ ಮುಖಂಡ ಹಾಗೂ ಅಸ್ಕಿ ಫೌಂಡೇಶನ್ ಅಧ್ಯಕ್ಷ ಸಿ.ಬಿ.ಅಸ್ಕಿ (ಕೊಣ್ಣೂರ) ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದಲ್ಲದೆ, ಆರ್ಥಿಕ ನೆರವು ಹಸ್ತ ಚಾಚಿದ್ದಾರೆ.

ದುರಂತದಲ್ಲಿ ಮೃತಪಟ್ಟಿದ್ದ ಕಟ್ಟಡ ಕಾರ್ಮಿಕರಾದ ಶಕೀಲಅಹ್ಮದ್ ಕುಂಬಾರವಾಡಿ (38) ಹಾಗೂ ಬಷೀರಅಹ್ಮದ್ ಕಡದರಾಳ (40) ಅವರ ನಿವಾಸಗಳಿಗೆ ಮುಖಂಡರೊಂದಿಗೆ ಭೇಟಿ ನೀಡಿದ ಸಿ.ಬಿ. ಅಸ್ಕಿ, ಕುಟುಂಬದ ಸದಸ್ಯರಿಗೆ ಧೈರ್ಯ ತುಂಬಿದರು. ಅಕಾಲಿಕವಾಗಿ ತಂದೆಯನ್ನು ಕಳೆದುಕೊಂಡು ಬೀದಿಗೆ ಬಿದ್ದಂತಾಗಿರುವ ಮೃತರ ಮಕ್ಕಳ ಮುಂದಿನ ಭವಿಷ್ಯ ಹಾಗೂ ವಿದ್ಯಾಭ್ಯಾಸಕ್ಕಾಗಿ ಅಸ್ಕಿ ಫೌಂಡೇಶನ್ ವತಿಯಿಂದ 1 ಲಕ್ಷ ರೂ. ನಗದು ಧನ ಸಹಾಯ ಹಸ್ತಾಂತರಿಸಿದರು.

ಈ ವೇಳೆ ತಾಳಿಕೋಟೆ ಧಾರ್ಮಿಕ ಮುಖಂಡ ಸೈಯದ ಶಕೀಲಅಹ್ಮದ್ ಖಾಜಿ, ಗ್ಯಾರಂಟಿ ಸಮಿತಿ ಸದಸ್ಯ ಮೋದಿನಸಾಬ ನಗಾರ್ಚಿ, ಯುವ ಮುಖಂಡ ಗೌಸ್‌ಅಹ್ಮದ್ ನಾಸಿರ್, ಸಾಮಾಜಿಕ ಕಾರ್ಯಕರ್ತರಾದ ಶಫೀಕ್ ಇನಾಮದಾರ, ಗೋಪಾಲ ಕಟ್ಟಿಮನಿ ಇದ್ದರು. ಅಲ್ಲದೆ, ಬಿಸ್ತಿ ಓಣಿ ಮುಖಂಡರುಗಳು, ಯುವ ಮಿತ್ರರು, ಅಸ್ಕಿ ಫೌಂಡೇಶನ್ ಅಭಿಮಾನಿಗಳು ಪಾಲ್ಗೊಂಡು ಮೃತರ ಆತ್ಮಕ್ಕೆ ಶಾಂತಿ ಕೋರಿದರು.



ಭೂತಾಯಿಯ ಶಕ್ತಿ ಅಪಾರ: ಶಿವಾನಂದ

◆ **ಮುದ್ದೇಬಿಹಾಳ:** ನಮ್ಮೆಲ್ಲರಿಗೆ ಎಲ್ಲವನ್ನೂ ನೀಡಿ ಸಲುಹುತ್ತಿರುವ ಭೂ ತಾಯಿಗೆ ನಮ್ಮ ಎಲ್ಲ ಬೇಡಿಕೆಗಳನ್ನು ಈಡೇರಿಸುವಶಕ್ತಿ ಇದೆ. ಆದರೆ ಮನುಷ್ಯನ ದುರಾಶೆಗಳನ್ನು ಈಡೇರಿಸಲು ಸಾಧ್ಯವಿಲ್ಲ ಎಂದು ಆಲಮಟ್ಟಿ ಕೃಷ್ಣಾ ಜಲ ಭಾಗ್ಯ ನಿಗಮದ ಸಹಾಯಕ ಅರಣ್ಯಾಧಿಕಾರಿ ಶಿವಾನಂದ ಜಿಡ್ಡಿಮನಿ ಹೇಳಿದರು.

ಹಸಿರು ತೋರಣ ಗೆಳೆಯರ ಬಳಗ ಇತ್ತೀಚಿಗೆ ಹಮ್ಮಿಕೊಂಡ ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತನಾಡಿದರು.

ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಬಸನಗೌಡ ಬಿರಾದಾರ ಮಾತನಾಡಿ, ನಾವು ಪ್ರಕೃತಿ ಸಂಪತ್ತನ್ನು ಹಾಳು ಮಾಡದೇ ಜೀವನ ಶೈಲಿ ರೂಪಿಸಿಕೊಳ್ಳಬೇಕಿದೆ. ತ್ಯಾಜ್ಯಕ್ಕೆ ಬೆಂಕಿ, ಪ್ಲಾಸ್ಟಿಕ್ ಬಳಕೆಯಿಂದ ಪ್ರಕೃತಿ ಸಮತೋಲನ ತಪ್ಪುತ್ತದೆ ಎಂದರು.

ಸಾಮಾಜಿಕ ವಲಯ ಅರಣ್ಯಾಧಿಕಾರಿ ಗಿರೀಶ ಅಲಕುಡೆ ಮಾತನಾಡಿ, ನಾವು ಪರಿಸರ ಸ್ನೇಹಿ ಜೀವನವನ್ನು ರೂಪಿಸಿಕೊಳ್ಳಬೇಕಿದೆ. ಪ್ಲಾಸ್ಟಿಕ್ ಬಳಕೆ ಕೈ ಬಿಡುವುದು, ಮಣ್ಣಿನ ಗಣಪತಿ ಇಡುವುದು, ಪಟಾಕಿ ನಿಷೇಧ ಇಂದಿನ ಅಗತ್ಯ ಎಂದರು.

ಪುರಸಭೆಯ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ ಹತೊಗೆಬ ಅಧ್ಯಕ್ಷ ಅಮರೇಶ ಗೂಳಿ ಮಾತನಾಡಿದರು.



ಈ ವೇಳೆ ಮಿಥುನ ನೇಮಪ್ಪ ಚವ್ಹಾಣ, ಸಂಗಪ್ಪ ನಂದಪ್ಪ ನಾಗಾವಿ, ಮಾನಪ್ಪ ಸಂಜೀವಪ್ಪ ಕರಡಿ, ರಾಮಣ್ಣ ಪರಪ್ಪಗೋಳ, ವಿಠ್ಠಲ ತೆಗ್ಗಿ ಅವರಿಗೆ ಪರಿಸರ ರಕ್ಷಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ತಾಪಂ ಮಾಜಿ ಸದಸ್ಯ ಶ್ರೀಶೈಲ ಮರೋಳ, ಕಾರ್ಯದರ್ಶಿ ಬಸವರಾಜ ಬಿಜ್ಜೂರ, ಗಣ್ಯರಾದ ಮಹಾಂತಪ್ಪ ನಾವದಗಿ, ಮಹಾಬಲೇಶ್ವರ ಗಡೇದ, ವೀರೇಶ ಢವಳಗಿ, ಕಾಮರಾಜ ಬಿರಾದಾರ, ಅಶೋಕ ಚಟ್ಟೇರ, ಸದಾನಂದ ಮಠ, ಡಾ.ವಿಜಯಕುಮಾರ ಗೂಳಿ, ಅಶೋಕ ರೇವಡಿ ಎಸ್.ಎಸ್.ಹುನಗುಂದ, ಬಿ.ಎಸ್.ಮೇಟಿ, ರಾಜಶೇಖರ ಕಲ್ಯಾಣಮಠ, ಬಸವರಾಜ ಸಿದರಡ್ಡಿ, ಡಾ.ಉತ್ಕರ್ಷ ನಾಗೂರ, ಡಾ.ಚಂದ್ರಶೇಖರ ಶಿವಯೋಗಿಮಠ, ಕಿರಣ ಪಾಟೀಲ ಸೇರಿದಂತೆ ಅರಣ್ಯ ಇಲಾಖೆ, ಪುರಸಭೆ, ವರಮಾರುತೇಶ್ವರ ದೇಗುಲ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.